ಭಾಷಾ ಸಾಹಿತ್ಯ ಸ್ಪಂದನ

ಅನಿಕೇತನ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಅನ್ಯಭಾಷಾ ಸಾಹಿತ್ಯ ಸ್ಪಂದನ
ಮತ್ತು
ಸೃಜನಶೀಲ ಸಂಚನ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಸಂಪಾದಕರು
ಪ್ರೊ। ದೊಡ್ಡರಂಗೇಗೌಡ
ಪ್ರೊ। ನಲ್ಲೂರು ಪ್ರಸಾದ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

ANIKETHANA : A Literary Journal (Quarterly)
Edited by : Prof. Doddarangegowda
Prof. Nallur Prasad (R.K. Prasad)
Published by : Registrar, Karnataka Sahithya Academy
Kannada Bhavana, J.C. Road, Bangalore-2

Pages : VIII+130 Jan - Mar. 2000
Registration No. 45646/88

ಸಂಪುಟ : 11
ಸಂಚಿಕೆ : 3

ಪ್ರಧಾನ ಸಂಪಾದಕರು
ಡಾ. ಗಿರಡ್ಡಿ ಗೋವಿಂದರಾಜ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು-೫೬೦ ೦೦೨

ರಿಜಿಸ್ಟ್ರಾರ್
ಟಿ.ಎಸ್. ದಕ್ಷಿಣಾಮೂರ್ತಿ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

ಬಿಡಿ ಪ್ರತಿ	:	ರೂ. ೧೫/-
ವಾರ್ಷಿಕ ಚಂದಾ	:	ರೂ. ೫೦/-
ಆಜೀವ ಚಂದಾ	:	ರೂ. ೨೦೦/-

ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
ಬೆಂಗಳೂರು - ೧೮
✆ ೬೬೧೩೧೨೩, ೬೬೧೮೭೫೨

ಸಂಪಾದಕೀಯ

ಹೊಸದು, ನೆನಪಟ್ಟುಕೊಳ್ಳಲೇಬೇಕಾದ ಹಳೆಯದು, ಸೃಜನಶೀಲತೆಯ ಒರತೆಯನ್ನು ಚಿಮ್ಮಿಸಲು ಸಹಾಯಕವಾಗುವಂಥದ್ದು, ವಿಚಾರತರಂಗಗಳನ್ನು ಏಳಿಸುವಂಥದ್ದು, ಸಾಹಿತ್ಯದ ಬಹುಮುಖ್ಯ ಉದ್ದೇಶವೇ ಆಗಿರುವ ರಸಾನಂದದಿಂದ ತಣಿಸುವಂಥದ್ದು - ಹೀಗೆ ವೈವಿಧ್ಯಮಯ ಮುಖಗಳನ್ನು ಬಿಂಬಿಸುವ ಗುರಿಯತ್ತ ಹೊರಟ 'ಅನಿಕೇತನ' ಈವರೆಗೆ ಸಫಲತೆಯ ಹೆಜ್ಜೆಗಳನ್ನು ಹಾಕುತ್ತ ನಡೆದಿದೆ. ಸಂಚಿಕೆಯಿಂದ ಸಂಚಿಕೆಗೆ ಓದುಗರ ಬಳಗ ಹೆಚ್ಚುತ್ತಿರುವುದು, ನಮ್ಮ ಪ್ರಯತ್ನ - ಶ್ರಮ ಗುರುತಿಸಿ ಸಹೃದಯರಿಂದ ಪತ್ರಗಳ ಮಹಾಪೂರ ಹರಿದು ಬರುತ್ತಿರುವುದು, ಸಭೆ ಸಮಾರಂಭಗಳಲ್ಲಿ ಅನಿಕೇತನದ ಪ್ರಕಟಣೆಗಳನ್ನು ಕುರಿತ ವಿಚಾರವಿಮರ್ಶೆ ನಡೆಯುತ್ತಿರುವುದು - ಇವೇ ಸಂಚಿಕೆಯ ಯಶಸ್ಸಿನ ಹೆಜ್ಜೆಗಳನ್ನು ಗುರುತಿಸಲು ಸಾಕ್ಷಿಯಾಗಿವೆ. ಈ ವಿಚಾರದಲ್ಲಿ ನಮಗೆ ಹೆಮ್ಮೆಯೂ ಇದೆ.

ಹೀಗೆ 'ಅನಿಕೇತನ'ದಲ್ಲಿ ಕಾಣಿಸಿಕೊಳ್ಳುತ್ತಿರುವ ಅನುವಾದಗಳನ್ನು ಪ್ರೀತಿಯಿಂದ ಓದುವುದು, ಮೆಚ್ಚುವುದು, ವಿಮರ್ಶಿಸುವುದು, ಪತ್ರ ಬರೆಯುವುದು ಇಂಥವುಗಳ ಜೊತೆಗೇ ಆಗಬೇಕಾದ ಮತ್ತೊಂದು ಮುಖ್ಯ ಕೆಲಸವೂ ಇದೆ. ಅದೆಂದರೆ, ಶ್ರೇಷ್ಠ ಬರಹ ಕನ್ನಡೇತರವಾದ ಯಾವುದೇ ಭಾಷೆಯಲ್ಲಿ ಕಾಣಿಸಿದರೂ ಓದಿ ಸಂತೋಷಿಸಿದ ಸಹೃದಯರು ಅದನ್ನು ಕನ್ನಡಕ್ಕೆ ಅನುವಾದಿಸುವ ಅಥವಾ ಅನುವಾದಿಸಬಲ್ಲ ಸಮರ್ಥರಿಗೆ ಆ ಬಗೆಗೆ ಒಂದು ಸೂಚನೆ ಕೊಡುವ ಕೆಲಸ ಅತಿ ಅಗತ್ಯವಾಗಿಯೂ ಜರೂರಾಗಿಯೂ ಆಗಬೇಕಾಗಿದೆ. ಒಳ್ಳೆಯದು ಎಲ್ಲಿದ್ದರೂ ಕನ್ನಡಕ್ಕೆ ಬರಬೇಕು, ಕನ್ನಡದ ಓದುಗರಿಗೆ ದಕ್ಕಬೇಕು ಎನ್ನುವ ಸಂಕಲ್ಪವೇ ಕನ್ನಡ ಕಾವೇರಿಯ ರುಚಿಯನ್ನು ಮತ್ತಷ್ಟು ಹೆಚ್ಚಿಸಬಲ್ಲದು ಮತ್ತು ಕನ್ನಡ ಸಾಹಿತ್ಯದ ಕಣಜವನ್ನು ಸಮೃದ್ಧವಾಗಿಸಬಲ್ಲದು. ಇಲ್ಲವಾದಲ್ಲಿ ಕೆಲವೇ ಭಾಷೆಗಳಿಂದಾಗುವ ಅನುವಾದಗಳು, ಕೆಲವೇ ಅನುವಾದಕರು ಎಂಬಂಥ ಕೂಪಮಂಡೂಕತನಕ್ಕೆ ನಮ್ಮನ್ನು ತಳ್ಳಿಕೊಂಡಂತಾಗುತ್ತದೆ. 'ಅನಿಕೇತನ' ಕ್ಕೆ 'ಅನುವಾದಕರ ಬಳಗ' ಎಂದೇನೂ ಇಲ್ಲ. ಉತ್ತಮ ಆಯ್ಕೆ, ಸಮರ್ಪಕ ಅನುವಾದ ಇವೇ ಇಲ್ಲಿನ ಪ್ರಕಟಣೆಗಳ ಮಾನದಂಡ. ಈ ನಿಯಮಕ್ಕೆ ಬದ್ಧವಾದ ಅನುವಾದಕ್ಕೆ, ಅನುವಾದಕರಿಗೆ ಸ್ವಾಗತ. ಅವರ ಅನುವಾದಗಳನ್ನು ಸಾಹಿತ್ಯ ಅಕಾಡೆಮಿಯ ವಿಳಾಸಕ್ಕೆ ಕಳುಹಿಸಿಕೊಡಬಹುದಾಗಿದೆ.

ಈ ಬಾರಿ ಸಹೃದಯ ಓದುಗರಿಗೆ ಇಷ್ಟವಾಗಬಹುದಾದ ಒಂದು ಹೊಸ ಪ್ರಯೋಗ 'ಅನಿಕೇತನ'ದಲ್ಲಿ ನಡೆದಿದೆ. ರಾಜ್ಯದ ನಾನಾಭಾಗಗಳಲ್ಲಿ ಅಕಾಡೆಮಿ ಏರ್ಪಡಿಸಿದ ವಿಚಾರಗೋಷ್ಠಿ ಮತ್ತು ವಿಚಾರಸಂಕಿರಣಗಳಲ್ಲಿ ಮಂಡಿತವಾದ ಲೇಖನಗಳ ಪೈಕಿ ನಾನಾ ಕಾರಣಗಳಿಂದಾಗಿ ಪುಸ್ತಕ ರೂಪದಲ್ಲಿ ಪ್ರಕಟವಾಗದಂಥ, ಆದರೆ ಓದುಗರ ವಿಚಾರ ವಿಮರ್ಶನ ಪ್ರಜ್ಞೆಯನ್ನು ಉಜ್ಜಿ ನೋಡಬಲ್ಲಂಥ ಸೃಜನಶೀಲ ಲೇಖನಗಳನ್ನು ಈ ಸಂಚಿಕೆಯಿಂದ ಪ್ರಕಟಿಸಲಾಗುತ್ತಿದೆ. 'ಅನಿಕೇತನ' ಮೂಲತಃ ಅನ್ಯಭಾಷಾ ಸಾಹಿತ್ಯ ಸ್ಪಂದನವೇ ಆಗಿದ್ದರೂ ಓದುಗರಿಗೆ ಅಗತ್ಯವಾದ ಈ ಬಗೆಯ ಸೃಜನಶೀಲ ಸಿಂಚನ ಕಡಿಮೆ ಪ್ರಮಾಣದಲ್ಲಾದರೂ ಲಭಿಸುವುದು ಒಳ್ಳೆಯದೆಂದು ಹೀಗೆ ಮಾಡಲಾಗಿದೆ.

ಎಂದಿನಂತೆ 'ಅನಿಕೇತನ'ವನ್ನು ನೀವು ಸಹೃದಯತೆಯಿಂದ ಸ್ವಾಗತಿಸುವಿರೆಂದು ನಂಬಿದ್ದೇವೆ.

ಪ್ರೊ। ದೊಡ್ಡರಂಗೇಗೌಡ
ಪ್ರೊ। ನಲ್ಲೂರು ಪ್ರಸಾದ್

ಪರಿವಿಡಿ

೧. ಭಯ (ಕಥೆ) ೧
ತಮಿಳು: ಸುಂದರ ಪಾಂಡಿಯನ್
ಅನು: ಡಾ। ಎ. ಜಿ. ವಿಜಯರಾಘವನ್

೨. ಕಿಟಕಿಗಳು (ನಾಟಕ) ೮
ಉರ್ದು: ಧರ್ಮೇಶ್ ತಿವಾರಿ
ಅನು: ಡಾ। ಮಹಮದ್ ಸಿಬ್ಗತ್ ಉಲ್ಲಾ

೩. ನನ್ನ ಕತೆ, ನನ್ನವೇ ಕತೆಗಳು (ಲೇಖನ) ೧೯
ಮಲಯಾಳಂ: ಎಂ. ಟಿ. ವಾಸುದೇವನ್ ನಾಯರ್
ಅನು: ಡಾ। ಮೋಹನ ಕುಂಟಾರ್

೪. ಗೀಳು (ಕಥೆ) ೨೫
ತಮಿಳು: ಶಿವಶಂಕರ್
ಅನು: ಗೀತಾ ವಿಜಯಕುಮಾರ್

೫. ಸ್ಪ್ಯಾನಿಷ್ ಕವಿ ಫೆಡಿರಿಕೊ ಗಾರ್ಸಿಯ ಲೋರ್ಕ ೩೨
ಅನು: ಕೆ. ಎನ್. ವಿಜಯಲಕ್ಷ್ಮಿ

೬. ತಾಯಿ (ಇಂಗ್ಲಿಷ್ ಕಥೆ) ೪೨
ಅನು: ನುಗ್ಗೇಹಳ್ಳಿ ಪಂಕಜಾ

೭. ಪ್ರಭಾಸಿನಿ ಮಹಾಕುದ್ ೫೦
ನಿನ್ನ ಬಿಡುವುದು ಕಠಿಣ (ಒರಿಯಾ ಕವಿತೆ) ೫೧
ಅನು: ಅಂದನೂರು ಶೋಭ

೮. ಹೆಣ್ಣು (ಕವಿತೆ) ೫೪
ಪಂಜಾಬಿ: ರಾಮಸಿಂಹ ಚಾಹಲ್
ಅನು: ಡಾ। ವಿಜಯಾ ಸುಬ್ಬರಾಜ್

೯. ಕೆಲವು ಗಜಲ್‌ಗಳು ೫೬
ಅನು: ಶೈಲಜಾ ಉಡಚಣ

೧೦. ಹೊಗೆಯ ಹಾಡು (ಕವಿತೆ) ೬೦
ಅಪ್ರತಿಬಿಂಬ (ಕವಿತೆ) ೬೨
ನೋವ ಕಂಬನಿಗಳು (ಕವಿತೆ) ೬೩
ಅನು: ಎಚ್. ಎನ್. ಆರತಿ

೧೧. ಸೀತಾಕಾಂತ ಮಹಾಪಾತ್ರ (ಒರಿಯ ಕವಿ) ೬೫
ಕೋಳಿ ಕಾಳಗ (ಕವಿತೆ) ೬೬
ಭಿಕ್ಷುಕ ಹುಡುಗನ ಸಾವು (ಕವಿತೆ) ೬೮
ನಿಮ್ಮ ಹಳ್ಳಿ (ಕವಿತೆ) ೭೦
ಅನು: ಸಿ. ಪಿ. ಕೆ.

೧೨. ನಿದ್ರಿಸು ಗಾಂಧೀ (ಕವಿತೆ) ೭೨
ಗುಜರಾತಿ: ಯಶವಂತ ತ್ರಿವೇದಿ
ಅನು: ಡಿ. ಎನ್. ಶ್ರೀನಾಥ್

೧೩. ಸೀ ಕವಿತೆ ಕುರಿತು (ಚೀನೀ ಕವಿತೆಗಳು ಮತ್ತು ಲೇಖನ) ೭೪
ಅನು: ಶ್ರೀಧರರಾವ್ ಪಿಸ್ಸೆ

ಸಾಲಿ ರಾಮಚಂದ್ರರಾಯರ ವಿಚಾರ ಸಂಕಿರಣದ ಲೇಖನಗಳು

೧. ಸಾಲಿ ರಾಮಚಂದ್ರರಾಯರು ಮತ್ತು ನವೋದಯ ೮೫
ಎನ್ಕೆ

೨. ಸಾಲಿಯವರ ಕಾವ್ಯದಲ್ಲಿ ಪ್ರಕೃತಿ ೮೯
ಡಾ। ಶ್ಯಾಮಸುಂದರ ಬಿದರಕುಂದಿ

೩. ಸಾಲಿಯವರ ಕಾವ್ಯದಲ್ಲಿ ದೇಶಪ್ರೇಮ ೯೪
ಡಾ। ಜಿ. ಎಂ. ಹೆಗಡೆ

೪. ಜೀವನ ಶ್ರದ್ಧೆಯ ಸಾಲಿ ರಾಮಚಂದ್ರರಾಯರು ೯೯
ಡಾ। ಗುರುಲಿಂಗ ಕಾಪಸೆ

೫. ಕನ್ನಡ ನವೋದಯ ಮತ್ತು ಸಾಲಿ ರಾಮಚಂದ್ರರಾಯರ ಕಾವ್ಯ
ಚೆನ್ನವೀರ ಕಣವಿ ೧೦೭

ಡಾ। ಬೆಸಗರಹಳ್ಳಿ ರಾಮಣ್ಣನವರ ಸಾಹಿತ್ಯ ಮತ್ತು ಗ್ರಾಮೀಣ ಸಂಸ್ಕೃತಿ ವಿಚಾರ ಸಂಕಿರಣದ ಲೇಖನಗಳು

೧. **ಕನ್ನಡ ಸಣ್ಣಕಥೆ ಮತ್ತು ಗ್ರಾಮೀಣ ಸಂಸ್ಕೃತಿ** ೧೧೩
ಸುಧಾಕರ

೨. **ಆಧುನಿಕ ಕನ್ನಡ ಕಾವ್ಯ ಮತ್ತು ಗ್ರಾಮೀಣ ಸಂಸ್ಕೃತಿ** ೧೨೧
ರಹಮತ್ ತರೀಕೆರೆ

೩. **ಡಾ। ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಗ್ರಾಮೀಣ ಬದುಕು** ೧೨೫
ಕ್ಯಾತನಹಳ್ಳಿ ರಾಮಣ್ಣ

ಭಯ

ತಮಿಳು : **ಸುಂದರ ಪಾಂಡಿಯನ್**
ಅನು : **ಡಾ। ಎ. ಜಿ. ವಿಜಯರಾಘವನ್**

"ಆ ಪಿಶಾಚಿ ತಾನು ಹೋಗುವುದಿಲ್ಲವೆಂದು ಎರಡು ತಿಂಗಳಿಂದ ಹಟ ಮಾಡುತ್ತಿದೆ. ಕಡೆಯಲ್ಲಿ ಅವರು ವೇಪ್ಪಿಲಾಂಕುಳದಿಂದ ನನ್ನ ತಾತನ ಬಳಿ ಬಂದರು. ಅವರದು ತುಂಬಾ ಅನುಕೂಲಸ್ಥ ಕುಟುಂಬ. ಅವಳ ಗಂಡನಿಗೆ ನಾಂಗುನೇರಿಯಲ್ಲಿ ಒಬ್ಬಳೊಂದಿಗೆ ಸಂಬಂಧವಿದೆ. ಅವರಿಗೆ ಇಬ್ಬರು ಮಕ್ಕಳು ಬೇರೆ. ಅವನ ಹೆಂಡತಿಗೆ ಆಗಾಗ ಮೈ ಮೇಲೆ ಬರುತ್ತೆ. ಮೈಮೇಲೆ ಬಂದಾಗ ಆಟ ಆಡ್ತಾಳೆ ಆ ಆಟವೆಂದರೆ ನಮ್ಮ ಮನೆ ಆಟ ನಿಮ್ಮ ಮನೆ ಆಟ ಅಲ್ಲ ಭಯಂಕರ ಆಟ. ಮಲಯಾಳ ದೇಶದಿಂದ ಮಲೆಯರಸ ಬಂದು ಏನು ಮಾಡಿದರೂ ಇವಳು ಹೋಗಲಿಲ್ಲ ಕೊನೆಯಲ್ಲಿ ಆ ಪಿಶಾಚಿ ನನ್ನ ತಾತನ ಮೂಲಕವೇ ಓಡಿದಳು".

"ಇದೇಗಾಯ್ತು ಆರ್ಮುಗಂ".

"ರಾತ್ರಿ ಹನ್ನೆರಡರ ನಂತರ ನನ್ನ ತಾತ ಬುಡುಬುಡುಕೆ ಕೈಗೆತ್ತಿಕೊಳ್ಳುತ್ತಾರೆ. ಮೈಮೇಲೆ ಒಂದು ಚೂರೂ ಬಟ್ಟೆಯಿರುವುದಿಲ್ಲ. ಸುಡುಗಾಡು ಬೂದಿಯನ್ನು ಮೈಯೆಲ್ಲಾ ಬಳಿದುಕೊಳ್ಳುತ್ತಾರೆ. ಇವನಮ್ಮನ್, ಅವ್ನ ಮೀಸೆ ಹೇಗಿರುತ್ತೆ ಗೊತ್ತಾ ಮಹಿಶಾಸುರಂಗೆ ಇದ್ದಂಗೆ ಇರುತ್ತೆ. ಕೈಯಲ್ಲಿ ಬೇವಿನ ಸೊಪ್ಪು ಮತ್ತು ಬುಡುಬುಡುಕೆ ಹಿಡ್ಕೊಂಡು 'ಯಾವೂರು ಯಾವ್ದೇಶ ಎಲ್ಲಿಂದ ಬಂದೆ? ನಿನ್ನನ್ನು ಸಿಕ್ದೋರು ಕೇಯ. ನಿನ್ನ ಲೆಕ್ಕ ಏನು ಹೇಳು. ನೆಟ್ಟೂರನೀಲಿ ನಿನ್ನ ನೆನಪೇನು ಹೇಳು' ಹೀಗೆ ಅವನು ಹಾಡುತ್ತಾ ಕುಣಿಯಲು ಆರಂಭಿಸಿದರೆ ಒಂದು ಹೆಣ್ಣೂ ಮನೆಯಿಂದ ಹೊರಬರುವುದಿಲ್ಲ. ಗಂಡಸರು ಮಾತ್ರ ಅದೂ ಯುವಕರು ಅವರ ಜೊತೆಗಿರುತ್ತಾರೆ. ಹಾಡಿದ ಮೇಲೆ ಕೋಲನ್ನು ಕೈಗೆತ್ತಿಕೊಳ್ಳುತ್ತಾರೆ ಅಷ್ಟೇ, ಇಗೋ ಹೊರಟೆ ಎಂದು ದೆವ್ವ ಓಡುತ್ತೆ. ಅದಕ್ಕಾಗಿ ಅವರು ತಾತನಿಗೆ ಎರಡು ಸವರನ್ ಕೈಕಡಗ ಕೊಟ್ಟಿದ್ದಾರೆ. ಅದು ಅವರ ಕೈಯಲ್ಲಿ ಸಾಯುವತನಕ ಇತ್ತು".

"ನಿನ್ನಪ್ಪ ಹೇಗೆ".

"ಅವರೊಬ್ಬ ತುಂಬಾ ಸಪ್ಪೆ ಮನುಷ್ಯ. ತಾತ ಅಂದರೆ ತಾತನೇ".

ಆರ್ಮುಗಂ ಬಳಿ ನಾನು ಕ್ಷೌರ ಮಾಡಿಸಿಕೊಳ್ಳಲು ಹೋಗಿದ್ದೆ. ನಮ್ಮೂರನ್ನು ಒಂದು ಸಣ್ಣ ಹೊಳೆ ಇಬ್ಭಾಗವಾಗಿಸಿದೆ. ಆ ಹೊಳೆಯ ದಕ್ಷಿಣಕ್ಕೆ ಇರುವುದನ್ನು ಊರು ಎಂತಲೂ ಉತ್ತರಕ್ಕೆ ಇರುವುದನ್ನು ಹೊಲಗೇರಿ ಎಂತಲೂ ಎನ್ನುತ್ತಾರೆ. ಹೊಲಗೇರಿಯಲ್ಲಿ ಎರಡು ಬೀದಿಗಳಿವೆ. ಸಾಮಾನ್ಯವಾಗಿ ಆ ಮನೆಗಳೆಲ್ಲಾ

ತಾಳೆಗರಿಗಳಿಂದ ಹೊದಿಸಲ್ಪಟ್ಟಿರುವವು. ಒಂದೇ ಒಂದು ಮನೆ ಮಾತ್ರ ಪಶ್ಚಿಮದ ಕೊನೆಯಲ್ಲಿ ಬಿಳಿಯಾದ ಗೋಡೆಗಳಿಂದ ಮತ್ತು ಹಂಚಿನ ಹೊದಿಕೆಯಿಂದ ಕೂಡಿದೆ. ಅದು ಪಳ್ಳಿಕೊತ್ತಾನನ ಮನೆ. ಆ ಊರಿನಲ್ಲಿ ಅವನೊಬ್ಬನೇ ಶಾಲೆಗೆ ಹೋಗಿ ಓದಿದವನು.

ಪೂರ್ವದ ಕೊನೆಯಲ್ಲಿ ಪ್ರತ್ಯೇಕವಾಗಿ ತೋಟಿ ಸಲ್ಲಿನ ಮನೆಯಿದೆ. ಹೊಳೆಯ ದಡದಲ್ಲಿ ಕಡುಬಡವರ ಎರಡು ಮೂರು ಮನೆಗಳಿವೆ. ಅವು ಗುಡಿಸಿಲೂ ಅಲ್ಲ ಮನೆಯೂ ಅಲ್ಲ ಹಾಗಿವೆ. ಅವುಗಳಲ್ಲಿ ಒಂದು ಮನೆ ಆರ್ಮುಗಂನ ಮನೆ. ಅವನೇ ಆ ಊರಿನ ಕ್ಷೌರಿಕ.

ಕ್ಷೌರಿಕ ಆರ್ಮುಗಂ ಬರುತ್ತಾನೆಂದರೆ ಅವನಿಗೊಂದು ಪ್ರತ್ಯೇಕ ಮರ್ಯಾದೆ. ಅವನ ವಯಸ್ಸು ಹತ್ತಿರ ಹತ್ತಿರ ೫೦ ವರ್ಷ ಆಗಿದ್ದರೂ ಕನ್ನಡಕ ಇಲ್ಲದೆ ಕ್ಷೌರ ಮಾಡುತ್ತಾನೆ. ಎಲ್ಲರೂ ಪರ್ವಾಗಿಲ್ಲ ಚೆನ್ನಾಗಿದೆ ಎನ್ನುವ ಹಾಗೆ ಕ್ಷೌರ ಮಾಡುತ್ತಾನೆ. ಅವನು ಐವತ್ತು ವರ್ಷದವನಾದರೂ ನಾನು ಅವನನ್ನು ಏಕವಚನದಲ್ಲಿಯೇ ಕರೆಯುತ್ತೇನೆಂದು ನೋಡ್ತೀರಾ! ಇದು ನಮ್ಮ ಹಳ್ಳಿಯ ರೂಢಿ. ಚಡ್ಡಿ ಹಾಕದೆ ಇರುವ ಚಿಕ್ಕ ಚಿಕ್ಕ ಮಕ್ಕಳು ಕೂಡ "ಏ ಆರ್ಮುಗಂ" ಎಂದೇ ಕರೆಯುತ್ತಾರೆ. ನಾನು ಹೈಸ್ಕೂಲಿನಲ್ಲಿ ಓದುವಾಗ ಹಾಸ್ಟೆಲಿನಿಂದ ಊರಿಗೆ ಬಂದಿದ್ದೆ. ಆಗೊಮ್ಮೆ ಕ್ಷೌರ ಮಾಡಿಸಿಕೊಳ್ಳಲು ಹೋದೆ. ಆರ್ಮುಗಂನ ಹೆಂಡತಿ ಪೇಚ್ಚಿ ಬೆಳಗ್ಗೆ ಮನೆ ಮುಂದೆ ಗುಡಿಸುತ್ತಿದ್ದಳು.

ನಾನು "ಏನ್ರೀ" ಎಂದು ಕರೆದೆ. ಅವಳು ನನ್ನನ್ನು ಒಂದು ತರಾ ನೋಡಿದಳು.

"ಅವರಿದಾರಾ"

"ಯಾರು"

"ಅದೇ ಅವರು"

"ಅವರೆಂದರೆ ಯಾರು"

"ಅದೇ ಆರ್ಮುಗಂ ಅವರು"

"ಅದೇನು ಹೀಗೆ ಕರೀತೀರಿ"

ಎಂದ ಅವಳು ಬಿದ್ದು ಬಿದ್ದು ನಕ್ಕಳು. ಅವಳಿಂದ ನಗು ತಡೆಯಲಾಗಲಿಲ್ಲ. ಪಕ್ಕದ ಮನೆ ಪಾರ್ವತಿ ಅತ್ತಿಗೆ ಇಣುಕಿ ನೋಡಿ "ಏನು ಮೈದ ಏನ್ ವಿಶೇಷ? ಬೆಳ್ಗ್ಗೆ ಪೇಚ್ಚಿ ಯಾಕೆ ಹಾಂಗೆ ನಗ್ತಾಳೆ? ನೀನೇನ್ಮಾಡ್ದೆ?"

"ನಾನೇನೂ ಮಾಡಿಲ್ಲ. ಆರ್ಮುಗಂ ಅವರು ಇದಾರ ಎಂದು ಕೇಳಿದೆ. ಅದಕ್ಕೆ ಹೀಗೆ ನಗುತ್ತಿದ್ದಾಳೆ".

ಆಮೇಲೆ ಅವಳೂ ನಗಲು ಪ್ರಾರಂಭಿಸಿದಳು. ನಂತರ ಆ ನಗು ಹೊಳೆದಾಟಿ ಕೊಲಗಮಾರ ಬೀದಿ, ಥೇವಮಾರ ಬೀದಿ, ಆಚಾರ್ರ ಬೀದಿ ಎಲ್ಲಾ ದಾಟಿ ಹೋಗಿ ಸಾಯಂಕಾಲದೊಳಗೆ ದೇವಸ್ಥಾನದ ಪೂಜಾರಿ ಮನೆ ದಾಟಿ ನಾಯಕರ ದೊಡ್ಡ ಮನೆ ಮುಂದೆ ಹೋಗಿ ಢಿಕ್ಕಿ ಹೊಡೆಯಿತು. ಮಾರನೆ ದಿನ ನಾನು ಬಸ್ಸು ಹತ್ತಲು ಹೋದಾಗ ಆ ದೊಡ್ಡ ನಾಯಕರು ನನ್ನನ್ನು ಕರೆದು "ಏನೋ ಹೀಗೆ ಮಾಡ್ದೆ" ಎಂದು ನನ್ನ ನೋಡಿದ ತಕ್ಷಣ ಕೇಳಿದರು. "ಹೇಗೆ" ಎಂದು ಏನೂ ತಿಳಿಯದವನಂತೆ ಅತ್ತಿತ್ತ ನೋಡಿದೆ. ಅದಕ್ಕವರು "ಅದೇ ನೀನು ಕ್ಷೌರಿಕನ ಮನೆಗೆ ಹೋಗಿ ಸಂಬಂಧ ಕೇಳ್ದಂತಲ್ಲಾ" ಎಂದು ನಗುತ್ತಾ ಕೇಳಿದರು. ಊರಿನಲ್ಲಿ ಇರಲು ಆಗುವುದಿಲ್ಲ. ಊರವರೆಲ್ಲಾ ಒಂದೇ ಗೇಲಿ ಮಾಡಹತ್ತಿದರು. ಪರ್ವಾಗಿಲ್ಲವೆಂದು ಸುಮ್ಮನಿದ್ದರೆ ಆ ಆರ್ಮುಗಂ ಇದಾನಲ್ಲ ಅವನೇ ನಗಲು ಶುರುಮಾಡಿದ.

"ಏನು ಪಾಂಡ್ಯ ಇವತ್ತು ಬೆಳಗ್ಗೆ ಬಂದು ಏನು ಕೇಳಿದೆ? ನನ್ನ ಹೆಂಡತಿ ಇಷ್ಟೊಂದು ನಗ್ತಾಳೆ" ಎಂದು ಅವನು ಗಂಭೀರವಾಗಿ ಕೇಳಿದ.

ನಾನು ಏನಾಯಿತೆಂದು ಗಂಭೀರವಾಗಿ ಹೇಳಿದ್ದನ್ನು ಕೇಳಿ ಅವನು ನಗುತ್ತಾ "ಒಳ್ಳೆ ತಮಾಷೆ, ಮಕ್ಕಳು ಓದಲು ಪ್ರಾರಂಭಿಸಿದರೆ ಹೀಗಾಗ್ತಾರೆ" ಎಂದ ಸ್ವಾರಸ್ಯಕರವಾಗಿ.

"ನಿಮ್ಮ ವಯಸ್ಸೇನು ನನ್ನ ವಯಸ್ಸೇನು? ನೀವು ನನ್ನನ್ನು ಅವನು ಇವನು ಎಂದು ಕರೆದರೆ ಪರ್ವಾಗಿಲ್ಲ, ನಾನು ಹಾಗೆ ಕರೆಯಲು ಆಗುತ್ತಾ. ದೊಡ್ಡವರು ಚಿಕ್ಕವರು ಎಂದು ಮರ್ಯಾದೆ ಬೇಡ್ವ" ಎಂದೆ.

"ಮರ್ಯಾದೆ ಮಾತ್ನಲ್ಲಿಲ್ಲ, ಮನಸ್ನಲ್ಲಿದೆ. ನಾನು ಯಾರು? ಈ ಹಳ್ಳಿಗೆ ಕ್ಷೌರಿಕ. ಈ ಹಳ್ಳಿಯಲ್ಲಿ ನನ್ನ ಕೈ ಮುಟ್ಟದೇ ಇರುವ ತಲೆ ಯಾವುದಾದರೂ ಇದೆಯ, ಹಾಗೇನಾದರೂ ಇದ್ದರೆ ಅದು ಮದುವೆಯಾಗಿ ಬೇರೆ ಊರಿಂದ ಬಂದಿರುವ ಹೆಂಗಸರ ತಲೆ ಮಾತ್ರ. ಸಾಯಂಕಾಲವಾದರೆ ನಾನು ಪಾತ್ರೆಯೊಂದಿಗೆ ನಿಮ್ಮ ಮನೆ ಮುಂದೆ ನಿಂತು, ನಿಮ್ಮ ಅನ್ನ ತಿಂದು ಬೆಳೆದವನು. ನೀವೆಲ್ಲಾ ಇಲ್ಲದಿದ್ದರೆ ನಾನಿಲ್ಲ. ನೀವು ಮರ್ಯಾದೆ ಕೊಟ್ಟು ಮಾತಾಡಲು ಶುರುಮಾಡಿದರೆ ನನಗೆ ಹೊರಗಿನವನೆನಿಸುತ್ತದೆ. ದಯವಿಟ್ಟು ಕೈ ಮುಗಿದು ಕೇಳ್ಕೊತೀನಿ, ಇನ್ನು ಮುಂದೆ ಹಂಗೆ ಕರೀಬೇಡಿ ನಾನು ಯಾವಾಗಲೂ ನಿಮ್ಮ ಆರ್ಮುಗಂನೇ". ಹೀಗೆ ಇನ್ನೂ ಮಾತಾಡುತ್ತಲೇ ಮನೆ ಒಳಗೆ ಹೋಗಿ ಒಂದು ಗಂಟನ್ನು ತೆಗೆದುಕೊಂಡು ಬಂದ. ಹೂವರಸು ಮರದಡಿಯಲ್ಲಿ ಆರ್ಮುಗಂ ಕುಳಿತ. ನಾನು ಅವನ ಎದುರಲ್ಲಿ ಕುಳಿತೆ. ಅವನು ನನ್ನ ಮುಖವನ್ನೇ ಸ್ವಲ್ಪ ಹೊತ್ತು ನೋಡಿ ಬಾಚಣಿಗೆ ತೆಗೆದು ಕೂದಲನ್ನು ಬಾಚಲು ಪ್ರಾರಂಭಿಸಿದ.

ಅವನು ನಾಜೂಕಾಗಿ ಕ್ಷೌರ ಮಾಡುವಂತೆ ಕಥೆ ಹೇಳುವುದರಲ್ಲೂ ಚತುರ. ತುಂಬಾ ಸ್ವಾರಸ್ಯವಾಗಿ ಕಥೆ ಹೇಳಬಲ್ಲನು.

"ನಾವು ನಿಮ್ಮ ಹಾಗೆ ಮೇಲ್ಜಾತಿಗಳಲ್ಲಿ ಒಂದು ಜಾತಿಯವರು, ಕ್ಷೌರ ಮಾಡಲು ಪ್ರಾರಂಭಿಸಿದ ಮೇಲೆ ಹೀಗಾದೆವು. ನಾವು ವೈದ್ಯವನ್ನೂ ಮಾಡುತ್ತೇವೆ. ವೈದ್ಯ ಅಂದರೆ ಹೆರಿಗೆ ಮಾಡಿಸುವುದು, ವಿಷ ಬಿಡಿಸುವುದು, ಬಾಲಗ್ರಹ ಬಿಡಿಸುವುದು ಹೀಗೆ ತುಂಬಾ ಕೆಲ್ಸಗಳನ್ನು ಮಾಡ್ತೀವಿ. ಆಮೇಲೆ ಹುಡ್ಗಿ ದೊಡ್ಡೋಳಾದಾಗ, ಮದುವೆಗಳಲ್ಲಿ, ಶವ ಸಂಸ್ಕಾರ ಸಂದರ್ಭದಲ್ಲಿ, ದೇವರ ಕಾರ್ಯ ಇವು ನಾವಿಲ್ಲದೆ ನಡೆಯುವುದಿಲ್ಲ" ಎಂದು ಆರ್ಮುಗಂ ವಿವರವಾಗಿ ಹೇಳಿದನು. ಕೇಳ್ತಾ ಕೇಳ್ತಾ ನನಗೆ ಇವೆಲ್ಲ ಸರಿ ಅನ್ನಿಸ್ತು. ಆದರೆ ಆ ಮುದುಕ ಪಾಪ ಅನಿಸುತ್ತೆ.

ನನಗೆ ನಾಯಿ ಎಂದರೆ ತುಂಬಾ ಭಯ. ಒಂದು ದಿನ ಲಂನಾಡಾರ್ ಮನೆ ನಾಯಿ ನನ್ನನ್ನು ಹಿಂದಿಂದೆ ಅಟ್ಟಿಸಿಕೊಂಡು ಬಂತು. ಆಗ ನಾನು ಎಸ್ಸೆಸ್ಸಿಲ್ಲಿ ಓದುತ್ತಿದ್ದೆ. ನಾನು ಹೊಳೆದಾಟಿ ಭಯದಿಂದ ಓಡಿದೆ. ಅವಿತುಕೊಳ್ಳಲು ಅಲ್ಲೆಲ್ಲೂ ಬೇರೆ ಜಾಗವಿರಲಿಲ್ಲ. ಕೊನೆಯಲ್ಲಿ ಆರ್ಮುಗಂ ಮನೆ ಒಳಗಡೆ ಹೋಗಿ ಅವಿತುಕೊಂಡೆ. ಅವನು ಏನು ಪಾಂಡ್ಯ ಏನು ಪಾಂಡ್ಯ ಎಂದು ತಡವರಿಸಿದ.

ನಾನು "ನಾಯಿ ಕಡಿಯಲು ಬರುತ್ತಿದೆ" ಎಂದೆ.

"ಎಲ್ಲಿ"

"ಅಲ್ಲಿ"

ಆರ್ಮುಗಂ ಹೊರಗಡೆ ಬಂದು ನೋಡಿದನು. "ಲೊಳ್ ಲೊಳ್" ಎನ್ನುತ್ತಿದ್ದ ಆ ಕಪ್ಪು ಶನಿ ತರ ಇದ್ದ ನಾಯಿ ಅವನನ್ನು ನೋಡಿದಾಕ್ಷಣ ನಿಲ್ಲಿಸಿತು. ಆಮೇಲೆ "Sound" ಕಡಿಮೆ ಮಾಡಿತು.

"ಛೀ ನಾಯಿ ಮೂದೇವಿ ಎಲ್ಲಿ ಎಲ್ಲಿ ಬಂದು ಬೊಗಳ್ತೀಯ, ಓಡ್ತೀಯಾ ಇಲ್ವೋ" ಎಂದು ಅದಲಿಸಿದ.

ನಾಯಿ ಶಬ್ದ ನಿಲ್ಲಿಸಿ ಬಾಯಿ ಮುಚ್ಚಿಕೊಂಡು ಹಿಂತಿರುಗಿ ಒಂದೇ ಓಟ ಓಡಿತು. ನನಗೆ ತುಂಬಾ ಆಶ್ಚರ್ಯವಾಯಿತು. ನಾನು ಆರ್ಮುಗಂನನ್ನು ಆಶ್ಚರ್ಯದಿಂದ ನೋಡಿದೆ.

"ಇದೇನು ಆಶ್ಚರ್ಯ! ನನ್ನ ನೋಡಿದರೆ ದೆವ್ವವೇ ಓಡುತ್ತದೆ"

"ದೆವ್ವ"

"ಹೌದು"

"ನನ್ನ ತಂದೆ ದೆವ್ವ ಓಡಿಸ್ತಾರೆ ನಿನಗೆ ಗೊತ್ತಿಲ್ವಾ, ನನ್ನ ತಾತ ಆರ್ಮುಗಂ ನಮ್ಮ ಮನೆಯಲ್ಲಿ ಎರಡು ದೆವ್ವಗಳನ್ನು ಆ ಕಂಬಗಳಿಗೆ ಯಾವಾಗಲೂ ಕಟ್ಟಿ ಹಾಕಿರುತ್ತಿದ್ದರು".

ನನಗೆ ಇದನ್ನು ನಂಬಲಾಗಲಿಲ್ಲ ಆದರೆ ನಂಬದಿರಲೂ ಆಗಲಿಲ್ಲ.

"ಅದ್ಯಾಕೋ ನಾಯಿ ನಿನ್ನ ನೋಡಿದರೆ ಓಡಿ ಹೋಗುತ್ತೆ".

"ಅದೇ ಮಂತ್ರ"

"ಅದೇನು ಮಂತ್ರ"

"ಅದನ್ನು ಸುಮ್ಮನೆ ಹೇಳಲಾಗುವುದಿಲ್ಲ"

"ಮತ್ತೆ"

"ದಕ್ಷಿಣೆ ಕೊಡಬೇಕು"

"ಏನು ದಕ್ಷಿಣೆ"

"ಏನಾದರೂ ಸರಿ"

"ಕಡಲೆಕಾಯಿ, ಬಾಳೆಕಾಯಿ, ಒಣ ಮೆಣಸಿನಕಾಯಿ, ತೆಂಗಿನಕಾಯಿ, ಹೀಗೆ".

ಆವತ್ತು ಮುಸ್ಸಂಜೆ ಆರ್ಮುಗಂ ಮನೆಗೆ ನನ್ನ ತಂದೆಗೆ ಗೊತ್ತಿಲ್ಲದಂತೆ ಒಂದು ತೆಂಗಿನಕಾಯಿ ನಾಲ್ಕು ಬಾಳೆಕಾಯಿ ಟವಲಿನಲ್ಲಿ ಮುಚ್ಚಿಟ್ಟುಕೊಂಡು ಹೋದೆ. ಆರ್ಮುಗಂ-ಹೆಂಡತಿ 'ಅನ್ನ'ಕ್ಕಾಗಿ ಹೋಗಿದ್ದಳು. ಅವನು ಮಾತ್ರ ಮುಂದೆ ಜಗಲಿಯ ಮೇಲೆ ಒಂದು ಡಬ್ಬಿಯೊಳಗೆ ಏನನ್ನೋ ಹುಡುಕುತ್ತಿದ್ದನು. ಅದರೊಳಗೆ ಎಂತೆಂತದೋ ಬೇರು, ಎಲೆ, ತೊಗಟೆ, ತಾಯಿತಗಳು ಇದ್ದವು. ಅವನು ನನ್ನನ್ನು ನೋಡಿದ ತಕ್ಷಣ ತನ್ನೊಳಗೇ ಮುಗುಳ್ನಕ್ಕನು.

"ಏನು ಪಾಂಡ್ಯ ಏನು ವಿಶೇಷ"

ಎಲ್ಲ ಗೊತ್ತಿದ್ದೂ ಏನೂ ಗೊತ್ತಿಲ್ಲದವನಂತೆ ಕೇಳಿದನು. ನಾನು ತೆಂಗಿನಕಾಯಿ, ಬಾಳೆಕಾಯಿ ಎಲ್ಲವನ್ನೂ ಅವನ ಮುಂದಿಟ್ಟೆ.

"ಇದೆಲ್ಲಾ ಏಕೆ ತಂದೆ" ಎಂದು ತಲೆ ಕೆರೆದುಕೊಂಡ.

"ನೀನ್ತಾನೆ ಹೇಳಿದ್ದು. ನಾಯಿ ನನ್ನ ನೋಡಿದರೆ ಭಯದಿಂದ ಓಡಬೇಕು, ಆ ಮಂತ್ರ ನನಗೆ ಹೇಳಿಕೊಡು".

"ಓ ಅದಾ!" ಎಂದು ತೆಂಗಿನಕಾಯಿ, ಬಾಳೆಕಾಯಿಗಳನ್ನು ತೆಗೆದುಕೊಂಡು ಹೋಗಿ ಒಳಗಿಟ್ಟುಬಂದ. ಒಂದು ಚೆಂಬಿನಲ್ಲಿ ನೀರು ತಂದು ಅವನ ಬಾಯಲ್ಲಿ ನೀರು ಹಾಕಿಕೊಂಡು ಮೂರು ಸಾರಿ ಮುಕ್ಕಳಿಸಿ ಉಗಿದ.

"ಕಾಲ ಪೀಚಿ ಕಂಗರುಬಾಲ

ಡಂಗು ಮಾರೆ ತುಪ್ಪಾಕಿರೆ

ಡಪ್ಪಕುಚ್ಚಿ ಜಾವೋ ಜಾವೋ
ಡಮರಕುಚ್ಚಿ ಜಾವೋ ಜಾವೋ"

"ಇದೇ ಮಂತ್ರ, ಎಲ್ಲಿ ಹೇಳು" ಎಂದು ಎರಡು ಸಲ ಹೇಳಿಕೊಟ್ಟನು. ಆಮೇಲೆ ಅವನು "ಇದನ್ನು ಮನಸ್ಸಿನೊಳಗೆ ಮೂರು ಸಲ ಹೇಳಿದರೆ ಸಾಕು ನಾಯಿ ಬಾಯಿ ಮುಚ್ಚಿಕೊಂಡು ಬಾಲ ಮುದುರಿಕೊಂಡು ಓಡಿ ಹೋಗುತ್ತದೆ".

ನನಗೆ ಬಹಳ ಸಂತೋಷವಾಯಿತು. ಈ ಮಂತ್ರವನ್ನು ಮನಸ್ಸಿನೊಳಗಡೆಯೇ ಹೇಳಿ ನೋಡಿಕೊಂಡೆ. ನನ್ನ ಮನೆಗೆ ಹೋದೆ. ಮನೆಗೆ ಹೋಗುವ ದಾರಿಯಲ್ಲಿ ಅಡಿಕ್ಕಲ ನಾಡಾರರ ಮನೆ. ಅಲ್ಲಿ ಅವರ ಮಗಳು ಮೇರಿ ನಾಯಿಯೊಂದಿಗೆ ನಿಂತಿದ್ದಳು. ಅವಳದು ಒಳ್ಳೆ ಬಣ್ಣ, ಎರಡು ಜಡೆ, ಲಂಗ ಜಾಕೆಟ್ ಅದಕ್ಕೆ ಹೊಂದುವಂತೆ ದಾವಣಿ, ಗುಂಗುರು ಕೂದಲು. ಅವಳನ್ನು ನೋಡಿದರೆ ಹೃದಯ ಬಡಿತ ಜಾಸ್ತಿಯಾಗುತ್ತದೆ. ಅವಳು ಜಾಸ್ತಿ ಮಾತಾಡುವುದಿಲ್ಲ. ಅವಳೊಬ್ಬ ದೊಡ್ಡ ರಾಣಿಯೆಂದು ಯಾವಾಗಲೂ ಒಂದು ರೀತಿಯ ಗರ್ವ ಅವಳ ಕಣ್ಣೊಳಗೆ ಕಾಣುತ್ತದೆ.

ಅವರ ನಾಯಿ ನನ್ನ ನೋಡಿದ ತಕ್ಷಣ "ಲೊಳ್ ಲೊಳ್" ಎಂದು ಓಡಿ ಬಂದಿತು. ನನ್ನ ಮನಸ್ಸಿನೊಳಗೆ ಮಂತ್ರ ಹೇಳಿ ಅಲ್ಲಿಯೇ ಧೈರ್ಯದಿಂದ ನಿಂತೆ. ಅವಳು ಜಿಮ್ಮಿ ಎಂದು ಕರೆದಳು. ಆದರೂ ಆ ನಾಯಿ ಅವಳ ಕಡೆ ನೋಡದೆ ಓಡಿ ಹೋಯಿತು. ನನಗೆ ಖುಷಿಯಾಯಿತು. ಆರ್ಮುಗಂ ಬಾಳಲಿ ಎಂದು ನನ್ನ ಮನಸ್ಸು ಜಯಕಾರ ಹಾಕಿತು.

ಮಾರನೆ ದಿನ ಬೆಳಗ್ಗೆ ಆರ್ಮುಗಂಗೆ ಧನ್ಯವಾದ ಹೇಳಿದೆ. ಆದರೆ ನನಗೊಂದು ಸಂದೇಹವಿತ್ತು. ಅದೇನೆಂದರೆ ಒಂದು ವೇಳೆ ನಾಯಿ ಕಚ್ಚಿದರೆ ಏನಾದರೂ ಪ್ರತ್ಯೇಕ ಮಂತ್ರವಿದೆಯೆ? ಔಷಧವಿದೆಯೆ? ಎಂದು ಕೇಳಿದೆ. ನಾನು ಏಳನೇ ವರ್ಷದವನಾಗಿದ್ದಾಗ ನನ್ನನ್ನು ಒಂದು ನಾಯಿ ಕಚ್ಚಿತು. ಅದು ಚಿಕ್ಕಮ್ಮನ ಮನೆ ನಾಯಿ. ನಾನು ಅವರ ಮನೆಗೆ ಗೃಹಪ್ರವೇಶಕ್ಕಾಗಿ ಹೋಗಿದ್ದಾಗ ಆ ನಾಯಿ ನನ್ನ ಜೊತೆಯಲ್ಲಿಯೇ ಮಲಗಿ ನನ್ನನ್ನು ಕಚ್ಚಿತು. ಆವತ್ತಿನಿಂದ ನಾಯಿಯೆಂದರೆ ಅಷ್ಟೊಂದು ಭಯ.

ಅವನು "ಇದೇ ಮಂತ್ರ. ಆದರೆ ಜಾವೋ ಎನ್ನುವ ಬದಲು ಆವೋ ಎಂದು ಹೇಳಬೇಕು. ಪುನ್ನಾಕು ಪೂಡು ಎಂದು ಒಂದು ಗಿಡವಿದೆ. ಅದರೊಂದಿಗೆ ಒಂದು ಚೂರು ಉಪ್ಪು ಹಾಕಿ ಚೆನ್ನಾಗಿ ಅರೆದು ಕುಡೀಬೇಕು ಅಷ್ಟೆ".

ನಾನು ಅವನನ್ನು ಗೌರವದಿಂದ ನೋಡಿದೆ. ಇವನು ದೊಡ್ಡ ಆಳು. ಊರಿನಲ್ಲಿ ದನಗಳಿಗೆ ಖಾಯಿಲೆ ಬಂದರೆ ಅದರ ಮೂಗಿನಿಂದ ನೀರು ಸುರಿಯುತ್ತದೆ. ಅದು ಸರಿಯಾಗಿ ಮೇವು ತಿನ್ನುವುದಿಲ್ಲ. ಹೀಗಾದಾಗ ಜನ ತಕ್ಷಣ ಆರ್ಮುಗಂನ ಬಳಿ ಆಳನ್ನು ಕಳುಹಿಸುತ್ತಾರೆ. ಮೂರು ನಿಂಬೆ ಹಣ್ಣುಗಳನ್ನು ತೆಗೆದುಕೊಂಡು ಬರಲು ಹೇಳಿ ಸ್ವಲ್ಪ ಇಂಗು ಬೇಕೆಂದು ಹೇಳುತ್ತಾನೆ. ಅಷ್ಟೆ, ದನ ಮೊದಲಿನ ಹಾಗಾಗುತ್ತದೆ. ಯಾವ ರೀತಿಯ ಉಳುಕಿದ್ದರೂ ಸರಿ ಅವನು ಮಂತ್ರ ಹಾಕಿದರೆ ವಾಸಿಯಾಗುತ್ತದೆ.

ನಾನು ಅಲ್ಲಿ ನಿಂತಿದ್ದಾಗ ಕ್ಷೌರ ಮಾಡಿಸಿಕೊಳ್ಳಲು ತೆರವಿಯ ಥೇವರ್ ಅವರ ಮಗನೊಂದಿಗೆ ಬಂದರು. ಆರ್ಮುಗಂ ಕ್ಷೌರ ಮಾಡಲು ಆರಂಭಿಸಿದ. ನಾನು ಕ್ಷೌರ ಮಾಡಿಸಿಕೊಳ್ಳಲು ಅಲ್ಲಿ ಕಾಯುತ್ತಿದ್ದೆ. ಅವನು "ಏನು ಪಾಂಡ್ಯ ಶೇವ್ ಮಾಡ್ಬೇಕಾ" ಎಂದ.

"ಶೇವಾ! ತಮಾಶೆ ಮಾಡ್ತೀಯಾ, ಗಡ್ಡ ಬಂದಿರುವ ಹಾಗೆ ಕಾಣುತ್ತಾ?"

"ಗಡ್ಡಾ ಮುಖದಲ್ಲಿ ಇಲ್ಲ, ಇನ್ನೆಲ್ಲಾದರೂ ಇದ್ದರೆ......?"

ಕಿಟಕಿಗಳು

ಉರ್ದು : **ಧರ್ಮೇಶ್ ತಿವಾರಿ**
ಅನು : **ಡಾ। ಮುಹಮದ್ ಸಿಬ್ಗತ್ ಉಲ್ಲಾ**

ದೃಶ್ಯ - ೧

(ಕಡೋಡಿಮಲ್‌ನ ಅಡಿಗೆ ಮನೆ, ಹಗಲು ಹೊತ್ತಿನ ಸಮಯ. ಕ್ಯಾಮರಾ ಕಿಟಕಿಯಿಂದ ಇಣುಕಿ ನೋಡುತ್ತದೆ, ಕಡೋಡಿಮಲ್ ಒಂದು ಭೂತಗನ್ನಡಿಯ ಸಹಾಯದಿಂದ ಹರಡಿ ಬಿದ್ದಿರುವ ಸಕ್ಕರೆಯ ಒಂದೊಂದು ಹರಳನ್ನು ಆರಿಸುತ್ತಿದ್ದಾನೆ.)

ಲಕ್ಷ್ಮಿ : ಇದೇನ್ ಮಾಡ್ತಿದೀರಿ ನೀವು?

ಕಡೋಡಿಮಲ್ : ಇಷ್ಟೊಂದು ಸಕ್ಕರೆ ಚೆಲ್ಲಿ ಬಿಟ್ಟಿದ್ದೀಯಲ್ಲ ನೀನು.

ಲಕ್ಷ್ಮಿ : ಚೆಲ್ಲಿಲ್ಲ, ಇರುವೆಗಳಿಗೆ ಹಾಕಿದ್ದೇನೆ.

ಕಡೋಡಿಮಲ್ : ಇಂದು ಜನರಿಗೆ ತಿನ್ನಲು ಸಕ್ಕರೆ ಸಿಗುತ್ತಿಲ್ಲ; ನೀನು ಇರುವೆಗಳಿಗೆ ಸಕ್ಕರೆ ತಿನ್ನಿಸುತ್ತಿದ್ದೀಯ. ಇವತ್ತು ಮಾರ್ಕೆಟ್‌ನಲ್ಲಿ ಸಕ್ಕರೆ ಬೆಲೆ ಏನಿದೆ ಅಂತ ನಿನಗೇನಾದರೂ ಗೊತ್ತಿದೆಯಾ?

ಲಕ್ಷ್ಮಿ : ಅಯ್ ಹೈ. ಇರುವೆಗಳಿಗೆ ನಾನು ಅರ್ಧ ಚಮಚ ಸಕ್ಕರೆ ಹಾಕಿದ್ದಕ್ಕೆ ನೀವು ಆಕಾಶವನ್ನೇ ತಲೆ ಮೇಲೆ ಎತ್ತಿಕೊಳ್ಳುತ್ತಿದ್ದೀರಲ್ಲ (ಅಷ್ಟರಲ್ಲೇ ಲಕ್ಷ್ಮಿ ಯಾವುದೋ ತರಕಾರಿ ಫ್ರೈ ಮಾಡಲು ಫ್ರಯಿಂಗ್ ಪ್ಯಾನ್‌ನಲ್ಲಿ ಎಣ್ಣೆ ಹಾಕುತ್ತಾಳೆ, ಕಡೋಡಿಮಲ್ ಕೂಗುತ್ತಾನೆ.)

ಕಡೋಡಿಮಲ್ : ಏನು ಮಾಡುತ್ತಿದ್ದೀಯೆ? ಹೇ ಭಗವಾನ್, ಒಂದು ಪಲ್ಯ ಮಾಡಲು ಇಷ್ಟೊಂದು ಎಣ್ಣೆ. ನಾವು ಮೂರು ಜನ ತಾನೆ ಇರುವರು. ಇಷ್ಟು ಎಣ್ಣೆಯಲ್ಲಿ ಒಂದು ದೊಡ್ಡ ಕುಟುಂಬದ ಎಲ್ಲಾ ಅಡಿಗೆ ಆಗಿಹೋಗುತ್ತಿತ್ತು.

ಲಕ್ಷ್ಮಿ : ನಾನು ಅಡಿಗೆ ಮಾಡುವಾಗ ನೀವು ಕಿಚನ್‌ನಲ್ಲಿ ಬರಬೇಡಿ. ಅಂತ ಎಷ್ಟು ಸಲ ಹೇಳಿಲ್ಲ.

ಕಡೋಡಿಮಲ್ : ನಾನು ನಿನಗೆ ಅಷ್ಟು ಹೇಳಿದರೂ ನಿನ್ನ ಕೈ ಇಷ್ಟೊಂದು ಸಡಿಲವಾಗಿದೆ. ನಾನು ಕಿಚನ್‌ನಲ್ಲಿ ಬರದೆ ಹೋದರೆ ಲಕ್ಷ್ಮಿ. ನೀನು ನನ್ನ ಮನೆ ಲೂಟಿ ಹೊಡೆಸಿಬಿಡುತ್ತೀಯೆ, ನನ್ನನ್ನು ಪಾಪರ್ ಮಾಡಿ ಬಿಡುತ್ತೀಯೆ.

ಲಕ್ಷ್ಮಿ : ಇನ್ನು ನೀವು ಇಲ್ಲಿಂದ ಹೋಗ್ತೀರೋ ಇಲ್ವೋ?

ಕಡೋಡಿಮಲ್ : ನಿನ್ನ ಹೆಸರು ಲಕ್ಷ್ಮಿ. ನನ್ನ ಮನೆಗೆ ಲಕ್ಷ್ಮಿಯನ್ನು ಎಳೆದುಕೊಂಡು ಬರುತ್ತಾಳೆಂದು ನಿನ್ನನ್ನು ಮದುವೆ ಮಾಡಿಕೊಂಡು ಬಂದೆ.

ಲಕ್ಷ್ಮಿ : ನಾನು ಬಂದ ನಂತರ ನಿಮ್ಮ ಮನೆಯಲ್ಲಿ ಹುಣ್ಣಿನ ವರ್ಷ ಆಗಲಿಲ್ಲವೆ, ನನ್ನನ್ನು ಮದುವೆ

ಆಗುವಾಗ ನೀವು ಎಂತಹ ದರಿದ್ರ ಸ್ಥಿತಿಯಲ್ಲಿ ಇದ್ದಿರೆಂಬುದನ್ನು ಮರೆತುಬಿಟ್ಟಿರಾ? ನಾನು ತಂದಿದ್ದ ವರದಕ್ಷಿಣೆಯಿಂದಲೇ ನಿಮ್ಮ ಮನೆ ಒಂದು ಉತ್ತಮ ಸ್ಥಿತಿಯಲ್ಲಿರುವ ಸಜ್ಜನರ ಮನೆಯ ಹಾಗೆ ಕಾಣಿಸಲಾರಂಭಿಸಿತು. ಇಲ್ಲದಿದ್ದರೆ ಆ ನಿಮ್ಮ ಹಳೇ ಮನೆ, ಅದು ಹೇಗೆ ಕಾಣಿಸುತ್ತಿತ್ತೊ? ಇಂದು ಈ ಅಲಂಕರಿಸಿದ ಭವ್ಯವಾದ ಫ್ಲ್ಯಾಟ್, ದಿನ ಒಂದಕ್ಕೆ ಸಹಸ್ರಾರು ರೂಪಾಯಿಗಳ ನಿಮ್ಮ ಧಂದೆಯ ಆದಾಯ; ಇವೆಲ್ಲ ನನ್ನ ಅದೃಷ್ಟದಿಂದ ಇಲ್ಲದಿದ್ದರೆ ನಿಮಗೆ ಹೇಗೆ ಸಿಕ್ಕಿತು?

ಕಡೋಡಿಮಲ್ : ಇವೆಲ್ಲ ನಾನು ಒಪ್ಪುತ್ತೇನೆ. ಆದರೆ ನನ್ನ ಹೆಸರು ಕಡೋಡಿಮಲ್ ಎನ್ನುವುದನ್ನು ಮರೆಯಬೇಡ. ನಾನು ಕೋಟ್ಯಾಂತರ ರೂಪಾಯಿಗಳ ಆಸ್ತಿವಂತ ಆಗದಿದ್ದರೆ ನನಗೆ ತೃಪ್ತಿಯಾಗುವುದಿಲ್ಲ, ನಾನು ಒಂದೊಂದು ಹನಿ ಹನಿಯಾಗಿ ಎಲ್ಲವನ್ನೂ ಜೋಡಿಸಿಕೊಂಡು ಬರುತ್ತೇನೆ. ನೀನು ಈ ರೀತಿ ಲೆಕ್ಕವಿಲ್ಲದಷ್ಟು ಖರ್ಚು ಮಾಡಿದರೆ, ಹೇಗೆ ಕೆಲಸ ನಡೆಯಬೇಕು?

ಲಕ್ಷ್ಮಿ : ಓ ಹೋ, ಹಾಗಾದರೆ ನಾನು ಅಡಿಗೆ ಮಾಡುವುದೇ ಬೇಡವೆ? ಸೊಪ್ಪು ಎಣ್ಣೆಯಲ್ಲಿ ಕರಿಯದೆ ನೀರಿನಲ್ಲಿ ಫ್ರೈ ಮಾಡಲೇ?

ಕಡೋಡಿಮಲ್ : ದಿನಾಲೂ ಟಿ.ವಿಯಲ್ಲಿ ಕೇಳ್ತಾನೆ ಇರ್ತೀಯೆ, ಡಾಕ್ಟರ್ ಹೇಳ್ತಾನೆ ಇರುತ್ತಾನೆ, ಎಣ್ಣೆ ತುಪ್ಪ ಕಡಿಮೆ ತಿನ್ನಿ, ಇಲ್ಲದಿದ್ದರೆ ಹೃದಯರೋಗಗಳು ಬರುತ್ತವೆ ಅಂತ. ನೀನೇಕೆ ರೋಗಿಯಾಗಲು ಬಯಸುತ್ತೀಯಾ? ಇಂದು ಡಾಕ್ಟರ್ ಬಳಿ ಒಂದು ಸಲ ಹೋಗಿ ಬಂದರೆ ನೂರು ರೂಪಾಯಿ ಫೀಜ್, ಇನ್‌ಜೆಕ್ಷನ್ ಮತ್ತು ಔಷಧಿಗಳ ದುಡ್ಡು ಬೇರೆ;

ಲಕ್ಷ್ಮಿ : ಮಾತಿನ ಮಲ್ಲ ಅಂದರೆ ನೀವೇ. ನಿಮ್ಮಿಂದ ಯಾರಾದರೂ ಕಲಿಯಬೇಕು.

ಕಡೋಡಿಮಲ್ : ನಾವು ಏನಾದರೂ ಖಾಯಿಲೆ ಬಿದ್ದರೆ ಡಾಕ್ಟರ್ ಫೀಜ್ ಕೊಡಬಾರದೆಂದೇ ನನ್ನ ಮಗ ಚೇತನ್‌ಗೆ ಡಾಕ್ಟರ್ ಮಾಡಿಸಿರುವುದು ನಿನಗೆ ಗೊತ್ತೆ? ಹಾಗೇನೆ, ಔಷಧಿಗಳ ಸ್ಯಾಂಪಲ್ ಕೂಡ ಮುಫತ್ತಾಗಿ ಸಿಗುತ್ತವೆ. ಬೇರೆ ರೋಗಿಗಳಿಂದ ಚೇತನ್ ಎರಡೆರಡು ಕೈಗಳಿಂದ ಲೂಟಿ ಹೊಡೆಯುತ್ತಾನೆ. ಅವರ ಹಣದಿಂದ ನನ್ನ ಮಗನ ತಿಜೋರಿ ತುಂಬಿಹೋಗುತ್ತದೆ.

ಲಕ್ಷ್ಮಿ : ನೀವು ಮಾನವ ಶತ್ರು; ನನ್ನ ಚೇತನ್ ರೋಗಿಗಳಿಗೆ ತಳತನಕ ಚೂರಿಯಿಂದ ಕೊಯ್ಯಲು ಡಾಕ್ಟರ್ ಆಗಿಲ್ಲ. ಅವನು ರೋಗಿಗಳ ರೋಗವನ್ನು ದೂರ ಮಾಡಲು, ನೋವಿನಿಂದ ನರಳುತ್ತಿರುವ ರೋಗಿಗಳ ನೋವನ್ನು ನಿವಾರಿಸಲು ಡಾಕ್ಟರ್ ಪರೀಕ್ಷೆ ಪಾಸ್ ಮಾಡಿದ್ದಾನೆ. ಅವನ ಹೃದಯ ತುಂಬ ಮೃದು; ಅವನ ವಿಚಾರಗಳು ಉನ್ನತ; ಜನ ಅವನಿಗೆ ಎಷ್ಟೊಂದು ಮರ್ಯಾದೆ ಕೊಡುತ್ತಾರೆ, ನೋಡುತ್ತಿರಿ.

ಕಡೋಡಿಮಲ್ : ಮರ್ಯಾದೆ ತಗೊಂಡು ನೆಕ್ಕಬೇಕೇನು? ಅಸಲು ವಸ್ತು ಎಂದರೆ ಹಣ, ಹಣ; ಮನುಷ್ಯನ ಬಳಿ ಹಣವಿದ್ದರೆ ಜನ ಅವನನ್ನು ಪೂಜಿಸುತ್ತಾರೆ, ಅವನ ದಾರಿಯಲ್ಲಿ ಹೂವು ಹಾಸುತ್ತಾರೆ.

ಲಕ್ಷ್ಮಿ : ನಿಮ್ಮ ಬಳಿ ಸಾಕಷ್ಟು ಹಣವಿದೆ, ಆದರೆ ನಾನಂತೂ ನಿಮ್ಮನ್ನು ಯಾರೂ ಹೊಗಳುವುದನ್ನು ಕೇಳಲಿಲ್ಲ. ಪೂಜೆ ಮಾಡುವುದು ಹಾಗೂ ನಿಮ್ಮ ದಾರಿಯಲ್ಲಿ ಹೂವು ಹಾಸುವುದಂತೂ ಬಹಳ ದೂರದ ಮಾತಾಯಿತು.

ಕಡೋಡಿಮಲ್ : ನನ್ನ ಅಂಗಡಿಗೆ ಬಂದಿದ್ದರೆ ನೋಡುತ್ತಿದ್ದೆ, ಜನ ಹೇಗೆ ನನ್ನ ಮುಂದೆ ಗೋಗರೆಯುತ್ತಾರೆಂದು. ಅಂಥ ಇಂಥ ಜನರಲ್ಲ, ಒಳ್ಳೆ ಮರ್ಯಾದಸ್ತರು ಸಹ ನನ್ನನ್ನು ಎಷ್ಟೊಂದು ಹೊಗಳುತ್ತಾರೆ ಗೊತ್ತಾ?

ಲಕ್ಷ್ಮಿ : ಅದು ಅವರ ಅಸಹಾಯಕತೆ. ನೀವು ಅವರಿಗೆ ಬಡ್ಡಿಗೆ ಹಣ ಕೊಡದೇ ಇದ್ದರೆ, ಒಬ್ಬ ಮರ್ಯಾದಸ್ತನ ಮನೆಯನ್ನು ಕೋರ್ಟು ಖಾಲಿ ಮಾಡಿಸಿ ಅವನ ಮನೆಯ ಸಾಮಾನನ್ನೆಲ್ಲ ದಾರಿ ಮೇಲೆ

ಎಸೆಯಲು ಹೇಗೆ ಸಾಧ್ಯ, ಅಥವಾ ಯಾರದೋ ಮಗಳಿಗೆ ಕೊಡುವಂತಹ ವರದಕ್ಷಿಣೆ ಕಡಿಮೆಯಾದ ಕಾರಣ ಮನೆಗೆ ಬಂದ ವರನ ಕಡೆಯವರು ಹಿಂದಕ್ಕೆ ಹೊರಟು ಹೋಗುವರು. ಆ ಮರ್ಯಾದಸ್ಥರು ಕಷ್ಟದಲ್ಲಿ ಸಿಕ್ಕು ಹಾಕಿಕೊಂಡು ನಿಮ್ಮ ಬಳಿ ಬಂದು ನಿಮಗೆ ಕೈ ಜೋಡಿಸುತ್ತಾರೆ, ಅದಕ್ಕೆ ಪೂಜಿಸುವುದು ಎನ್ನಲಾಗುವುದಿಲ್ಲ. ಓಹೋ, ನೋಡಿದರಾ ನಿಮ್ಮ ಹತ್ತಿರ ಕೆಲಸಕ್ಕೆ ಬಾರದ ಮಾತನ್ನಾಡುತ್ತಿದ್ದುದರಿಂದ ನನ್ನ ಸೊಪ್ಪು ಸುಟ್ಟು ಹೋಯಿತು; ನೀವು ಇಲ್ಲಿಂದ ಹೋಗಿರಿ: (ಲಕ್ಷ್ಮಿ ಬೇಗನೇ ಗ್ಯಾಸ್ ಬಂದ್ ಮಾಡುತ್ತಾಳೆ. ಸ್ಟೌವ್‌ನಿಂದ ಕೆಳಗೆ ಪಾತ್ರೆ ಇಳಿಸುತ್ತಾಳೆ. ಸೊಪ್ಪು ಮತ್ತೊಂದು ಪಾತ್ರೆಗೆ ಬದಲಾಯಿಸುತ್ತಾಳೆ, ಕಡೋಡಿಮಲ್ ಪಟ ಪಟ ಎನ್ನುತ್ತ ಕಿಚನ್‌ನಿಂದ ಹೊರಬರುತ್ತಾನೆ.)

ಕಡೋಡಿಮಲ್ : ಮೊದಲು ಎಣ್ಣೆಯ ಗಂಗೆಯನ್ನೇ ಹರಿಸಿದಳು, ಈಗ ಸೊಪ್ಪು ಉರಿಸಿಬಿಟ್ಟು ನಷ್ಟ ಮಾಡಿದಳು, ಗ್ಯಾಸ್ ವ್ಯರ್ಥವಾಗಿ ಉರಿಸಿದ್ದು. ಅದರ ನಷ್ಟ ಬೇರೆ! ಈ ರೀತಿಯಾದರೆ ನಾನು ಕೋಟ್ಯಾಧೀಶ್ವರನಾಗುವ ಬದಲು ಕಂಗಾಲಾಗುತ್ತೇನೆ, ಅಷ್ಟೆ.

(ದೃಶ್ಯ ಮುಕ್ತಾಯ)

ದೃಶ್ಯ - ೨

(ಕಡೋಡಿಮಲ್‌ನ ಡ್ರಾಯಿಂಗ್ ರೂಮ್. ಸಮಯ ಹಗಲಿನ ವೇಳೆ. ಸೇಠ್ ಮುಫತ್‌ಲಾಲ್ ಮತ್ತು ಅವರ ಪತ್ನಿ ಧನಿ ಪ್ರವೇಶಿಸುತ್ತಾರೆ.)

ಕಡೋಡಿಮಲ್ : ಬನ್ನಿ ಬನ್ನಿ ಸೇಠ್ ಮುಫತ್ ಲಾಲ್: (ಪತಿ-ಪತ್ನಿಯರಿಬ್ಬರೂ ಬಂದು ಸೋಫಾದ ಮೇಲೆ ಕುಳಿತುಕೊಳ್ಳುತ್ತಾರೆ.)

ಮುಫತ್ ಲಾಲ್ : ನಿಮ್ಮಿಬ್ಬರನ್ನೂ ಭೇಟಿ ಮಾಡಬೇಕಂತ ಬಹಳ ಮನಸ್ಸಾಗಿದೆ ಅಂತ ಈ ಧನಿ ಹೇಳುತ್ತಿದ್ದಳು, ಆದ್ದರಿಂದ ನಾವು ಬಂದೆವು.

ಲಕ್ಷ್ಮಿ : ನಮ್ಮನ್ನು ನೋಡಬೇಕೆನ್ನಿಸಿದಾಗ ನಮ್ಮನ್ನೇ ಕರೆಸಿಕೊಂಡಿದಿದ್ದರೆ ನಾವೇ ನಿಮ್ಮ ಮನೆಗೆ ಬಂದುಬಿಡುತ್ತಿದ್ದೆವು ಧನಿಯಕ್ಕ.

ಧನಿ : ನಿಮ್ಮನ್ನು ನೋಡಿ ಬಹಳ ದಿನವಾಗಿತ್ತು, ಕಂಚನ್ ಮದುವೆಯ ನಂತರ ನಾವು ಭೇಟಿಯಾಗಲೇ ಇಲ್ಲವಲ್ಲ?

ಲಕ್ಷ್ಮಿ : ಹೌದು, ಕಳೆದ ಬಾರಿ ನಾವು ಅಲ್ಲೇ ಭೇಟಿಯಾಗಿದ್ದೆವು.

ಕಡೋಡಿಮಲ್ : ಆ ಮದುವೆ ನನಗೆ ಯಾಕೆ ಜ್ಞಾಪಕವಿದೆ ಎಂದರೆ, ಬನವಾರಿ ಸೇಠ್ ತನ್ನ ಮಗಳು ಕಂಚನ್‌ಳಿಗೆ ಎಷ್ಟೊಂದು ವರದಕ್ಷಣೆ ಕೊಟ್ಟಿದ್ದಾನೆಂದರೆ, ಚಂಪಕ್ ರಾಮನ್ ಎರಡು ಪೀಳಿಗೆ ಮನೆಯಲ್ಲೇ ಕುಳಿತು ತಿಂದರೂ ಸಹ ಅದರಲ್ಲಿ ಏನೂ ಕಡಿಮೆಯಾಗುವುದಿಲ್ಲ.

ಮುಫತ್ ಲಾಲ್ : ದೊಡ್ಡವರ ಮಾತು ದೊಡ್ಡದೇ ಆಗುತ್ತದೆ.

ಧನಿ : ನಾನು ನಿಮ್ಮಿಬ್ಬರ ಜತೆ ಬಂದು ಮಾತನ್ನಾಡಬೇಕೆಂದಿದ್ದೆ. ಆ ಮಾತಿಗಾಗಿ ನಾವೇ ನಿಮ್ಮ ಮನೆಗೆ ಬರುವುದು ಬಹಳ ಉಚಿತವಾಗಿತ್ತು. ರೀತಿ ನೀತಿಯ ಪ್ರಕಾರ ಹುಡುಗನ ಮನೆಗೆ ಹೋಗುತ್ತಾರೆ. ನಾವು ನಿಮ್ಮಿಂದ ಚೇತನ್‌ನನ್ನು ಕೇಳಲಿಕ್ಕೆ ಬಂದಿದ್ದೇವೆ ನಮ್ಮ ಮಗಳು ಶರ್ಮೀಲಾಗೆ.

ಲಕ್ಷ್ಮಿ : ಶರ್ಮೀಲ ತುಂಬ ಮುದ್ದು ಹುಡುಗಿ. ನಿಜ ಹೇಳಬೇಕೆಂದರೆ ನನ್ನ ದೃಷ್ಟಿ ಅವಳ ಮೇಲಿತ್ತು

ನನ್ನ ಚೇತನ್‌ಗಾಗಿ. (ಕಡೋಡಿಮಲ್‌ಗೆ ಈ ವಿಷಯದಲ್ಲಿ ಲಕ್ಷ್ಮಿಯ ಹಸ್ತಕ್ಷೇಪ ಇಷ್ಟವಿಲ್ಲವೆಂದು ತಿಳಿಯುತ್ತದೆ. ಆದರೂ ಸಹ ಅವನು ಅದನ್ನು ತಡೆದುಕೊಂಡು ಲಕ್ಷ್ಮಿಗೆ ಹೇಳುತ್ತಾನೆ.)

ಕಡೋಡಿಮಲ್ : ಅರೆ ಭಗವಾನ್; ಸೇಠ್ ಮುಫತ್ ಲಾಲ್ ಮತ್ತು ಧನಿಯಕ್ಕ ಬಂದಿದ್ದಾರೆ ಅವರ ಉಪಚಾರ ಮಾಡು. ಇವರು ದೊಡ್ಡವರು. ನಮ್ಮ ಮನೆ ಊಟ ಅವರಿಗೆಲ್ಲಿ ಸೇರಬೇಕು. ಆದರೂ ಹಪ್ಪಳ ತಿನ್ನುವುದೇಕ್ಕೆನು ಅಭ್ಯಂತರವಿಲ್ಲ. ಹೋಗು, ಹಪ್ಪಳ ಮತ್ತು ನೀರು ತೆಗೆದುಕೊಂಡು ಬಾ ಮತ್ತು ನೋಡು ಲಕ್ಷ್ಮಿ, ಹಪ್ಪಳ ಕರಿಯಬೇಡ, ಸುರಿದು ತೆಗೆದುಕೊಂಡು ಬಾ. ಈಗ ಡಾಕ್ಟರ್ ತುಪ್ಪ ಮತ್ತು ಎಣ್ಣೆ ತಿನ್ನುವುದು ಬೇಡ ಎನ್ನುತ್ತಿದ್ದಾರೆ ಅಲ್ಲವೆ? (ಲಕ್ಷ್ಮಿ ಇಷ್ಟವಿಲ್ಲದೇ ಒಳಗೆ ಹೋಗುತ್ತಾಳೆ)

ಕಡೋಡಿಮಲ್ : ನೋಡಿ ಕೇಳಿ ಸಂಬಂಧದ ಮಾತು ಎಂದರೆ ತೆರೆದ ಹೃದಯದ ಸ್ಪಷ್ಟವಾದ ಮಾತಾಗಬೇಕು. ನಂತರ ನೀವು ಹೇಳಿರಲಿಲ್ಲ, ನಾವು ಅದೇನೂ ಹೇಳಿರಲಿಲ್ಲವೆಂದು ನೀವು ಅನ್ನಬಾರದು. ಏನಾದರೂ ಮಾತುಕಥೆಯಾಗಬೇಕಾದರೆ ಅದು ಮೊದಲೇ ಎಲ್ಲವನ್ನು ಸ್ಪಷ್ಟವಾಗಿಸಬೇಕು. ಅಂದರೆ ಅಗ್ನಿಯ ಸುತ್ತ ಸುತ್ತುವಾಗ ಯಾವ ರೀತಿಯ ಅಡಚಣೆ ಉಂಟಾಗಬಾರದಲ್ಲವೇ?

ಮುಫತ್ ಲಾಲ್ : ನಮಗಂತೂ ಒಬ್ಬಳೇ ಮಗಳು. ಭಗವಾನ್ ನನಗೇನೇನು ಕೊಟ್ಟಿದ್ದಾನೆಯೋ ಅವೆಲ್ಲ ಶರ್ಮೀಲಾದು ತಾನೆ.

ಕಡೋಡಿಮಲ್ : ಭಗವಂತ ಸೇವಿಸಲು ಗಾಳಿಯನ್ನು ಕೊಟ್ಟಿದ್ದಾನೆ. ಆದರೆ ಅದರಿಂದ ಹೊಟ್ಟೆ ತುಂಬಲು ಸಾಧ್ಯವಿಲ್ಲ ಸೇಠ್ ಮುಫತ್ ಲಾಲ್. ವರದಕ್ಷಿಣೆಯಲ್ಲಿ ಏನು, ಎಷ್ಟು ಕೊಡುವಿರಿ? ಅದನ್ನು ಹೇಳಿ.

ಧನಿ : ಚೇತನ್ ಯಾವುದನ್ನು ಇಷ್ಟ ಪಡುತ್ತಾನೆಯೋ ಅದು. ಅಂದರೆ ಒಂದು ಮಾರುತಿ ಕಾರ್ ಮತ್ತು ಶರ್ಮೀಲಳ ಮದುವೆಗೆಂದು ಹತ್ತು ಬಿಸ್ಕೆಟ್‌ಗಳನ್ನು ಇಟ್ಟಿದ್ದೇನೆ. ಈ ನೂರು ತೊಲ ಬಂಗಾರದಲ್ಲಿ ನಾವು ನಿಮಗಿಷ್ಟವಾದ ಒಡವೆ ಮಾಡಿಸುತ್ತೇವೆ.

ಕಡೋಡಿಮಲ್ : ಇಂದು ಚಿನ್ನವೆಂದರೆ ಯಾರಿಗೂ ಇಷ್ಟವಿಲ್ಲ. ಆದ್ದರಿಂದಲೇ ಚಿನ್ನದ ಸ್ಮಗಲಿಂಗ್ ಇಂದು ಬಹಳ ಕಡಿಮೆಯಾಗಿ ಹೋಗಿದೆ. ನಿಮಗೆ ಗೊತ್ತಿಲ್ಲವೇ, ಸರ್ಕಾರ ಸಹ ತನ್ನ ಬಳಿಯಿದ್ದ ಟನ್‌ಗಟ್ಟಲೇ ಚಿನ್ನವನ್ನು ಮಾರಬಿಡಲಿಲ್ಲವೇ ಧನಿಯಕ್ಕ; ಈ ಕಾಲ ಜಮೀನು, ಆಸ್ತಿಯದು. ಅದರ ಬಗ್ಗೆ ಮಾತನಾಡಿ.

ಮುಫತ್ ಲಾಲ್ : ಫ್ಲ್ಯಾಟಿನ ಬೆಲೆಗಳಂತೂ ಇಂದು ಆಕಾಶಕ್ಕೇರಿವೆ.

ಕಡೋಡಿಮಲ್ : ನನ್ನ ದೃಷ್ಟಿಯಲ್ಲಿ ಒಂದು ಫ್ಲ್ಯಾಟ್ ಇದೆ, ಲೋಖಂಡ್‌ವಾಲ ಕಾಂಪ್ಲೆಕ್ಸ್‌ನಲ್ಲಿ. ಎರಡು ಬೆಡ್ ರೂಮ್ ಮತ್ತು ಒಂದು ಹಾಲ್. ಅದರ ರಿಜಿಸ್ಟ್ರೇಷನ್ ನಮ್ಮ ಚೇತನ್ ಹೆಸರಲ್ಲಾಗಬೇಕು.

ಮುಫತ್‌ಲಾಲ್ : ಆ ಏರಿಯಾದಲ್ಲಿ ಫ್ಲ್ಯಾಟ್‌ಗಳು ತುಂಬ ದುಬಾರಿ.

ಕಡೋಡಿಮಲ್ : ಇಲ್ಲ, ಮಾರ್ಕೆಟ್ ರೇಟ್ ನೋಡುವುದಾದರೆ ಆ ಫ್ಲ್ಯಾಟ್ ಅಗ್ಗವಾಗಿದೆ ಮತ್ತು ಅದು ಫರ್ನಿಷ್ ಮಾಡಿಸಬೇಕಾದರೆ ಫ್ಲ್ಯಾಟಿನ ಬೆಲೆಯ ನಾಲ್ಕನೇ ಒಂದು ಭಾಗ ಇಂಟೀರಿಯರ್ ಡೆಕೋರೇಟರ್ ತೆಗೆದುಕೊಂಡು ಹೋಗುತ್ತಾನೆ. ಆದ್ದರಿಂದ ನಾನು ನೋಡಿರುವ ಫ್ಲ್ಯಾಟ್ ದುಬಾರಿ ಇಲ್ಲ.

ಮುಫತ್ ಲಾಲ್ : ಆದರೂ ಅದು ಎಷ್ಟೊಂದು ಬೆಲೆ ಬಾಳಬಹುದು?

ಕಡೋಡಿಮಲ್ : ಅವನು ನಲವತ್ತೈದು ಕೇಳುತ್ತಿದ್ದಾನೆ, ನಾನು ನಲವತ್ತೊಂದರಲ್ಲಿ ವ್ಯಾಪಾರ ಮುಗಿಸಬಲ್ಲೆ.

ಧನಿ : ನಲ್ವತ್ತು ಲಕ್ಷ!

ಕಡೋಡಿಮಲ್ : ಧನಿಯಕ್ಕ, ಚೇತನ್‌ನ ಸಂಬಂಧ ಕೇಳಲು ಬಂದಿದ್ದೀರೋ ಅಥವಾ ಯಾರಾದರೂ ಕ್ಲರ್ಕ್‌ನ ಸಂಬಂಧ? ನನ್ನ ಮಗ ಡಾಕ್ಟರ್ ಪಾಸ್ ಮಾಡಿದ್ದಾನೆ, ಡಾಕ್ಟರ್. ನಾನಾವತಿ ಆಸ್ಪತ್ರೆಯಲ್ಲಿ ಚೇತನ್ ಇಂಟರ್‌ನೀ ಆಗಿದ್ದಾನೆ. ಮುಂದಿನ ತಿಂಗಳು ಅಲ್ಲಿಂದ ಇನ್ಸರ್ನ್‌ಮೆಂಟ್ ಮುಗಿಸಿ ಅವನು ಪ್ರಾಕ್ಟೀಸ್ ಮಾಡಲಾರಂಭಿಸುವನು. ಆಗ ನೀವು ಅವನಿಗೆ ಒಂದು ಕ್ಲಿನಿಕ್ ಹಾಕಿಕೊಟ್ಟುಬಿಡಿ.

ಮುಫತ್ ಲಾಲ್ : ಅಂದರೇ? ಚೇತನ್‌ಗೆ ಕ್ಲಿನಿಕ್ ಸಹ ನಾವೇ ತೆಗೆದುಕೊಡಬೇಕೆ?

ಕಡೋಡಿಮಲ್ : ಇಲ್ಲವೆಂದರೆ, ನೀವೇನು ಮುಫತ್ತಿನಲ್ಲಿ ನನ್ನ ಮಗನ ವ್ಯಾಪಾರ ಮಾಡಲು ಬಂದಿದ್ದೀರ? ಮುಫತ್‌ಲಾಲ್, ಮುಫತ್ತಲ್ಲಿ ನನ್ನ ಮನೆಯಲ್ಲಿ ನಿಮಗೆ ಕೇವಲ ಹಪ್ಪಳ ಮಾತ್ರ ಸಿಗುತ್ತದೆ ಅಷ್ಟೇ - ಹಪ್ಪಳ ತಿಂದು ಇಲ್ಲಿಂದ ಹೊರಟುಹೋಗಿ;

ಧನಿ : ನಿಮ್ಮ ಹಪ್ಪಳ ಸಹ ನಮಗೆ ಬೇಕಿಲ್ಲ, ನಡೆಯಿರಿ; (ಮುಫತ್‌ಲಾಲ್ ಮತ್ತು ಧನಿ ಹೋಗಲು ಏಳುತ್ತಿದ್ದ ಹಾಗೆಯೇ ಕಡೋಡಿಮಲ್ ಎತ್ತರ ಧ್ವನಿಯಲ್ಲಿ ಹೇಳುತ್ತಾನೆ)

ಕಡೋಡಿಮಲ್ : ಅರೆ ಲಕ್ಷ್ಮಿ ಹಪ್ಪಳ ಹುರಿ ಬೇಡ. (ಆದರೆ ಅವರಿಬ್ಬರಿಗೂ ಕೇಳಿಸುವ ಹಾಗೆ ಹೇಳುತ್ತಾನೆ)

ಕಡೋಡಿಮಲ್ : ಒಂದು ಮಾರುತಿ ಮತ್ತು ಹತ್ತು ಬಿಸ್ಕೆಟ್‌ಗಳಲ್ಲಿ ನನ್ನ ಚೇತನ್‌ನನ್ನು ಕೇಳಲು ಬಂದಿದ್ದರು (ಲಕ್ಷ್ಮಿ ಡ್ರಾಯಿಂಗ್ ರೂಂಗೆ ಬರುವಳು.)

ಲಕ್ಷ್ಮಿ : ಏನಾಯ್ತ್ರೀ; ಧನಿ ಮತ್ತು ಲಾಲಜಿ ಏಕೆ ಹೊರಟು ಹೋದರು? ನೀವು ಅವರಿಗೆ ಏನು ಹೇಳಿದ್ರಿ?

ಕಡೋಡಿಮಲ್ : ಹಪ್ಪಳ ಹುರೀಲಿಲ್ಲ ತಾನೆ?

ಲಕ್ಷ್ಮಿ : ಅವರು ಏಕೆ ಹೊರಟುಹೋದರು ಎಂದು ನಾನು ಕೇಳುತ್ತಿದ್ದೇನೆ?

ಕಡೋಡಿಮಲ್ : ಮತ್ತು ನಾನು ಕೇಳುತ್ತಿರೋದು, ಅವರ ಮಗಳನ್ನು ಅಷ್ಟೊಂದು ಹೊಗಳು ಅಂತ ಯಾರು ಹೇಳಿದ್ದರು ನಿನಗೆ? (ಅವರ ನಕಲು ಮಾಡುತ್ತ) ನನ್ನ ದೃಷ್ಟಿ ಅವರ ಮೇಲಿತ್ತು ಚೇತನ್‌ಗಾಗಿ.

ಲಕ್ಷ್ಮಿ : ಒಳ್ಳೆಯ ಹುಡುಗಿಯ ಪ್ರಶಂಸೆ ಮಾಡಿ ನಾನೇನು ಕೆಟ್ಟದ್ದನ್ನು ಮಾಡಿದೆ? ಶರ್ಮಿಲ ಸುಂದರಳಾಗಿದ್ದಾಳೆ, ಸುಶೀಲೆಯಾಗಿದ್ದಾಳೆ, ಎಲ್ಲ ರೀತಿಯಲ್ಲಿ ಅವಳು ನಮ್ಮ ಚೇತನ್‌ಗೆ ಸರಿ ಹೋಗುತ್ತಾಳೆ.

ಕಡೋಡಿಮಲ್ : ಆದರೆ ಅವನಪ್ಪ ಅವಳನ್ನು ನಮ್ಮ ಮನೆಯ ಸೊಸೆಯನ್ನಾಗಿ ಮಾಡುವುದು ಸರಿ ಹೋಗುವುದಿಲ್ಲ.

ಲಕ್ಷ್ಮಿ : ನನಗೆ ಹಪ್ಪಳ ತರಲು ಕಳುಹಿಸಿ ಅವರೊಂದಿಗೆ ಏನು ಮಾತು ಕಥೆ ನಡೆಸಿದಿರಿ, ನಾನು ಸ್ವಲ್ಪ ಕೇಳಬಹುದೆ?

ಕಡೋಡಿಮಲ್ : ನೀನು ಅದೆಲ್ಲ ಕೇಳಬಾರದೆಂದೇ ನಾನು ನಿನ್ನನ್ನು ಕಿಚನ್ನೊಳಗೆ ಕಳುಹಿಸಿದ್ದು. ನಾನು ಆದಾನ ಪ್ರದಾನದ ಮಾತನ್ನಾಡಬೇಕಿತ್ತು.

ಲಕ್ಷ್ಮಿ : ನೀವು ಈ ಮದುವೆಯಿಂದಲೂ ಸಂಪತ್ತನ್ನು ಗಳಿಸಬೇಕೆಂದು ಯೋಚಿಸಿದ್ದೀರಿ. ಈಗ ನನಗೆ ಅರ್ಥವಾಯಿತು.

ಕಡೋಡಿಮಲ್ : ಅರ್ಥ ಮಾಡಿಕೊಂಡಿದ್ದರೆ ಮತ್ತೆ ಏಕೆ ಕೇಳುತ್ತಿದ್ದೀಯಾ?

ಲಕ್ಷ್ಮಿ : ಇದರ ಬಗ್ಗೆ ನೀವು ಚೇತನ್ ಜೊತೆ ಮಾತುಕತೆ ನಡೆಸಿದ್ದೀರಾ? ಅವನ ಅಭಿಪ್ರಾಯ ಏನು ಎಂದು ಅವನಿಗೆ ಕೇಳಿದ್ರಾ?

ಕಡೋಡಿಮಲ್ : ಸೊಸೆಯನ್ನು ನಾನು ನನ್ನ ಷರತ್ತಿನ ಮೇಲೆ ತರುವವನು, ಆದ್ದರಿಂದ ಅವನನ್ನು ಕೇಳುವುದೇನು? ಅವನಿಗೆ ಒಂದು ಒಳ್ಳೆಯ ವಧು ಬೇಕು, ಅದನ್ನು ನಾನು ತಂದು ಕೊಡುತ್ತೇನೆ. ಅವಳು ಸುಂದರವಿಲ್ಲದಿದ್ದರೂ ವರದಕ್ಷಿಣ ಎಷ್ಟೊಂದು ತರುವಳೆಂದರೆ ಅದನ್ನು ನೋಡಿ ಆಶ್ಚರ್ಯದಿಂದ ಅವನ ತೆರೆದ ಕಣ್ಣು ತೆರದೇ ಇರುತ್ತದೆ.

ಲಕ್ಷ್ಮಿ : ನೀವು ಹೀಗೆ ಯೋಚಿಸುತ್ತಿರುವುದು ತಪ್ಪು; ಯಾವ ಹುಡುಗಿಯನ್ನು ಅಪ್ಪ ಆರಿಸುವನೋ ಮಗ ಅವಳನ್ನೇ ಒಪ್ಪಿಕೊಳ್ಳುವ. ಆ ಕಾಲ ಇಲ್ಲ; ಈಗ ಕಾಲ ಬದಲಾಯಿಸಿದೆ.

ಕಡೋಡಿಮಲ್ : ಎಲ್ಲ ಕಾಲದಲ್ಲೂ ಐಶ್ವರ್ಯದ ಆಕರ್ಷಣೆ ಅದೆ ಆಗಿದೆ, ಅದರ ಮೋಹ ಏನೂ ಕಡಿಮೆಯಾಗಿಲ್ಲ.

ಲಕ್ಷ್ಮಿ : ನೀವು ಏನಾದರೂ ಹೇಳಿ, ನಾನು ನನ್ನ ಚೇತನ್‌ನನ್ನು ನಿಮಗಿಂತಲೂ ಹೆಚ್ಚಾಗಿ ತಿಳಿದಿದ್ದೇನೆ. ಅವನು ಐಶ್ವರ್ಯದ ಲೋಭಿಯಲ್ಲ.

ಕಡೋಡಿಮಲ್ : ಯಾರು ನನಗೆ ಐಶ್ವರ್ಯದ ಮೋಹವಿಲ್ಲವೆಂದು ಹೇಳುವನೋ ಅವನಿಗೆ ಐಶ್ವರ್ಯ ಸಿಗುವುದಿಲ್ಲ, ಆದ್ದರಿಂದ ಅವನು ಅದರಲ್ಲಿ ಆಸಕ್ತಿ ತೋರಿಸುವುದಿಲ್ಲ, ಐಶ್ವರ್ಯ ಅವನ ಕೈಗೇನಾದರೂ ಬಂದುಬಿಟ್ಟರೆ ಅವನು ಯಾವ ವಸ್ತು, ಯಾವ ಭಾವನೆಗಳಿಗೂ ಯಾವ ರೀತಿಯ ಪ್ರಾಮುಖ್ಯತೆ ನೀಡುವುದಿಲ್ಲ, ಅವನು ಕೇವಲ ಐಶ್ವರ್ಯವನ್ನು ಪೂಜಿಸುವನು.

ಲಕ್ಷ್ಮಿ : ನೀವು ಐಶ್ವರ್ಯದ ಪೂಜಾರಿ ಆಗಿದ್ದೀರಲ್ಲ, ಹಾಗೆಯೇ ಐಶ್ವರ್ಯದ ಲೋಭದಲ್ಲಿ ನಿಮ್ಮ ಒಬ್ಬನೇ ಮಗನ ಭಾವನೆಗಳಿಗೆ ಸ್ವಲ್ಪವೂ ಪ್ರಾಮುಖ್ಯತೆ ನೀಡಲು ತಯಾರಿಲ್ಲ. ಆದರೆ ಒಂದು ಮಾತು, ಒಂದು ಮಾತು ತಿಳಿದುಕೊಳ್ಳಿ. ಚೇತನ್ ತನ್ನ ಇಚ್ಛೆಯಿಂದ ಏನಾದರೂ ಯಾವುದಾದರೂ ಹುಡುಗಿಯನ್ನು ಮದುವೆ ಮಾಡಿಕೊಳ್ಳಬೇಕೆಂದರೆ, ನಾನು ನಿಮ್ಮೊಡನಲ್ಲ ನನ್ನ ಮಗನ ಜೊತೆಯಲ್ಲಿದ್ದೇನೆ, ಮತ್ತು ನಾನೇ ನಿಂತು ಅವನ ಮದುವೆ ಮಾಡುತ್ತೇನೆ; ಚೇತನ್‌ನ ಸಂತೋಷ ನನಗೆ ನನ್ನ ಪ್ರಾಣಕ್ಕಿಂತ ಹೆಚ್ಚು.

(ಇಷ್ಟನ್ನು ಹೇಳಿ ಲಕ್ಷ್ಮಿ ಹೊರಟುಹೋಗುತ್ತಾಳೆ, ಕಡೋಡಿಮಲ್ ಅವಳನ್ನು ನಿಂದಿಸುತ್ತ)

ಕಡೋಡಿಮಲ್ : ನೀನು ಬುದ್ಧಿವಂತಿಕೆಯ ಮಾತು ಹೇಗೆ ಆಡುವೆ, ನೀನು ಸ್ತ್ರೀಯಲ್ಲವೆ? ನಾನು ನನ್ನ ಮನೆ ತುಂಬಲು ಯೋಚನೆ ಮಾಡುತ್ತಿದ್ದೇನೆ, ನೀನು ಭಾವನೆಗಳ ಸುರುಳಿಯಲ್ಲಿ ಸಿಕ್ಕು ಹಾಕಿಕೊಂಡಿದ್ದೀಯೆ. ಭಾವನೆಯ ಆಧಾರಗಳ ಮೇಲೆ ಜೀವನ ಸಾಗುವುದಿಲ್ಲ. ಜೀವಂತವಾಗಿರಬೇಕಾದರೆ ನಗದು ಹಣ ಬೇಕು, ನಗದು.

(ಕಡೋಡಿಮಲ್‌ನ ಕ್ಲೋಸಪ್‌ನ ಮೇಲೆ ದೃಶ್ಯ ಮುಕ್ತಾಯ)

ದೃಶ್ಯ - ೩

(ಒಂದು ತೋಟ. ಸಮಯ ಹಗಲು. ಚೇತನ್ ಮತ್ತು ಅವನ ಗರ್ಲ್ ಫ್ರೆಂಡ್ ನದಿಯಾ ಹುಲ್ಲಿನ ಮೇಲೆ ಕುಳಿತು ಮಾತಾಡುತ್ತಿದ್ದಾರೆ.)

ನದಿಯಾ : ನಾನು ಒಂದು ರೀತಿಯಲ್ಲಿ ಹೆದರಿದ ಹಾಗೆ ಕಾಣಿಸುತ್ತಿದ್ದೇನೆ. ಏಕೆಂದರೆ ನಾನು ಹುಡುಗಿ. ಪ್ರೀತಿಯಲ್ಲಿ ಗಂಡಸು ಮೊದಲ ಹೆಜ್ಜೆ ಇಟ್ಟು ಯಾವಾಗ ಹೆಂಗಸಿನ ಹೃದಯ ಗೆದ್ದುಕೊಳ್ಳುತ್ತಾನೆಯೋ ಆಗ ಅವನು ಸಂತೋಷದಿಂದ ಉಬ್ಬಿಹೋಗುತ್ತಾನೆ. ಆದರೆ ಹೃದಯ ಕೊಟ್ಟ ನಂತರ ಹುಡುಗಿಗೆ ಸಾವಿರಾರು ದಿಗಿಲುಗಳು ಆವರಿಸಿ ಬಿಡುತ್ತವೆ.

ಚೇತನ್ : ದಿಗಿಲು! ಎಂತಹ ದಿಗಿಲು?

ನದಿಯಾ : ಮೊದಲ ಭಯ ಅವನ ಪ್ರೇಮಿಯಿಂದಲೇ ಉಂಟಾಗುತ್ತೆ.

ಚೇತನ್ : ಪ್ರೇಮಿಯಿಂದ ಎಂತಹ ಭಯ?

ನದಿಯಾ : ಅಂದರೆ ಪ್ರೇಮಿಯ ಪ್ರೀತಿ ನಿಜವೆ? ಅದೆಷ್ಟು ಗಾಢವಾದದ್ದು? ಈ ಪ್ರೀತಿ ಪ್ರೇಮ ಅವಳಿಗೆ ಜೀವನವೆಲ್ಲ ಸಿಗುತ್ತದೆಯೋ? ಹೀಗೆ ಮತ್ತು ಈ ರೀತಿಯ ಬಹಳಷ್ಟು ಹೆದರಿಕೆಗಳು ಇರುತ್ತವೆ. ಇವುಗಳ ಕಾರಣದಿಂದಲೇ ಪ್ರೇಮದಲ್ಲಿ ಹುಡುಗಿ ಹೃದಯ ಸೋತನಂತರ ದುಃಖಿಯಾಗಿರುತ್ತಾಳೆ.

ಚೇತನ್ : ನದಿಯಾ, ನದಿಯಾ: ನನ್ನ ಪ್ರೇಮದಲ್ಲಿ ನಿನಗೆ ಯಾವ ರೀತಿಯ ಭರವಸೆಯೂ ಇಲ್ಲವೆ? ನನ್ನ ಪ್ರೀತಿಯ ಆಳದಲ್ಲಿ, ಜೀವನವೆಲ್ಲ ಜೊತೆಯಲ್ಲಿರುವೆವು ಎಂಬ ನನ್ನ ಪ್ರತಿಜ್ಞೆಯ ಮೇಲೆ ನಿನಗೆ ಶಂಕೆಯೆ?

ನದಿಯಾ : ಅನುಮಾನವಿದ್ದಿದ್ದರೆ ನಾನು ಪ್ರೇಮದ ಹಾದಿಯಲ್ಲಿ ನಿನ್ನ ಜೊತೆ ಏಕೆ ನಡೆದುಕೊಂಡು ಬರುತ್ತಿದ್ದೆ? ಪ್ರೀತಿಯಲ್ಲಿ ಮುಳುಗಿದ ನಂತರ ಹುಡುಗಿಯ ಹೃದಯದ ಗತಿ ಏನಾಗುತ್ತದೆ ಎಂದು ಗಂಡಸು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ನಾನು ಹೇಳುತ್ತಿರಲಿಲ್ಲವೆ, ಹೆದರಿಕೆಗಳು ಹುಡುಗಿಯನ್ನು ಆವರಿಸಿಕೊಂಡಿರುತ್ತವೆ.

ಚೇತನ್ : ನನ್ನಿಂದ ನಿನಗೆ ಯಾವ ಭಯವೂ ಇಲ್ಲದಿರುವಾಗ ಇನ್ಯಾವ ಹೆದರಿಕೆಗಳು ನಿನ್ನನ್ನು ಆವರಿಸುತ್ತವೆ?

ನದಿಯಾ : ಎಷ್ಟೊಂದು ಹೆದರಿಕೆಗಳೆಂದು ಹೇಗೆ ಎಣಿಸಲಿ? ನಮ್ಮ ಮನೆಯವರು ಈ ಸಂಬಂಧಕ್ಕೆ ಒಪ್ಪುತ್ತಾರೋ ಇಲ್ಲವೋ? ನಿಮ್ಮ ಮನೆಯವರು ನನ್ನನ್ನು ಅಂಗೀಕರಿಸುವರೋ ಇಲ್ಲವೋ?

ಚೇತನ್ : ನೀನು ನಿಷ್ಕಾರಣ ಹೆದರುತ್ತಿದ್ದೀಯಾ ನದಿಯಾ.

ನದಿಯಾ : ಇಲ್ಲ ಚೇತನ್. ನಮ್ಮಪ್ಪ ವರದಕ್ಷಿಣೆ ತೆಗೆದುಕೊಂಡಿರಲಿಲ್ಲ, ಹಾಗೂ ಈಗ ಅವರು ವರದಕ್ಷಿಣೆ ಕೊಡುವುದಿಲ್ಲ. ಹಾಗೇನೇ ನಿಮ್ಮ ಡ್ಯಾಡಿಯನ್ನು ನೀನು ಚೆನ್ನಾಗಿ ಬಲ್ಲೆ, ವರದಕ್ಷಿಣೆ ತಗೊಳ್ಳದೆ, ಅದೂ ಲೆಕ್ಕವಿಲ್ಲದಷ್ಟು ವರದಕ್ಷಿಣೆ ತಗದುಕೊಳ್ಳದೇ ಅವರು ಒಪ್ಪುವುದಿಲ್ಲ. ಆದ್ದರಿಂದ ನಮ್ಮ ಮದುವೆ ಸಾಧ್ಯವಾಗದ ಹಾಗೆ ಕಾಣಿಸುತ್ತದೆ.

ಚೇತನ್ : ನೀನು ನೋಡುತ್ತಿರು, ಅಸಾಧ್ಯವನ್ನು ನಾನು ಹೇಗೆ ಸಾಧ್ಯ ಮಾಡುತ್ತೀನಿ ಅಂತ. ನಾನು ಇಂದೇ ನಮ್ಮ ತಾಯಿ ಜೊತೆ ಮಾತಾಡಿ, ಇದಕ್ಕೆ ಪರಿಹಾರ ಹುಡುಕುತ್ತೇನೆ. ಬಾ ಈಗ ಹೋಗೋಣ.

(ಇಬ್ಬರೂ ಏಳುತ್ತಿದ್ದ ಹಾಗೆ ದೃಶ್ಯ ಮುಕ್ತಾಯ)

ದೃಶ್ಯ - ೪

(ಕಡೋಡಿಮಲ್‌ನ ಫ್ಲ್ಯಾಟ್. ಸಮಯ - ಹಗಲು)

(ಲಕ್ಷ್ಮಿ ಮತ್ತು ಚೇತನ್‌ನ ಮಾತುಕತೆಯ ಮಧ್ಯದಿಂದ ಹಿಡಿಯಬೇಕು.)

ಲಕ್ಷ್ಮಿ : ಚೇತನ್, ಅವರ ಜೊತೆ ಮಾತಾಡುವುದು ವ್ಯರ್ಥ. ನಿನ್ನ ಡ್ಯಾಡಿ ನನ್ನ ಒಂದು ಮಾತು ಸಹ ಕೇಳುವುದಿಲ್ಲ. ಅವರ ತಲೆ ಮೇಲೆ ಐಶ್ವರ್ಯದ ಭೂತ ಏರಿದೆ. ಅವರು ವರದಕ್ಷಿಣೆ ತೆಗೆದುಕೊಳ್ಳದೇ ನಿನ್ನ ಮದುವೆ ಮಾಡುವುದಿಲ್ಲ.

ಚೇತನ್ : ಮದುವೆಯಂತೂ ನಾನು ನದಿಯಾ ಜೊತೆ ಮಾಡಿಕೊಳ್ಳುತ್ತಿದ್ದೇನೆ, ಅದೂ ಕೂಡ

ವರದಕ್ಷಿಣೆ ಇಲ್ಲದೆ. ಡ್ಯಾಡಿ ಇದನ್ನು ಒಪ್ಪಿಕೊಂಡರೆ ಸರಿ, ಇಲ್ಲವೆಂದರೆ ಅವರು ನನ್ನನ್ನು ಸಪ್ಪವವಾಗಿ ಕಳೆದುಕೊಳ್ಳುವುದಂತೂ ನಿಜ. ನಾನು ನಿನ್ನ ಆಶೀರ್ವಾದ ತೆಗೆದುಕೊಂಡೇ ಅಗ್ನಿಯ ಸುತ್ತ ಸುತ್ತುವುದು. ಹೀಗಾಗೋದಕ್ಕಿಂತ ಮುಂಚೆ 'ಲಿವ್ ಆ್ಯಂಡ್ ಲಾಯಿಸೆನ್ಸ್' ರವರ ಎರಡು ಬೆಡ್‌ರೂಂ ಒಂದು ಹಾಲ್ ಇರುವ ಫ್ಲ್ಯಾಟ್ ಬಾಡಿಗೆಗೆ ತೆಗೆದುಕೊಳ್ಳುತ್ತೇನೆ. ಆಗ ನೀನು ನನ್ನ ಜೊತೆಗೆ ಬಂದುಬಿಡು. ಡ್ಯಾಡಿ ಒಬ್ಬರೇ ಅವರ ಎರಡನೇ ನಂಬರಿನ ಐಶ್ವರ್ಯದ ಜೊತೆಯಲ್ಲಿ ಇರಲಿ.

ಲಕ್ಷ್ಮಿ : ಚೇತನ್, ಹೀಗೆ ಆಗಕೂಡದು.

ಚೇತನ್ : ಈ ವಯಸ್ಸಿನಲ್ಲಿ ಅವರಿಗೆ ನನ್ನ ಅವಶ್ಯಕತೆ ಇರುವಾಗ ಅವರನ್ನು ಒಬ್ಬರನ್ನೇ ಬಿಟ್ಟು ಇರುವುದನ್ನು ನಾನು ಬಯಸುವುದಿಲ್ಲ. ಅವರೆ ಹೀಗೇನಾದರೂ ಆದರೆ ಅದರ ಕಾರಣ ಅವರ ಹಟ, ಐಶ್ವರ್ಯದೊಡನೆ ಅವರಿಗಿರುವ ಕುರುಡು ಪ್ರೇಮದಿಂದ ಹೀಗಾಗಬಹುದು. ಆದ್ದರಿಂದ, ಅಮ್ಮ ನೀನು ಅವರಿಗೆ ಒಮ್ಮೆ ಸಮಜಾಯಿಷಿ ನೀಡು. ನಾವು ಇದನ್ನು ಹೇಳಲೇ ಇಲ್ಲ, ನನಗೆ ಚೇತನ್ ಸೂಚನೆ ನೀಡಲಿಲ್ಲ ಎಂದು ನಾಳೆ ಅವರು ನಮ್ಮನ್ನು ದೂಷಿಸಬಾರದು.

ಲಕ್ಷ್ಮಿ : ಸರಿ, ನಾನು ಅವರಿಗೆ ನಿನ್ನ ತೀರ್ಮಾನ ತಿಳಿಸಿಬಿಡುತ್ತೇನೆ.

(ಲಕ್ಷ್ಮಿಯ ಕಾಂಪೋಸಿಟ್ ಷಾಟ್ ಜರುಗಿದ ತಕ್ಷಣ ದೃಶ್ಯ ಮುಕ್ತಾಯ)

ದೃಶ್ಯ - ೫

(ಕಡೋಡಿಮಲ್‌ನ ಫ್ಲ್ಯಾಟ್ - ಸಮಯ - ಹಗಲು)

(ಲಕ್ಷ್ಮಿ ಮತ್ತು ಕಡೋಡಿಮಲ್‌ನ ಮಾತುಕತೆಯ ಮಧ್ಯದಿಂದ ಹಿಡಿಯಬೇಕು)

ಕಡೋಡಿಮಲ್ : ನೀನು ಹುಲ್ಲು ತಿನ್ನುವುದಿಲ್ಲವಷ್ಟೆ? ಚೇತನ್‌ಗೆ ಓದಿಸಲು ನಾನು ದುಡ್ಡನ್ನು ನೀರಿನ ಹಾಗೆ ಹರಿಸಿರುವುದು ಇದಕ್ಕೇನಾ? ಇಷ್ಟೊಂದು ಮೊತ್ತ ಬಡ್ಡಿ ಸಮೇತ ವಸೂಲಿ ಮಾಡುವ ಸಮಯ ಬಂದಿರುವಾಗ ನೀನು ವರದಕ್ಷಿಣೆ ತೆಗೆದುಕೊಳ್ಳಬೇಡವೆಂದು ಹೇಳುವೆಯಾ? ನಿನಗೆಲ್ಲೋ ಬುದ್ಧಿ ಕೆಟ್ಟು ಹೋಗಿದೆ.

ಲಕ್ಷ್ಮಿ : ನಾನು ಒಬ್ಬಳೇ ಇದನ್ನು ಹೇಳುತ್ತಿಲ್ಲ. ಇದನ್ನು ಹೇಳುತ್ತಿರುವವನು ಚೇತನ್. ಅವನಿಗೆ ನಿಮ್ಮ ಜೊತೆ ಜಗಳ ಕಾಯುವುದು ಇಷ್ಟವಿಲ್ಲ. ಆದ್ದರಿಂದ ಈ ಮಾತು ನಿಮ್ಮ ಕಿವಿಗೆ ಹಾಕಿ ಎಂದು ನನಗೆ ಹೇಳಿದ್ದಾನೆ.

ಕಡೋಡಿಮಲ್ : ಅವನ ಬುದ್ಧಿ ಸಹ ಹುಲ್ಲು ಮೇಯುವುದಕ್ಕೆ ಹೋಗಿದೆ, ಆದ್ದರಿಂದಲೇ ಈ ರೀತಿಯ ಅರ್ಥಹೀನ ಮಾತು ಹೇಳಿಕಳುಹಿಸಿದ್ದಾನೆ.

ಲಕ್ಷ್ಮಿ : ತಿರುಗಾಮುರುಗಾ ದಂಧೆ ಮಾಡಿ ನೀವು ಇಷ್ಟೊಂದು ಐಶ್ವರ್ಯ ಗಳಿಸಿಕೊಂಡಿದ್ದೀರಿ. ಈಗ ನಿಮ್ಮ ಒಬ್ಬನೇ ಮಗನಿಗಾಗಿ ಈ ರೀತಿಯ ಅಲ್ಪ ಬಲಿ ಸಹ ಕೊಡಲು ಸಾಧ್ಯವಿಲ್ಲವೆ?

ಕಡೋಡಿಮಲ್ : ಕೈಗೆ ಬರುತ್ತಿರೋ ಸಂಪತ್ತನ್ನು ಬಿಟ್ಟರೆ ನಾನಂತೂ ಸಾವು ಇಲ್ಲದೇ ಸತ್ತು ಹೋಗುತ್ತೇನೆ. ಅದಿರಲಿ, ಈ ಸಂಪತ್ತು ಚೇತನ್‌ನ ಜೇಬಿಂದೇನಾದರೂ ಹೊರಟುಹೋಗುತ್ತದೆಯಾ? ಲೋಭಾನ ಹುಡುಗಿಯ ತಂದೆಯದು ಮಾತ್ರ ಉರಿಯುತ್ತಲ್ಲವೆ? ಆದರೇ ಚೇತನ್‌ಗೆ ಏಕೆ ನೋವು ಉಂಟಾಗುತ್ತಿದೆ? ಅವನು ಬೇಕಾದರೆ ನದಿಯಾಳನ್ನೇ ಮದುವೆಯಾಗಲಿ. ಆದರೆ ನನಗೆ ಅವಳ ಅಪ್ಪನನ್ನು ಹಿಂಡುವುದರಿಂದ ಏಕೆ ನಿಷೇಧಿಸುತ್ತಿದ್ದಾನೆ?

ಲಕ್ಷ್ಮಿ : ನಮಿಯಾಳ ತಂದೆ ತತ್ವ ಪಾಲಿಸುವವರು. ಅವರು ವರದಕ್ಷಿಣೆ ಕೊಡುವುದಿಲ್ಲ.

ಕದೋಡಿಮಲ್ : ಅವನು ವರದಕ್ಷಿಣೆ ಕೊಡದೇ ಇದ್ದಲ್ಲಿ ತನ್ನ ಮಗಳನ್ನು ಮನೆಯಲ್ಲೇ ಕೂರಿಸಲಿ. ಈಗ ನನ್ನ ಬಳಿ ಒಬ್ಬ ಶ್ರೀಮಂತ ತನ್ನ ಮಗಳನ್ನು ಚೇತನ್‌ಗೆ ಕೊಡಬೇಕೆಂದು ಬರುತ್ತಿದ್ದಾನೆ. ನಾನು ಕೇಳಿದಷ್ಟು ವರದಕ್ಷಿಣೆ ಕೊಡಲು ಸಿದ್ಧನಾಗಿದ್ದಾನೆ.

(ಅಷ್ಟರಲ್ಲೇ ಬಾಗಿಲ ಬಳಿ ಇರುವ ಬೆಲ್ ಬಾರಿಸುತ್ತದೆ. ಕದೋಡಿಮಲ್ ಹೋಗಿ 'ಡೋರ್ ಐ' ನಿಂದ ಇಣುಕಿ ನೋಡುತ್ತಾನೆ)

ಕದೋಡಿಮಲ್ : ಆ ಆಸಾಮಿಯಂತೂ ಬಂದೇ ಬಿಟ್ಟ. ನೀನು ಹೋಗಿ ಹಪ್ಪಳ ಹುರಿ, ನಾನು ಅವನ ಬ್ಯಾಂಕ್ ಬ್ಯಾಲೆನ್ಸ್ ಸಾಫ್ ಮಾಡುವ ತಂತ್ರ ಹೂಡುತ್ತೇನೆ. (ಲಕ್ಷ್ಮಿ ಕೋಪದಿಂದ ಕಾಲು ಬಡಿದು ಹೊರಟುಹೋಗುತ್ತಾಳೆ) ಕದೋಡಿಮಲ್ ಬಾಗಿಲು ತೆರೆಯುತ್ತಾನೆ. ಇಬ್ಬರು ಗಂಡಸರು ಒಬ್ಬ ಮಹಿಳೆಯ ಜೊತೆಯಲ್ಲಿ ಒಳಗೆ ಪ್ರವೇಶಿಸುತ್ತಾರೆ.)

ಜ್ಞಾನೇಶ್ವರ್ : ನಾನು ಜ್ಞಾನೇಶ್ವರ್. ನಾನೇ ಫೋನ್ ಮಾಡಿ ನಿಮಗೆ ಟೈಮ್ ಫಿಕ್ಸ್ ಮಾಡಿದ್ದು. ಹೀರಾಲಾಲ್‌ಜಿ ನಿಮ್ಮೊಂದಿಗೆ ಮಾತನಾಡಿರಬೇಕು, ನಾವು ಡಾಕ್ಟರ್ ಚೇತನ್‌ನ ಸಂಬಂಧಕ್ಕಾಗಿ ಬರುತ್ತಿದ್ದೇವೆ ಎಂದು.

ಕದೋಡಿಮಲ್ : ಬನ್ನಿ, ಬನ್ನಿ, ಹೌದು. ನೀವು ನಿಮ್ಮ ಮಗಳಿಗೆ ನನ್ನ ಮಗನ ಕೈ ಕೇಳಲು ಬರುತ್ತಿದ್ದೀರೆಂದು ಹೀರಾಲಾಲ್‌ಜಿಯವರು ನನಗೆ ಹೇಳಿದ್ದರು?

ಜ್ಞಾನೇಶ್ವರ್ : ಇವರು ನಮ್ಮ ಅಣ್ಣ ಪ್ರವೀಣ್ ಮತ್ತು ಇವರು ನನ್ನ ಅತ್ತಿಗೆ ನೀಲಾ. (ಕದೋಡಿಮಲ್ ಇಬ್ಬರಿಗೂ ನಮಸ್ಕರಿಸಿ)

ಕದೋಡಿಮಲ್ : ಕುಳಿತುಕೊಳ್ಳಿ, ಕುಳಿತುಕೊಳ್ಳಿ. (ಜ್ಞಾನೇಶ್ವರ್ ಅವರ ಅಣ್ಣ ಅತ್ತಿಗೆ ಸೋಫಾದ ಮೇಲೆ ಕುಳಿತುಕೊಳ್ಳುತ್ತಾರೆ. ಜ್ಞಾನೇಶ್ವರ್ ತನ್ನ ಸಿಗರೇಟ್ ಕೇಸ್ ಹಾಗೂ ಲೈಟರ್ ಸೋಫಾ ಬಳಿ ಇರುವ ಟೀಪಾಯಿಯ ಮೇಲಿಡುತ್ತಾನೆ.)

ಕದೋಡಿಮಲ್ : ನಾನು ಸುತ್ತಿ ಬಳಸಿ ಮಾತಾಡುವವನಲ್ಲ, ನೇರವಾಗಿ ಹೇಳುತ್ತೇನೆ. ಅದೇ ನನಗೆ ಇಷ್ಟ. ಅದ್ದರಿಂದಲೇ ನಿಮ್ಮ ಹೀರಾಲಾಲ್‌ಜಿ ಬಂದಾಗ ವರದಕ್ಷಿಣೆಯಲ್ಲಿ ನಮಗೆ ಏನೇನು ಬೇಕಾಗುತ್ತೆ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೆ.

ಜ್ಞಾನೇಶ್ವರ್ : ಅದನ್ನು ಹೀರಾಲಾಲ್‌ಜಿ ನಮಗೆ ತಿಳಿಸಿದ್ದಾರೆ.

ಕದೋಡಿಮಲ್ : ಹಾಗಿದ್ದಲ್ಲಿ ಆ ವರದಕ್ಷಿಣೆ ನೀವು ಕೊಡುವುದನ್ನು ಒಪ್ಪಿದರೆ ಮಾತ್ರ ನಾನು ಮದುವೆ ಮಾತುಕತೆ ಆಡುತ್ತೇನೆಂದು ಅವರು ಹೇಳಿರಬೇಕು, ಅಲ್ಲವೆ?

ಜ್ಞಾನೇಶ್ವರ್ : ಅದೆಲ್ಲ ಒಪ್ಪಿಕೊಂಡೇ ನಾವು ನಿಮ್ಮ ಜೊತೆ ಮಾತುಕತೆಗಾಗಿ ಬಂದಿದ್ದೇವೆ.

ಕದೋಡಿಮಲ್ : ಅದೇ ಒಂದು ದೊಡ್ಡ ಮಾತಾಗಿತ್ತು. ಈಗ ನೀವು ಏನೇನು ಮಾತಾಡಬೇಕೆಂದಿದ್ದೀರೋ, ಸಂತೋಷದಿಂದ ಮಾತಾಡಿ.

ಜ್ಞಾನೇಶ್ವರ್ : ನೋಡಿ ಕದೋಡಿಮಲ್‌ಜಿ, ನಾವು ನಮ್ಮ ಮಗಳಿಗೆ ಇಷ್ಟೊಂದು ವರದಕ್ಷಿಣೆ ನೀಡುತ್ತಿರುವಾಗ ನಮ್ಮ ಮಗಳು ಯಾವ ಮನೆಗೆ ಹೋಗುತ್ತಿದ್ದಾಳೋ ಅವರ ಸಂಪತ್ತಿನ ಸ್ಥಿತಿ ಸಹ ನಮಗೂ ತಿಳಿಯಬೇಕಲ್ಲವೇ? ಅವರು ಎಷ್ಟು ಶ್ರೀಮಂತರೆಂದು ಗೊತ್ತಾಗಬೇಕಲ್ಲವೆ?

ನೀಲಾ : ನೀವು ಹೃದಯ ಬಿಚ್ಚಿ ವರದಕ್ಷಿಣೆ ಕೇಳಿದ್ದೀರಿ ಶಾಹ್‌ಜಿ. ಹಾಗಾದರೆ, ನಿಮ್ಮ ಆಸ್ತಿ ಏನೇನಿದೆ ಎಂದು ಅವಶ್ಯಕವಾಗಿ ನೀವು ತಿಳಿಸಲೇಬೇಕು.

ಜ್ಞಾನೇಶ್ವರ್ : ನೀವು ಎಷ್ಟೊಂದು ಹೆಚ್ಚು ವರದಕ್ಷಿಣೆ ಕೇಳಿದ್ದೀರೋ ಅಷ್ಟು ವರದಕ್ಷಿಣೆಯಲ್ಲಿ ನಮ್ಮ ಮಗಳು ಯಾರಾದರೂ ಕೋಟ್ಯಾಧೀಶ್ವರನ ಸೊಸೆ ಆಗಬಹುದಾಗಿತ್ತು.

ಕಡೋಡಿಮಲ್ : ಹಾಗಾದರೆ ನಾನು ಹೆಸರಿಗೆ ಮಾತ್ರ ಕೋಟ್ಯಾಧೀಶ್ವರ ಎಂದು ನೀವು ತಿಳಿದಿರುವಿರಾ? ನನ್ನ ಆಸ್ತಿ ಬಗ್ಗೆ ನಿಮಗೆ ಹೇಳಲೇ? ಈ ಫ್ಲ್ಯಾಟಲ್ಲದೆ ಪಾಲಿ ಹಿಲ್ ಮೇಲೆ ಬಾಂದ್ರಾದಲ್ಲಿ ಎರಡು ದೊಡ್ಡ ಬಂಗಲೆಗಳಿವೆ, ಅವು ಬೇನಾಮಿ. ಅವುಗಳನ್ನು ನಾನು ಕಾಲ್ಪನಿಕ ಹೆಸರುಗಳಲ್ಲಿ ಖರೀದಿಸಿ ಬಾಡಿಗೆಗ ಕೊಟ್ಟಿದ್ದೇನೆ.

ಜ್ಞಾನೇಶ್ವರ್ : ಮಾತು ಅಂದರೆ ಇದು!

ನೀಲಾ : ಹೌದು. ಪಾಲಿ ಹಿಲ್‌ನ ಬಂಗಲೆಗಳು ಬಹಳ ದುಬಾರಿಯಲ್ಲವೆ?

ಕಡೋಡಿಮಲ್ : ಹೌದು. ನನ್ನ ಒಂದೊಂದು ಬಂಗಲೆಯೂ ಒಂದೊಂದು ಕೋಟಿ ಬೆಲೆ ಬಾಳುತ್ತದೆ. ಟ್ಯಾಕ್ಸ್ ಉಳಿಸಲು ನಾನು ಇದರ ಬೆಲೆ ಅರ್ಧದಷ್ಟೇ ಬರೆಸಿದ್ದೇನೆ. ಅದು ಬೇರೆ ಮಾತು.

ಪ್ರವೀಣ್ : ಆದರೆ ಬಾಡಿಗೆಗೆ ರಸೀದಿಯಂತೂ ಕೊಡಲೇಬೇಕಾಗುತ್ತದೆ. ಒಮ್ಮೆ ರಸೀದಿ ಸಿಕ್ಕರೆ ಸಾಕು, ಬಾಡಿಗೆದಾರ ಮನೆ ಬಿಡುವುದೇ ಇಲ್ಲ. ಆ ಬಂಗಲೆಗಳಂತೂ ಬಾಡಿಗೆದಾರರದೇ ಆದವು, ನಿಮ್ಮದಂತೂ ಅಲ್ಲ ಎಂದು ತಿಳಿಯಿರಿ.

ಕಡೋಡಿಮಲ್ : ನಾನು ಹಸಿ ಗೋಲಿ ಏನೂ ಆಡಿಲ್ಲ, ಲಿವ್ ಆ್ಯಂಡ್ ಲಾಯಿಸೆನ್ಸ್ ಮೇಲೆ ಬಾಡಿಗೆದಾರರನ್ನು ಇಡುತ್ತೇನೆ, ಅದೂ ಕೂಡ ಹನ್ನೊಂದು ತಿಂಗಳಿಗೆ ಮಾತ್ರ. ಅದು ಅರವತ್ತು ಮತ್ತು ನಲವತ್ತು ರೇಷಿಯೋ ಮೇಲೆ.

ನೀಲಾ : ಹಾಗೆಂದರೇನು?

ಕಡೋಡಿಮಲ್ : ಇದರ ಅರ್ಥವೆಂದರೆ ಬಾಡಿಗೆಯ ಶೇಕಡ ೬೦ರಷ್ಟು ವೈಟ್‌ನಲ್ಲಿ ಮತ್ತು ಶೇಕಡ ೪೦ ರಷ್ಟು ಬ್ಲಾಕ್‌ನಲ್ಲಿ ತಕ್ಕೊಳ್ಳುತ್ತೇನೆ. ಮತ್ತು ಪ್ರತಿ ಹನ್ನೊಂದು ತಿಂಗಳಿಗೊಮ್ಮೆ ಐನೂರು ರೂಪಾಯಿ ಮಾತ್ರ ಹೆಚ್ಚಿಸುತ್ತೇನೆ. ಬಾಡಿಗೆದಾರ ಒಪ್ಪಿದರೆ ಸರಿ, ಇಲ್ಲವಾದಲ್ಲಿ ಬಂಗಲೆ ಖಾಲಿ ಮಾಡಿಸಿ ಬಿಡುತ್ತೇನೆ.

ನೀಲಾ : ಪ್ರಾಪರ್ಟಿ ಬಗ್ಗೆ ನೀವು ವಿವರ ನೀಡಿದ್ದಾಯ್ತು. ಈಗ ನಿಮ್ಮ ದಂಧೆ ಬಗ್ಗೆಯೂ ಹೇಳಿ. ನೀವು ಎಷ್ಟು ದುಡಿದುಕೊಳ್ಳುತ್ತೀರೆಂದು ತಿಳಿಸಿದರೆ ನೀವು ಬೇಡಿದಷ್ಟು ವರದಕ್ಷಿಣೆ ಕೊಡುವುದಕ್ಕೆ ನಮಗೇನೂ ಅಭ್ಯಂತರವಿಲ್ಲ.

ಕಡೋಡಿಮಲ್ : ನನ್ನ ಬಳಿ ಎಷ್ಟೊಂದು ಸಂಪತ್ತಿದೆ ಎಂದರೆ ನಿಮ್ಮ ಮಗಳು ಇಲ್ಲಿ ರಾಜ್ಯವಾಳಬಹುದು. ನನ್ನ ಅಂಗಡಿಯಲ್ಲಿ ದಿನಕ್ಕೆ ಸಹಸ್ರಾರು ರೂಪಾಯಿಗಳ ಆದಾಯವಿದೆ.

ಪ್ರವೀಣ್ : ನೀವು ಬಡ್ಡಿಯಿಂದ ಎಷ್ಟೊಂದು ಆದಾಯ ಗಳಿಸುವಿರೋ ಅದರ ಒಂದು ದೊಡ್ಡ ಭಾಗ ಟ್ಯಾಕ್ಸ್‌ಗೆ ಹೋಗಬಹುದಲ್ಲವೆ?

ಕಡೋಡಿಮಲ್ : ನೀವು ನನಗೆ ಮೂರ್ಖ ಎಂದು ತಿಳಿದಿರುವಿರಾ? ನಾನು ನನಗಾಗಿ ದುಡಿಯುವುದೋ ಅಥವಾ ಸರ್ಕಾರಕ್ಕೋ? ಧಂದೆ ನಡೆಯಬೇಕೆಂದು ಟ್ಯಾಕ್ಸ್ ಅವಶ್ಯವಾಗಿ ತುಂಬುತ್ತೇನೆ. ಆದರೆ ಎಷ್ಟು? ಹಿಟ್ಟಿನಲ್ಲಿ ಉಪ್ಪಿನಷ್ಟು ಮಾತ್ರ; ಎರಡೆರಡು ಖಾತೆಗಳನ್ನು ಇಟ್ಟಿದ್ದೇನೆ. ಒಂದು ಟ್ಯಾಕ್ಸ್

ಡಿಪಾರ್ಟ್‌ಮೆಂಟ್‌ಗೆ ತೋರಿಸಲಿಕ್ಕೆ. ಮತ್ತೊಂದು ನಿಜವಾದ ಲೆಕ್ಕದ್ದು. ಈಗಲಾದರೂ ನಿಮಗೆ ಸಮಾಧಾನವಾಯಿತೇ ಹೇಳಿ?

ಜ್ಞಾನೇಶ್ವರ್ : ಆಯಿತು. ಸಮಾಧಾನವಾಯಿತು.

ನೀಲಾ : ಅಗತ್ಯಕ್ಕಿಂತ ಹೆಚ್ಚು ಸಮಾಧಾನ ಆಯಿತು.

ಕಡೋಡಿಮಲ್ : ಹಾಗಾದರೆ ಮದುವೆ ಮುಹೂರ್ತ ನಾನೇ ತೆಗೆಸಲೇ ಅಥವಾ ನೀವೇ ಹೇಳ್ತೀರೊ?

ಜ್ಞಾನೇಶ್ವರ್ : ಮುಹೂರ್ತ ಇಲ್ಲವಲ್ಲ - ನಾಳೆ ಬೆಳಿಗ್ಗೆ ಹನ್ನೊಂದು ಘಂಟೆಗೆ ಆರ್ಯಭವನಕ್ಕೆ (ಇನ್‌ಕಂಟ್ಯಾಕ್ಸ್ ಬಿಲ್ಡಿಂಗ್) ಬಂದು ಬಿಡಿ. ಇದು ನನ್ನ ಐಡೆಂಟಿಟಿ ಕಾರ್ಡ್. (ಜ್ಞಾನೇಶ್ವರ್ ಕಾರ್ಡ್ ತೆಗೆದು ಕಡೋಡಿಮಲ್‌ಗೆ ಕೊಡುತ್ತಾ ಹೇಳುತ್ತಾನೆ)

ಜ್ಞಾನೇಶ್ವರ್ : ಇನ್‌ಕಂ ಟ್ಯಾಕ್ಸ್ ಆಫೀಸರ್ ಜ್ಞಾನೇಶ್ವರ್ ಭಟ್. ಇವರಿಬ್ಬರ ಹೆಸರಂತೂ ನಾನು ಬಂದಾಗಲೇ ಹೇಳಿದ್ದೇನೆ. ಇವರ ಕೆಲಸದ ಬಗ್ಗೆಯೂ ಈಗ ಪರಿಚಯ ಮಾಡಿಸಿಕೊಡುತ್ತೇನೆ. ಇವರಿಬ್ಬರು ಸಹ ಇನ್‌ಕಂಟ್ಯಾಕ್ಸ್ ಇನ್ಸ್‌ಪೆಕ್ಟರ್‌ಗಳು ಮತ್ತು ಇದು ನನ್ನ ಸಿಗರೇಟ್ ಕೇಸ್‌ನಂತೆ ಕಾಣಿಸುತ್ತಿದೆಯಲ್ಲ ಇದು ಅಸಲಿನಲ್ಲಿ ಟೇಪ್‌ರಿಕಾರ್ಡರ್. ನೀವು ಕೊಟ್ಟ ಹೇಳಿಕೆಗಳೆಲ್ಲ ಇದರಲ್ಲಿ ಟೇಪ್ ಆಗಿ ಹೋಗಿವೆ. (ಜ್ಞಾನೇಶ್ವರ್ ತನ್ನ ಸಿಗರೇಟ್ ಕೇಸ್ ಮತ್ತು ಲೈಟರ್ ಎತ್ತಿಕೊಂಡು ಜೇಬಿನೊಳಗೆ ಹಾಕುತ್ತ ಹೇಳುತ್ತಾನೆ)

ಜ್ಞಾನೇಶ್ವರ್ : ಈಗ ನಾವು ಹೊರಡುತ್ತೇವೆ. ಬಾಕಿ ಮಾತೆಲ್ಲ ನಾಳೆ ಕಚೇರಿಯಲ್ಲಿ ಆಡೋಣ. (ಅವರು ಮೂರು ಜನ ಎದ್ದು ಹೋಗುತ್ತಾರೆ. ಅವರು ಹೋದನಂತರ ಒಳಗಿನ ಕೊಠಡಿಯಿಂದ ಚೇತನ್ ಮತ್ತು ಲಕ್ಷ್ಮಿ ಡ್ರಾಯಿಂಗ್ ರೂಮಿನೊಳಗೆ ಬರುತ್ತಾರೆ. ಇಬ್ಬರ ಕೈಯಲ್ಲೂ ಅವರವರ ಸೂಟ್‌ಕೇಸ್‌ಗಳಿವೆ.)

ಚೇತನ್ : ಡ್ಯಾಡಿ ನಾನು ಮನೆ ಬಿಟ್ಟು ಹೋಗುತ್ತಿದ್ದೇನೆ. ಅಮ್ಮ ಸಹ ನನ್ನ ಜೊತೆಯಲ್ಲಿ ಬರುತ್ತಿದ್ದಾರೆ. ಏಕೆಂದರೆ ನಮಿತಾ ಜೊತೆಯಲ್ಲಿ ವರದಕ್ಷಿಣೆ ಇಲ್ಲದೇ ಮದುವೆ ಮಾಡಿಕೊಳ್ಳುತ್ತಿರುವುದರಿಂದ ತುಂಬ ಸಂತುಷ್ಟವಾಗಿದ್ದಾರೆ. ಮದುವೆ ಕಾರ್ಡ್ ನಿಮಗೂ ಕಳುಹಿಸುತ್ತೇನೆ. ನಿಮಗೆ ಇಷ್ಟವಾದರೆ ನಮಗೆ ಆಶೀರ್ವಾದ ಮಾಡಲು ಬನ್ನಿ.

(ಚೇತನ್ ಮತ್ತು ಲಕ್ಷ್ಮಿ ಡ್ರಾಯಿಂಗ್ ರೂಮಿನಿಂದ ಹೊರಗೆ ಹೋಗುತ್ತಾರೆ. ಕಡೋಡಿಮಲ್ ಮೇಲೆ ಸಿಡಿಲು ಬಡಿಯಿತೇನೋ ಅನ್ನುವ ಹಾಗೆ ಅತ ನಿಂತುಕೊಂಡಿದ್ದಾನೆ)

(ಅವನ ನೆತ್ತಿಯಿಂದ ಕಾಲಿನವರೆಗಿನ ಮೇಲೆ ಸೂಪರ್ ಇಂಪೋಜ್ ಆಗುತ್ತದೆ.)

- ಮುಗಿಯಿತು -

* ಪ್ರಾ। ಸಿಬ್ಗತ್ ಉಲ್ಲಾ, ಹಿಂದಿ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು - ೫೬೦ ೦೦೧.

ನನ್ನ ಕತೆಗಳು, ನನ್ನವೇ ಕತೆಗಳು

ಮಲಯಾಳಂ : ಎಂ. ಟಿ. ವಾಸುದೇವನ್ ನಾಯರ್
ಅನು : ಡಾ। ಮೋಹನ ಕುಂಟಾರ್

ಸಾಹಿತ್ಯ ರಚನೆಯನ್ನು ಕಲಿಯಲು ನಿಗದಿತವಾದ ಪಠ್ಯ ಪುಸ್ತಕಗಳಿಲ್ಲ. ಮತ್ತಿತರ ಹಲವು ಉದ್ಯೋಗಗಳಿಗೂ ನಿಶ್ಚಿತವಾದ ಅಧ್ಯಯನ, ಪದವಿ ಪ್ರಮಾಣಪತ್ರಗಳ ಅಗತ್ಯವಿದೆ. ಎಲ್ಲೋ ಕೆಲವು ಕೃತಿಗಳನ್ನು ಕಂಡು ಅದರಲ್ಲಿ ಗೌರವ, ಆಸಕ್ತಿಗಳನ್ನು ಹುಟ್ಟಿ ಅದರಂತೆ ಬರೆಯುವುದು ಸಾಧ್ಯವಾಗಬೇಕೆಂಬ ಪ್ರಾರ್ಥನೆಯೊಂದಿಗೆ ಬರೆಹಗಾರನೊಬ್ಬ ಸಾಹಿತ್ಯ ಪ್ರಪಂಚವನ್ನು ಪ್ರವೇಶಿಸುತ್ತಾನೆ. ಮಾನ್ಯತೆ, ಆದಾಯ, ಬಡ್ತಿ ಸಾಧ್ಯತೆ, ಮೊದಲಾದ ಯಾವುವೂ ಈ ವೃತ್ತಿಯ ಪ್ರಾಸ್ಪೆಕ್ಟಸ್‌ನಲ್ಲಿಲ್ಲ. ಅನುಭವಗಳಿಂದ ತನಗೆ ಅಗತ್ಯವೆನಿಸಿದ ವಸ್ತುಗಳನ್ನು ಬರೆಹಗಾರ ಕಂಡುಕೊಳ್ಳುತ್ತಾನೆ ಎಂಬ ಸಾಮಾನ್ಯ ನಿಯಮವನ್ನು ಕೆಲವರು ಹೇಳುವುದಿದೆ. ಆದರೆ ಒಬ್ಬ ಸಾಮಾನ್ಯ ವ್ಯಕ್ತಿಯ ಜೀವನಾನುಭವಗಳು ಎಷ್ಟು ಪರಿಮಿತ. ಅತಿ ವಿಚಿತ್ರವೂ, ಅದ್ಭುತವೂ ಆದ ಜೀವನಾನುಭವಗಳು ಸುತ್ತಮುತ್ತಲಿನ ಹಲವರಿಗಿದ್ದರೂ ಅವರು ಬರೆಹಗಾರರಾಗುವುದಿಲ್ಲ. ತೀರಾ ಸಾಮಾನ್ಯವಾದ ಅನುಭವಗಳು ಮಾತ್ರವೇ ಇರುವವರೂ ಹೇಗೆ ಬರೆಹಗಾರರಾಗುವುದಿಲ್ಲ? ಸಾಧಾರಣವೆಂದು ಮೇಲ್ನೋಟಕ್ಕೆ ತೋರುವ ಅನುಭವಗಳಲ್ಲೂ ಕೆಲವು ಒಳನೋಟಗಳನ್ನು ಕಂಡುಕೊಳ್ಳುವುದು ಸಾಧ್ಯವಾಗುವುದರಿಂದ ಒಬ್ಬನಿಗೆ ಬರೆವಣಿಗೆ ಸಾಧ್ಯವಾಗುತ್ತದೆ. ದಾರುಣವೂ, ಭೀಕರವೂ ಆದ ಒಂದು ಘಟನೆಗೆ ಸಾಕ್ಷಿಗಳಾದ ಜನಸಮೂಹದ ಒಬ್ಬೊಬ್ಬ ವ್ಯಕ್ತಿಗೂ ತನ್ನದೇ ಆದ ಒಂದೊಂದು ಮಾನವೀಯ ಸಂವೇದನೆಯಿರುತ್ತದೆ. ಆದರೆ ಬದುಕಿನ ಗೊಂದಲಗಳ ನಡುವೆ ಈ ಸಂವೇದನೆಗಳು ಹುಟ್ಟು ಹಾಕಬಹುದಾದ ತೀಕ್ಷ್ಣ ಭಾವನೆಗಳು ಕ್ಷಣದಲ್ಲಿಯೇ ಮಾಸಿಯೂ ಹೋಗಬಹುದು.

ಸೃಜನಶೀಲತೆಯ ಅಸ್ಪಷ್ಟತೆಗಳು ಹುಟ್ಟಿಕೊಂಡು ಮನಸ್ಸಿನಲ್ಲಿ ಈ ಸಂವೇದನೆ ತಡೆಯೊಡ್ಡಿ ಭಾರವಾಗಿ ತಳವೂರುತ್ತವೆ. ಅದು ಮತ್ತೊಂದು ಗೊಂದಲವಾಗಿ ಹರಡಿಕೊಂಡೇ ಇರುತ್ತದೆ. ಹಾಗೆ ಒಂದಲ್ಲ ಹಲವು ಗೊಂದಲಗಳು ಹಲವು ಪದರಗಳಾಗಿ ಮನಸ್ಸಿನಲ್ಲಿ ನೆಲೆನಿಲ್ಲುತ್ತವೆ. ಒಮ್ಮೆ ಆತ ಕಂಡುಕೊಳ್ಳುತ್ತಾನೆ, ತಮ್ಮ ಮನಸ್ಸಿನಂತೆ ಬದುಕೂ ಕೂಡ ಅಸ್ತವ್ಯಸ್ತವಾಗಿದೆ ಎಂದು.

ಅದಕ್ಕೊಂದು ನಿಯಮವೋ, ತತ್ವವೋ ಕಂಡುಕೊಳ್ಳುವುದಕ್ಕಿರುವ ತೀವ್ರವಾದ ಪ್ರಯತ್ನವೇ ಬರೆವಣಿಗೆಯ ಆರಂಭ. ಅಸ್ತವ್ಯಸ್ತಗಳು ಪ್ರಕೃತಿ ನಿಯಮ. ಅದಕ್ಕೊಂದು ವ್ಯವಸ್ಥೆಯನ್ನುಂಟುಮಾಡಬೇಕೆಂಬುದು ಮಾನವನ ನಿರಂತರ ಕನಸು.

ಎಳೆಯ ವಯಸ್ಸಿನಲ್ಲಿ ಕಂಡುದುದರಲ್ಲೆಲ್ಲಾ ಕವಿತೆಯಿದೆಯೆಂದೂ, ಕೇಳುವುದರಲ್ಲೆಲ್ಲ

ಕತೆಯಿದೆಯೆಂದೂ ಅನ್ನಿಸಿತ್ತು. ಬಹಳ ಸಮಯಗಳ ಬಳಿಕ ತಿಳಿಯಿತು. ನಾನು ವಸ್ತುಗಳಿಗಾಗಿ ಹುಡುಕುತ್ತಿರುವಾಗ ವಸ್ತುಗಳೇ ಹಲವರನ್ನು ಹುಡುಕುತ್ತಿರುತ್ತವೆ ಎಂದು. ಅವುಗಳಲ್ಲಿ ಕೆಲವು ನನ್ನನ್ನು ಸ್ವಾಗತಿಸಿದವು ಎಂಬುದೇ ಸತ್ಯ.

ನಾನು ಹೆಚ್ಚು ಬರೆದುದು ಕತೆಗಳನ್ನು. ಎಲ್ಲಿಯೋ ನಡೆದ, ನಡೆದಿರಬಹುದಾದ ಮನುಷ್ಯಾವಸ್ಥೆಯ ಕತೆಗಳು. ಸೂಕ್ಷ್ಮವಾಗಿ ಅವಲೋಕಿಸಿದರೆ ಇವರಲ್ಲಿ ಅಸಾಧಾರಣವಾದುದೇನೋ ಇದೆ. ಈ ಮೌನ ಪ್ರೇರಣೆಯು ನನ್ನ ಮನಸ್ಸಿನ ಕಿಟಕಿಗಳ ಗುರುತು ಒಡೆದು ದಾಟಿ ಒಳಬಂದಿದೆ. ಹೀಗೆ ನನ್ನನ್ನು ಸ್ವಾಗತಿಸಿದ ವಸ್ತುಗಳಿಗೆ ನಾನು ಕೃತಜ್ಞತೆಗಳನ್ನು ಹೇಳುತ್ತೇನೆ. ಊರ ದಾರಿಗಳಲ್ಲೂ, ಕತ್ತಲೆಯ ಕೋಣೆಗಳಲ್ಲೂ, ಹೊಳೆಯ ಕಡವುಗಳಲ್ಲೂ ಕತೆಗಳನ್ನು ಅಡಗಿಸಿಟ್ಟು ಹುಡುಕುವಂತೆ ಮಾಡಿ ಮುಗುಳ್ನಗೆಯೊಂದಿಗೆ ಆಹ್ವಾನ ನೀಡಿ ನನ್ನನ್ನು ಎಂದೆಂದೂ ಕರೆಯುತ್ತಿರುವ ಊರಿಗೆ ನಾನು ಕೃತಜ್ಞತೆಗಳನ್ನು ಹೇಳಲೇ.

ಕತೆ ಎಂದರೆ ನಮ್ಮ ಹಳ್ಳಿಯ ಭಾಷೆಯಲ್ಲಿ ದಂತಕತೆ. ಕಲ್ಪಿಸಿಕೊಂಡೇ ಕಟ್ಟುವ ಕತೆ. ಕಾಳಿಗೆ ಹೋದ ಮಣ್ಣಾಂಗಟ್ಟಿಯ ಮತ್ತು ತರಗೆಲೆಯ ಕತೆಗಳೆಲ್ಲ ತಲೆಮಾರುಗಳ ಬಳಿಕವೂ ಸತ್ಯವಾಗಿ ನೆಲೆ ನಿಂತಿವೆ. ಭೌತಶಾಸ್ತ್ರ, ರಸಾಯನಶಾಸ್ತ್ರ, ವೈದ್ಯಶಾಸ್ತ್ರ, ರಾಜಕೀಯ ಮೀಮಾಂಸೆಗಳೆಲ್ಲೆಲ್ಲ ಪರಮ ಸತ್ಯಗಳೆಂದು ಓದಿದ ಹಲವು ಹೊಸ ಅರಿವಿನ ಬೆಳಕಿನಲ್ಲಿ ಅಸತ್ಯಗಳೋ, ಅರ್ಧಸತ್ಯಗಳೋ ಆಗಿ ಬದಲಾದುವು. ಅಚಂಚಲವೆಂದೂ, ಅನಿಷೇಧಗಳೆಂದೂ ತಿಳಿದ ಸಿದ್ಧಾಂತಗಳ ಅಡಿಗಲ್ಲುಗಳೂ ಸಹ ಚದುರಿಹೋದುದನ್ನು ನಾವು ನೋಡಿದ್ದೇವೆ. ಆದರೆ ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್, ದಾಸ್ತೊವಸ್ಕಿ, ವ್ಯಾಸ, ವಾಲ್ಮೀಕಿ ಮೊದಲಾದವರ ಕಟ್ಟುಕತೆಗಳು ಮಹಾಸತ್ಯಗಳಾಗಿ ಇನ್ನೂ ನೆಲೆನಿಂತಿರುವುದನ್ನು ನಾವು ನೋಡುತ್ತಿದ್ದೇವೆ.

ಆಗ ಕತೆ ನಿಜವಾಗುತ್ತದೆ. ಜೀವನವಾಗುತ್ತದೆ. ಅವುಗಳು ವಿನೋದಕ್ಕಾಗಿ ಪದಗಳನ್ನು ಇಟ್ಟು ಕಟ್ಟಿದ ಆಟದ ಮನೆಗಳಲ್ಲ. ಆದ್ದರಿಂದಲೇ ಬರೆಹಗಾರ ತನ್ನ ಬದ್ಧತೆಗಳನ್ನು ಸಮಕಾಲೀನ ಬದುಕಿನ ಸಂಕೀರ್ಣತೆಗಳನ್ನು. ಅರಿಯುವ ಪ್ರಯತ್ನವನ್ನು ಕುರಿತು ಹೇಳಲುದ್ಯುಕ್ತನಾಗುತ್ತಾನೆ. ಪ್ರಬುದ್ಧರಾದ ಬರೆಹಗಾರರು ಹಲವು ಕಾಲಗಳಲ್ಲಿ, ಹಲವು ಭಾಷೆಗಳಲ್ಲಿ ಸೃಷ್ಟಿಸಿ ತೋರಿಸಿದ ಅನಂತ ಸಾಧ್ಯತೆಗಳನ್ನು ಕುರಿತು ನೆನಪಿಸಿಕೊಳ್ಳುವಾಗ ಆತನಿಗೆ ಧೈರ್ಯವೂ, ಆವೇಶವೂ ಬರುತ್ತದೆ. ಆತ ಪ್ರಯತ್ನವನ್ನು ಮಾಡಿಕೊಂಡೇ ಇರುತ್ತಾನೆ.

ಜೀವನ ವ್ಯಾಪಾರದಲ್ಲಿ ಕಿವುಡಾಗಿಸುವ ಗದ್ದಲಗಳ ನಡುವೆಯೂ ತನ್ನ ಕಿರುದನಿಯನ್ನು, ಕಾಲದ ಬಂಡೆಕಲ್ಲಿನ ಮೇಲೆ ಬೀಳುವ ಮಾತಿನ ಉಳಿಪೆಟ್ಟಿನ ಶಬ್ದವನ್ನು ಕೇಳಲು ಕೆಲವರಾದರೂ ಕಾದಿದ್ದಾರೆ ಎಂಬ ನಂಬಿಕೆ ಬರೆಹಗಾರನಿಗಿದೆ. ಬದುಕಿನ ಸಮಸ್ಯೆಗಳಿಗೆ ಪರಿಹಾರವನ್ನು ಕೊಡಬಲ್ಲ ಒಂದು ದಿವ್ಯ ಮಂತ್ರವೂ ತನ್ನ ಕೈಯಲ್ಲಿಲ್ಲ ಎಂಬುದು ಅವನಿಗೆ ಗೊತ್ತು. ರೋಗಗ್ರಸ್ತವಾದ ಸಮಾಜದೊಡಲಿಗೆ ಬೇಗನೆ ಆರೋಗ್ಯವನ್ನು ಕೊಡುವ ಚಿಕಿತ್ಸಾ ವಿಧಾನಗಳೂ ಆತನ ಕೈಯಲ್ಲಿಲ್ಲ. ಆದರೂ ತನ್ನ ಕಿರುದನಿಯ ಮೂಲಕ ತನ್ನ ಕಾಲದ ಮನುಷ್ಯನ ಸ್ಥಿತಿಗತಿಗಳನ್ನು ಕುರಿತಾದ ಆತ್ಮೀಯ ಮಾತು, ಭಯ. ನೋವುಗಳನ್ನು ಅವ್ಯಕ್ತ ನಿರೀಕ್ಷೆಗಳೊಂದಿಗೆ ಕೆಲವು ಸಮಾನ ಮನಸ್ಕರೊಂದಿಗೆ ಹಂಚಿಕೊಳ್ಳಲು ಆತನ ಹವಣಿಸುತ್ತಿರುತ್ತಾನೆ. ಆ ನಿರಂತರ ಪ್ರಯತ್ನದಲ್ಲಿ ಬದುಕಿಗ ಒಂದು ಅರ್ಥವನ್ನು ಕಂಡುಕೊಳ್ಳುವುದು ಆತನಿಗೆ ಸಾಧ್ಯವಾಗುತ್ತದೆ.

ಬರೆಹಗಾರ ಎಂದೂ ಹುಡುಕುತ್ತಲೇ ಇರಬೇಕಾಗುತ್ತದೆ. ಕತೆಯ ಬಾಹ್ಯವೇಷ ಧರಿಸಿ ಸತ್ಯ ಹಲವು ಮುಖಗಳಲ್ಲಿ, ಹಲವು ರೂಪಗಳಲ್ಲಿ ಎಲ್ಲೆಲ್ಲೂ ಸುತ್ತಾಡುತ್ತಿರುತ್ತದೆ. ಅದು ತನ್ನನ್ನು ಒಪ್ಪಿತ ಭಾವದಿಂದ ದಯಪೂರ್ವಕವಾಗಿ ಕರೆಯುವ ಕ್ಷಣಕ್ಕಾಗಿ ಕಾಯುತ್ತಾ ಆತ ಅಲೆಯುತ್ತಿರುತ್ತಾನೆ. ಕಾಲದ ಸುದೀರ್ಘವಾದ

ಹಾದಿಯಲ್ಲಿ ಜನಸಮೂಹದ ನಡುವಿನಿಂದ ಮುಂದಕ್ಕೊ, ಹಿಂದಕ್ಕೊ ಜಗ್ಗುತ್ತಾ ಚಲಿಸುತ್ತಿರುತ್ತಾನೆ. ಅದನ್ನೇ ನಾನೂ ಮಾಡಿದೆ. ಈಗಲೂ ಮಾಡಿಕೊಂಡಿದ್ದೇನೆ.

ಮೊದಲು ಕತೆ ಬರೆಯಲಾರಂಭಿಸಿದಾಗ, ಜನಗಳು ಇಷ್ಟಪಡುವ, ಬಯಸುವ ಕತೆಗಳು ನನ್ನ ಮೂಸೆಯಲ್ಲಿವೆಯೋ ಇಲ್ಲವೋ ಎಂಬುದರ ಬಗೆಗೆ ನಾನು ಯೋಚಿಸಿರಲಿಲ್ಲ. ನನ್ನ ಮನಸ್ಸು ಸದಾ ಅಶಾಂತವಾಗಿರುತ್ತಿತ್ತು. ಆ ಅಶಾಂತತೆಯನ್ನು ಅದೆಷ್ಟೋ ವರ್ಷಗಳಿಂದ ಹೊರುತ್ತಲೇ ಬಂದಿದ್ದೇನೆ. ಅದಕ್ಕೊಂದು ಮೂರ್ತರೂಪ ಕೊಡುವುದು ಸಾಧ್ಯವೆ ಎಂಬುದರ ಬಗೆಗೆ ವಿವೇಚಿಸುವುದು ಅಥವಾ ಅದನ್ನು ವ್ಯಾಖ್ಯಾನಿಸುವುದು ಕಷ್ಟ. ಬೂದಿ ಮುಚ್ಚಿದ ಕೆಂಡದಂತ ಒಳಗೊಳಗೇ ಉರಿಯುತ್ತಿರುವ ಈ ತೀವ್ರ ಅಶಾಂತತೆಯ ನಡುವೆ ಬರೆಯುವ ಸಿದ್ಧತೆ ನಡೆಸುತ್ತಿದ್ದೆ. ಬದುಕು ಈ ಅಶಾಂತತೆಗೆ ಬೆನ್ನು ಹಾಕಿಕೊಂಡು ಹೋಗುವ ಪ್ರಯತ್ನ. ಕತೆ ಬರೆಯುವಾಗ ಈ ಅಶಾಂತತೆ ತನ್ನ ಉತ್ತುಂಗ ಸ್ಥಿತಿಗೆ ತಲುಪುತ್ತದೆ. ಕತೆ ಕೊನೆಗೊಂಡಾಗ ಆಹ್ಲಾದದ ಅನುಭವವಾಗುತ್ತದೆ. ಆಗ ಪ್ರಪಂಚ ಅಷ್ಟು ಕೆಟ್ಟದೇನಲ್ಲ ಎಂದೆನ್ನಿಸುತ್ತದೆ. ಕತೆ ಬರೆದಾದ ನಂತರ ಲಭ್ಯವಾದ ಸಂತಸವನ್ನು ಏಕೆ ಆಚರಿಸಬಾರದೆಂದು ಒಮ್ಮೊಮ್ಮೆ ಅನ್ನಿಸುವುದೂ ಉಂಟು. ಆ ಒಂದು ದಿನ ಸಂಜೆ ಗಾಳಿಯಲ್ಲಿ ಹಾರುವ ಹಕ್ಕಿಯಂತೆ ಅಲ್ಲಿ-ಇಲ್ಲಿ ಸುತ್ತಾಡಬಹುದು. ಗೆಳೆಯರೊಡನೆ ಸೇರಿ ಚೆನ್ನಾಗಿ ನಗಬಹುದು, ಯಾವುದಾದರೂ ಪ್ರಸಂಗವನ್ನು ತೆಗೆದುಕೊಂಡು ಗೆಳೆಯರೊಡನೆ ಗಂಟೆಗಟ್ಟಲೆ ಮಾತನಾಡಬಹುದು.

ಚಿಕ್ಕಂದಿನಿಂದಲೂ ನಾನು ಒಬ್ಬಂಟಿಯೇ. ನಾಲ್ವರು ಅಣ್ಣ-ತಮ್ಮಂದಿರಲ್ಲಿ ನಾನು ಎಲ್ಲರಿಗಿಂತ ಕಿರಿಯವ. ತಂದೆ ದೂರದ ಶ್ರೀಲಂಕಾದಲ್ಲಿ ಉದ್ಯೋಗದಲ್ಲಿದ್ದರು. ತಾಯಿ ನಮ್ಮ ದೊಡ್ಡ ಕುಟುಂಬದ ಭಾರವನ್ನು ಹೆಗಲ ಮೇಲೆ ಹೊತ್ತುಕೊಂಡು ನಗುವನ್ನು, ಸಂತೋಷವನ್ನು ಮರೆತೇಬಿಟ್ಟಿದ್ದರು. ನಾನು ಆಡುತ್ತ, ನಗುತ್ತ, ಕುಣಿದಾಡುತ್ತ ಯಾವುದಾದರೊಂದು ಮನೆಗೆ ಹೋಗಿ ಹಿಂತಿರುಗಿ ಬಂದಾಗ ನನ್ನ ಮನಸ್ಸು ತುಂಬಾ ಭಾರವಾಗಿರುತ್ತಿತ್ತು. ನನ್ನ ಮನೆಯ ವಾತಾವರಣ ಯಾತನಾಮಯವಾಗಿತ್ತು. ಖಾಲಿ ಉಗ್ರಾಣ, ಸಾಲ-ಪತ್ರಗಳು, ಸಾಹುಕಾರರು ಇವೆಲ್ಲದರ ನಡುವೆ ನಾನು. ನನ್ನಂತಹ ಎಳೆಯನ ಕಣ್ಣಿಂದಲೂ ಮನೆಯ ಪರಿಸ್ಥಿತಿ ಮುಚ್ಚಿಟ್ಟದ್ದೇನಾಗಿರಲಿಲ್ಲ.

ಜೀವನದಲ್ಲಿ ಎಂದೂ ನಾನು ನನ್ನ ಹುಟ್ಟುಹಬ್ಬವನ್ನು ಆಚರಿಸಿಲ್ಲ. ಏಕೆಂದರೆ ನಾನು ಕರ್ಕಟಕ ತಿಂಗಳಲ್ಲಿ ಹುಟ್ಟಿದ್ದೆ. (ಕೇರಳೀಯರ ಪ್ರಕಾರ ಈ ತಿಂಗಳು ತುಂಬ ಅಶುಭದಾಯಕವಾದದ್ದು. ಹೀಗಾಗಿ ಖಾದ್ಯಾನ್ನಗಳ ವಿಚಾರದಲ್ಲಿ ಕೇರಳ ಸ್ವಾವಲಂಬಿಯಲ್ಲ. ಇಲ್ಲಿನ ವ್ಯವಸಾಯದಿಂದ ಎಂಟು-ಒಂಬತ್ತು ತಿಂಗಳ ಕಾಲವನ್ನು ಬಹಳ ಕಷ್ಟದಿಂದ ಕಳೆಯಬಹುದು ಅಷ್ಟೆ.) ಹಬ್ಬಗಳ ಬಗೆಗೆ ಆಕರ್ಷಣೆ ಇದ್ದಿರಬಹುದಾದ ವಯಸ್ಸಿನಲ್ಲಿ ಮನೆಯಲ್ಲಿ ಔಷಧಿಗೆ ಬೇಕೆಂದರೆ ಅಕ್ಕಿಕಾಳು ಇರುತ್ತಿರಲಿಲ್ಲ. ಕೊಯಿಲಿನ ಮಹಾ ಸುದಿನ ಬರುವುದನ್ನೇ ಕಾಯುತ್ತಾ ಒಂದೊಂದು ದಿನ ಕಳೆಯುವುದೂ ಅತ್ಯಂತ ದುಸ್ತರವಾಗಿತ್ತು. ನನ್ನ ಒಂದು ಹುಟ್ಟಿನ ಹಬ್ಬ ಈಗಲೂ ನನ್ನ ನೆನಪಿನಲ್ಲಿ ಹಸಿರಾಗಿ ಉಳಿದಿದೆ. ಮೂರು ರೂಪಾಯಿ ಕೊಟ್ಟು ಯಾರಿಂದಲೋ ಬತ್ತ ತೆಗೆದುಕೊಂಡು ಬಂದು, ಕುಟ್ಟಿ ಅಮ್ಮ ಅನ್ನ ಮಾಡಿದ್ದಳು. ಅನ್ನ ಸಿದ್ಧಪಡಿಸುವ ಹೊತ್ತಿಗೆ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಅಷ್ಟುಹೊತ್ತಿಗೆ ನನ್ನ ಹಸಿವು ತನಗೆ ತಾನೇ ಇಂಗಿಹೋಗಿತ್ತು. ದೊಡ್ಡವನಾದ ಮೇಲೆ ಬಹಳ ವೈಭವದಿಂದಲೇ ನಾನು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಬಹುದಿತ್ತು. ಆದರೆ ಈಗ ಆ ಬಗೆಗಿನ ಎಲ್ಲ ಆಸೆ-ಆಕಾಂಕ್ಷೆಗಳು ತಣ್ಣಗಾಗಿವೆ.

ಆ ದಿನಗಳಲ್ಲಿ ಸಾಹಿತ್ಯ-ಸೃಷ್ಟಿ ಎಂದರೆ ಬದುಕಿನಿಂದ ಪಲಾಯನವೆಂದು ಭಾವಿಸಿದ್ದೆ. ರಾತ್ರಿಯ

ಮಂಕುದೀಪದ ಮುಂದೆ ಕುಳಿತು ಏನಾದರೂ ಬರೆಯುತ್ತಿರುವಾಗ, ಹಗಲು ಹೊತ್ತಿನಲ್ಲಿ ಬೆಟ್ಟಗಳ ಇಳಿಜಾರುಗಳಲ್ಲಿ ಹಾಗೂ ಮೈದಾನದಲ್ಲಿ ಸುತ್ತುತ್ತಾ ಮನಸ್ಸಿನಲ್ಲೇ ಕತೆ-ಕವಿತೆಗಳನ್ನು ರಚಿಸಿಕೊಳ್ಳುತ್ತಿರುವಾಗ ಬದುಕಿನಿಂದ ದೂರ ಹೋಗುತ್ತಿರುವುದರ ಬಗೆಗೆ ಒಂದು ಬಗೆಯ ತೃಪ್ತಿ ಸಿಗುತ್ತಿತ್ತು. ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೂ ಸಾಹಿತ್ಯ ಇಂಥಾದ್ದೇ ಒಂದು ರಹಸ್ಯ ಲೋಕವಾಗಿತ್ತು. ಈ ಗುಹೆಯಲ್ಲಿ ಯಾವಾಗೆಂದರೆ ಆವಾಗ ಹೋಗಿ ಬಚ್ಚಿಟ್ಟುಕೊಳ್ಳಬಹುದೇನೋ ಎಂದು ಅನ್ನಿಸುತ್ತಿತ್ತು.

ಕತೆಗಳನ್ನು, ಕವಿತೆಗಳನ್ನು ಪತ್ರಿಕೆಗಳಿಗೆ ಕಳುಹಿಸುತ್ತಿದ್ದೆ. ಅವುಗಳಲ್ಲಿ ಹಿಂತಿರುಗಿ ಬರುತ್ತಿದ್ದುವು. ಹಿಂತಿರುಗಿ ಬಾರದಿದ್ದ ರಚನೆಗಳನ್ನು ಸಂಪಾದಕರು ಪ್ರಕಟಣೆಗೆಂದು ತಮ್ಮಲ್ಲೇ ಇಟ್ಟುಕೊಂಡಿರಬಹುದೆಂದು ಭಾವಿಸಿ ಬುಕ್-ಸ್ಟಾಲ್‌ಗಳ ಬಳಿ ಹೋಗಿ ಪತ್ರಿಕೆಗಳ ಪುಟಗಳನ್ನು ತಿರುವಿ ಹಾಕುತ್ತಿದ್ದೆ. ವಾರಗಳು ಕಳೆದರೂ ನನ್ನ ಬರೆಹಗಳು ಮಾತ್ರ ಎಲ್ಲೂ ಗೋಚರಿಸುತ್ತಿರಲಿಲ್ಲ.

ರಜಾ ದಿನಗಳಲ್ಲಿ ನನ್ನ ಕಷ್ಟಗಳು ಹೆಚ್ಚಾಗುತ್ತಿದ್ದುವು. ಮೂರು ಮೈಲಿಗಳ ದೂರದಲ್ಲಿದ್ದ ಅಂಚೆ ಕಛೇರಿಗೆ ದಿನವೂ ಹೋಗಬೇಕಾಗುತ್ತಿತ್ತು. ಮರಳಿ ಬರುತ್ತಿದ್ದ ಬರಹಗಳು ಬೇರೆಯವರ ಕೈಗೆ ಸಿಗದಂತೆ ನೋಡಿಕೊಳ್ಳಲು. ಹೀಗೆ ನಿತ್ಯವೂ ಅಂಚೆ ಕಛೇರಿಗೆ ಹೋಗುವುದು, ಮರಳಿ ಬರುವುದು - ಇದು ನನಗೆ ನಾಚಿಕೆ ಎನ್ನಿಸತೊಡಗಿತು. ಹೀಗಾಗಿ ಉಚಿತವಾಗಿ ಪುಸ್ತಕ ಸೂಚಿಯನ್ನು ಕಳುಹಿಸುತ್ತಿದ್ದ ಪುಸ್ತಕ ಪ್ರಕಾಶಕರಿಗೆ ಕಾರ್ಡ್ ಬರೆಯುತ್ತಿದ್ದೆ. ಮೊದ ಮೊದಲು ಪ್ರತಿ ಭಾನುವಾರ ಹನ್ನೆರಡು ಮೈಲಿ ದೂರ ನಡೆದು ಹೋಗಿ ಓದಲು ಪುಸ್ತಕಗಳನ್ನು ಕೊಂಡು ತರುತ್ತಿದ್ದೆ.

ಯಾವಾಗಲಾದರೂ ಅಲ್ಲೊಂದು ಇಲ್ಲೊಂದು ಬರೆಹ ಪ್ರಕಟವಾದರೂ ಯಾವುದೇ ಸಂಭಾವನೆ ಇಲ್ಲ. ಆ ಸಂಚಿಕೆಯ ಒಂದು ಪ್ರತಿಯೂ ಬರುತ್ತಿರಲಿಲ್ಲ. ಆದರೂ ಮುದ್ರಿತ ಅಕ್ಷರಗಳಲ್ಲಿ ನನ್ನ ಬರೆಹಗಳನ್ನು ಕಂಡಾಗ ಒಂದು ಬಗೆಯ ಪ್ರೇರಣೆ ಪಡೆದುಕೊಳ್ಳುತ್ತಿದ್ದೆ. ಆದರೆ ಮನೆಯ ಮಂದಿಗೆ ನನ್ನ ಬರವಣಿಗೆಯ ಬಗೆಗೆ ಯಾವುದೇ ಆಸಕ್ತಿ ಇರಲಿಲ್ಲ.

ಬಿ.ಎಸ್‌ಸಿ. ಪಾಸ್ ಮಾಡಿ ಉದ್ಯೋಗವಿಲ್ಲದೆ ಖಾಲಿ ಜೇಬಿನಲ್ಲಿ ಮನೆಯಿಂದ ಹೊರಬಿದ್ದೆ. ಒಂದುದಿನ ಮನೆಯವರೆಲ್ಲರ ಮುಂದೆ ತಂದೆ ಏನೆಂದು ಹೇಳಿದರು ಗೊತ್ತೆ - 'ಇವನು ನನ್ನ ಚಿಕ್ಕಮಗ. ಶ್ರದ್ಧೆ-ಭಕ್ತಿ ಏನೊಂದೂ ಇಲ್ಲ. ಯಾವುದೇ ಕೆಲಸಕ್ಕೂ ಇಲ್ಲ. ಒಂದು ಕೆಲಸ ಇವನು ಮಾಡ್ತಾನೆ - ಹಾದಿ ಬೀದಿಯಲ್ಲಿ ತಿರುಗಾಡುವವರ ತಲೆ-ಬುಡವಿಲ್ಲದ ಕತೆಗಳನ್ನು ಬರೆಯುವುದು, ಬಿಳಿ ಕಾಗದವನ್ನು ಕಪ್ಪು ಮಾಡುವುದು'. ಹೊರಗಿನಿಂದ ಬಂದ ಕೆಲವು ನೆಂಟರು ಸಹ ಅಲ್ಲಿದ್ದರು. ತಟ್ಟೆಗೆ ಬಡಿಸಿದ್ದ ಊಟವನ್ನು ಅರ್ಧದಲ್ಲೇ ಬಿಟ್ಟು ಎದ್ದಿದ್ದೆ ಅಂದು. ಮಾರನೆ ದಿನ ಅರ್ಧಂಬರ್ಧ ಬಣ್ಣ ಎದ್ದಿದ್ದ ಟ್ರಂಕ್ ತೆಗೆದುಕೊಂಡು ಬಸ್‌ಸ್ಟ್ಯಾಂಡ್ ಕಡೆ ಹೊರಟಿದ್ದೆ. ಬಸ್‌ಸ್ಟ್ಯಾಂಡ್‌ನಲ್ಲಿ ನನಗೆ ಪರಿಚಿತನಾಗಿದ್ದ ಕೂಲಿಯೊಬ್ಬನಿಂದ ಎರಡು ರೂಪಾಯಿ ಸಾಲ ತೆಗೆದುಕೊಂಡು ನನ್ನ ಯಾತ್ರೆಯನ್ನು ಆರಂಭಿಸಿದ್ದೆ...

ಯಾವುದೇ ಖಾಯಂ ನೌಕರಿ ಇಲ್ಲ. ಯಾವುದೇ ಒಂದು ಟ್ಯುಟೋರಿಯಲ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ. ಮೂರು ದಿನ ಗ್ರಾಮಸೇವಕನ ಕೆಲಸವನ್ನೂ ನಿರ್ವಹಿಸಿದೆ. ಕೆಲವು ತಿಂಗಳುಗಳಿಗೆ ಸೀಮಿತವಾಗಿದ್ದ ಈ ಕೆಲಸಗಳನ್ನು ಮಾಡುತ್ತಲೇ ಬರವಣಿಗೆಯನ್ನೂ ಮುಂದುವರಿಸಿದೆ. ಇದರಿಂದ ಸ್ವಲ್ಪ ಸಮಯಕ್ಕಾದರೂ ಸರಿ, ಬದುಕಿನ ಕಹಿಯಿಂದ ಬಿಡುಗಡೆ ಪಡೆಯುತ್ತಿದ್ದೆ.

ಇಂದು ಪುಸ್ತಕಗಳಿಂದ ಹಣ ಬರುತ್ತಿದೆ. ನಾನು ಇಷ್ಟಪಟ್ಟಂತಹ ಕೆಲಸ ಸಿಕ್ಕಿದೆ. ಆದರೂ ನಾನು ಸಂತೋಷದಿಂದ ಇದ್ದೇನೇನು? ಇಲ್ಲ. ನನ್ನ ಅಂತರ್ಯದಲ್ಲಿ ಸಾವಿರಾರು ಕಹಿಗಳಿವೆ. ಪ್ರಪಂಚದ ಕಹಿಗಳು

ನೋವುಗಳು ನನ್ನ ಮನಸ್ಸಿನಲ್ಲಿ ಹೆಪ್ಪುಗಟ್ಟಿವೆ. ನನ್ನ ಕೋಪ-ತಾಪ, ವಿರೋಧದಿಂದ ಏನೂ ಆಗುವುದಿಲ್ಲ ಎಂಬುದು ನನಗೆ ಗೊತ್ತಿದೆ. ನನ್ನ ಪೀಳಿಗೆಯವರಿಗೂ ಇದು ಗೊತ್ತಿದೆ. ಅಲ್ಸರ್‌ನಿಂದ, ಲಿವರ್ ಡಿಸೀಸ್‌ನಿಂದ ಕೆಲವು ಜನ ಆತ್ಮಾಹುತಿ ಮಾಡಿಕೊಳ್ಳುತ್ತಾರೆ. ಬದುಕಬೇಕೆಂಬ ಆಸೆ ಹೊತ್ತಿರುವ ನಾನು ಆತ್ಮಹತ್ಯೆ ಮಾಡಿಕೊಳ್ಳಲಾರೆ. ನನ್ನ ಕಹಿ ಮತ್ತು ಅಲ್ಸರ್ ಅನ್ನು ಹೊತ್ತು ಸಾಹಿತ್ಯವೆಂಬ ಚಿಕ್ಕ ಪ್ರಪಂಚದಲ್ಲಿ ನಾನು ಕಾಲದ ಕೈದಿಯಂತೆ ಬದುಕುತ್ತಿದ್ದೇನೆ.

ಹಲವು ವರ್ಷಗಳಿಂದ ನಾನು ಕತೆಗಳನ್ನು ಬರೆಯುತ್ತಿದ್ದೇನೆ. ಇದುವರೆಗೆ ಎಷ್ಟು ಕತೆಗಳನ್ನು ಬರೆದಿದ್ದೇನೆ ಎಂದು ನನಗೆ ಖಚಿತವಾಗಿ ತಿಳಿದಿಲ್ಲ. ಏಕೆಂದರೆ ಅನೇಕ ವರ್ಷಗಳಲ್ಲಿ ಹಲವು ಕತೆಗಳು ಕಳೆದುಹೋಗಿವೆ. ಮೊದಲೆಲ್ಲ ಮಾಸ ಪತ್ರಿಕೆಗಳ ಸಂಪಾದಕರ ಕಸದ ಬುಟ್ಟಿಗಳಲ್ಲಿ, ಪ್ರಕಟವಾದುವುಗಳಲ್ಲಿ ಹಲವು ಕಾಣದಾಗಿವೆ. ಪ್ರಸಿದ್ಧವಲ್ಲದ ಕೆಲವು ಮಾಸಪತ್ರಿಕೆಗಳಲ್ಲಾದ್ದರಿಂದ ಆಗಿರಬಹುದು. ಅವುಗಳನ್ನೆಲ್ಲ ಮತ್ತೆ ಹುಡುಕಿ ಸಂಗ್ರಹಿಸಲಾಗಲಿಲ್ಲ.

ಮೊದಲು ಪ್ರಕಟವಾದುದು ನನ್ನದೊಂದು ಲೇಖನ. ಪ್ರಾಚೀನ ಭಾರತದ ರತ್ನ ವ್ಯಾಪಾರದ ಬಗೆಗೆ. ಇದು ೧೯೫೭ರಲ್ಲಿ. ಲೇಖನಗಳನ್ನು ಬರೆದು ನೋಡಿದೆ. ಕವಿತೆ ಬರೆದು ನೋಡಿದೆ. ಕತೆ ಬರೆದು ನೋಡಿದೆ. ೧೯೬೦ರ ಆರಂಭದ ದಿನಗಳಲ್ಲಿ ನನಗೆ ಪ್ರಿಯವಾದ ಅಥವಾ ಬರೆಯಲು ಸ್ವಾರಸ್ಯಕರವಾದ ಸಾಹಿತ್ಯ ಪ್ರಕಾರ ಸಣ್ಣಕತೆ ಎಂದು ತೀರ್ಮಾನಿಸಿದೆ.

ಹೌದು. ಸಣ್ಣಕತೆಯೊಡನೆ ನನಗೆ ಪ್ರತ್ಯೇಕವಾದ ಒಂದು ಪಕ್ಷಪಾತವಿದೆ. ಕವಿತೆಯಂತೆ ಪೂರ್ಣತೆಯೆಡೆಗೆ ತಲುಪಿಸುವ, ಅಲ್ಲವಾದರೆ ಪೂರ್ಣತೆಯನ್ನು ಲಕ್ಷ್ಯವಿರಿಸಿ ಪ್ರವಹಿಸುವ ಒಂದು ಸಾಹಿತ್ಯ ಪ್ರಕಾರ. ಕಾದಂಬರಿಯಲ್ಲಿ ಕೆಲವೊಮ್ಮೆ ಕಾವ್ಯ ಸೌಂದರ್ಯವಿಲ್ಲದ ಅನೇಕ ಭಾಗಗಳನ್ನು ಡೊಕ್ಯುಮೆಂಟೇಶನ್‌ಗಾಗಿ ಬರೆಯಬೇಕಾಗುತ್ತದೆ. ಕಾದಂಬರಿಯ ವಿಸ್ತೃತವಾದ ಕ್ಯಾನ್‌ವಾಸಿನಲ್ಲಿ ಹಲವನ್ನು ಅಳವಡಿಸಲು ಸ್ವಾತಂತ್ರ್ಯವಿದೆ. ಸಣ್ಣಕತೆಗೆ ವಾಸ್ತು, ಶಿಲ್ಪ, ಸೃಷ್ಟಿಯೆಂಬ ತ್ರಿಮಾನಗಳ ಒಂದು ಸುಂದರ ರೂಪವನ್ನು ಕೊಡುವುದು ಸಾಧ್ಯ. ಸಣ್ಣಕತೆಯಲ್ಲಿ ಒಂದು ಪದ, ಕೆಲವೊಮ್ಮೆ ಒಂದು ಮಾತು ಅಧಿಕವಾಗಿರಬಹುದು. ಕಾದಂಬರಿಗಳಲ್ಲಿ ಪುಟಗಳು, ಕೆಲವೊಮ್ಮೆ ಅಧ್ಯಾಯಗಳೇ ಅಧಿಕವಾದರೂ ಸಮಗ್ರ ದೃಷ್ಟಿಯಲ್ಲಿ ಕಾದಂಬರಿಯ ಶಿಲ್ಪಕ್ಕೆ ಅಷ್ಟಾಗಿ ಬಾಧಿಸಿತೆಂದು ಹೇಳಲು ಬರುವುದಿಲ್ಲ.

ಲಯವಿಲ್ಲದ ಅಲೆಗಳು ಹಾಗೂ ಸುಳಿಗಳಿಂದಾದ ಅಸ್ವಸ್ಥವೇ ಬದುಕು. ಲಯಭಂಗದಿಂದ ಲಯವನ್ನು ಸೇರುವ ಒಂದು ಸಾಹಸ ಮಾತ್ರ ಸಾಹಿತಿಯದು. ಪೂರ್ಣತೆಯೇ ಲಕ್ಷ್ಯ. ಆದರೆ ಲಕ್ಷ್ಯವನ್ನು ಸೇರುವುದು ಎಂಬ ಒಂದು ಸ್ಥಿತಿಯಿಲ್ಲ. ದಿಗಂತವೆಂದು ಭಾವಿಸಿದ ದೂರಕ್ಕೆ ತಲುಪಿದಾಗ ಅದು ಮತ್ತೊಮ್ಮೆ ದೂರವಿರುತ್ತದೆ. ಬಳಿಕ ಅದಕ್ಕೂ ಹೆಚ್ಚು ದೂರದಲ್ಲಿರುತ್ತದೆ. ಆದರೆ ಈ ಪ್ರಯಾಣ ಎಂಬುದು ಅದರ ಎಲ್ಲಾ ಸಂಕೀರ್ಣತೆಗಳನ್ನು, ಸಮಸ್ಯೆಗಳನ್ನು, ಜಯಾಪಜಯಗಳನ್ನು ಇರಿಸಿಕೊಂಡೇ ಸಂತೃಪ್ತಿ ನೀಡುವ ಒಂದು ಅನುಭೂತಿ. ಅದುವೇ ಬರೆಹಗಾರನನ್ನು ಧೃತಿಗೆಡಿಸದೆ ಮುನ್ನಡೆಸುವ ಶಕ್ತಿ.

ನನ್ನ ಸಾಹಿತ್ಯ ಜೀವನದಲ್ಲಿ ನಾನು ಹೆಚ್ಚು ಋಣಿಯಾಗಿರುವುದು ಕುಡಲೂರಿಗೆ; ವೇಲಾಯುಧಣ್ಣ, ಗೋವಿಂದಕುಟ್ಟಿಯಣ್ಣ, ಪಗಡೆ ಆಟಗಾರನಾದ ಕೊಂದುಣ್ಣಿಮಾವ, ಕಿವಿ ತುಂಡರಿಸಿದ ಮೀನಾಕ್ಷಿ ಅಕ್ಕ ಇವರೆಲ್ಲರ ಊರಾದ ಕುಡಲೂರಿಗೆ. ಅಪ್ಪ, ಅಮ್ಮ, ಅಣ್ಣ, ಬಂಧುಗಳು, ಪರಿಚಿತರು, ನೆರೆಯವರು-ಇವರೆಲ್ಲರೂ ನನಗೆ ಪ್ರಿಯರಾದ ಕಥಾಪಾತ್ರಗಳು. ನನ್ನ ಪುಟ್ಟ ಅನುಭವದ ಕಕ್ಷೆಯಲ್ಲಿ ಬಂದ ಸ್ತ್ರೀ, ಪುರುಷರ ಕತೆಗಳೇ ನನ್ನ ಸಾಹಿತ್ಯದ ಹೆಚ್ಚಿನ ಭಾಗಗಳು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ

ನನ್ನವೇ ಕತೆಗಳು. ಒಂದು ತಮಾಷೆಯೆಂಬಂತೆ ನನಗೆ ಆಗಾಗ ನೆನಪಾಗುವುದಿದೆ. ಅಮ್ಮ ಬದುಕಿದ್ದಿದ್ದರೆ; ಅಪ್ಪನ ಮನೆಯಿಂದ ಬಂದ ಶಂಕುಣ್ಣಿಯಣ್ಣನನ್ನು ಸತ್ಕರಿಸಲು ನನ್ನನ್ನು ಉಪವಾಸ ಮಲಗಿಸಿದ ಕತೆಯನ್ನು ಓದಿದರೆ ಏನನ್ನಿಸುತ್ತಿತ್ತು?

ವರ್ಷಗಳ ಬಳಿಕ ಒಂದು ಕಥಾಪಾತ್ರ, ಒಂದು ಘಟನೆ, ಒಂದು ವಾತಾವರಣ ತಕ್ಷಣ ಮನಸ್ಸಿಗೆ ಬರುವಾಗ ಇನ್ನೊಂದು ಸೃಷ್ಟಿಯ ನೋವಿನ ಆರಂಭ ಈ ನಿಮಿಷವೆಂದು ತಿಳಿಯುವಾಗ - ಆ ವೇಳೆಗೆ ವಿವರಿಸಲಾಗದ ಒಂದು ತೆರನ ಸಾರ್ಥಕ್ಯ ಭಾವನೆಯುಂಟಾಗಿರುತ್ತದೆ. ಆ ಸಾರ್ಥಕತೆಗಾಗಿ ನಿತಾಂತವಾದ ಅಸ್ವಸ್ಥತೆಯನ್ನು ಹೊತ್ತುಕೊಂಡು ನಡೆಯುವಾಗ ಬರೆಹಗಾರ ನಿರೀಕ್ಷೆಯಿಂದ ಕಾದಿರುತ್ತಾನೆ.

ಉಗಿಬಂಡಿಯ ಎಂಜಿನ್ನುಗಳ ಶಬ್ದಕ್ಕೆ ಅದುರುತ್ತಿರುವ ಒಂದು ಹಳೆಯ ಮಹಡಿಯ ವರಾಂಡದಲ್ಲಿ ಕುಳಿತಿರುವಾಗ ಹುಚ್ಚ ವೇಲಾಯುಧಣ್ಣ ಚಿಕ್ಕಂದಿನಲ್ಲಿ ಮನೆಗೆ ಓಡಿ ಬಂದ ದೃಶ್ಯವನ್ನು ತಕ್ಷಣ ನೆನಪಿಸಿಕೊಂಡಾಗ ಆದ ಆಹ್ಲಾದವನ್ನು ನಾನೀಗಲೂ ಮೆಲುಕು ಹಾಕುವುದಿದೆ. ಬಡಗಣ ಮನೆಯಿಂದ ತಪ್ಪಿಸಿಕೊಂಡು ಬಂದು 'ಮಾಳ್ವಕ್ಕ ನನಗೆ ಒಂದಿಷ್ಟು ಅನ್ನ ಕೊಡಿ' ಎಂದು ಅಮ್ಮನಲ್ಲಿ ಹೇಳುತ್ತಾ ಕಾಲದೀಪದ ಬೆಳಕಿರುವ ಜಗಲಿಗೆ ಬಂದ ದೃಶ್ಯ, ನನ್ನ ಕತೆಗಳಿಗಿಂತಲೂ ನನಗೆ ಪ್ರಿಯವಾದುದು ನನ್ನ ಕತೆಗಳ ಕತೆಗಳೇ. ಅದೆಲ್ಲವನ್ನು ಇಲ್ಲಿ ವಿಸ್ತರಿಸುವುದಿಲ್ಲ.

ನಾನು ಹೇಳುವುದಿಷ್ಟು : ಕುಡಲೂರು ಎಂಬ ನನ್ನ ಪುಟ್ಟ ಪ್ರಪಂಚದಿಂದ ಬೇರಾಗಿ ನಿಲ್ಲಲು ನನಗೆ ಸಾಧ್ಯವಾಗದು. ಅದರ ನಾಲ್ಕು ಮೇರೆಗಳಾಚೆ ದಾಟುವುದಿಲ್ಲವೇ ಎಂದು ಕೇಳಬಹುದು. ಇಲ್ಲ, ವಿಭಿನ್ನವಾದ ಭೂ ಪ್ರದೇಶಗಳಲ್ಲಿ ನಾನು ಅಲೆದಾಡಿದ್ದಿದೆ, ಹಲವು ಬಾರಿ. ಆದರೆ ಮತ್ತೆ ಮತ್ತೆ ನಾನು ಇಲ್ಲಿಗೇ ಹಿಂತಿರುಗಿ ಬರುತ್ತೇನೆ. ಇದೊಂದು ಮಿತಿಯೇ ಆಗಿರಬಹುದು. ಆದರೆ ಅರಿಯದ ಅದ್ಭುತಗಳನ್ನು ಗರ್ಭದಲ್ಲಿ ಸೇರಿಸಿಕೊಂಡಿರುವ ಅಗಾಧ ಸಮುದ್ರಕ್ಕಿಂತ ಅರಿಯುವ ನನ್ನ ನಿಳಾನದಿಯೇ ನನಗೆ ಪ್ರಿಯ.

* ಡಾ। ಮೋಹನ ಕುಂಟಾರ್, ಕನ್ನಡ ವಿಶ್ವವಿದ್ಯಾಲಯ-ಹಂಪಿ, ವಿದ್ಯಾರಣ್ಯ-೫೮೩ ೨೭೬, ಬಳ್ಳಾರಿ ಜಿಲ್ಲೆ.

ಗೀಳು

ತಮಿಳು : ಶಿವಶಂಕರ್
ಅನು : ಗೀತಾ ವಿಜಯಕುಮಾರ್

ಅಂದು, ಇಂದು, ಎಂದಿಗೂ, ಪ್ರತಿಯೊಂದು ಕೆಲಸದಲ್ಲೂ ಪ್ರೀತಿ ತುಂಬಾನೇ ಅಚ್ಚುಕಟ್ಟು. ಚಿಕ್ಕವಯಸ್ಸಿನಿಂದಲೂ ಅವಳಿಗೆ ಈ ಅಚ್ಚುಕಟ್ಟುತನದ ಗೀಳು ವಿಪರೀತ ಅಂತಲೇ ಹೇಳಬೇಕು. ಇವಳ ಸಮವಯಸ್ಸಿನ ಇತರ ಹೆಣ್ಣುಮಕ್ಕಳು ಶಾಲಾ, ಕಾಲೇಜುಗಳ ರಜಾದಿನಗಳಂದು ಸ್ಕೂಲ್ ಎಕ್ಸ್‌ಕರ್ಷನ್‌ಗೆಂದು ಮಹಾಬಲಿಪುರಕ್ಕೆ ಹೋಗ್ತೀವಿ, ತಿರುವಣ್ಣಾಮಲೈ ಹತ್ತುತ್ತೇವೆಂದು ಅಲ್ಲಿ ಇಲ್ಲಿ ಅಲೆದಾಡಬಯಸಿದರೆ, ಪ್ರೀತಿ ಮಾತ್ರ 'ನಾನು ಬರೋದಿಲ್ಲಪ್ಪಾ.... ನನಗೆ ಕೆಲಸ ಇದೆ!' ಎಂದು ಜಾರಿಕೊಂಡು ಬಿಡುತ್ತಿದ್ದಳು. ಒಂದೇ ಒಂದು ದಿನ ರಜೆ ಸಿಕ್ಕರೂ ಸಾಕು, ತಲೆ ತೂತು ಬೀಳೋ ಬಿಸಿಲಲ್ಲಿ ನಿಂತುಕೊಂಡು, ಸ್ವತಃ ತಾನೇ ಕೈಯಾರೆ ತನ್ನ ಸೀರೆಗಳನ್ನು ಒಗೆದು, ಗಂಜಿ ಹಾಕಿ, ಒಣಗಿಸಿ ಇಸ್ತ್ರಿ ಮಾಡುವಳು. ಅದಿಲ್ಲಾಂದ್ರೆ, ಬೀರುವಿನ ಸಾಮಾನುಗಳನ್ನೆಲ್ಲ ಕೆಳಗಿಳಿಸಿ, ಕೊಳಕಾದ ಪೇಪರ್‌ಗಳನ್ನು ಬದಲಾಯಿಸುವಳು. ಸೀರೆಗಳ ಅಂಚು ಸೆರಗು ಒಂದು ಪಕ್ಕಕ್ಕೆ, ಮಡಿಕೆಗಳು ಮತ್ತೊಂದು ಪಕ್ಕಕ್ಕೆ ಬರುವಂತೆ, ನೀಟಾಗಿ ಒಪ್ಪವಾಗಿ ಜೋಡಿಸಿಡುವಳು. ಊದಿನ ಕಡ್ಡಿ ಪ್ಯಾಕೆಟ್ ತಂದು, ಅದನ್ನು ಸೀರೆಗಳ ಪಕ್ಕ ಉದುರಿಸುವಳು. 'ಪಾಕೆಟ್ ಮನಿ'ಗೆಂದು ಕೊಡಲ್ಪಡುವ ಹಣದಲ್ಲಿ ಫ್ಲವರ್ ಡಸ್ಟ್ ಕೊಂಡು ತಂದು ಉಡುಪುಗಳ ಮಧ್ಯದಲ್ಲಿಡುವಳು. ಇದೂ ಇಲ್ಲಾಂದ್ರೆ ತನ್ನ ಮೇಜನ್ನು ಧೂಳಿಲ್ಲದಂತೆ ಜಾಡಿಸಿ, ಪುಸ್ತಕ ಮತ್ತು ಇನ್ನಿತರ ಸಾಮಾನುಗಳನ್ನು ಒರೆಸಿ ಹೊಸದಾಗಿರಿಸುವಳು.

"ಯಾಕೇ.... ಕೆಲಸದಾಕೆಗೆ ಹೇಳಬಾರದೇನೇ.... ನೀನು ಯಾಕೆ ಅಷ್ಟೊಂದು ಒದ್ದಾಡ್ತೀಯ?" ಅಂತ ಅಮ್ಮ ಅಂಗಾಲಾಚುವಳು.

"ಛೆ! ಅವಳಿಗೆ ಸರಿಯಾಗಿ ಕೆಲಸ ಮಾಡೋದಕ್ಕೆ ಬರೋದಿಲ್ಲಮ್ಮ! ಕೈಗಳ ಉಗುರುಗಳಲ್ಲಿ ಬಂಡೀ ಕೊಳೆ ಇರುತ್ತೆ! ನನ್ನ ಸಾಮಾನುಗಳನ್ನು ನಾನೇ ಕ್ಲೀನ್ ಮಾಡಿಕೊಳ್ತೀನಿ.... ಐ ಲೈಕ್ ಇಟ್!" ಅಂತ ಅವಳಿಂದ ಉತ್ತರ ಸಿದ್ಧವಾಗಿರುವುದು.

ಪ್ರೀತಿಯ ಅಚ್ಚುಕಟ್ಟುತನ ದಿನೇ ದಿನೇ ಹೆಮ್ಮರವಾಗಿ ಬೆಳೆದು, ಬೆಳಕು ಹರಿಯೋದ್ರೊಳಗೆ ಮೇನಿಯಾ ಆಗಿ ಮಾರ್ಪಾಡಾಗಿತ್ತು. ಅವಳ ಪತಿ ವಿಸಿಟಿಂಗ್ ಪ್ರೊಫೆಸರ್ ಆಗಿ ಒಂದು ವರ್ಷಕ್ಕಾಗಿ ಅಮೇರಿಕಾಗೆ ತೆರಳಿದಾಗ, ಇವಳು ಅವನ ಜೊತೆಗೂಡಿ ಸಂಸಾರ ಮಾಡಿ ಹಿಂದಿರುಗಿದ ನಂತರ, ಅವಳ ಗೀಳು ಹುಚ್ಚಾಗಿ ಮಾರ್ಪಟ್ಟಿತ್ತು ಎಂದೇ ಹೇಳಬೇಕು.

ಅಮೇರಿಕೆಯ ಅಚ್ಚುಕಟ್ಟು, ತನ್ನ ಇನ್ನೂರು ರೂಪಾಯಿಯ ಬಾಡಿಗೆಯ ಮನೆಯವರೆಗೂ ತರಬೇಕೆಂದು ಅವಳು ತಲಕೆಳಗಾಗಿ ಪ್ರಯತ್ನಿಸತೊಡಗಿದಳು. ಅವಳ ಮನೆಯ ಪರದೆಗಳು, ಗೋಡೆಗಳು ಸಾಮಾನುಗಳು, ಹೊಳೆದು ಪ್ರಜ್ವಲಿಸುತ್ತಿದ್ದುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಅವಳ ಆ ಬಾತ್‌ರೂಮಿ ಬಗ್ಗೆ ಮಾತ್ರ ವಿಶೇಷವಾಗಿ ಹೇಳಲೇಬೇಕು. ಬಾತ್‌ರೂಮಿನ ಮೊಸಾಯಿಕ್ ನೆಲ, ಕ್ಯಾಸೆಟ್ ಬದಿಯಲು ಕಂಬಳಿಯನ್ನು ತಂದು ಹಾಸಿದಾಗ, ಯಾರೊಬ್ಬರೂ ಒಂದು ತೊಟ್ಟು ನೀರನ್ನೂ ಸಿಡಿಸಬಾರದೆಂದ ಕಟ್ಟಾಜ್ಞೆ ಮಾಡಿದಳು. "ಆ ದೇಶದ ನಡೆನುಡಿಗೆ, ಕ್ಲೈಮೆಟ್‌ಗೆ ಇವೆಲ್ಲ ಆವಶ್ಯಕ... ನಮಗಿದೆಲ್ಲ ಏತಕ್ಕಮ್ಮ? ಅಂತ ಗಂಡ ಹೇಳಿದ್ದನ್ನ ಆ ಕಿವಿಯಿಂದ ಕೇಳಿ, ಈ ಕಿವಿಯಲ್ಲಿ ಬಿಟ್ಟುಬಿಟ್ಟಳು. ಯಾರಾದರೂ ಬಾತ್‌ರೂಮನ ಉಪಯೋಗಿಸಬಯಸಿದರೆ, ಅವರುಗಳು ನಳನಳಿಸುವ ನೆಲದ ಮೇಲೆ, ಮನಬಂದಂತೆ ಕೈಕಾಲು ಆಡಿ ಸ್ನಾನ ಕೂಡಾ ಮಾಡಲಾಗದೆ ಒದ್ದಾಡಿಬಿಡುವರು.

ಮನೆಯೊಳಗೆ ಒಂದು ಗುಂಡು ಸೂಜಿ ಸ್ಥಳದಲ್ಲೂ ಧೂಳು, ಕೊಳೆ ಇರೋದು ಪ್ರೀತಿಗೆ ಸಹ್ಯವಾಗದು ಸೊಂಟಕ್ಕೆ ಒಗೆದು ಮಡಿ ಮಾಡಿದ ತುಂಡೊಂದನ್ನು ಏಪ್ರನ್ನಿನ ಮೇಲೆ ಸಿಕ್ಕಿಸಿಕೊಂಡು, ಸದಾ ಸಾಮಾನುಗಳನ ಜಾಡಿಸುತ್ತಿರುವಳು. ನಿಮಿಷಕ್ಕೊಮ್ಮೆ ಕೈಗಳನ್ನು ಸೋಪು ಹಾಕಿ ತೊಳೆಯುವಳು. ಇತರರನು ತೊಳೆದುಕೊಳ್ಳುವಂತೆ ಪೀಡಿಸುವಳು.

"ಛೀ! ಈ ಕಂಟೈನರಲ್ಲಿ ಎಷ್ಟೊಂದು ಧೂಳು, ಅದೇನು ಕೊಳೆ! ಮೊದಲು ಕೈಗಳನ್ನು ತೊಳೆದುಕೊಳ್

ಅಯ್ಯಯ್ಯೋ, ಕೊಳೆ ಕೈಯಿಂದ ದಯವಿಟ್ಟು ಫ್ರಿಜ್ ಮುಟ್ಟಬೇಡಿ.

ಪ್ಲೀಸ್ ಚಪ್ಪಲಿ ಮೆಟ್ಟಿಕೊಂಡು ಕಾರ್ಪೆಟ್ ಮೇಲೆ ನಡೀಬೇಡಿ, ಬರೀ ಮಣ್ಣಾಗುತ್ತೆ!

ಡ್ರಾಯಿಂಗ್ ಹಾಲಿನ ಸೋಫಾದ ಮೇಲೆ ಕಾಲೆತ್ತಿಟ್ಟುಕೊಳ್ಳಬೇಡಿ... ಹೇಳಿ ಕೇಳಿ ಹೊರಗಿನ ಬ ಸಿಲ್ಕಿನದು... ಕೊಳೆ ಥಟ್ಟಾಗಿ ಎದ್ದು ಕಾಣುತ್ತೆ!

"ಅಲ್ಲಾ.... ಕಾರಿನ ಬಾಗಿಲನ್ನು 'ಸಾವಲಾನ್' ಹಾಕಿ ಒರೆಸಿದಿರಾ? ಆ ಭಿಕ್ಷುಕ ಕಾರಿನ ಬಾಗಿಲ ಮುಟ್ಟುಬಿಟ್ಟಿದ್ದ".

ಪ್ರೀತಿಯ ಕ್ಲೀನ್ಲಿನೆಸ್ ಮ್ಯಾನಿಯಾಗೆ ಗುರಿಯಾದವರು ಹಲವರು. ಇವಳ ನಿಷ್ಠುರದ ಮಾತ ಕಟ್ಟುಪಾಡಿಗೆ ಭಯಬಿದ್ದು ಸೇರಿಕೊಂಡ ಎರಡೇ ದಿನಕ್ಕೆ ಕೆಲಸದಾಳುಗಳು ಕೆಲಸ ಬಿಟ್ಟು ಓಡಿಬಿಡುತ್ತಿದ್ದ

'ಅಬ್ಬಾ, ಆಯಮ್ಮನ ಮನೇನಲ್ಲಿ ಕೆಲಸಾ ಮಾಡಾಕಾಗಾಕಿಲ್ಲ! ಸುಮ್ಮಸುಮ್ಮನಾದ್ರೂ ಒರೆಸ ಗುಡಿಸು ಅಂತಾನೇ ಇರ್ತಾರೆ!' ಎಂದಳು ಒಬ್ಬಾಕೆ.

ಬಲು ಬೇಜಾರಮ್ಮ, ಆಕೆ ಏನು ಹೆಂಗ್ಸೇ ಅಲ್ವಾ! ಮನೆಯೊಳಗೆ ನಾನುಳಿದ್ರೆ ಸಾಕು, ಕೈ ಸೋ ಹಾಕಿ ತೊಳ್ಕೋಬೇಕು, ಸೀನೋ ಹಾಗಿಲ್ಲ, ಕೆಮ್ಮೋ ಹಾಗಿಲ್ಲ! ಎಂದಳು ಮತ್ತೊಬ್ಬಾಕೆ.

ಅವರ ಮನ್ಯಾಗೆ ಮನುಷ್ಯರಿಂದ ಕೆಲಸ ಮಾಡಾಕಾಗಾಕಿಲ್ಲ! ಒರಳಲ್ಲಿ ರುಬ್ಬೋವಾಗ ಹಿಟ್ಟ ಕೈಯಿಂದ ಮುಟ್ಟೋಹಾಗಿಲ್ಲ, ಸ್ಪೂನ್‌ನಿಂದಾನೇ ತಳ್ಳಬೇಕು! ಇದೆಲ್ಲಾದ್ರೂ ಸಾಧ್ಯಾನಾ? ಇನ್ನು ಹಪ್ಪಳವ ಚಿಮಟದಿಂದಲೇ ಬಿಡಿಸಬೇಕು, ಕೈ ತಗಲಿಸೋಹಾಗಿಲ್ಲ! ಇದ್ಯಾವ ಹಿಂಸೆ ಅಂತೀನಿ! ಪ್ರಪಂಚದಾಗೆ - ರೀತಿ ಹೆಣ್ಣು ಮಕ್ಕಳೂ ಇರ್ತಾರಾ? ಎಂದಳು ಇವರ ಮನೆಗೆ ಅಡಿಗೆ ಕೆಲಸಕ್ಕೆಂದು ಬಂದು, ಒಂದ ಕಾಲುದಿನ ಕೆಲಸ ಮಾಡಿದ ಅಂಬುಜಮ್ಮ.

ಅವರುಗಳಾಡಿಕೊಳ್ಳೋದು ಸರೀನೇ! ಪ್ರೀತಿ ಹಲ್ಲು ಕಚ್ಚಿದಳು. ತನ್ನ ಅಚ್ಚುಕಟ್ಟುತನ ಕೆಲಸದಾಳುಗ ಸರಿಪಟ್ಟು ಬಾರದಿದ್ದರೇನಂತೆ? ಅವರ ಮರ್ಜಿ ನನಗ್ಯಾಕೆ? ನನ್ನ ಕೆಲಸ ನಾನೇ ಮಾಡಿಕೊಳ್ತೀನಿ! ಎಂ

ಜಂಭದಿಂದ ಬೀಗಿದಳು. ಅಮೇರಿಕೆಯಿಂದ ಕೊಂಡುತಂದಿದ್ದ ವಾಷಿಂಗ್ ಮೆಷಿನ್, ಮಿಕ್ಸಿ ಮುಂತಾದ ಸಲಕರಣೆಗಳನ್ನಿಟ್ಟುಕೊಂಡೇ ಅಂತೂ ಹೇಗೋ ನಿಭಾಯಿಸಿಕೊಂಡಿದ್ದಳು.

ಈ ಸಮಯದಲ್ಲಿಯೇ ಮೇರಿ ಇವಳಲ್ಲಿ ಕೆಲಸಕ್ಕೆ ಬಂದದ್ದು. ಬಿಳಿಯ ಅಧಿಕಾರಿಗಳ ಮನೆಯಲ್ಲಿ ಕೆಲಸ ಮಾಡಿದ ಅನುಭವ ಆಕೆಗೆ. ನಿರಿಗೆ ಕೆಡದ ಬಿಳಿ ಸೀರೆ, ಮೇಲೆತ್ತಿ ಕಟ್ಟಿದ ತುರುಬು, ಬ್ರಾ, ಕಾಲಲ್ಲಿ ಚಪ್ಪಲಿ, ಬಹಳ ಠಾಕುಠೀಕಾಗಿದ್ದಳು. ಮೆದುವಾಗಿ ಮಾತನಾಡಿ, ಕೇಳಿದ್ದಕ್ಕೆಲ್ಲ ಉತ್ತರಿಸಿದಳು. ಸಂಬಳ ಮಾತ್ರ ಎಂಬತ್ತು ರೂಪಾಯಿ, ಊಟ ಹಾಕಿ.

'ಮನೇ ಕೆಲಸದಾಕೆಗೆ ಊಟ ಹಾಕಿ, ಎಂಬತ್ತು ರೂಪಾಯಿ ಕೊಡೋದುಂಟೇ' ಎಂದು ಆಶ್ಚರ್ಯಪಟ್ಟವರೇ ಅನೇಕರು. ಆದರೆ ಈ ಮಾತಿಗೆ ಪ್ರೀತಿಗೇನೂ ಅಸಮಾಧಾನವಿರಲಿಲ್ಲ. ನನ್ನ ಮನಸ್ಸನ್ನರಿತು ಕೆಲಸ ಮಾಡ್ತಾಳೆ, ಸದಾ ಸೊಂಟಕ್ಕೆ ಕರವಸ್ತ್ರವನ್ನ ಸಿಕ್ಕಿಸಿಕೊಂಡು ಕೈ ಒರೆಸಿಕೊಳ್ಳುತ್ತಿರುತ್ತಾಳೆ! ಓ, ಶೀ ಈಸ್, ವೆರಿ ಕ್ಲೀನ್! ಬೇಕಾದ್ರೆ ಇನ್ನೂ ಹತ್ತು ರೂಪಾಯಿ ಹೆಚ್ಚು ಕೋಡೋದಕ್ಕೂ ನನಗೇನು ಅಭ್ಯಂತರವಿಲ್ಲ.

ಹಾಗೂ ಹೀಗೂ ಮೇರಿ ಕೆಲಸಕ್ಕೆ ಸೇರಿ ಹದಿನೈದು ದಿನಗಳು ಸರಿದ ನಂತರ, ಒಂದು ದಿನ ಮನೆಯಲ್ಲಿ ಹುಳಿ ಸಾರಿನ ಪುಡಿಗಳು ಅಪ್ಪಟವಾಗಿಯೇ ಮುಗಿದುಹೋದವು. ಸಾಮಾನ್ಯವಾಗಿ ಆರು ತಿಂಗಳಿಗೊಮ್ಮೆ ಸಾಂಬಾರು, ರಸಂ, ಪುಡಿಗಳನ್ನು ಕಳಿಹಿಸಿಕೊಡುತ್ತಿದ್ದ ಅಮ್ಮನೂ ಸಹ ಈ ಸಲ ವಾಡಿಕೆಯಂತೆ ಕಳುಹಿಸಿರಲಿಲ್ಲ. ಬಹುಶಃ ಮರೆತಿರಬೇಕು ಇಲ್ಲ ಕೈತಪ್ಪಿ ಹೋಗಿರಬೇಕು.

ನಾವೇ ಇಲ್ಲಿ ಸಾಂಬಾರು ಪುಡಿಯನ್ನು ತಯಾರಿಸಿಕೊಂಡರಾಯ್ತು ಎಂದುಕೊಂಡ ಪ್ರೀತಿ, ಪುಡಿಯ ಬಗ್ಗೆ ತನ್ನ ಅಮ್ಮನಿಗೆ ಜ್ಞಾಪಿಸುವುದನ್ನಾಗಲಿ, ಪತ್ರ ಬರೆಯುವುದನ್ನಾಗಲಿ ಮಾಡಲಿಲ್ಲ. ಅಂದುಕೊಂಡಂತೆ ನಡೆಯೋದು ಸುಲಭವಲ್ಲವೆನ್ನುವಂತೆ 'ಖೋ' ಕೊಟ್ಟಂತೆ ಒಂದಾದ ನಂತರ ಮತ್ತೊಂದು ಕೆಲಸ ಇದ್ದೇ ಇರುತ್ತಿತ್ತು. ಇದರೊಟ್ಟಿಗೆ ಜಿನುಗುಟ್ಟುವ ಸೋನೆ ಮಳೆ ಬೇರೆ. ಒಂದು ದಿನ ರುಬ್ಬಿದ ಹುಳಿ, ಮತ್ತೊಂದು ದಿನ ಹುಳಿತೊವ್ವೆ, ಮಗದೊಂದು ದಿನ ಮೆಣಸಿನ ಸಾರು, ಮಜ್ಜಿಗೆ ಹುಳಿ ಎಂದು ವಿಧವಿಧವಾಗಿ ಮಾಡಿಕೊಂಡು ತಿಂದುದಾಯ್ತು. ಇನ್ನು ಮುಂದಿನ ಗತಿ?

ಹುಳಿ ಸಾರಿನ ಪುಡಿಗಳನ್ನು ತಯಾರಿಸುವ ವಿಧಾನವನ್ನು 'ಅಡಿಗೆ ಮಾಡಿ ನೋಡಿ' ಎಂಬ ಪಾಕಪುಸ್ತಕದಲ್ಲಿ ಕೊಟ್ಟಿರುವ ರೀತಿಯಲ್ಲಿ ಪ್ರತಿಯೊಂದು ಸಾಮಾನನ್ನು ತರಿಸಿ, ಅವುಗಳನ್ನು ಹುರಿದು ಡಬ್ಬಿಗಳಲ್ಲಿ ತುಂಬಿ, ಮೇರಿಯೊಡನೆ ಪುಡಿ ಮಾಡಿಸಿಕೊಂಡು ಬರೋಣವೆಂದು ಪ್ರೀತಿ ಕಾರಿನಲ್ಲಿ ಹೊರಟಳು.

"ಪುಡಿ ಮಾಡಿಕೊಡೋ ಮೆಷಿನ್ ಎಲ್ಲಿದೆ ಗೊತ್ತಿದೆಯೇ ಮೇರಿ?"

ನಮ್ಮನೆ ಹತ್ತಿರಾನೇ ಒಂದಿದೆಯಮ್ಮಾ... ಕೊಡಿ ನಾನೇ ಪುಡಿ ಮಾಡಿಸಿಕೊಂಡು ಬಂದುಬಿಡ್ತೀನಿ.

"ನೋ.... ನೋ... ನಾನು ಜೊತೇನಲ್ಲೇ ಬರ್ತೀನಿ... ಎದುರೇ ನಿಂತು, ಶುದ್ಧವಾಗಿ ಪುಡಿ ಮಾಡಿಸಿಕೊಳ್ಳಬೇಕು!"

ಮೇರಿ ದಾರಿ ತೋರಿಸಲು, ಆವಳು ಅಲ್ಲಿಗೇ ಕಾರು ಬಿಡಲು ಡ್ರೈವರಿನಿಗೆ ತಿಳಿಸಿದಳು. ಕಡಿದಾದ ಸಂದು ಗೊಂದುಗಳಲ್ಲಿ ತಿರುವಿಕೊಂಡು ಮುಂದಿನ ತಿರುವಿನಲ್ಲಿ ಕಾರು ನಿಂತಿತು.

ಪುಡಿ ಮಾಡುವ ಮೆಷಿನ್ ಇದ್ದ ಕಟ್ಟಡವು ಬಹಳ ಹಳೆಯದಾಗಿ ಜೀರ್ಣವಾಗಿತ್ತು. ಹಿಂದೆಂದೋ ಸುಣ್ಣ ಬಣ್ಣ ಕಂಡಿದ್ದ ಕಟ್ಟಡದಲ್ಲಿ, ಅಲ್ಲಲ್ಲಿ ಕೆಂಪು ಇಟ್ಟಿಗೆ ತುಂಡುಗಳು ಎದ್ದು ಕಾಣುತ್ತಿದ್ದವು.

ಇದೇನಾ? ಕ್ಲೀನಾಗೇ ಇಲ್ಲವಲ್ಲ ಮೇರಿ! ಬೇರೆ ಕಡೆ ಹೋಗೋಣವೇ?....

ಒಳಗಡೆ, ಚೆನ್ನಾಗಿದೆಯಮ್ಮಾ... ನನಗಿನ್ನು ಬೇರೆ ಯಾವುದೂ ಗೊತ್ತಿಲ್ಲ...

ಮುಖವನ್ನು ಸಿಂಡರಿಸಿಕೊಂಡೇ ಪ್ರೀತಿ ಕೆಳಗಿಳಿಯಲು ಅನುವಾದಳು. ಹಿಂದಿನ ದಿನವಷ್ಟೆ ಹೊಯ್ದಿದ್ದ ಮಳೆಯಿಂದಾಗಿ ಮಣ್ಣಿನ ರಸ್ತೆ ಕೊಚಕೊಚಾಗಿತ್ತು. ವಠಾರದ ಸಾಲು ಮನೆಗಳ ಮುಂದೆ ಕೋಡಿಯಾಗಿ ಹರಿವ ಮಳೆ ನೀರಿನಲ್ಲಿ, ಸಿಂಬಳ ಸುರಿಸಿಕೊಂಡೇ ಬೆತ್ತಲೆ ಮಕ್ಕಳು ಕಾಗದದ ದೋಣಿಗಳನ್ನು ತೇಲಿಬಿಟ್ಟು ಆಟವಾಡುತ್ತಿದ್ದರು.

ನೀವು ಇಲ್ಲೇ ಇರಿ ಅಮ್ಮ... ನಾನು ಒಳಗಡೆ ಹೋಗಿ ಮೆಷಿನ್ ನಡೀತಿದೆಯೋ ಇಲ್ಲವೋ ಅನ್ನೋದನ್ನು ವಿಚಾರಿಸಿಕೊಂಡು ಬಂದು ಬಿಡ್ತೀನಿ... ಮೇರಿ ಕೆಳಗಿಳಿದು ಹೋದವಳು ಪುನಃ ಎರಡೇ ನಿಮಿಷಕ್ಕೆ ಹಿಂದಿರುಗಿ ಬಂದುಬಿಟ್ಟಳು.

ಕರೆಂಟ್ ಇಲ್ಲವಂತಲ್ಲಮ್ಮ... ನೀವು ಮನೆಗೆ ಹೋಗಿರಿ, ನಾನಿಲ್ಲೇ ಉಳಿದು ಕರೆಂಟ್ ಬಂದ ಮೇಲೆ ಪುಡಿ ಮಾಡಿಸಿಕೊಂಡು ಬಂದುಬಿಡ್ತೀನಿ...

ಓ, ಗಾಡ್... ವ್ಹಾಟ್ ಎ ನ್ಯೂಸೆನ್ಸ್! ಕರೆಂಟ್ ಯಾವಾಗ ಬರುತ್ತಂತೆ?

ತಡವಾಗಬಹುದು ಅಂತಿದ್ದಾರೆ....

ಪ್ರೀತಿ ಯೋಚಿಸಿದಳು. ತನ್ನ ಕೈ ಗಡಿಯಾರವನ್ನು ನೋಡಿಕೊಂಡಳು. ...... ಹನ್ನೊಂದು, ಹನ್ನೆರಡರ ಸುಮಾರಿಗೆ ಉಮಾ ಬರುವುದಾಗಿ ಈ ಮೊದಲೇ ತಿಳಿಸಿದ್ದಳು.

ನೀನು ಏನು ಹೇಳ್ತೀಯಾ ಮೇರಿ?

ನೀವು ಹೋಗಿ ಅಮ್ಮ.... ನಾನೆಲ್ಲ ನೋಡ್ಕೋತೀನಿ... ಮೇರಿಯ ಮೇಲೆ ಏರ್ಪಟ್ಟಿದ್ದ ಅತೀವ ನಂಬಿಕೆಯಿಂದಾಗಿ, ಡಬ್ಬಿಗಳನ್ನೆಲ್ಲ ಅವಳ ಕೈಗಿತ್ತು ಅವರೊಟ್ಟಿಗೆ ಒಂದು ತುಂಡು ಬಟ್ಟೆಯನ್ನು ಕೈಗಿಟ್ಟಳು. ಪುಡಿ ಮಾಡಿಸೋ ಮೊದಲು, ಮೆಷಿನ್ನನ್ನು ಈ ಬಟ್ಟೆಯಿಂದ ಒಂದು ಸಲ ಚೆನ್ನಾಗಿ ಒರೆಸಿ ಬಿಡು ಅಂತ ಹೇಳು.... ಯಾರು ಯಾರು ಮುಟ್ಟಿರ್ತಾರೋ! ಏನೋ!

ಸರಿಯಮ್ಮ.

ಪುಡಿ ಮಾಡಿಸಿದ ಮೇಲೆ, ಕೈ ತಾಗದಂತೆ ಡಬ್ಬಿಗಳಲ್ಲಿ ತುಂಬಿಟ್ಟುಕೋ... ಪುಡಿಯನ್ನು ಹರ ಆರ್ಸೋದೇನು ಬೇಕಿಲ್ಲ ತಕ್ಷಣ ಮನೆಗೆ ಬಂದುಬಿಡು.

ಸರಿಯಮ್ಮ

ಸರಿ ಹಾಗಾದ್ರೆ, ನಾನಿನ್ನು ಬರ್ತೀನಿ... ಎಚ್ಚರಿಕೆಯಿಂದ ಪುಡಿ ಮಾಡಿಸಿಕೊಂಡು ಬಂದುಬಿಡು!

“ಸರಿಯಮ್ಮ, ನೀವು ಯೋಚ್ನೆ ಮಾಡದೆ ಹೊರಡಿ... ನಾನು ಎಲ್ಲಾ ನೋಡಿಕೊಳ್ತೀನಿ! ನಿಮ್ಮ ಅಚ್ಚುಕಟ್ಟುತನದ ಬಗ್ಗೆ ನನಗೇನು ಗೊತ್ತಿಲ್ವೇ?”

ನಂಬಿಕೆಯನ್ನು ಧೃಡ ಪಡಿಸುವಂತೆ ಮತ್ತೊಮ್ಮೆ ಮೇರಿ ಮುಗುಳ್ನಕ್ಕಾಗ, ಪ್ರೀತಿ ಹೊರಟು ಬಂದಳು.

ಕಾರ್ ಆ ಕಡೆ ಹೊರಡುತ್ತಲೂ ಮೇರಿ ಡಬ್ಬಿಗಳನ್ನು ಹೊತ್ತುಕೊಂಡು ಮೆಷಿನ್ ಕಟ್ಟಡಕ್ಕೆ ಬಂದಳು. ಅದೇನದು ಮೇರಿ... ಮೆಷಿನ್ನನ್ನು ನಿಲ್ಲಿಸಲು ಹೇಳಿ, ಅದೆಲ್ಲಿಗೆ ಹೊರಟುಹೋಗಿದ್ದಿ? ಜನ ಕಾದಿದ್ದಾರೆ... ಪುನಃ ಮೆಷಿನ್ ಪ್ರಾರಂಭಿಸೋಣವೇ?

ತಲೆಗೆ ಮುಂಡಾಸು ಬಿಗಿದಿದ್ದ ವ್ಯಕ್ತಿ ಓರ್ವ ಮೇರಿಯನ್ನು ಪ್ರಶ್ನಿಸಲು, ಅವಳು ದೊಪ್ಪೆಂದು ಡಬ್ಬಿಗಳನ್ನು ಕೆಳಗಿಟ್ಟು, ನೆಲದ ಮೇಲೆ ಕುಳಿತುಕೊಂಡಳು.

“ಓಡಿಸಣ್ಣಾ... ನೀನು ಮೆಷಿನ್ನನ್ನು ನಿಲ್ಲಿಸಿದ್ದೇ ಒಳ್ಳೇದಾಯ್ತು. ಸಧ್ಯ ಆಯಮ್ಮ ಒಳಗಡೆ ಕಾಲಿಡದ

ಹಾಗೇ ಹೊರಟುಹೋದಳು! ಇಲ್ಲಾಂದಿದ್ದರೆ, ಇವತ್ತು ನಿನ್ನ ಸಹನೆಯ ಸತ್ವಪರೀಕ್ಷೇನೇ ನಡೆದು ಬಿಟ್ಟಿರೋದು!"

ಡೊರ್... ರಮ್... ಎಂದು ಸದ್ದು ಮಾಡುತ್ತ, ಮೆಷಿನ್‌ಗಳು ಪುನಃ ಓಡಲಾರಂಭಿಸಿದವು. ಕೈಯೊಳಗೆ ಬುಟ್ಟಿ ಹಿಡಿದು ನಿಂತಿದ್ದ, ಒಬ್ಬಾಕೆ 'ಮೊದಲು ನಾನು ಮೆಣಸಿನಕಾಯಿಯನ್ನ ಪುಡಿ ಮಾಡಿಸಿಕೊಂಡು ಬಿಡ್ತೀನಿ' ಎನ್ನುತ್ತ ಮೆಷಿನ್ನಿನ ಬಳಿ ನಡೆದುಬಂದಳು.

ಸ್ವಲ್ಪ ಹೊತ್ತಿನ ಮೊದಲಷ್ಟೆ ಅರಿಶಿನ ಬೇರು, ಮೆಣಸಿನಕಾಯಿನ್ನು ಪುಡಿ ಮಾಡಿಸಿಕೊಂಡಿದ್ದ ಮತ್ತೊಬ್ಬಾಕೆ ಮೆಷಿನ್ ಪಕ್ಕದಲ್ಲೇ ಓಣೆಯಂತಿದ್ದ ಸ್ಥಳದಲ್ಲಿ, ಪುಡಿ ಮಾಡಿಸಿದ್ದನ್ನು ಸುರುವಿ, ತಗಡಿನ ತಟ್ಟೆಯಿಂದ ಅದನ್ನು ತಣಿಸಲಾರಂಭಿಸಿದಳು. ಆಕೆಯ ಪಕ್ಕದಲ್ಲೇ ಅವಳ ಹತ್ತು ತಿಂಗಳ ಮಗು, ಅಂಬೆಗಾಲಿಕ್ಕುತ್ತ ಸರಿದಾಡಿಕೊಂಡಿತ್ತು.

ಏಯ್.... ಘಾಟು... ದೂರ ನಡಿ... ಎಂದು ಆಕೆ ಮಗುವನ್ನು ಗದರಿದಳು. ನಂತರ ಮೇರಿಯನ್ನುದ್ದೇಶಿಸಿ ಇದೇನಿದು, ಮೇರಿಯಕ್ಕ ಇಷ್ಟೊಂದು ಅಪರೂಪವಾಗಿ, ಈ ಹೊತ್ತಿನಲ್ಲಿ ಮೆಷಿನ್‌ಗೆ ಬಂದು ಕುಳಿತುಕೊಂಡಿದೀಯಾ? ಎಂದು ಅವಳ ಕುಶಲ ವಿಚಾರಿಸಿದಳು.

ಹುಂ... ಎಂದು ಲೊಚಗುಟ್ಟಿದ ಮೇರಿ ಬೇರಿನ್ನೇನನ್ನೂ ಮಾತನಾಡಲಿಲ್ಲ.

ಪುಡಿ ಹತ್ತಿದ ಕೈಗಳಿಂದಲೇ, ಸುರುವಿದ್ದ ಪುಡಿಯನ್ನು ಅವಳು ಡಬ್ಬಿಗಳಿಗೆ ತುಂಬುತ್ತಿರುವಂತೆಯೇ, ಅವಳ ಮಗು ಸೊರ್ ಅಂತ ಉಚ್ಚೆ ಹೊಯ್ಯುವುದಕ್ಕೂ ಸರಿಯಾಗಿತ್ತು. ಕೋಡಿಯಾಗಿ ಹರಿದ ನೀರು ಅಲ್ಲಿ ಇಲ್ಲಿ ಹರಿದು, ರಂಗವಲ್ಲಿಯ ಚಿತ್ತಾರವನ್ನೇ ಬಿಡಿಸಿತ್ತು.

ಅಷ್ಟು ಹೊತ್ತಿಗಾಗಲೇ ಮೆಣಸಿನ ಕಾಯಿಯನ್ನು ಪುಡಿ ಮಾಡಿಸಿಕೊಂಡಾಕೆ, ಅದನ್ನು ಆರಹಾಕಲೆಂದು ಅತ್ತ ಕಡೆಯೇ ಬಂದಳು.

ಅಯ್ಯೋ! ಇದೇನಿದು, ಇಲ್ಲೇ ಉಚ್ಚೆ ಹೊಯ್ದಿದ್ದೀಯಲ್ಲೋ. ನಾನಿದನ್ನ ಎಲ್ಲಿ ಸುರುವಿ ಆರಹಾಕಲಿ? ಎಂದು ಅಲವತ್ತುಕೊಂಡಳು.

ಡಬ್ಬಿಗಳನ್ನೆತ್ತಿಕೊಂಡು ಮೇಲೆದ್ದ ಮೇರಿ, ಆಕೆಯ ಸಂಕಟ ಅರ್ಥವಾದವಳಂತೆ, ಮೆಷಿನನ್ನು ಒರೆಸಲು ಪ್ರೀತಿ ಕೊಟ್ಟಿದ್ದ ಬಟ್ಟೆ ತುಂಡನ್ನು ಅವಳೆಡೆಗೆ ತೂರಿ, 'ಇದರಿಂದ, ಒರೆಸು, ತೊಗೋ' ಎಂದಳು.

ನೆಲವನ್ನು ಆ ಬಟ್ಟೆಯಿಂದ ಶುದ್ಧವಾಗಿ ಒರೆಸಿ, ನೆಲದ ತೇವ ಆರಿದೊಡನೆ, ಪುಡಿ ಮಾಡಲ್ಪಟ್ಟಿದ್ದ ಮೆಣಸಿನ ಪುಡಿಯನ್ನು ತಣಿಸಲು ಆರಹಾಕಿದಳು.

ಮೆಷಿನ್ನು ಸಶಬ್ದವಾಗಿ ಓಡುತ್ತಿತ್ತು. ಆ ಶಬ್ದವನ್ನು ಮೀರಿ, ಮುಂಡಾಸಿನವನು ಮೇರಿಯೊಡನೆ ಮಾತಿಗಾರಂಭಿಸಿದ.

ದಾಸ್‌ಗೆ ನೌಕರಿ ಸಿಕ್ಕಿತೇ ಮೇರಿ? ಆಸಾಮಿ ಪತ್ತೆನೇ ಇಲ್ಲ! ಕೆಲಸ ಹುಡುಕಿಕೊಂಡು ತುಂಬಾ ಅಲೆದಾಡ್ತಿದಾನೋ ಹೇಗೆ?

ಅವನು ಅಲೆಯದ, ಏರದ ಸ್ಥಳವೇ ಇಲ್ಲ. ಕೆಲಸ ಎಲ್ಲಿ ಸಿಗುತ್ತೆ ಹೇಳು? ಮೇರಿ ಬೇಸರಗೊಂಡು ಉತ್ತರಿಸಿದಳು.

ಪಕ್ಕದಲ್ಲೇ ಯಾರೋ ಸೀಗೇಕಾಯಿಪುಡಿ ಚೀಲವನ್ನು ಒದರಿದರು. ಅದರ ಘಾಟಿಗೆ ಮುಂಡಾಸಿನವನು, ಲೊಚ್... ಲೊಚ್ ಎಂದು ನಾಲ್ಕು ಬಾರಿ ಸೀನಿದ. ಮೂಗಿನಿಂದ ಸುರಿದ ಸಿಂಬಳವನ್ನ ಎಡಗೈಯಿಂದ ಸೇದಿ, ದೂರ ಝಾಡಿಸಿ, ತನ್ನ ಬೆರಳುಗಳನ್ನು ಮೆಷಿನ್ನಿನ ಅಂಚಿಗೇ ತೀಡಿ ಒರೆಸಿಕೊಂಡ.

ಅಂದ ಹಾಗೆ ನಿನ್ನ ಹೊಸ ಮನೆ ಕೆಲಸ ಹೇಗೆ ಸಾಗಿದೆ? ಸಲೀಸಾಗಿದೆ ತಾನೇ!

ಅಯ್ಯೋ, ಅದೇನು ಸಲೀಸೋ ಏನೋ? ಕೆಲಸದವರನ್ನು ಒಂದು ನಿಮಿಷ ಸುಮ್ಮನೆ ಕುಳಿತುಕೊಳ್ಳೋದಕ್ಕೆ ಬಿಡೋದಿಲ್ಲ! ನಮ್ಮ ಜಮಾನರಿಗೆ ಒಂದು ಕಡೆ ಕೆಲಸ ಅಂತ ಸಿಕ್ಕಿಬಿಟ್ಟರೆ, ನಾನು ಅತ್ತಕಡೆ ತಲೆ ಹಾಕಿ ಮಲಗೋದಿಲ್ಲ... ಅಯಮ್ಮ ಒಳ್ಳೇ ಸರಿಯಾದ ಕೇಸ್!

ಮೆಣಸಿನಕಾಯಿ ಹಾಗೂ ಇತರ ಸಾಮಾನುಗಳನ್ನು ಪುಡಿ ಮಾಡಿಸಿಕೊಂಡ ನಂತರ ಅವುಗಳನ್ನೆತ್ತಿಕೊಂಡು ಬಂದು, ಈ ಮೊದಲೇ ಸ್ವಲ್ಪ ಸ್ವಚ್ಛಗೊಳಿಸಲ್ಪಟ್ಟ ಸ್ಥಳದಲ್ಲಿ ತಣಿಯಲು ಸುರುವಿದಳು. ನಂತರ ಹೊರಬಂದು, ಆಟವಾಡಿಕೊಂಡಿದ್ದ ಮಕ್ಕಳ ಪೈಕಿ ಒಬ್ಬ ಹುಡುಗನನ್ನು ಕೂಗಿ ಕರೆದಳು.

ಲೋ ರಾಜು, ಬಾಪ್ಪಾ ಇಲ್ಲಿ... ಒಂದು ಪೊಟ್ಟಣ ಕೊಡ್ತೀನಿ, ಅದನ್ನು ತೆಗೆದುಕೊಂಡು ಹೋಗಿ ನಮ್ಮ ಜಮಾನರ ಕೈಗೆ ಕೊಟ್ಟುಬಿಡ್ತೀಯಾ... ತೊಗೋ ಹತ್ತು ಪೈಸೆ, ಕಡ್ಡಿ ಐಸ್ ತಿನ್ನುವಿಯಂತೆ.

ರಾಜು ಹತ್ತುಪೈಸೆಯ ಆಮಿಷಕ್ಕೆ ಬಲಿಯಾಗಿ, ಒಡನೇ ಓಡಿ ಬಂದ.

ಹಳೇ ಪೇಪರೊಂದನ್ನು ತೆಗೆದುಕೊಂಡು, ಪುಡಿ ಮಾಡಿ ಮಾಡಿಸಲ್ಪಟ್ಟಿದ್ದ ಮೆಣಸಿನಕಾಯಲ್ಲಿ ಕಾಲು ಭಾಗದಷ್ಟು ಪುಡಿಯನ್ನು ತೆಗೆದು, ಪೇಪರಲ್ಲಿ ಕಟ್ಟಿ ರಾಜುವಿನ ಕೈಗಿತ್ತಳು. ಅದರೊಡನೆ ಹತ್ತು ಪೈಸೆಯನ್ನು ಅವನ ಕೈಗಿತ್ತಳು ಮೇರಿ.

ಹುಡುಗ, ಪೈಸೆ ಹಾಗೂ ಪೊಟ್ಟಣದೊಡನೆ ಓಡಿದ. ಮೇರಿ ಬಾಕಿ ಉಳಿದಿದ್ದ ಪುಡಿಯನ್ನು, ಡಬ್ಬಿಗಳಿಗೆತ್ತಿ ತುಂಬಿಕೊಳ್ಳುತ್ತಿರುವಾಗ, ಅವಳಿಂದ ಕೂಲಿ ಹಣವನ್ನು ವಸೂಲಿ ಮಾಡಿಕೊಳ್ಳಲು ಮುಂಡಾಸಿನವನು ಅವಳ ಬಳಿ ಸರಿದು ಬಂದ. ಅವಳಿಗೆ ನೆರವಾಗಲೆಂದು ಅರಿಶಿನ ಹಾಗೂ ಇತರ ಪುಡಿಗಳನ್ನು ಡಬ್ಬಿಯಲ್ಲಿ ತುಂಬಲು ಅವನು ಮುಂದಾದ. ಅದಾದ ಮೇಲೆ ಅವನು ಕೇಳಿದ ಹಣವನ್ನು ಕೊಟ್ಟು ಮೇರಿ ಹೊರಟಳು.

ಎರಡು ಹೆಜ್ಜೆ ಮುಂದಿಟ್ಟವಳು ಹಿಂದಿರುಗಿ ಬಂದು ಮಗುವಿನ ಮೂತ್ರವನ್ನು ಒರೆಸಿದ ಬಟ್ಟೆಯನ್ನು ಎತ್ತಿಕೊಂಡು, ಡಬ್ಬಿಗಳನ್ನೆಲ್ಲ ತೀಡಿ ಒರೆಸಿದಳು. ನಂತರ ಬಟ್ಟೆ, ಡಬ್ಬಿಗಳನ್ನು ಹೊತ್ತು ಹೊರನಡೆದಳು.

ಮೇರಿ ಮನೆ ತಲುಪುವಷ್ಟರಲ್ಲಿ ಅತಿಥಿಗಳು ಬಂದುಬಿಟ್ಟಿದ್ದರು. ನಳನಳಿಸುವ ತನ್ನ ಮನೆಯನ್ನು ಜಂಭದಿಂದ ಅವರಿಗೆಲ್ಲ ತೋರಿಸಿದಳು ಪ್ರೀತಿ. ಮನೆಯನ್ನು ತೋರಿಸುತ್ತ, ಅತಿಥಿಗಳನ್ನು ಅವಳು ತನ್ನ ಕಿಚೆನ್‌ಗೂ ಕರೆತಂದಳು.

ಮಿಷನ್ನಿನಿಂದ ಪುಡಿ ಮಾಡಿಸಿಕೊಂಡು ತಂದದ್ದನ್ನು ಗಾಜಿನ ಬಾಟಲಿಗಳಿಗೆ ಚಮಚದಿಂದ ತುಂಬಿಡುತ್ತಿದ್ದಳು ಮೇರಿ.

ಶುದ್ಧವಾಗಿ ಪುಡಿ ಮಾಡಿಸಿದಿ ತಾನೇ ಮೇರಿ?

ಹೌದಮ್ಮ.

ಮೊದಲು ಮೆಷಿನ್ನನ್ನು ಒರೆಸಲು ಹೇಳಬೇಕಿತ್ತು!

ಹೇಳಿದೆನಮ್ಮ. ಇಲ್ಲಿ ನೋಡಿ, ಬಟ್ಟೇನಲ್ಲಿರೋ ಕೊಳೆ ಎಂದು ಮೂತ್ರವನ್ನು ಒರೆಸಿದ ಬಟ್ಟೆಯನ್ನು ಎತ್ತಿ ತೋರಿಸಿದಳು ಮೇರಿ.

ಗುಡ್. ಕೈ ತಾಗಿಸದೆ, ಪುಡಿಗಳನ್ನೆಲ್ಲ ಡಬ್ಬಿಗೆ ತುಂಬಿಕೊಂಡು ಬಂದೆ ತಾನೇ?

ಹೌದಮ್ಮ...

ನೋಡಿದಿರಾ ನಮ್ಮ ಮನೆ ಅಚ್ಚುಕಟ್ಟನ್ನು! ಎನ್ನುವಂತೆ ತಿರುಚಿಯಿಂದ ಬಂದ ಅತಿಥಿಗಳ ಕಡೆಗೊಮ್ಮೆ ದೃಷ್ಟಿ ಬೀರಿದಳು ಪ್ರೀತಿ.

ಒಂದು ಆಪರೇಷನ್ ಥಿಯೇಟರ್ ತರಹ ಇದೆ ನಿಮ್ಮ ಕಿಚನ್... ಎಷ್ಟೊಂದು ಅಚ್ಚುಕಟ್ಟು! ಏನು ಸ್ವಚ್ಛತೆ! ಯುವರ್ ಸರ್ವೆಂಟ್ ಈಸ್ ವೆರಿ ಕ್ಲೀನ್!

ಸ್ನೇಹಿತೆಯ ಹೊಗಳಿಕೆಗೆ ಉಬ್ಬಿಹೋದಳು ಪ್ರೀತಿ. ಅಮೇರಿಕೆಯ ಅಚ್ಚುಕಟ್ಟುತನವನ್ನು ಇಲ್ಲಿ ಮಾತ್ರ ಅಪೇಕ್ಷಿಸಬೇಡಿ ಅಂತ ಎಲ್ಲರೂ ಹೇಳ್ತಾರೆ... ಬಟ್ ದೇನ್ ಲುಕ್ ಎಟ್ ಮೈ ಹೌಸ್! ಮನಸ್ಸು ಮಾಡಿದರೆ ಏನನ್ನು ತಾನೇ ಸಾಧಿಸೋದಕ್ಕಾಗೋದಿಲ್ಲ, ಹುಂ? ನಾವು ತಾಳ್ಮೆಯಿಂದ ಹೇಳಿಕೊಟ್ಟರೆ, ಅದನ್ಯಾಕೆ ಕೆಲಸದವರು ಕಲಿಯೋದಿಲ್ಲ ಅಂತಾರೆ? ಭುಜ ಕುಣಿಸುತ್ತ ಗರ್ವದಿಂದ ಯಜಮಾನಿ ಮಾತನಾಡುತ್ತಿರುವುದನ್ನು ಆಲಿಸಿದಾಗ, ತುಟಿ ಮೀರಿ ಬಂದ ನಗುವನ್ನು ಹೊರಗೆಡಹದಂತೆ ತಡೆಯಲು ಬೇರೆಡೆಗೆ ತನ್ನ ಮುಖವನ್ನು ತಿರುಗಿಸಿಕೊಂಡಳು ಮೇರಿ.

---

* ಗೀತಾ ವಿಜಯಕುಮಾರ್, ನಂ. ೬೭೨, 'ಸೌರಭ', ೧೭ನೇ ತಿರುವು, ಜೆ. ಪಿ. ನಗರ ೬ನೇ ಹಂತ, ಬೆಂಗಳೂರು - ೫೬೦ ೦೭೮.

ಸ್ಪ್ಯಾನಿಷ್ ಕವಿ ಫೆಡಿರಿಕೊ ಗಾರ್ಸಿಯ ಲೋರ್ಕ

ಅನು : ಕೆ. ಎಸ್. ವಿಜಯಲಕ್ಷ್ಮಿ

ಫೆಡಿರಿಕೊ ಗಾರ್ಸಿಯ ಲೋರ್ಕ ೧೮೯೮-೧೯೩೬ ಸ್ಪ್ಯಾನಿಷ್ ಜನಪದ ಕವಿ ಹಾಗೂ ಪ್ರಸಿದ್ಧ ನಾಟಕಕಾರ. ಈತ ಸ್ಪೈನಿನ ಅಂಡಲೂಸಿಯ ಎಂಬ ಸ್ಥಳದಲ್ಲಿ ಹುಟ್ಟಿದ. ಪಿಕಾಸೋ ಹುಟ್ಟಿದ್ದು ಇಲ್ಲಿಯೇ. ಸ್ಪೈನಿನಲ್ಲಿ ನಡೆಯುತ್ತಿದ್ದ ಅಂತರ್‌ಯುದ್ಧದ ಸಂದರ್ಭದಲ್ಲಿ ಈತ ತನ್ನ ಕೃತಿಗಳನ್ನು ರಚಿಸಿದ್ದು. ಈತ ತನ್ನ ವಿದ್ಯಾಭ್ಯಾಸವನ್ನು ಗ್ರನಾಡ ವಿಶ್ವವಿದ್ಯಾಲಯದಲ್ಲಿ ಮುಗಿಸಿದ. ತತ್ವ ಶಾಸ್ತ್ರದಲ್ಲಿ ವಿದ್ವಾಂಸನಾದ ಈತ ಸಂಗೀತ ಪ್ರೇಮಿ. ಡಿಫಾಲ ಎಂಬ ಶ್ರೇಷ್ಠ ಸಂಗೀತ ತಜ್ಞನ ಬಳಿ ಸಂಗೀತ ಕಲಿತು ಪಿಯಾನೋ ನುಡಿಸುವಲ್ಲಿ ನಿಷ್ಣಾತನಾದ. ಚಿತ್ರ ಕಲೆಯಲ್ಲಿ ವಿಶೇಷ ಆಸಕ್ತಿ ಹೊಂದಿದ ಲೋರ್ಕ ಸಾಲ್‌ವೆದಾರ್ ಡಾಲಿ ಎಂಬ ಮಹಾನ್ ಚಿತ್ರಕಲಾಕಾರನ ಶಿಷ್ಯ ಹಾಗೂ ಆಪ್ತ ಸ್ನೇಹಿತ. ಇವನ ತಂದೆ ರಿಡ್ರಿಗಸ್ ಒಬ್ಬ ರೈತ, ತಾಯಿ ಸ್ಕೂಲಿನ ಅಧ್ಯಾಪಕಿ. ಆಕೆಯ ಹೆಸರು ವಿಸೆಂಟಾ ಲೋರ್ಕ ರೊಮೆರೋ ಎಂದು. ನೋಡಲು ಒರಟನಾಗಿ ಹಳ್ಳಿ ರೈತನಂತೆ ಕಾಣುತ್ತಿದ್ದ ಲೋರ್ಕ ನೆರೂಡನ ಅಚ್ಚುಮೆಚ್ಚಿನ ಗೆಳೆಯನಾಗಿದ್ದ. ಆತ ಹಳ್ಳಿ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರೆ ಅವನ ತೇಜಃಪುಂಜ ಕಣ್ಣುಗಳು ಆಗಾಗ ಜನರನ್ನು ಬೇರೆ ಲೋಕಕ್ಕೆ ಕೊಂಡೊಯ್ಯುತಿತ್ತು ಎಂದು ಆತ ಹೇಳುತ್ತಾನೆ. ತಾಯಿ ನಾಡಿನ ಬಗ್ಗೆ ಅಪಾರ ಪ್ರೇಮವುಳ್ಳ ಲೋರ್ಕ ಗ್ರನಾಡ ಸ್ವರ್ಗದ ತೋಟ, ಪ್ರಕೃತಿ ಸೌಂದರ್ಯದ ಬೀಡು ರಂಗುರಂಗಾದ ಪ್ರಪಂಚ, ಹಸಿರು ಸಸ್ಯ ಕೆಂಪು ಹಣ್ಣು ನೀಲಿ ಪರ್ವತ ಶ್ರೇಣಿ ಹೀಗೆ ವಿಶೇಷ ಬಣ್ಣಗಳಿಂದಲೇ ತನ್ನ ನಾಡನ್ನು ಸ್ತುತಿಸುತ್ತಾನೆ. ಇಂಥ ಸುಂದರ ಪ್ರಕೃತಿ ತಾಣದಲ್ಲೂ ಸಾವು ದುರಂತಗಳು ಕವಿಯ ಬೆನ್ನಟ್ಟಿದವು. ಈತ ನ್ಯೂಯಾರ್ಕಿಗೆ ಪ್ರಯಾಣ ಬೆಳಸಿದ. ೧೯೪೦ರಲ್ಲಿ ದಿ ಪೊಯಟ್ ಇನ್ ನ್ಯೂಯಾರ್ಕ್ ಎಂಬ ಕವನ ಸಂಕಲನವನ್ನು ಆತ ಪ್ರಕಟಿಸಿದ. ಜೀವನದ ನಿರರ್ಥಕತೆ, ಸಾವು, ಮನುಷ್ಯ-ಪಶುಗಳ ಬಲಿ ಇವೆಲ್ಲಾ ಇಲ್ಲಿ ಪ್ರತಿಮೆಗಳಾಗಿ ಬಂದಿವೆ. ಪ್ರಕೃತಿ ವರ್ಣನೆಯಲ್ಲಿ ಹಿಂಸೆಯ ಚಿತ್ರಗಳು ಕಿಕ್ಕಿರಿದಿವೆ. ಇದೊಂದು ಜಾಗ್ರತ ಕ್ರೂರ ನಗರ. ಇಂಥ ಕಾಂಕ್ರೀಟ್ರ ಕಾಡಿನಲ್ಲಿ ಕವಿ ಕಳೆದುಹೋಗುತ್ತಾನೆ. 'ಕಣ್ಣುಗಳು' ಸದಾ ಹುದುಕಾಟಕ್ಕೆ ಸಂಕೇತವಾಗಿ ಬರುತ್ತವೆ. 'Hallow man' ಎಂಬ ಪದ್ಯದಲ್ಲಿ ಇಂಥ ನೋವಿನಿಂದ ಕೂಡಿದ ಕಣ್ಣುಗಳ ಚಿತ್ರಣವಿದೆ.

ಆ ಕಣ್ಣುಗಳು ನೀನು ಕನಸಲ್ಲೂ ನೋಡಬಯಸಿಲ್ಲ
ಸಾವಿನ ನಾಡಲ್ಲೂ ಕಾಣಲಿಲ್ಲ
ಒಬ್ಬನನ್ನು ಮಣ್ಣು ಮಾಡಿದ್ದು ಅವನ ಕಣ್ಣುಗಳು
ಬೆಳಗಿನ ಬಜಾರುಗಳಲ್ಲಿ ನಸುಕಿನ ಮುಲುಕಿನಲ್ಲಿ
ಹೃದಯವಾಳದಲ್ಲೂ ಅದರ ಛಾಯೆ, ಕುದುರೆ ಕೆನೆದ ಸದ್ದು....

ಕವಿ ಲೋರ್ಕ ವಾಲ್ಟ್‌ವಿಟ್‌ಮನ್‌ನನ್ನು ಆರಾಧಿಸುತ್ತಿದ್ದ. 'Ode to walt whitman' ಎಂಬ ಕವಿತೆಯನ್ನು ಆತನ ಬಗ್ಗೆ ಬರೆದಿದ್ದಾನೆ. ಟಿ.ಎಸ್. ಎಲಿಯಟ್ ಕವಿಯ 'waste land'ಹೋಲುವ ಒಂದು ಪದ್ಯ 'The king Harlem' ಎಂಬುದು 'Waste land'ನಂತೆ. ಇಲ್ಲಿನ ನಗರವೂ ಬಂಜರಾಗಿ ದಿವಾಳಿತನ, ಮೋಸಕ್ಕೆ ಪ್ರಸಿದ್ಧವಾಗಿದೆ. ಈ ನ್ಯೂಯಾರ್ಕಿನಲ್ಲಿರುವ ಜನಗಳೆಲ್ಲಾ ಮುಖವಾಡ ಧರಿಸಿದವರು. 'Harlen' ದೊರೆ ಇಲ್ಲಿ ನಪುಂಸಕನಾಗಿದ್ದಾನೆ. ಅವನು ಅನೇಕ ಜನ್ಮಗಳನ್ನು ತಾಳುತ್ತಾನೆ. ೧೯೨೦ರಲ್ಲಿ ತನ್ನ ಮೊದಲನೆಯ ನಾಟಕ ಬರೆದ 'Butterfly's Evil Spell'. ಈತನ ಕೃತಿಗಳಲ್ಲಿ 'ನಾಟಕತ್ರಯ' ವೆಂದೇ ಪ್ರಸಿದ್ಧವಾಗಿ ಮೂರು ನಾಟಕಗಳು: 1) The Blood Wedding 2) The House of Bernarda Alba 3) Yerma. ಕಾವ್ಯ ಕೃತಿಗಳು: The Book of Poems (1936) - First Songs (1927) 1937ರಲ್ಲಿ The Death of a Bull Fighter and other poems ಪ್ರಕಟಿಸಿದ. ೧೯೨೮ರಲ್ಲಿ ಆತ ಬರೆದ gipsy B ಹದಿನೆಂಟು ಕವಿತೆಗಳಿರುವ ಈ ಕೃತಿ ವಿಶ್ವಮಾನ್ಯತೆಯನ್ನು ಪಡೆದುಕೊಂಡಿತು. ಈ ಜಿಪ್ಸಿಗಳ ಜೀವನ ಇತಿಹಾಸ ದ್ವಂದ್ವ ನೋವು ಹಾಡು ಪಾಡು ಎಲ್ಲವೂ ಜನಪದ ನುಡಿಕಟ್ಟಿನ ಮೂಲಕ ಅತ್ಯಂತ ಶ್ರೇಷ್ಠವಾಗಿ ರೂಪುಗೊಂಡ ಕವಿತೆಗಳು ಇವಾದವು. 'The Poet in Newyork' ೧೯೪೦ರಲ್ಲಿ ರಚಿತವಾದ ಕವನ ಸಂಕಲನ. ಇದರಲ್ಲಿ 'ನ್ಯೂಯಾರ್ಕ್' ನಗರದ ದೈತ್ಯ ಭೀಕರ ವಾತಾವರಣ, ಸಾವಿನ ದುರಂತ ಜೀವನದ ಯಾಂತ್ರಿಕತೆ ಈ ಪ್ರತಿಮೆಗಳ ಮೆರವಣಿಗೆಯೆ ಇಲ್ಲಿ ಬಂದಿವೆ.

ಒಂದು ಚಮಚದಲ್ಲಿ
ಮೊಸಳೆಯ ಕಣ್ಣು ಎಬ್ಬಿ ತೆಗೆದೆ
ಅದೇ ಚಮಚದಲ್ಲೇ
ಕೋತಿಗಳ ಹೊಡೆದಟ್ಟಿ ಗುಲ್ಲೆಬಿಸಿದೆ....

೧೯೩೧ರಲ್ಲಿ ಲೋರ್ಕ ನ್ಯೂಯಾರ್ಕ್ ನಗರದಿಂದ ಸ್ಪೈನಿಗೆ ವಾಪಸಾದ. ೧೯೩೬ರಲ್ಲಿ Divan of tamarit ಎಂಬ ಕವನ ಸಂಕಲನ ಹೊರತಂದ. ಈತನ ಉತ್ಸಾಹ ಅತಿಯಾಗಿ ಎರಡು ಸೂತ್ರದ ಗೊಂಬೆಯಾಟಕ್ಕಾಗಿ ನಾಟಕಗಳನ್ನು ರಚಿಸಿದ. ಈ ನಾಟಕಗಳು ಅತಿ ರಂಜನೆಯಿಂದಾಗಿಯೇ ಮಂಕಾದವು. ಮಧುರ ಗೀತೆಗಳಿಂದ ಕೂಡಿಯು ಸತ್ವಹೀನವಾದವು.

1) The Billy Club Puppets, 2) The play of Doncristobal - ಈ ಎರಡೂ ನಾಟಕಗಳು ಅಷ್ಟೇನೂ ಜನಮನ್ನಣೆ ಗಳಿಸದಿದ್ದರೂ ಲೋರ್ಕ ಸಂಪೂರ್ಣವಾಗಿ ರಂಗಭೂಮಿಯತ್ತಲೇ ವಾಲಿದ. ಸ್ಪೈನ್ ದೇಶದಲ್ಲಿ ಆಗ ನಾಟಕಗಳಿಗೆ ವಿಶೇಷ ಮನ್ನಣೆ ಕೊಡಲಾಯಿತು. 'ರಾಷ್ಟ್ರೀಯ ಶಿಕ್ಷಣ ಸಮಿತಿಯನ್ನು ರಚಿಸಿ ಲೋರ್ಕನಿಗೆ ಆ ನಾಟಕಗಳನ್ನು ನಿರ್ದೇಶಿಸಲು ಆದೇಶಿಸಿ ರಂಗಭೂಮಿಯಲ್ಲಿ ಪರಿಶ್ರಮ ಪಡೆದ ಶ್ರೇಷ್ಠ ವಿದ್ಯಾರ್ಥಿಗಳ ತಂಡವೊಂದನ್ನು ಆತನಿಗೆ ಕಳುಹಿಸಿ ಕೊಡಲಾಯಿತು. ಆಗ ಲೋರ್ಕ ತನ್ನ 'ನಾಟಕತ್ರಯ' ಗಳನ್ನು ಬರೆದು ಪ್ರದರ್ಶಿಸಿ ಇಡೀ ದೇಶದ ಮನ್ನಣೆ ಗಳಿಸಿದ. ಈ ನಾಟಕಗಳು ಎಲ್ಲಾ ಅನಕ್ಷರಸ್ಥರನ್ನೂ ರೈತಾಪಿ ಕೂಲಿಕುಂಬಳಿಕಾರರನ್ನು ತಲುಪಿತು. ಸಾಮಾಜಿಕ ವಸ್ತುವನ್ನು ನವೀನ ಶೈಲಿಯಲ್ಲಿ ಹೊಸ ಬಗೆಯಾಗಿ ನಿರೂಪಿಸಿದ ಲೋರ್ಕ ಜನಮನವನ್ನು ತಟ್ಟಿದ್ದ. ತನ್ನ ನಾಟಕಗಳ ಬೇರು ಗ್ರೀಕ್ ದುರಂತನಾಟಕಗಳೇ ಆಗಿವೆ ಎಂದು ಲೋರ್ಕನ ಅಭಿಪ್ರಾಯವಾಗಿತ್ತು. The Blood Wedding ನಾಟಕದಲ್ಲಿ ಒಬ್ಬ ನವವಧು ತನ್ನ ವಿವಾಹದ ದಿನವೇ ತನ್ನ ಪ್ರಿಯಕರನೊಂದಿಗೆ ಪರಾರಿಯಾಗುತ್ತಾಳೆ. ಗಂಡಿನ ಕಡೆಯವರೂ ಹೆಣ್ಣಿನ ಕಡೆಯವರೂ ಸೇರಿ ವಿವಾಹ ಮಂಟಪದಲ್ಲಿ ಹೊಡೆದಾಡಿ ರಕ್ತಪಾತನಡೆಸುತ್ತಾರೆ. ಮದುವೆ ಮನೆ ಮರಣದ ಮನೆಯಾಗುತ್ತದೆ.

ಎರಡನೆಯ ನಾಟಕ The House of Bernada Alba. ಇದರಲ್ಲಿ ಒಬ್ಬ ತಾಯಿ ತನ್ನ ನಾಲ್ಕು ಹೆಣ್ಣು ಮಕ್ಕಳನ್ನು ಶೋಷಣೆ, ದಬ್ಬಾಳಿಕೆಯಿಂದ ಬೆಳೆಸುತ್ತಾಳೆ. ಬೆಳೆದಂತೆಲ್ಲಾ ಅವರು ಜಗಳ, ದ್ವೇಷ, ಸ್ವಚ್ಛಂದ ಜೀವನಗಳನ್ನು ಶೈಲಿಯಾಗಿ ರೂಪಿಸಿಕೊಂಡು ಮನೆಯನ್ನು ನಾಶ ಮಾಡುತ್ತಾರೆ. ಮೂರನೆಯ ನಾಟಕ Yerma ೧೯೩೪ರ ಒಂದು ದುರಂತದಲ್ಲಿ ಪರ್ಯವಸಾನಗೊಳ್ಳುತ್ತದೆ. ಮಕ್ಕಳಿಲ್ಲದ ಹೆಂಗಸೊಬ್ಬಳು ತನ್ನ ನಪುಂಸಕ ಗಂಡನನ್ನು ಕೊಲ್ಲುತ್ತಾಳೆ ಹೀಗೆ ಪ್ರೇಮ, ಕಾಮ, ಸಾವು ಇಂಥ ವಸ್ತುವುಳ್ಳ ನಾಟಕಗಳು ಆ ನಾಡಿನಲ್ಲಿ ಯಶಸ್ವಿಯಾಗಿ ಪ್ರದರ್ಶಿತವಾದವು. ಇಪ್ಪತ್ತನೆಯ ಶತಮಾನದ ಜನಪದ ಶ್ರೇಷ್ಠ ನಾಟಕಕಾರನೆಂದು ಲೋರ್ಕ ಜಗತ್ತಿನಲ್ಲೇ ಖ್ಯಾತಿಯನ್ನು ಪಡೆದ.

ತನ್ನ ತಾಯ್ನಾಡಿನ ಬಗ್ಗೆ ಅಪಾರ ಪ್ರೇಮವುಳ್ಳ ಲೋರ್ಕ ಈ ನೆಲ ಈ ಜಲ ಈ ಪ್ರಕೃತಿ ಸೌಂದರ್ಯ ನನ್ನ ಉಸಿರು, ಅದೇ ನನ್ನ ಕಾವ್ಯಕ್ಕೆ ಸ್ಫೂರ್ತಿ ಎನ್ನುತ್ತಾನೆ. ಹಳ್ಳಿಗಾಡಿನ ಸಂಪ್ರದಾಯಗಳು, ಕ್ರಿಯಾವಿಧಿಗಳು, ಪರಂಪರೆ, ಸಂಸ್ಕೃತಿ ಈ ಎಲ್ಲಾ ವಸ್ತುಗಳು ಆತನ ನಾಟಕದ ಪ್ರಕಾರಗಳಲ್ಲಿ ಹಾಸುಹೊಕ್ಕಾಗಿವೆ. ಹಸಿರು, ವಿಸ್ತಾರ ಹುಲ್ಲುಗಾವಲು, ಬಿಳಿ ಮಂಜು ಮುಸುಕಿದ ಪರ್ವತ ಶ್ರೇಣಿ, ನಾದದಿಂದ ಹರಿವ ಝರಿಗಳು, ಪಬಪಬೆ, ತೋಟಗಳು, ಸೂರ್ಯ, ಚಂದ್ರ ಈ ಪ್ರಕೃತಿಯೇ ಒಂದು ಕಾವ್ಯದಂತೆ ಸ್ಫೂರ್ತಿದಾಯಕ.

ಲೋರ್ಕ ತನ್ನ ಯೌವ್ವನದ ದಿನಗಳಲ್ಲಿ ಒಂದು ಪಡ್ಡೆ ಹುಡುಗರ ದಂಡನ್ನು ಕಟ್ಟಿಕೊಂಡು ಅಲ್ಮೇಡ ಎಂಬ ಉಪಾಹಾರ ಗೃಹದಲ್ಲಿ ಅವರೊಂದಿಗೆ ಕಾವ್ಯ ನಾಟಕಗಳ ಬಗ್ಗೆ ಚರ್ಚಿಸುತ್ತಾ ಕಾಲ ಕಳೆಯುತ್ತಿದ್ದ. ಆತನ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾನ್ ಫರ್‌ನಾಡೋ ಡಿ ಲೋಸ್ ರೋಯಿಸ್ ಎಂಬುವರು ಸಮಾಜವಾದಿ ಪಕ್ಷದ ನಾಯಕರಾಗಿದ್ದರು. ಇಪ್ಪತ್ತು ವರ್ಷದ ಲೋರ್ಕನನ್ನು ಈ ಪಕ್ಷಕ್ಕೆ ಸೇರಿಸಿಕೊಂಡರು. ಈ ವರ್ಷದ ಸಭೆಗಳಲ್ಲಿ ಬುದ್ಧಿ ಜೀವಿಗಳು. ಸಂಗೀತ ವಿದ್ವಾಂಸರು, ಕವಿಗಳು ಎಲ್ಲರೂ ಭಾಗವಹಿಸುತ್ತಿದ್ದರು.

ಕ್ಲಾಡೆಲ್, ವಲರಿ, ಸೆಂಡ್ರಾಸ್, ಮಾಕ್‌ಜೇಕಬ್, ಮಾರಿನೆಟ್ಟಿ, ಮೇಡಂ ಕ್ಯೂರಿ, ಹೆಚ್. ಜಿ. ವೆಲ್ಸ್, ಪೌಲೆನ್ಸ್ ಮುಂತಾದವರ ಸ್ನೇಹ ಸಹವಾಸದಲ್ಲಿ ಲೋರ್ಕನ ಸಾಹಿತ್ಯ ವಲಯ ವಿಸ್ತಾರಗೊಂಡಿತು. ಆತನ ಅತ್ಯಂತ ಆಪ್ತ ಗೆಳೆಯರಾದ ಕಾಫಲ್ ಆಲ್‌ಬರ್ಟಿ ಪೈಂಟರ್, ಸಾಲ್‌ವಾಡರ್ ಡಾಲಿ, ಸಿನಿಮಾ ನಿರ್ದೇಶಕ ಲೂಯಿಸ್ ಬುನಿಯಲ್ ಇವರೊಂದಿಗೆ ಕಾಲಕಳೆಯುವುದೆಂದರೆ ಈತನಿಗೆ ಬಹಳ ಇಷ್ಟ. ಡಾಲಿ ಬಗ್ಗೆ ಒಂದು ಪದ್ಯ ಬರೆಯುತ್ತಾ Ode to Salvador Dali ಎಂಬ ಪದ್ಯದಲ್ಲಿ ಆತನ ಚಿತ್ರಕಲಾ ಪ್ರತಿಭೆಯನ್ನು ಹೊಗಳುತ್ತಾನೆ.

ನಮ್ಮಿಬ್ಬರದೂ ಒಂದೇ ಹಾಡು
ಅದು ಶುಭಾಶುಭಗಳು ಸಂಧಿಸುವ ಗಳಿಗೆ
ನಮ್ಮ ಕಣ್ಣು ಕೋರೈಸುವ ಬೆಳಕು ಬೆಳಕಲ್ಲಿ, ಕಲೆಯಲ್ಲಿ
ಅದು ನಮ್ಮ ಪ್ರೇಮ ಗೆಳೆತನ ಒರೆ ಮುಚ್ಚಿಟ್ಟ ಖಡ್ಗಧಾರೆ

ಲೋರ್ಕನ ಮೊದಲ ಕವನ ಸಂಕಲನ 'ಬುಕ್ ಆಫ್ ಪೊಯಮ್ಸ್' ಕೃತಿಯಲ್ಲಿ ಕವಿ ತನ್ನ ಬಾಲ್ಯದ ಅನುಭವಗಳನ್ನು ಹೇಳಿಕೊಳ್ಳುತ್ತಾನೆ.

ನನ್ನ ತನುಮನಗಳಲ್ಲಾ ನೋವು ಮಿಡಿಯುವುದು
ನನ್ನ ಆತ್ಮ ಮರುಗುತ್ತಿತ್ತು
ನಾನು ನುಡಿದರೆ ಆ ನುಡಿಗಳು
ನೀರ ಮೇಲಿನ ಗುಳ್ಳೆಗಳಂತೆ ಒಡೆದುಹೋಗುತ್ತಿತ್ತು.

ಆತನ ಮತ್ತೆರಡು ಕಾವ್ಯ ಕೃತಿಗಳು Suites ಹಾಗೂ Poem of the Deep Song ಕಾವ್ಯ ನವ್ಯದತ್ತ ಹೊರಳುತ್ತಿರುವುದನ್ನು ಗಮನಿಸಿದ ಲೋರ್ಕ ಹೊಸ ಬಗೆಯ ಚಿಂತನೆ ಅಭಿವ್ಯಕ್ತಿ, ಪ್ರತಿಮೆಗಳನ್ನು ಬಳಸಲು ತೊಡಗಿದ.

ಲೋರ್ಕನ ಕೃತಿಗಳಲೆಲ್ಲಾ ಅತ್ಯಂತ ಶ್ರೇಷ್ಠವಾದ ಕೃತಿ 'ಜಿಪ್ಸಿಬ್ಯಾಲೆಡ್ಸ್' ಜಿಪ್ಸಿಗಳ ಜೀವನ ಚರಿತ್ರೆ, ವಿಸ್ತಾರ ವರ್ಣನೆ, ಸ್ಪೈನ್ ದೇಶದಿಂದ ಇಂಡಿಯಾದವರೆಗೂ ಅಲೆಮಾರಿ ಜನಾಂಗ ಸಂಚರಿಸುವ ಬಗೆ, ಅವರ ನಿಗೂಢ ಮಾಂತ್ರಿಕ ಶಕ್ತಿ, ವೇಷಭೂಷಣ, ಅವರ ಪುರಾಣ ಕತೆಗಳು, ಸಂಸ್ಕೃತಿ, ಮೂಢನಂಬಿಕೆಗಳು, ಅಜ್ಞಾನ ಈ ಎಲ್ಲಾ ವಿಶದವಾಗಿ ಈ ಕೃತಿಯಲ್ಲಿ ವರ್ಣಿತವಾಗಿದೆ.

ಒಬ್ಬ ಅಮೆರಿಕನ್ ಜರ್ನಲಿಸ್ಟ್‌ನೊಂದಿಗೆ ಲೋರ್ಕ ಅಂದಿನ ರಂಗಭೂಮಿಯ ಬಗ್ಗೆ ಹೇಳುತ್ತಾ ಮಾಡ್ರಿಡ್ ಹೊರಗೆ ರಂಗಭೂಮಿ ಜಗಜೀವನದ ಪ್ರತಿಬಿಂಬವಾಗಬೇಕಾಗಿತ್ತು ಈಗ ಅದು ಸತ್ತು ಶವದಂತಿದೆ. ಈ ಜನರೂ ಕಣ್ಣು, ಕಿವಿ, ಸ್ಪರ್ಶ, ಗಂಧ, ನಾದವೆಲ್ಲ ಕಳೆದುಕೊಂಡವರಂತೆ ನಿಷ್ಕ್ರಿಯರಾಗಿದ್ದಾರೆ. ಈ ರಂಗಭೂಮಿಗೆ ನಾನು ಕಾಯಕಲ್ಪವನ್ನು ಮಾಡಬೇಕಾಗಿದೆ. ಈ ರಂಗಭೂಮಿ ಮೂಲಕ ಮನುಷ್ಯ ಅಳಬಹುದು ನಗಬಹುದು ತನ್ನ ಹಕ್ಕುಬಾಧ್ಯತೆಗಳನ್ನು ಪ್ರಶ್ನಿಸಬಹುದು. ಮಧ್ಯಮ ವರ್ಗದ ಜನರ ಸಮಸ್ಯೆಗಳಾದ ವರ್ಗ ಜಾತಿ ವೈಷಮ್ಯಗಳು, ಸ್ತ್ರೀ ಸಮಸ್ಯೆಗಳು ಇವೇ ನಾಟಕದ ವಸ್ತುವಾಯಿತು.

ಆತನ ಮತ್ತೊಂದು ಕೃತಿ 'The Tamarit Divan' ಇಪ್ಪತ್ತು ಕವಿತೆಗಳ ಸಂಕಲನ. ಅರಬರ ಪ್ರೇಮ ಗೀತೆಗಳು, ಗಜಲ್‌ಗಳ ಮಾದರಿಯ ಪದ್ಯಗಳು ಇವಾಗಿವೆ. ಸಾವಿನ ಬಗೆಗೆ ವಿಶೇಷ ಪ್ರಜ್ಞೆಯನ್ನು ತನ್ನ ಕೃತಿಗಳಲ್ಲಿ ಮೂಡಿಸುತ್ತಿದ್ದ ಲೋರ್ಕನ ಸಾವೂ ನಾಟಕದ ಒಂದು ಅಂಕದಂತೆ ನಾಟಕೀಯವಾಗಿ ನಡೆದು ಹೋಯಿತು.

ಆ ಕಪ್ಪು ಕುದುರೆಗಳು
ಕಪ್ಪು ಗೊರಸಿನ ಕುದುರೆಗಳು
ಕಪ್ಪು, ವೇಗದೋಟದ ಮಿಂಚು

ಇಂಕಿನ ಮೇಣದ ಕಪ್ಪು ಕಲೆ
ಅದರ ದಪ್ಪಮಡ್ಡಿ ತಲೆಬುರುಡೆ
ಸತ್ತ ಕುದುರೆಗೆ ದುಃಖವಿಲ್ಲ
ಅದರ ಹೊಳಪು ದೇಹಾತ್ಮಗಳು
ಈಗ ರಸ್ತೆಯಲ್ಲಿ ಮಾರಾಟವಾಗುತ್ತಿದೆ.

೧೯೩೪ ರಲ್ಲಿ ಬರೆದ 'ದಿ ಡೆತ್ ಆಫ್ ಎಬುಲ್‌ಫೈಟರ್' ತನ್ನ ಆತ್ಮೀಯ ಸ್ನೇಹಿತನೊಬ್ಬನು ಗೂಳಿ ಕಾಳಗದಲ್ಲಿ ಮಡಿದ ಕಾರಣಕ್ಕಾಗಿ ಇದನ್ನೇ ದ್ರವ್ಯವಾಗಿಸಿ ದುರಂತ ಕಾವ್ಯಬರೆದ. ಇದು ಉತ್ತಮ ಶೋಕ ಗೀತೆಯಾಯಿತು.

ಸ್ಪೈನಿನಲ್ಲಿ ನಡೆದ ಅಂತರ್ ಯುದ್ಧದ ಪ್ರಭಾವದಿಂದ ಗ್ರನಾಡದಲ್ಲೂ ಬಲಪಂಥೀಯ ಗಲಭೆಕೋರರು ೧೯೩೬ರಲ್ಲಿ ಆತನಿಗೆ ಕೇವಲ ಮೂವತ್ತೆಂಟು ವರ್ಷಗಳಾಗಿದ್ದಾಗ ಆತನಿಗೆ ಗುಂಡಿಟ್ಟು ಕೊಂದರು. ನೆರೂಡ ಲೋರ್ಕನ ಆತ್ಮೀಯ ಗೆಳೆಯನಾಗಿದ್ದ. ಆತನು "ಲೋರ್ಕ ಎಂದರೆ ಮಿಂಚಿನಂಥ ವ್ಯಕ್ತಿ. ಮಾಂತ್ರಿಕ ಹರ್ಷದ ಖನಿ. ಹಗಲು ಇರುಳುಗಳ ವ್ಯತ್ಯಾಸವಿಲ್ಲದೆ ಮಾತು ಆಡುವವ. ಆತನು ತನ್ನ ಗೊಂಚಲಾದ ಕಪ್ಪು ಕೂದಲು ಹಣೆಯ ಮೇಲೆ ಆಡುತ್ತಿರಲು, ತೇಜಸ್ಸಿನ ಕಣ್ಣು ಹೊಳೆಯುತ್ತಿರಲು, ಜನಪದ ಗೀತೆಗಳನ್ನು ದನಿ ಎತ್ತಿ ಹಾಡುತ್ತಿದ್ದರೆ ನಾವು ಈ ಲೋಕವನ್ನೇ ಮರೆಯುತ್ತೇವೆ" ಎನ್ನುತ್ತಿದ್ದ.

ಕುದುರೆ ಸವಾರನ ಹಾಡು

ಕಾರ್ಬೋಡ ಎಂಬ ಊರು
ಇಲ್ಲಿಂದ ದೂರ ಬಲು ದೂರ

ಕಪ್ಪು ಕುದುರೆ ಮರಿ ದೊಡ್ಡ ಚಂದ್ರ
ಆಲಿವ್ ಎಲೆಗಳು ನನ್ನ ಚೀಲದ ತುಂಬ
ಆ ದಾರಿ ನನಗೆ ಚಿರಪರಿಚಿತ
ಆದರೂ ಆ ಊರ ನಾನು ತಲುಪಲಾರೆ

ಬೀಸುಗಾಳಿಯ ಬಯಲುಗಳ ನಡುವೆ
ಕಪ್ಪು ಕುದುರೆ ಮರಿ ಕೆಂಪು ಚಂದ್ರ
ಸಾವು ನನ್ನ ಎವೆ ಇಕ್ಕದೆ ಕಾಯುತ್ತಿದೆ
ಕಾರ್ಬೋಡ ಗೋಪುರದ ಮೇಲೆ

ಆಹಾ ಎಷ್ಟು ದೂಪದ ರಸ್ತೆ
ನನ್ನ ಚುರುಕು ಕುದುರೆ ಮರಿ
ನಾನು ಕಾರ್ಬೋಡ ಸೇರುವತನಕ
ಆ ಸಾವು ನನಗಾಗಿ ಕಾಯಬೇಕು

ಕಾರ್ಬೋಡ ಎಷ್ಟು ದೂರ
ಅಲ್ಲಿ ಎಂಥ ಏಕಾಂತ.

ಅರ್ಧಚಂದ್ರ

ಚಂದ್ರ ನೀರಲ್ಲಿ ಬಿದ್ದಂತೆ
ಆ ಆಗಸ ಎಷ್ಟು ಪ್ರಶಾಂತ
ಮೋಡ ನಿಧಾನ ಈಜುತ್ತಿರಲು
ನದಿಯಲ್ಲಿ ಅದರ ಹೊಳಪು ಪ್ರತಿಬಿಂಬ
ಅಲ್ಲೆ ದಪ್ಪ ಕಪ್ಪೆಯೊಂದು
ತನ್ನ ಪ್ರತಿಬಿಂಬವ ಆ ಕನ್ನಡಿಯಲಿ ನೋಡುತಿದೆ.

ಶಂಕು

ಅವರು ನನಗೊಂದು ಶಂಕು ಕೊಟ್ಟರು
ಒಳಗೇ ಅದು ಹಾಡುತ್ತಿತ್ತು
ಹಸಿರು ಸಮುದ್ರದ ಭೂಪಟ
ನನ್ನ ಹೃದಯ

ನೀರು ತುಂಬಿ ಉಬ್ಬುತ್ತಾ
ಸಣ್ಣ ಮೀನು
ಬೆಳ್ಳಿ ಮೀನು
ಹಾಗೆ ಹೊಳೆವ ನನಗೊಂದು ಶಂಕು ತಂದರು.

ಗಡಿಯಾರದ ಮೌನ

ನಾನು ಕುಳಿತಿದ್ದೇನೆ
ಕಾಲ ದೇಶಗಳ ಎಲ್ಲೆ ಮೀರಿ
ಹಿಂದೆ ಸಮುದ್ರ
ಮುಂದೆ ಘನ ಮೌನ
ಎಂಥ ಪರಿಶುದ್ಧ ಕಾಲ
ಈ ಜಗತ್ತೇ ಶೂನ್ಯ ಎಲ್ಲ ನಶ್ವರ
ಆ ನಕ್ಷತ್ರದತ್ತ ದಿಟ್ಟಿಸಿ ಬೆವರುತ್ತ
ಏನೋ ಹುಡುಕುತ್ತಾ ಖಿನ್ನನಾಗಿರಲು
ಎಲೆಗಳ ಹಾರಿಸುತ್ತಾ ಆ ಸುಂಟರಗಾಳಿ ತಿರ್ರನೆ ತಿರುಗುವುದು.

ಬೀಳ್ಕೊಡುಗೆ

ನಾನು ಸತ್ತರೆ
ಈ ಮಹಡಿಯ ಬಾಗಿಲು ತೆರೆದಿಡಿ
ಪುಟ್ಟ ಹುಡುಗನೊಬ್ಬ ಕಿತ್ತಲೆ ತಿನ್ನುವುದು
ಇಲ್ಲಿಂದಲೇ ಕಾಣುವೆ
ರೈತ ಸುಗ್ಗಿಯ ತೆನೆ ಬಡಿಯುವುದು
ಇಲ್ಲಿಂದಲೇ ಕಾಣುವೆ
ಇಲ್ಲಿಂದಲೇ ಎಲ್ಲ ಕೇಳುವೆ
ನಾನು ಸತ್ತರೆ
ಈ ಮಹಡಿಯ ಬಾಗಿಲು ತೆರೆದಿಡಿ.

ಮರಗಳು

ಮರಗಳೇ
ನೀವೊಮ್ಮೆ ಬಾಣದಂತೆ
ಆ ನೀಲದಿಂದ ನೆಲಕ್ಕುರುಳಿದಿರೇ?
ಎಂಥ ಕಡುಕಷ್ಟಗಳು ಬಂದವು
ಆ ನಕ್ಷತ್ರಗಳೇ ನಿಮ್ಮನ್ನು ತಳ್ಳಿದುವೇ?
ಗಿಡಗಂಟೆಯ ಕೊರಳೊಳಗಿಂದ ಹಾಡುಗಳು ಚಿಮ್ಮಿ

ಮನ್ಮಥನ ಬಾಣಗಳು ನೀವಾಗುವಿರಿ ಆ ದೇವನಲ್ಲಿ.
ನಿಮ್ಮ ನೆಲದಾಳಕ್ಕಿಳಿದ ಗಟ್ಟಿ ಬೇರುಗಳಿಗೆ ಗೊತ್ತೆ?
ನನ್ನ ಹೃದಯವೂ ಈ ನೆಲದಾಳದಲ್ಲಿ ಬೇರು ಬಿಟ್ಟಿರುವುದು.

ಹೊಸ ಹೃದಯ

ನನ್ನ ಹೃದಯ ಹಾವಿನಂತೆ
ಪೊರೆ ಕಳಚಿತ್ತು
ಅದನ್ನು ಗಟ್ಟಿಯಾಗಿ ಹಿಡಿದೆ
ಜೇನಿನಿಂದ ಆವೃತವಾದ ಗಾಯಗಳು

ಅಂತರಂಗದಲ್ಲಿ ಗೂಡು ಕಟ್ಟಿ
ಪದರ ಪದರಗಳಲ್ಲೂ ಅಡಗಿದ್ದ ಮನಸ್ಸೆ ನೀನೆಲ್ಲಿ ಈಗ
ಗುಲಾಬಿ ಮೊಗ್ಗೆಯ ಕಂಪಬೀರುವ
ಜೀಸಸ್, ಸೇಟನ್ ಒಟ್ಟಾದರೇ?

ನನ್ನ ಮೋಹಕ ನಕ್ಷತ್ರವೆ
ಒದ್ದೆ, ಹರಿದ ಬಟ್ಟೆಯಲ್ಲಿ ನಿನ್ನ ಸುತ್ತಿಟ್ಟಂತೆ
ನಸುಬಿಳುಪಿನ ನೋವಿನ ಪ್ರೇಮ
ಹಿಂದೊಮ್ಮೆ ನರಳಿದ ಪ್ರೇಮ ಇಂದಿಲ್ಲ.

ನಾನು ನಿನ್ನಲ್ಲಿ ದುರ್ವಿಧಿಯ ಕಂಡೆ
ಗೋರಿ ಕಟ್ಟಿದ ಕವಿತೆ ಎಲುಬು ಹಂದರ
ನನ್ನ ಗೂಢ ಹಳೆಯ ಪ್ರೇಮ
ಆ ನಿಗೂಢ ಹಿಂದಿನ ಮುಗ್ಧತೆ

ನನ್ನ ಭಾವನೆಗಳ ಕಿಕ್ಕಿರಿದ ಮ್ಯೂಸಿಯಂ
ಆ ಗೋಡೆಯ ಮೇಲೆ ನಿನ್ನ ನೇತುಹಾಕಲೇ?
ಈ ಕಗ್ಗತ್ತಲಿನ ಚಳಿಯಲ್ಲಿ
ನಿದ್ರಿಸುತ್ತಿದೆ ಐರಿಷ್ ಖಡ್ಗದೆಲೆಗಳ ಶಾಪ

ಪ್ರೇಮವೆಂಬ ನೋವಿನ ಹೊತ್ತಿಗೆಯೇ
ನಿನ್ನನ್ನು ಪೈನ್‌ಮರಗಳ ಮೇಲೆ ಹರವಿಹಾಕಲೇ?
ಆಗಲಾದರೂ ನೀನು ಕಲಿಯಬಹುದು
ಆ ಕೋಗಿಲೆಯ ಮುಂಜಾವಿನ ಹಾಡು.

ಚಂದ್ರನ ಆಟ

ದುಂಡನೆಯ ಚಂದ್ರ
ಹೊಳೆವ ಚಕ್ರದಂತಾದ
ಕನ್ನಡಿಯಿಂದಾದ
ಗುಂಡು ಚಕ್ರಗಳು
ಗೀರಿನಂತೆ ಹೊಳೆವ ಚಕ್ರ
ಚಂದ್ರ ಚಿನ್ನದ ಎಲೆಯಾದ
ಹೊನ್ನಿನ ಹಾಳೆಯಾದ
ಚಂದ್ರ ತನ್ನ ಪಕಳೆ ಬಿಚ್ಚಲು
ಸಹಸ್ರ ಚಂದ್ರರು
ಚಿಮ್ಮುವ ಚಿಲುಮೆಗಳು
ಆಗಸದಲಿ ಅಲೆಯುತ್ತಿದೆ.
ಒಂದೊಂದು ಕೊಳದಲ್ಲೂ
ಒಬ್ಬೊಬ್ಬ ಚಂದ್ರನ ಹೆಣ
ಚಂದ್ರನೀಗ ಬೆಳಕಿನ ಕೋಲಾದ
ಕೊರೈಸುವ ಜಲಪಾತ
ಈ ಚಂದ್ರ
ಕಡಲಿನಲಿ ಒಡೆದ
ದೊಡ್ಡ ಕನ್ನಡಿ ಗಾಜಿನ ಚೂರು
ಚಂದ್ರ ಈ
ಕಿಟಕಿ ಗಾಜಿನ ಕಲೆ
ಅನಂತ ಆಗಸದ
ತೆರೆ
ಚಂದ್ರ ಈ ಚಂದ್ರ
ಮೇಲೆ...
ಒಂದು ಸಣ್ಣ ವಜ್ರದುಂಗುರ.

ಕೊನೆ ಆಸೆ

ನಾನು ಸತ್ತರೆ
ನನ್ನ ಗಿಟಾರಿನೊಂದಿಗೆ
ನನ್ನ ಮಣ್ಣ ಮಾಡಿ
ನಾನು ಸತ್ತರೆ
ಈ ಕಿತ್ತಲೆ ತೋಟದಲ್ಲಿ

ಪುದಿನಾ ಪಕ್ಕ
ನನ್ನ ಹೂತುಬಿಡಿ
ನಾನು ಸತ್ತರೆ
ಸೂರ್ಯಮುಖಿಯ
ದಿಕ್ಕಿನತ್ತ ನನ್ನ ಹೂತು ಬಿಡಿ.

ನಿದ್ರಿಸದ ನಗರ (Sleepless city)

ಆಕಾಶದಾಚೆ ಯಾರೂ ನಿದ್ರಿಸುವುದಿಲ್ಲ
ನಿಶಾಸಂಚಾರಿ ಪ್ರಾಣಿಗಳು ಮೂಸುತ್ತಾ ಸಂಚರಿಸಿವೆ
ದೊಡ್ಡ ಹಲ್ಲಿಗಳು ಕನಸಿಲ್ಲದವನನ್ನು ಕಚ್ಚುವುದು
ಭಗ್ನ ಹೃದಯ ಪಲಾಯನಗೈವಲ್ಲಿ ಮೂಲೆ ರಸ್ತೆಯಲ್ಲಿ ಸಿಕ್ಕಿಬಿದ್ದ
ಉಗ್ರ ಮೊಸಳೆಯೂ ಕೂಡ ನಕ್ಷತ್ರದಡಿಯಲ್ಲಿ ನೆಲಕಚ್ಚಿ ಮಲಗಿದೆ
ಈ ಜಗತ್ತಿನಾಚೆ ಯಾರೂ ನಿದ್ರಿಸುವುದಿಲ್ಲ ಇಲ್ಲಿ ನಿದ್ರಿಸುವುದಿಲ್ಲ.

ಮೂರು ವರ್ಷಗಳಿಂದ ಹೆಣವೊಂದು
ದೂರದ ಸ್ಮಶಾನದಲ್ಲಿ ದೂರುತಿದೆ
'ನನ್ನ ಮೊಣಕಾಲಿನ ಮೇಲೆ ಅಗಲ ಸುಟ್ಟಗಾಯವಾಗಿದೆ' ಎಂದು.
ಮುಂಜಾನೆ ಮಣ್ಣು ಮಾಡಿದ ಹೆಣ
ಕಂಡ ಆ ಹುಡುಗ ಬೊಬ್ಬೆ ಇಟ್ಟು ಅಳುತ್ತಾನೆ
ಅವನ ಹೆದರಿಸಲು ನಾಯಿ ಬಿಟ್ಟಿದಾರೆ.

ಈ ಜೀವನವೆಂಬುದು ಕನಸಲ್ಲ, ಎಚ್ಚರದಿಂದ ನೋಡು
ನಾವು ಮೇಲಿಂದ ಕೆಳಗುರುಳಿ ಹಸಿಮಣ್ಣು ಮುಕ್ಕುವೆವು
ಅಥವಾ ಹಿಮದ ತುದಿ ಹತ್ತಿ ಒಣಗಿದ ಡೇಲಿ ಹೂ ಗೊಂಚಲು ಗಲಗಲ
ಇಲ್ಲಿ ನೆನಪುಗಳು ಇಲ್ಲ ಕನಸುಗಳು ಇಲ್ಲ
ಹಸಿಮುತ್ತುಗಳು ಕೆಂಪು ತುಟಿ ಬಿಗಿದಿರಲು
ಹೊಸ ಹುರುಪು ನರನಾಡಿಗಳಲ್ಲೂ ಹರಿಯುತಿರಲಿ
ನೊಂದವರೆ ಮತ್ತೆ ಮತ್ತೆ ನೋಯುವಂತಾಗಲಿ
ಸಾವನ್ನು ಕಂಡು ಹೆದರಿದವರೂ ಅದನ್ನು ಪ್ರೀತಿಯಿಂದ ಅಪ್ಪುವಂತಾಗಲಿ

ಒಂದಾನೊಂದು ದಿನ
ಕುದುರೆಗಳು ಬಂಗಲೆಯಲಿ ವಾಸಿಸಲಿ
ಕೋಪೋದ್ರಿಕ್ತ ಇರುವೆಗಳು
ಮಲಗಿದ ಹಸುಗಳ ಕಣ್ಣಿನ ಹಳದಿ ಪಿಸಿರು ತಿನ್ನಲಿ
ಮತ್ತೊಂದು ದಿನ
ಸತ್ತ ಚಿಟ್ಟೆಗಳು ಬದುಕಿ ಮತ್ತೆ ಹಾರಾಡಲಿ
ಮೌನ ನೌಕೆಗಳು ಜಳಿ ಮತ್ತೆ ಮರಳು ಈ ಸುಂದರ ಪ್ರಕೃತಿ

ಇಲ್ಲಿ ನಮ್ಮ ಉಂಗುರಗಳು ಥಳಥಳನೆ ಹೊಳೆಯಲಿ
ನಮ್ಮ ಬಾಯಿಂದ ಕೆಂಪು ಗುಲಾಬಿ ಪಕಳೆಗಳು ಉದುರಲಿ

ಜಾಗ್ರತರಾಗಿ ನೋಡಿ ನೋಡಿ ನೋಡಿ
ಮಳೆ ಮೋಡದ ಆರ್ಭಟ ಕುದುರೆ ಲಾಳದ ಸದ್ದು
ಆ ಸೇತುವೆಯ ದಾರಿ ತಿಳಿಯದೆ ಅಳುತ್ತಾನೆ ಹುಡುಗ
ಆ ಹೆಣಕ್ಕೆ ಕುಸಿದ ತಲೆ ಮತ್ತು ಒಂದೇ ಬೂಟು
ಆ ಗೋಡೆಯ ಮೇಲೆ ಹಲ್ಲಿ ಹಾವುಗಳು ಕುಳಿತು ಕಾಯುತ್ತಿವೆ.
ಕರಡಿಗಳು ತಮ್ಮ ಕೋರೆ ಹಲ್ಲು ಮಸೆಯುತ್ತಿವೆ
ತಾಯಿಗಾಗಿ ತೋಳು ಚಾಚಿ ಕಾಯ್ವ ಮಗುವಂತೆ
ತೀವ್ರ ಚಳಿಗೆ ಒಂಟೆಗಳ ಕೂದಲು ತೊಯ್ದಾಡುವಂತೆ
ಆಕಾಶದಾಚೆ ಯಾರೂ ನಿದ್ರಿಸುವುದಿಲ್ಲ
ಇಲ್ಲಿ ಯಾರೂ ನಿದ್ರಿಸುವುದಿಲ್ಲ
ಆದರೂ ಯಾರಾದರೂ ಕಣ್ಣೆವೆ ಮುಚ್ಚಿದರೆ
ಮಕ್ಕಳೇ ಅವರನ್ನು ಹೊಡೆದೆಬ್ಬಿಸಿ, ಹಾಗೇ ಬಿಡಬೇಡಿ
ಎಲ್ಲೆಡೆಯೂ ತೆರೆದ ಕಣ್ಣುಗಳ ದೃಶ್ಯಾವಳಿ ಕಾಣಲಿ
ಕೆದರಿದ ಕೆಂಪು ಗಾಯಗಳು ಮಾಯವು
ಜಗತ್ತಿನಾಚೆಗೆ ಯಾರೂ ನಿದ್ರಿಸುವುದಿಲ್ಲ, ಇಲ್ಲ
ನಾನು ಮೊದಲೇ ಹೇಳಿದ್ದೆ
ಯಾರೂ ನಿದ್ರಿಸುವುದಿಲ್ಲ
ಯಾರ ಹಣೆಯ ಮೇಲಾದರೂ ನೆರಿಗೆ ಕಟ್ಟಿದ್ದರೆ
ಮುಂಬಾಗಿಲ ತೆರೆದು ಬೆಳದಿಂಗಳ ನೋಡಲಿ
ಹುಸಿ ಹೊಳೆವ ವಿಷದ ಬಟ್ಟಲು ರಂಗಮಂದಿರದ ಖಾಲಿ ತಲೆ ಬುರುಡೆ

ನಕ್ಷತ್ರ

ಮೈ ಮರೆತ ನಕ್ಷತ್ರ
ಕಣ್ಣೆವೆಗಳಿಲ್ಲದ ತಾರೆ
ಎಲ್ಲಿ?
ಆ ತಾರೆ
ನಿದ್ರಿಸಿದ ನೀರೆಲ್ಲಿ
ಇದೇ ಸರೋವರದಲ್ಲಿ?

---

* ಕೆ. ಎನ್. ವಿಜಯಲಕ್ಷ್ಮಿ, ಕನ್ನಡ ಅಧ್ಯಾಪಕರು, ಬಿ. ಎನ್. ಎಂ. ಕಾಲೇಜು, ಬನಶಂಕರಿ ೨ನೇ ಹಂತ, ಬೆಂಗಳೂರು.

ತಾಯಿ (ಇಂಗ್ಲಿಷ್ ಕಥೆ)

ಅನು: ನುಗ್ಗೇಹಳ್ಳಿ ಪಂಕಜಾ

"ನನ್ನ ಕೈಲಿ ಇನ್ನೇನೂ ಮಾಡೋಕ್ಕಾಗಲ್ಲ" - ಆತ ಹತಾಶನಾಗಿ ಹೆಂಡತಿಗೆ ನುಡಿದ - "ನಾನೂ ಕೈಲಾದಷ್ಟನ್ನೆಲ್ಲಾ ಮಾಡಿಯಾಯ್ತು. ಮನೇಲಿರೋ ಚಿಕ್ಕ ಚಮಚ ಮೊದಲ್ಗೊಂಡು ಮಾರಿಯಾಯ್ತು. ಇನ್ನೇನು ಮಾಡಲಿ?"

ಅವನು ಚರ್ಮದ ವ್ಯಾಪಾರಿ. ಹಳ್ಳಿಯಲ್ಲಿನ ಬೇಟೆಗಾರರ ಹತ್ತಿರದಿಂದ ಚರ್ಮ ಇತ್ಯಾದಿಗಳನ್ನು ಸುಲಭದ ಬೆಲೆಗೆ ಕೊಂಡು, ದೊಡ್ಡ ಪಟ್ಟಣಗಳಲ್ಲಿ ಮಾರುತ್ತಿದ್ದ. ಕೆಲವೊಮ್ಮೆ ಗದ್ದೆ ಕೆಲಸಗಳಿಗೂ ಕೈ ಹಾಕಿ ಅಷ್ಟಿಷ್ಟು ಹಣ ಸಂಪಾದಿಸುತ್ತಿದ್ದ. ಏನಾದರೇನು, ಸಾಲ ವರ್ಷವರ್ಷಕ್ಕೆ ಏರಿತು. ಅದನ್ನು ಮರೆಯಲು ಕುಡಿಯುವ, ಅಫೀಮು ಸೇವಿಸುವ, ಜೂಜಾಡುವ ಚಪಲವೂ ಬೆಳೆಯಿತು. ಈಗ, ಒಂದು ಬಿಡಿಕಾಸು ಸಾಲವನ್ನು ಸಹ ಎತ್ತಲಾರದವನಾಗಿದ್ದ. ಖಾಯಿಲೆ ಬಂತು. ಮುಖವೆಲ್ಲ ಹಳದಿಯಾಯಿತು. ಕಣ್ಣಿನ ಬಿಳಿಯ ಭಾಗ ಮಣ್ಣುಬಣ್ಣಕ್ಕೆ ತಿರುಗಿತು. ಎಲ್ಲರೂ ಅಸಹ್ಯದಿಂದ ದೂರ ಇರುತ್ತಿದ್ದರು.

"ನೀನೇ ಈಗ ನಂಗೆ ಸಹಾಯ ಮಾಡಬೇಕು... ಈಗ ನಂಗೆ ನೀನೇ ಗತಿ!..." ಅವನು ಒಂದು ದಿನ ಹೆಂಡತಿಗೆ ಹೇಳಿಬಿಟ್ಟ.

"ನಾನು?" ತನ್ನ ಮೂರುವರ್ಷದ ಮಗನನ್ನು ಮಲಗಿಸುತ್ತಿದ್ದ ಆಕೆ ಬೆಪ್ಪಾಗಿ ಪ್ರಶ್ನಿಸಿದಳು-"ನಾನೇನು ಮಾಡಬಲ್ಲೆ?"

"ನಿನ್ನನ್ನ-ನಾನು ಮಾತು ಕೊಟ್ಟಿದ್ದೇನೆ...."

"ಏನು?" ಹೆಂಡತಿಗೆ ಮೂರ್ಛೆಯೇ ಬರುವಂತಾಯಿತು.

"ಸಾಲ ತೀರಿಸಲಿಲ್ಲ ಅಂತ, ಮೊನ್ನೆ ವುಲ್ಫ್‌ವಾಂಗ್ ನನ್ನನ್ನ ಚೆನ್ನಾಗಿ ಬಡಿದುಬಿಟ್ಟ. ಆತ್ಮಹತ್ಯೆ ಮಾಡಿಕೊಳ್ಳೋಣ ಅಂತ ನದಿಯ ಹತ್ರ ಹೋದೆ. ಅಲ್ಲಿ ಮಿಸಸ್ ಶಿನ್ ಸಿಕ್ಕಿದಳು. ನನ್ನ ಸ್ಥಿತಿಯನ್ನು ಕೇಳಿ ತಿಳಿದುಕೊಂಡ ಮೇಲೆ ಅಂದರು - "ಪಕ್ಕದ ಹಳ್ಳಿಯಲ್ಲಿ ಒಬ್ಬ ಐವತ್ತು ವರ್ಷದವ ಇದ್ದಾನೆ. ಅವನಿಗೆ ಮಗ ಬೇಕಂತೆ. ಮಗ ಇಲ್ಲ ಅಂತ, ಬೇರೆ ಮದುವೆ ಮಾಡಿಕೋಬೇಕೂಂತಿದ್ದ... ಆದರೆ ಹೆಂಡತಿ ಒಪ್ಪಲಿಲ್ಲ. ಅದಕ್ಕೇ, ಸದ್ಯಕ್ಕೆ ಒಂದೆರಡು ವರ್ಷಕ್ಕೆ ಒಬ್ಬ ಹೆಂಗಸನ್ನ ಕರೆಸೋದು. ಮಗ ಆದ ಮೇಲೆ ಆಕೆಯನ್ನ ವಾಪಸ್ಸು ಕಳಿಸೋದು ಅಂತ... ಹೆಂಗಸಿಗೆ ಮೂವತ್ತು ವರ್ಷವಾದರೂ ಆಗಿರಬೇಕಂತೆ... ಒಂದೆರಡು ಮಕ್ಕಳಾದ್ರೂ ಆಗಿರಬೇಕಂತೆ... ಆಕೆ. ಮೆತ್ತಗಿರಬೇಕಂತೆ... ಒಳ್ಳೆಯವಳಾಗಿರಬೇಕಂತೆ...

ಮೊದಲ್ನೆ ಹೆಂಡತಿಗೆ ವಿಧೇಯಳಾಗಿರಬೇಕಂತೆ... ಹೀಗೊಬ್ಬಳು ಸಿಕ್ಕಿದರೆ, ಕೈ ತುಂಬಾ ಹಣ ಕೊಡ್ತಾರಂತೆ! ನಾನೂ ಊರೆಲ್ಲಾ ಸುತ್ತಿದೆ... ಯಾರೂ ಸರಿಯಾದವಳು ಸಿಗಲಿಲ್ಲ - ಮಿಸಸ್, ಮಿಸಸ್ ಶಿನ್ ಕೇಳಿದಳು, ನಾನೇನು ಅನ್ನೋ ಹಾಗಿದ್ದೀನಿ? ಆಗಲಿ ಎಂದು ಮಾತು ಕೊಟ್ಟುಬಿಟ್ಟೆ".

ಇಷ್ಟು ಹೇಳಿ ಗಂಡ ನೆಲದವರೆಗೂ ತಲೆ ತಗ್ಗಿಸಿಬಿಟ್ಟ. ಹೆಂಡತಿ ಏನು ಹೇಳಬಲ್ಲಳು?

ಆಘಾತ, ಅಸಹ್ಯ, ಅವಮಾನ ಗಾಬರಿಯಿಂದ ಮೂಕಳಾಗಿದ್ದಳು.

"ನೆನ್ನೆ ಹೋಗಿದ್ದಳಂತೆ ಮಿಸೆಸ್ ಶಿನ್ ಅವರ ಮನೆಗೆ" - ಅವನೇ ಮತ್ತೆ ಮುಂದುವರಿದ. ತಗ್ಗಿದ ದನಿಯಲ್ಲಿ "ಅವರಿಗೆ ಒಪ್ಪಿಗೆಯಂತೆ. ತಕ್ಷಣವೇ ದುಡ್ಡು ಕೊಟ್ಟುಬಿಡ್ತಾರಂತೆ. ನೀನಲ್ಲಿ ಮೂರು ವರ್ಷ ಇರ್ಬೇ - ಮಗ ಹುಟ್ಟದಿದ್ರೆ ಐದು ವರ್ಷ. ನಾಳೆ ಹದಿನೆಂಟನೆಯ ತಾರೀಖಿನಂದು ನೀನಲ್ಲಿಗೆ ಹೋಗಲೇಬೇಕು. ನಿನ್ನೆ ಕಾಂಟ್ರಾಕ್ಟ್ ಅನ್ನ ರುಜು ಮಾಡಿ ಬಂದರು, ಮಿಸೆಸ್, ಶಿನ್...."

ಹದಿನೆಂಟನೆಯ ತಾರೀಖು....! ಕೇವಲ ಐದು ದಿನ! ಐ....ದೇ ದಿನ!

"ನಂಗೆ ಮೊದಲೇ ಯಾಕೆ ಹೇಳಲಿಲ್ಲ?"

ಅಪರಾಧಿಯನ್ನು ಖಂಡಿಸುವ ಧ್ವನಿಯಲ್ಲಿ ಕೇಳಿದಳು.

"ಹೇಳಬೇಕೂಂತಲೇ, ನಿನ್ನೆ ಎಷ್ಟೋ ಸಲ ನಿನ್ನ ಹಿಂದು ಮುಂದೆ ಸುತ್ತಿದೆ. ಆಗಲೇ ಇಲ್ಲ. ನೀನು ಇದಕ್ಕೆ ಒಪ್ಪಿಕೊಳ್ಳಲೇಬೇಕು... ನೀನು ಇಲ್ಲ ಅಂದರೆ, ನಾವು ಮುಳುಗಿದ ಹಾಗೆ..."

"ಎಲ್ಲಾ ತೀರ್ಮಾನವಾಗಿ ಬಿಟ್ಟಿದೆಯೇ?"

"ಊ...."

"ಬೇರೆ ಯಾವ ದಾರಿಯೂ ಇಲ್ಲವೇ, ಚೂಬಾನ ತಂದೆ?"

ಚೂಬಾ ಅವರ ಮಗ, ಮಲಗಿದ್ದ ಆ ಮಗುವನ್ನ ಎದೆಗಪ್ಪಿಕೊಂಡಳು.

"ನೀವು ಈ ನಮ್ಮ ಚೂಬಾನ ವಿಚಾರ ಯೋಚಿಸಿದಿರಾ? ಅವನಿಗಿನ್ನೂ ಮೂರು ವರ್ಷ...ತಾಯಿಯಿಲ್ಲದೆ ಇರಲಾರ... ನನ್ನನ್ನ ಒಂದು ನಿಮಿಷವೂ ಬಿಟ್ಟಿರಲಾರ...."

"ನಾ ಚೆನ್ನಾಗಿ ನೋಡಿಕೋತೀನಿ...."

ಅವಳು ಜೋರಾಗಿ ಅಳಲು ಆರಂಭಿಸಿದಳು.

ಅವನಿಗೆ ಸಿಟ್ಟು ಬಂದಿತು. ಬಾಗಿಲನ್ನ ತೆಗೆದುಕೊಂಡವನೇ ಹೊರಗೆ ನಡೆದುಬಿಟ್ಟನು. ಆಗ ಅವಳಿಗೆ ನೆನಪು ಬಂದಿತು. ಹೋದ ವರ್ಷ ಜರುಗಿದ ಆ ಕರಾಳ ಕೃತ್ಯ...

ಅದೇ ತಾನೆ ಹೆಣ್ಣು ಮಗು ಹುಟ್ಟಿತ್ತು; ಒಳ್ಳೇ ಶವದಂತೆ ಅವಳು ಬಿದ್ದುಕೊಂಡಿದ್ದಳು. ಅದೇ ತಾನೇ ಜನ್ಮ ತಾಳಿದ ಹೆಣ್ಣು ಕೂಸು... ಹುಲ್ಲಿನ ಗುಡ್ಡೆಯ ಮೇಲೆ ಮಲಗಿಕೊಂಡು ಗಟ್ಟಿಯಾಗಿ ಅಳುತ್ತಿತ್ತು. ಪಾಪ, ಅದನ್ನ ಎತ್ತಿಕೊಳ್ಳಬೇಕು, ಸಮಾಧಾನಪಡಿಸಬೇಕು, ಎಂದೆಲ್ಲಾ ಅನ್ನಿಸಿದರೂ ಏಳಲಿಕ್ಕಾಗದೆ ಅಸಹಾಯಕತೆಯಿಂದ ನೋಡುತ್ತಿದ್ದಳು.

ಹೌದು.... ತನ್ನ ಕ್ರೂರ ಗಂಡ ಒಂದು ಬಕೆಟ್ ಕುದಿಯುವ ನೀರನ್ನ ತರುವುದನ್ನ ನೋಡುತ್ತಿದ್ದಳು.

"ಬೇಡ! ಅಯ್ಯೋ ಬೇಡ" - ತನ್ನೆಲ್ಲ ಶಕ್ತಿಯನ್ನು ಒಟ್ಟುಗೂಡಿಸಿ ಚೀರಿದ್ದಳು.

ಆದರೆ ಅವನು ನಿರ್ಯೋಚನೆಯಿಂದ ತಮ್ಮ ಮಗುವನ್ನ ಅದೇ ತಾನೆ ಹುಟ್ಟಿದ ಮಗುವನ್ನ ಆ ಕುದಿಯುವ ನೀರಲ್ಲಿ ತುರುಕಿದ್ದನು. ಮತ್ತೆ ಅದರ ಅಳುವಿನ ಶಬ್ದವಿಲ್ಲ!

ಅವಳ ಹೃದಯವನ್ನೇ ಯಾರೋ ಕಿತ್ತುಕೊಂಡಂತೆ ಭಾಸವಾಗಿ ಜ್ಞಾನತಪ್ಪಿ ಬಿದ್ದಿದ್ದಳು.

"ಎಲ್ಲಾ ನನ್ನ ದುರದೃಷ್ಟ...." ಈಗವನ್ನ ಜ್ಞಾಪಿಸಿಕೊಂಡು ಕಣ್ಣೀರು ಒರೆಸಿಕೊಂಡಳು. ಅವಳ ಆ ಬಿಸಿ ಕಣ್ಣೀರು ತಾಗಿ ಎದ್ದ ಚೂಬಾನ್ ಪಿಳಿಪಿಳಿ ಕಣ್ಣು ಬಿಡುತ್ತಾ "ಅಮ್ಮಾ - ಅಲಬೇಡ...." ಎಂದಿತು.

ಅದನ್ನು ಎದೆಗಪ್ಪಿಕೊಂಡಳು.

ಹೊರಡುವ ಹಿಂದಿನ ರಾತ್ರಿ. ಅತಿ ಕತ್ತಲಾಗಿರುವ ಮೂಲೆಯಲ್ಲಿ ಕುಳಿತು, ಮುದ್ದಿಸಿದಳು, ಮಗನನ್ನು ಅದಕ್ಕೆ ಹಿಂಸೆಯಾಗುವಷ್ಟು.

"ಅಮ್ಮ ...." ಅದು ನೆಮ್ಮದಿಯಿಂದ ತಾಯಿಯ ಎದೆಗೊರಗಿತ್ತು.

"ಅಮ್ಮಾ ನಾಳೆ ಹೋಗ್ತಿದಾಳೆ... ವಾಪಸ್ಸು ಬರೋದಿಲ್ಲ... ಇನ್ನೂ ಮೂರು ವರ್ಷ ಬರೋಕ್ಕಾಗಲ್ಲ" - ತಿಳಿಸಿದಳು.

"ಎಲ್ಲಿಗೆ ಓಗ್ತೀ ಅಮ್ಮಾ? ದೇವಸ್ಥಾನಕ್ಕಾ?"

"ಇಲ್ಲಿ ಕಂದ... ದೂರ ಇರೋ 'ಲಿ' ಮನೆತನಕ್ಕೆ"

"ನಾನೂ ಬರ್ತೀನಿ..."

"ಆಗಲ್ಲ ಮಗು..."

ಮಗುವಿಗೆ ಕೋಪ ಬಂದಿತು; ತಾಯಿಯನ್ನು ಹೊಡೆಯಿತು.

"ಇಲ್ಲೇ ಅಪ್ಪನ ಜೊತೆ ಇರು ಮಗು" - ಮುದ್ದಿಸಿ ಸಮಾಧಾನ ಮಾಡಿದಳು. - "ಅಪ್ಪ ನಿನ್ನನ್ನ ಚೆನ್ನಾಗಿ ನೋಡಿಕೋತಾರೆ. ಹೇಳಿದ ಮಾತನ್ನ ಕೇಳ್ಕೊಂಡು ಜಾಣನಾಗಿರು ಮರಿ. ಇನ್ನೊಂದು ಮೂರು ವರ್ಷ ಅನ್ನೋ ಹೊತ್ತಿಗೆ...." ಅವಳು ಮಾತನ್ನ ಮುಗಿಸುವುದಕ್ಕೂ ಮುಂಚೆಯೇ, ಮಗು ನೋವಿನಿಂದ ಹೇಳಿಕೊಂಡಿತು, ಅಮ್ಮನ ಹತ್ತಿರ - "ಅಪ್ಪ ನನ್ನನ್ನ ಒದೀತಾರೆ".

"ಇನ್ಮೇಲಿಂದ ಹೊಡೆಯೊಲ್ಲ" - ಸಮಾಧಾನಿಸುತ್ತಿರುವಂತೆಯೇ ಅವಳ ಕೈ ಅವನ ಹಣೆಯನ್ನು ಮೃದುವಾಗಿ ನೇವರಿಸಿದವು. ಅದೇ ತಾನೆ ವಾಸಿಯಾದ ಗಾಯವೊಂದಿತ್ತಲ್ಲಿ. ಸನಿಕೆಯ ಕೊನೆಯಿಂದ ಅವನ ತಂದೆ ಒಂದು ಸಲ ಹೊಡೆದಿದ್ದ ಗಾಯ - ಅದು. ಈಗ ತಾಯಿಯಿಂದ ಈ ಗಾಯ - ಹೃದಯಕ್ಕೆ!

ಮತ್ತೂ ಏನೇನೋ ಹೇಳಿ, ಬೆದರಿದ ಆ ಪುಟ್ಟ ಹೃದಯಕ್ಕೆ ತಂಪೆರೆಯಬೇಕೆಂದಿದ್ದಳೇನೋ ಪಾಪ, ಅಷ್ಟರಲ್ಲಿ ಗಂಡ ಒಳಗೆ ನಡೆದ. ಜೇಬಿನಿಂದ ಒಂದು ಕಂತೆ ನೋಟನ್ನ ಹೊರತೆಗೆದು ಹೇಳಿದ. "ಈಗ ಒಂದಷ್ಟು ಅಡ್ವಾನ್ಸ್ ಕೊಟ್ಟಿದ್ದಾರೆ. ನೀನಲ್ಲಿಗೆ ಹೋದ ಮೇಲೆ ಬಾಕಿ ಬರತ್ತೆ" - ಇಷ್ಟು ಹೇಳಿದವ, ಆ ಮೇಲೆ, ಸ್ವಲ್ಪ ಹೊತ್ತಾದ ಮೇಲೆ ತಿಳಿಸಿದ - ಅವರು ನಿನಗೊಂದು ಕುರ್ಚಿಯನ್ನ ಕಳಿಸಲು ಒಪ್ಪಿದ್ದಾರೆ. ಅಷ್ಟು ಹೊತ್ತಿಗೇ ಬರತ್ತೆ..."

ಆ ರಾತ್ರಿ ಅವರಿಬ್ಬರೂ ಒಂದು ಲೋಟ ನೀರು ಸಹ ಕುಡಿಯಲಿಲ್ಲ.

ರಾತ್ರಿ ಪೂರ್ತಿ ಆ ತಾಯಿ ನಿದ್ರಿಸಲಿಲ್ಲ. ತನ್ನ ಚೂಬಾವಿನ ಬಟ್ಟೆಗಳನ್ನೆಲ್ಲಾ ಮಡಿಸಿಟ್ಟು, ರಿಪೇರಿ ಮಾಡಿದಳು. ಗುಂಡಿ ಹಾಕಿದಳು. ಚಳಿಗಾಲ ಹತ್ತಿರ ಬಂತು ಎಂದು ಹರಿದು ಹೋಗಿದ್ದ ಅವನ ಸ್ವೆಟರ್ ಅನ್ನು ಸರಿ ಮಾಡಿದಳು. ಬೆಳಗ್ಗೆಯಾಗುವವರೆಗೂ ಪಕ್ಕದಲ್ಲೇ ಕೂತು, ಗಾಳಿ ಹಾಕಿದಳು - ಸೊಳ್ಳೆ ಓಡಿಸಿದಳು.

ನಿದ್ರೆ ಬಂದಾಗ ಬೆಳಕು ಹರಿಯಿತು. ತಕ್ಷಣ ಛಂಗನೆದ್ದು, ಚುಬಾನನ್ನು ಎಬ್ಬಿಸಿ, ಮುಖ ತೊಳೆದು, ಬೇರೆ ಶುಚಿಯಾದ ಬಟ್ಟೆಗಳನ್ನು ಹಾಕಿದಳು.

"ಜ್ಞಾಪಕ ಇಟ್ಟುಕೋ ಕಂದ, ನಾ ಹೇಳಿದ್ದನ್ನ.... ಜಾಣನಾಗಿದ್ರೆ, ನಿನ್ನ ತಂದೆ ನಿನ್ನನ್ನ ಹೊಡೆಯೊಲ್ಲ. ವಾಪಸ್ಸು ಬರೋವಾಗ ಸ್ವೀಟ್ಸ್ ತರ್ತೀನಿ...."

ಮಗುವಿಗೆ ಇದೆಲ್ಲಾ ಏನು ಅರ್ಥವಾದೀತು? ತನಗೆ ಹಾಕಿದ ಹೊಸ ಬಟ್ಟೆಯನ್ನು ಮುಟ್ಟಿ ಮುಟ್ಟಿ ನೋಡುತ್ತಾ ಸಂತೋಷದಿಂದ ಕುಳಿತು - "ನಾ ನಿನಗೊಂದು ಆಪು ಏಳಲಾ, ಅಮ್ಮಾ?"

ಅದರ ತಾಯಿ ಅದಕ್ಕೆ ಹೇಳಿಕೊಟ್ಟಿದ್ದ ಹಾಡನ್ನು ಹೇಳಲುಪಕ್ರಮಿಸಿತು. ತಾಯಿಯ ಎದೆ ಸಂಕಟದಿಂದ ಬಿರಿಯಿತು.

ಕುರ್ಚಿಯನ್ನು ಎತ್ತಿಕೊಂಡು ಹೋಗುವವರು ಬಾಗಿಲ ಬಳಿ ಹಾಕಿದ್ದ ಮೇಜಿನ ಮೇಲೆ ಕೂತು, ಬೀಡಿ ಸೇದುತ್ತಾ ಸಂಭಾಷಿಸುತ್ತಿದ್ದರು. ಶೀಘ್ರದಲ್ಲೇ ಮಿಸೆಸ್ ಶಿನ್ ಆಗಮಿಸಿದಳು.

ಅಲ್ಲಿಯ ಮದುವೆಗಳನ್ನೆಲ್ಲಾ ಗೊತ್ತು ಮಾಡುವ ಬಿಡಿಸುವ, ಆಸಾಮಿ - ಆಕೆ.

"ಮಳೆ ಬರ್ತಿದೆ" - ಮುಗುಳುನಗುತ್ತಾ ಚುಬಾನ ತಂದೆಗೆ ತಿಳಿಸಿದಳು - "ಇನ್ಮೇಲಿಂದ, ನಿಂಗೆ, ನಿನ್ನ ಸಂಸಾರಕ್ಕೆ, ಸುಖ...."

ತಾಯಿ ಕಹಿಯಾಗಿ ನಕ್ಕಳು.

ಆ ಮುದುಕಿ ಗಲಾಟೆ ಮಾಡಿ ತನಗೋಸ್ಕರ ಸ್ವಲ್ಪ ಹಣವನ್ನು ಗಿಟ್ಟಿಸಿಕೊಂಡಳು. ತನ್ನಿಂದಲ್ಲವೇ ಅವನಿಗೆ ಈ ಹಣ ಬಂದಿರುವುದು?

"ಹೊತ್ತಾಯ್ತು, ಹೊತ್ತಾಯ್ತು. ಬೇಗ ಹೊರಡು" ಮಗನನ್ನ ಬಲವಾಗಿ ಹಿಡಿದುಕೊಂಡು ನಿಂತಿದ್ದ ಅವಳನ್ನು ಅವಸರಪಡಿಸಿದಳು - "ಊಟಕ್ಕೆ ಮುಂಚೆ ಅಲ್ಲಿರಬೇಕು".

ತಾಯಿ ಮಗನನ್ನು ಬಿಟ್ಟು ಹೋಗಲಾರಳು...

"ಅವಳೇನೂ ನಾಚಿಕೊಳ್ಳೋ ವಧುವಲ್ಲ" - ಕುರ್ಚಿ ಎತ್ತುವವರು ಗೊಣಗಾಡಿದರು - "ಯಾಕೀ ಅಳು, ಎಲ್ಲಾ?"

"ನಾನೂ ಬತ್ತೀನಿ..."

ಮುದುಕಿ ಅವನನ್ನ ಬಲವಂತವಾಗಿ ಎತ್ತಿಕೊಂಡು ಒಳನಡೆದಳು... "ನೀನಿನ್ನು ಹೋಗಬಹುದು" ಎಂದು ಅಪ್ಪಣೆ ಮಾಡುತ್ತಾ...

ಇನ್ನು ಗಂಡ... ತನ್ನ ತಲೆಯನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಕೂತುಬಿಟ್ಟಿದ್ದನು; ಏನೊಂದೂ ನುಡಿಯಲಿಲ್ಲ...

ಅವರ ಮನೆಯ ಮುಂದೆ ಅವಳ ಕುರ್ಚಿಯನ್ನು ಇಟ್ಟ ತಕ್ಷಣ, ಸುಮಾರು ವರ್ಷದ ಹೆಂಗಸು ಹೊರಬಂದು, ಕೆಳಗಿಳಿಯಲು ಅವಳಿಗೆ ಸಹಾಯ ಮಾಡಿದಳು. ಉದ್ದನೆಯ ಮುಖದ ಗಂಡಸೊಬ್ಬ ಹಿಂದೆಯೇ ಬಂದು, ಅವಳನ್ನೇ ನೋಡುತ್ತಾ ನಿಂತನು. ಅಕ್ಕಪಕ್ಕದಲ್ಲಿ ವಾಸಿಸುತ್ತಿದ್ದ ಕೆಲವರು ಗೇಟಿನ ಬಳಿ ಬಂದು ಇಣಿಕಿ ನೋಡಹತ್ತಿದರು.

ಇವರುಗಳು ಒಳಹೋದರು.

ಹೊಸ ಗಂಡ, ಹೊಸ ಮನೆ...

ಹಳೆಯದಕ್ಕಿಂತ ನೂರು ಪಾಲು ಚೆಂದ. ಆದರೆ, ಆ ತಾಯಿಯ ಮನದ ತುಂಬಾ ಚುಬಾ, ಚುಬಾ. ಅವನ ಅಳು ಕಿವಿಯಲ್ಲಿ ಪ್ರತಿಧ್ವನಿಸುತ್ತಿತ್ತು.

ಮೆಲ್ಲಮೆಲ್ಲಗೆ ಆ ನೋವು ಕಡಿಮೆಯಾಯಿತು. ಹೊಸ ಗಂಡ ಒಗ್ಗಿದನು, ಮೊದಲ ಹೆಂಡತಿ ಒಳ್ಳೆಯವಳಾದರೂ, ಸದಾ ಇವಳ ಬಗ್ಗೆ ಅನುಮಾನ, ಹೊಟ್ಟೆಕಿಚ್ಚು. ಅವಳು ಎದುರಲ್ಲಿ ಇರದಿದ್ದಾಗ ಹೊಸ ಗಂಡನ ಕೂಡ ಮಾತನಾಡಬಾರದು!

ಅವಳ ಸ್ಥಾನವನ್ನು ಈ ಹೊಸ ಹೆಂಡತಿ ಎಲ್ಲಿ ಕಸಿದುಕೊಂಡು ಬಿಡುವಳೋ ಎಂಬಂತೆ ವರ್ತಿಸುತ್ತಿದ್ದಳು. ಕೆಲವೊಮ್ಮೆ ಮನೆಯ ಕೆಲಸವನೆಲ್ಲಾ ಅವಳ ಮೇಲೆ ಹೇರಿ, ಒಳ್ಳೇ ಕೆಲಸದವಳಂತೆ ನಡೆಸಿಕೊಳ್ಳುತ್ತಿದ್ದಳು. ಮತ್ತೆ ಕೆಲವೊಮ್ಮೆ, ತಂಗಿಗೆ ಆರೈಕೆ ಮಾಡುವಂತೆ ಮಾಡಿ ಕೂರಿಸುತ್ತಿದ್ದಳು.

ಹೊಸ ಹೆಂಡತಿಗೆ ಎರಡು ತಿಂಗಳಾಯಿತು. ಸುದ್ದಿ ಕೇಳಿದ ತಕ್ಷಣ ಮೊದಲ ಹೆಂಡತಿಗೆ ಸಂತೋಷವೇನೋ ಆಯಿತು; ಆದರೆ ಗಂಡ ತೋರಿಸುತ್ತಿದ್ದ ಉತ್ಸಾಹವನ್ನು ಕಂಡು ಜರ್ರನೆ ಇಳಿಯಿತು. ಅವನಿಗೆ ಒಂದು ಮಗುವನ್ನು ಕೊಡಲು ತನ್ನಿಂದ ಶಕ್ಯವಾಗಲಿಲ್ಲ ಎಂಬ ನೋವು ಈಟಿಯಂತೆ ಇರಿಯಿತು.

ಹೊಸ ಹೆಂಡತಿಗೆ ತಲೆನೋವು ಬಂದಿತು. "ಸುಮ್ಮನೆ ಅಲೆದಾಡ ಬೇಡ, ಮಲಗಿಕೋ" - ಎಂದು ಹೊಸ ಗಂಡ ಅವಳನ್ನು ಉಪಚರಿಸಿದ. ಹಾಗೆಂದು ಪಟ್ಟಾಗಿ ಮೂರು ದಿವಸ ಹಾಸಿಗೆಯಲ್ಲೇ ಇದ್ದುಬಿಡಬೇಕೇ? ಒಳ್ಳೇ ಮಹಾರಾಣಿಯಂತೆ! ಮೊದಲ ಹೆಂಡತಿಗೆ ರೇಗದೆ ಇರುವುದೇ?

"ನಿಂಗೇನು ಬೇಕು? ಏನಾದ್ರೂ ತಿನ್ನಬೇಕೆನಿಸುತ್ತಾ? ನಿಂಗೇನು ಇಷ್ಟ?" ಹೊಸ ಹೆಂಡತಿಯನ್ನು ಆತ ಉಪಚರಿಸಿದ್ದೂ ಉಪಚರಿಸಿದ್ದೇ, ಉಪಚರಿಸಿದ್ದೂ ಉಪಚರಿಸಿದ್ದೇ!

ಮೊದಲ ಹೆಂಡತಿಗೆ ಇದೆಲ್ಲಾ ಹಿಡಿಸುವುದೇ?

"ಎಲ್ಲಾ ಬರೀ ಬೂಟಾಟಿಕೆ! ನಮ್ಮ ಮನೆಗೆ ಬಂದ ತಕ್ಷಣ ಏನೆಲ್ಲಾ ಸೊಗಸು - ದೊಡ್ಡ ಮನುಷ್ಯತನಾನ ಕಲಿತುಬಿಟ್ಟಿದ್ದಾಳೆ! ಕೂತರೆ ಬೆನ್ನು ನೋವು, ನಡೆದರೆ ಕೈ ಕಾಲು ನೋವು! ಊರಲ್ಲೇ ಇದ್ದಿದ್ದರೆ, ಈ ಸ್ಥಿತೀಲೂ ಅವಳಿಗೆ ನೇರವಾಗಿ ಒಂದು ಹೊತ್ತು ಊಟ ಇರ್ತಿತ್ತೋ ಇಲ್ಲವೋ? ಹೆರಿಗೆ ಆಗೋ ಕೊನೇ ಕ್ಷಣದವರೆಗೂ, ಕೆಲಸ ಮಾಡ್ತಾನೋ ಭಿಕ್ಷೆ ಬೇಡ್ತಾನೋ ಇರ್ತಿತ್ತು - ನಂಗೊತ್ತು..." ಎಂದೆಲ್ಲಾ ಮನಸ್ಸಿನಲ್ಲೇ ಹಂಗಿಸಿದಳು.

"ಎಲ್ಲರಿಗೂ ಗಂಡು ಮಕ್ಕಳಾಗತ್ತೆ. ಯಾರಿಗೆ ಆಗಲ್ಲ?" ಅಡಿಗೆಯವರ ಹತ್ತಿರ ಹೇಳಿಕೊಂಡಳು. "ಅದಕ್ಕೆ ಹೀಗೆ ಆಡಬೇಕಾ?"

ಇಷ್ಟೆಲ್ಲಾ ಅಂದರೂ ಸವತಿಗೆ ಆರು ತಿಂಗಳಾದಾಗ ರಂಗುರಂಗಿನ ಹತ್ತಿ ಬಟ್ಟೆಗಳಲ್ಲಿ ಮಗುವಿಗೆ ಪುಟ್ಟ ಪುಟ್ಟ ಉಡುಪುಗಳನ್ನ ಹೊಲಿದಳು.

ಮಗು ಹುಟ್ಟಿತು. ಮನೆಯವರಿಗೆಲ್ಲಾ ಒಂದೇ ಉತ್ಸಾಹ... ಅವರುಗಳ ಪಂಚಾಂಗವಾದ ಆಲ್‌ಮಾಂಕ್ (Almanc) ಅನ್ನು ಹಿಡಿದುಕೊಂಡು ಗಂಡ ಗುಣಿಸಿಟ್ಟನು. ಮಗು ಹುಟ್ಟಿದ ಘಳಿಗೆ, ದಿನ ಎಲ್ಲವನ್ನೂ.

"ಅದು ಗಂಡು ಎಂದು ಎಲ್ಲರಿಗೂ ಈಗಲೇ ಹೇಳೋದು ಬೇಡ; ದೃಷ್ಟಿ ತಾಗತ್ತೆ. ಹೆಣ್ಣು ಹುಟ್ಟಿತು ಅಂತ, ಎಲ್ಲರಿಗೂ ಹೇಳೋಣ" ಮೊದಲ ಹೆಂಡತಿ ಆಳುಕಾಳುಗಳಿಗೆಲ್ಲ ಆಜ್ಞೆ ಮಾಡಿದಳು.

ಮಗುವಿಗೆ ಕಿಯುಬ ಎಂದು ಹೆಸರಿಟ್ಟರು. ಒಳ್ಳೆ ಸುಂದರವಾದ ಶಿಶು. "ಎಲ್ಲಾ ಮೊದಲ ಹೆಂಡತಿಯ ಹಾಗೆಯೇ..." ಸುತ್ತ ಮುತ್ತಲಿನವರು ಹೇಳಿದರು. ಆದರೆ ಮೊದಲ ಹೆಂಡತಿ ಅದನ್ನು ಎತ್ತಿಕೊಳ್ಳಲು ಬಂದರೆ ಸರಿ, ರೊಯ್ಯೆಂದು ಮುಖ ತಿರುಗಿಸುತ್ತಿತ್ತು. ತನ್ನ ತಾಯಿಯನ್ನು ಒಂದು ನಿಮಿಷ ಬಿಟ್ಟಿರುತ್ತಿರಲಿಲ್ಲ!

ಇದರಿಂದ ಎಲ್ಲರಿಗೂ ಯೋಚನೆ ಹತ್ತಿಕೊಂಡಿತು. ಇನ್ನೇನು, ಒಪ್ಪಂದ ಮುಗಿದುಬಿಡುವುದು, ಆಮೇಲೆ?

"ಇನ್ನೊಂದಷ್ಟು ಹಣವನ್ನ ಕೊಟ್ಟು ಅವಳನ್ನ ಸಂಪೂರ್ಣವಾಗಿ ಕೊಂಡುಕೊಳ್ಳೋಣ" - ಹೊಸಗಂಡ ಮೊದಲ ಹೆಂಡತಿಗೆ ಸೂಚಿಸಿದ.

"ಹಾಗೆ ಮಾಡೋ ಹಾಗಿದ್ರೆ ನಂಗೆ ಮೊದಲು ವಿಷ ಹಾಕಿ ಕೊಂದುಬಿಡಿ" - ಅವಳ ಉತ್ತರ - "ನಾನೂ ಅದರ ತಾಯಿಯಲ್ಲವೇ?" - ಒರಟಾಗಿ ಪ್ರಶ್ನಿಸಿದಳು.

ಹೊಸ ಹೆಂಡತಿಯ ಮನಸ್ಸಿನಲ್ಲಿಯೂ ಒಂದೇ ದ್ವಂದ್ವಯುದ್ಧ. ಅತ್ತ ತನ್ನ ಚುಬಾವಿನ ಯೋಚನೆ, ಇತ್ತ ಈ ಮಗುವಿನ ಆಸೆ, ಏನು ಮಾಡುವುದು?

"ಹೋಗಲಿ, ಇನ್ನೊಂದಷ್ಟು ಸ್ವಲ್ಪ ಹಣಕೊಟ್ಟು, ಇನ್ನೊಂದು ಮೂರು ವರ್ಷ ಮಾತ್ರ ಇಟ್ಟುಕೊಳ್ಳೋಣ" - ಹೊಸ ಗಂಡ ತನ್ನ ಮೊದಲನೆಯ ಹೆಂಡತಿಯನ್ನು ಕೇಳಿಕೊಂಡನು - "ಆಗ ಕಿಯುಬ ಕೂಡ ದೊಡ್ಡದಾಗಿರತ್ತೆ..."

"ನಾನು ನನ್ನನ್ನ ಬುದ್ಧದೇವನಿಗೆ ಒಪ್ಪಿಸಿಕೊಂಡಿದ್ದೇನೆ" ಎಂದು ಜಪಿಸುತ್ತಾ, ಬೌದ್ಧ ಜಪಮಾಲೆಯನ್ನು ಎಣಿಸುತ್ತಲೇ ಆಕೆ ನುಡಿದಳು - "ಅವಳಿಗೆ ಅವಳ ದೊಡ್ಡ ಮಗ ಇದ್ದಾನಲ್ಲಾ? ಅವಳ ನಿಜವಾದ ಗಂಡನ ಹತ್ರ ಅವಳು ಹೋಗಬೇಡವೇ?"

"ಕೇವಲ ಎರಡು ವರ್ಷದ ಕಿಯುಬ ತನ್ನ ತಾಯಿಯನ್ನ ಬಿಟ್ಟಿರಬೇಕು ಎಂದರೆ..."

ಮೊದಲ ಹೆಂಡತಿ ಜಪಮಾಲೆಯನ್ನ ಕೆಳಗಿಟ್ಟುಬಿಟ್ಟಳು.

"ನಾನವನನ್ನ ಚೆನ್ನಾಗಿ ನೋಡಿಕೋತೀನಿ. ಏನು ಕೊಂದುಬಿಡ್ತೀನಿ ಅಂದುಕೊಂಡಿರಾ?"

ಪಾಪ, ಆತ ತಕ್ಷಣವೇ ಅಲ್ಲಿಂದ ಹೊರಟುಹೋದ. ಹಿಂಬಾಲಿಸಿ ಕೂಗಿಕೊಂಡಳು. - "ನನ್ನ ಉದ್ಧಾರಕ್ಕೆ ಸಹ ಮಗು ಹುಟ್ಟಿದೆ ಅನ್ನೋದನ್ನ ಮರೆಯಬೇಡಿ. ಕಿಯುಬ ನನ್ನವನು. ನಮಗೆ ಮಕ್ಕಳಿಲ್ಲದೆ ಹೋದರೆ ನಿಮ್ಮ ವಂಶ ಕೊನೆಗೊಳ್ಳುವುದು. ನಾನೂ ನಿಮ್ಮ ವಂಶವನ್ನೇ ಅವಲಂಬಿಸಿದ್ದೇನೆ ಎನ್ನೋದನ್ನ ನೆನಪಿನಲ್ಲಿಡಿ. ನಿಮಗೆ ಅವಳು ಏನೋ ಮಾಟ ಮಾಡಿಬಿಟ್ಟಿದ್ದಾಳೆ. ನೇರವಾಗಿ ಯೋಚನೆ ಮಾಡೋ ಶಕ್ತಿಯನ್ನೇ ಕಳೆದುಕೊಂಡು ಬಿಟ್ಟಿದ್ದೀರಿ. ಇನ್ನೂ ನೀವು ಎಷ್ಟು ದಿನ ಬದುಕುತ್ತೀರಿ ಎಂದುಕೊಂಡಿದ್ದೀರಿ? ಖಂಡಿತ ನು ಅವಳೊಡನೆ ಆ ಪುರಾತನ ದೇವಸ್ಥಾನದಲ್ಲಿ ಜಾಗ ಹಂಚಿಕೊಳ್ಳುವುದಿಲ್ಲ... ನಾನು ಉದ್ಧಾರವಾಗೋದಿಲ್ಲ....

ಆ ಬೇಸಗೆಯಲ್ಲಿ ಮಗುವಿನ ಹಣೆಯ ಮೇಲೆ ಒಂದು ಕುರು ಎದ್ದಿತು. ಸ್ವಲ್ಪ ಜ್ವರ ಕಾಣಿಸಿಕೊಂಡಿತು. ದೇವತೆಗಳನ್ನೆಲ್ಲಾ ಸಲಹೆ ಕೇಳಿ, ಔಷಧಿಯನ್ನು ತಂದು ಮಗುವಿಗೆ ಕೊಡಲು ಮೊದಲ ಹೆಂಡತಿ ಎಲ್ಲೆಲ್ಲೋ ಹೋಗಿಬಂದಳು. ಆ ಔಷಧಿಯೋ, ಉರಿ ಎಂದರೆ ಉರಿ? ಮಗುವಿನ ಒದ್ದಾಟವನ್ನು ನೋಡಲಾರದ ಹೊಸ ಹೆಂಡತಿ ಮೆತ್ತಗೆ ಆ ಔಷಧಿಯನ್ನು ಜಾರಿಸಿಬಿಡುತ್ತಿದ್ದಳು. ಸರಿ, ಮೊದಲ ಹೆಂಡತಿಗೆ ಇದೊಂದು ಆಯುಧ. "ನೋಡಿದಿರಾ, ಆಕೆಗೆ ನಮ್ಮ ಮಗುವಿನ ಮೇಲೆ ಪ್ರೀತಿ ಇಲ್ಲ! ಅವಳ ಪ್ರೀತಿಯೆಲ್ಲಾ ಅವಳ ಆ ಅವನ ಮಗುವಿನ ಮೇಲೆ!"

ಕಿಯುಬಾವಿನ ಮೊದಲ ಹುಟ್ಟಿದ ಹಬ್ಬ ಬಹಳ ಜೋರಾಗಿ ಜರುಗಿತು. ಇಡೀ ದಿನ ಬಂದವರಿಗೆಲ್ಲಾ ಊಟ ತಿಂಡಿ! ಸಂಜೆಯ ಹೊತ್ತಲ್ಲಿ ಒಬ್ಬ ಅಪರಿಚಿತ ಕಾಲಿಟ್ಟನು. ನೋಡಲು ಖಾಯಿಲೆಯವ; ಹರಕಲು, ಕೊಳಕಲು ಬಟ್ಟೆ "ನೀನು ಯಾರು?" ಅತಿಥೇಯ ಆಶ್ಚರ್ಯದಿಂದ ಪ್ರಶ್ನಿಸಿದನು.

ಮೊದಲು ಅರ್ಥವಾಗಲಿಲ್ಲ ಹೊಸ ಗಂಡನಿಗೆ. ಆಮೇಲೆ ತುಂಬಾ ಒದ್ದಾಟವಾಯಿತು.

ಆತ ಕೂಡ ಒಂದು ಉಡುಗೊರೆಯನ್ನು ತಂದಿದ್ದನು. ಬೆಳ್ಳಿಯ ಬಣ್ಣ ಹಚ್ಚಿದ್ದ, ತಾಮ್ರದ ಒಂದು ಅಂಗುಲದ ಚೌಕಟ್ಟುಗಳು. ಅವುಗಳ ಮೇಲೆ, 'ದಕ್ಷಿಣ ಬೆಟ್ಟಗಳಂತೆ ದೀರ್ಘ ಆಯಸ್ಸು' ಎಂಬ ಅರ್ಥದ ಅಕ್ಷರಗಳು...

ಮೊದಲ ಹೆಂಡತಿ ಹತ್ತಿರ ಬಂದು ನೋಡಿದಳು. ಅವಳಿಗೆ ಸ್ವಲ್ಪ ಕೋಪ ಬಂದಂತೆ ತೋರಿತು. ಊಟಕ್ಕೆ ಇದ್ದು ಹೋಗುವಂತೆ ಹೊಸ ಗಂಡ ಅವನನ್ನು ಬಲವಂತಪಡಿಸಿದ. ನೆರೆದಿದ್ದ ಮಿಕ್ಕ ಅತಿಥಿಗಳೆಲ್ಲಾ ಗುಸುಗುಸ ಮಾತನಾಡಿಕೊಳ್ಳುತ್ತಿದ್ದರು.

ಎಷ್ಟು ದಿವಸಗಳಿಂದ ಊಟ ಕಂಡಿರಲಿಲ್ಲವೋ ಚರ್ಮದ ವ್ಯಾಪಾರಿ, ಕೊನೆಯವರೆಗೂ ತಿನ್ನುತ್ತಲೇ ಇದ್ದ! ಆ ಬಳಿಕ, ಮೂಲೆಯಲ್ಲಿ ಕುಳಿತಿದ್ದ ತನ್ನ ಹೆಂಡತಿಯನ್ನು ಭೇಟಿಯಾದ.

"ಯಾಕೆ ಬಂದಿರಿ?" - ಪ್ರಶ್ನಿಸಿದಳು, ಬೇಸರದಿಂದ "ಅದೂ ಈ ಗಲೀಜು ವೇಷದಲ್ಲಿ?"

"ಚುಬಾವಿಗೆ ತುಂಬಾ ಖಾಯಿಲೆ" ತಿಳಿಸಿದ. "ನೀನು ಹೊರಟುಹೋದಷ್ಟು ದಿವಸಗಳಿಂದ ... ಈಗಲೇ ಔಷಧಿ ಕೊಡಿಸದಿದ್ರೆ, ಯಾವ ಘಳಿಗೆಯಲ್ಲಿ ಬೇಕಾದ್ರೂ ಸಾಯಬಹುದು... ಸ್ವಲ್ಪ ಹಣ ಕೊಟ್ಟಿರ್ತೀಯಾ?"

ಅಸಂಖ್ಯಾತ ಚಿಕ್ಕುಗಳು ಅವಳ ಹೃದಯವನ್ನು ಹರಿದು ತಿನ್ನುತ್ತಿರುವಂತೆ ಭಾಸವಾಯಿತು. ಅಳು ಉಕ್ಕಿತು, ಆದರೆ ತಡೆದುಕೊಂಡಳು. ಕಿಯುಬಾನ ಹುಟ್ಟಿದ ಹಬ್ಬದ ದಿನ... ಊರವರೆಲ್ಲ ಒಳ್ಳೆಯದಾಗಲಿ, ಎಂದು ಹಾರೈಸಿರೋವಾಗ, ತಾನು ಅತ್ತು ಅಶುಭವನ್ನುಂಟು ಮಾಡುವುದೇ?

"ನನ್ನ ಕೈಲೂ ದುಡ್ಡಿಲ್ಲ" - ಹೇಳಲಾರದೆ ಹೇಳಿದಳು - "ಆದರೆ ಈ ಉಂಗುರವನ್ನ ತಗೊಂಡು ಹೋಗಿ ಮಾರಿ, ಮೊದಲು ಚುಬಾವಿಗೆ ಔಷದಿ ಕೊಡಿಸಿ ಬದುಕಿಸಿ..."

ಮೂರು ದಿವಸ ಕಳೆದಿರಬಹುದು.... ಹೊಸ ಗಂಡ ಒಂದು ಸಂಜೆ ಕೇಳಿದನು - "ನಿನಗೆ ನಾನು ಕೊಟ್ಟೆನಲ್ಲಾ ಪಚ್ಚೆ ಉಂಗುರ, ಅದು ಏನಾಯ್ತು?"

"ಅದನ್ನ ನಮ್ಮ ಯಜಮಾನರಿಗೆ ಕೊಟ್ಟೆ; ಮಗುವಿಗೆ ತುಂಬಾ ಖಾಯಿಲೆಯಂತೆ..."

"ಆ ಉಂಗುರ ತುಂಬಾ ಬೆಲೆಯುಳ್ಳದ್ದು... ಮುಂದಕ್ಕೆ ಕಿಯುಬಾವಿಗೆ ಆಗುತ್ತೆ ಅಂತ ನಾ ನಿಂಗೆ ಕೊಟ್ಟೆ. ನೀನು ಮಾಡಿರೋದು ಅವಳಿಗೆ ಗೊತ್ತಾದ್ರೆ, ಸುಮ್ನೆ ಇರ್ತಾಳಾ?" - ಸಿಟ್ಟಿನಿಂದ ಒದರಿದನು. - "ನಿಂಗೆ ಯಾವಾಗಲೂ ಅಷ್ಟೇ ನಿನ್ನ ಮೊದಲ ಗಂಡ, ಅವನ ಮಗೂನೇ ಇಷ್ಟ! ನಾನೆಷ್ಟು ಮಾಡಿದ್ರೇನು? ಇನ್ನೂ ಕೆಲವು ವರ್ಷ ಇಟ್ಟುಕೋಬೇಕು ಅಂತಿದ್ದೆ - ಆದರೆ, ಈಗ ನನಗನ್ನಿಸತ್ತೆ - "ನೀನು ಮುಂದಿನ ವರ್ಷಾನೇ ಹೋದರೆ ವಾಸಿ, ಎಂದು..."

ಚುಬಾವಿನ ಖಾಯಿಲೆ ಅವಳ ಹೃದಯವನ್ನು ತಿನ್ನತೊಡಗಿತು. ತುಂಬಾ ಇಳಿದುಹೋದಳು. ನಿಂತರೆ ಕೂತರೆ ಅವನದೇ ಯೋಚನೆ. ರಾತ್ರಿ ಮಲಗಿದ್ದಾಗಲೂ...

ಹೊರಡುವ ದಿನ ಹತ್ತಿರ ಬಂದಿತು. ಅಡಿಗೆಯವಳು ಬಂದು ಮೊದಲ ಹೆಂಡತಿಯನ್ನು ಕೇಳಿದಳು - "ಕರೆದುಕೊಂಡು ಹೋಗಲು ಕುರ್ಚಿಗೆ ಹೇಳುವುದಾ?"

ಜಪ ಹೇಳುತ್ತಿದ್ದ ಮೊದಲ ಹೆಂಡತಿ ತಲೆಯಾಡಿಸಿಬಿಟ್ಟಳು. "ನಡೆಯಲಿ ಬಿಡು... ಆ ಕೊನೇಲಿ ಕುರ್ಚಿಗೆ ದುಡ್ಡು ಕೊಡಬೇಕು. ಅವಳ ಹತ್ರ ಎಲ್ಲಿ ಬಂತು ದುಡ್ಡು? ಅವಳ ಗಂಡನಿಗೆ ಊಟಕ್ಕೆ ಕೂಡ ಗತಿಯಿಲ್ಲವಂತೆ!..."

ಕಿಯುಬಾವನ್ನು ಬಿಟ್ಟು ಹೋಗುವಾಗ ದುಃಖ ಹತ್ತಿಕೊಂಡು ಬಂದಿತು. "ಚಿಕ್ಕಮ್ಮಾ, ಚಿಕ್ಕಮ್ಮಾ" ಅದು ಕಟ್ಟಿಕೊಂಡಿತು. ತನ್ನನ್ನು 'ಚಿಕ್ಕಮ್ಮ' ಎಂದು ಕರೆಸಿಕೊಳ್ಳುತ್ತಿದ್ದಳು, ಮೊದಲ ಹೆಂಡತಿ. "ನಿನಗೆ ಒಳ್ಳೆಯ ಭವಿಷ್ಯವಿದೆ; ನನ್ನನ್ನ ಮರೆತುಬಿಟ್ಟು ಸುಖವಾಗಿರಪ್ಪಾ" ಹರಸಿದಳು ಕಣ್ಣೀರಿನಿಂದ ತೋಯಿಸಿ.

ಮೊದಲ ಹೆಂಡತಿಗೆ ಕಾಣದಂತೆ ಹೊಸ ಗಂಡ ಬಂದು ಸ್ವಲ್ಪ ಹಣವನ್ನು ಅವಳ ಕರಗಳಲ್ಲಿಟ್ಟನು. ಅದನ್ನು ಬಚ್ಚಿಟ್ಟುಕೊಂಡಳು. ಅಡಿಗೆಯವಳು ಬಲವಂತ ಮಾಡಿ ಒಂದು ಬಟ್ಟಲು ಅನ್ನವನ್ನು ತಿನ್ನಿಸಿದಳು. "ನೀನು ತುಂಬಾ ದೂರ ನಡೆಯಬೇಕು; ಶಕ್ತಿ ಬೇಡವೇ?" - ಎಂದು.

ಅರ್ಧದಾರಿ ಆದ ಮೇಲೆ ನಡೆಯಲಾಗದೆ, ಕುರ್ಚಿಯೊಂದನ್ನು ಏರ್ಪಾಡು ಮಾಡಿ ಕೂತಳು. ಕುರ್ಚಿ ಊರಿಗೆ ಹೋಗುವ ವೇಳೆಗೆ ಅವಳಿಗೆ ಅರೆ ನಿದ್ರೆ. ತುಂಬಾ ಸುಸ್ತು. ವಿಚಿತ್ರ ಮುದುಕಿಯೊಂದು ಕುರ್ಚಿಯಲ್ಲಿ ಕುಳಿತಂತೆ ತೋರುತ್ತಿತ್ತು. ಊರಿನ ಮಕ್ಕಳೆಲ್ಲಾ ಗೇಲಿ ಮಾಡುತ್ತಾ ಹಿಂಬಾಲಿಸಿದವು - ಕಲ್ಲೆಸೆದವು. ಆ ಗುಂಪಿನ ಮುಂದಾಳು - ಚುಬಾ, ಅವನ ಮನೆಯ ಮುಂದೆಯೇ ಕುರ್ಚಿ ನಿಲ್ಲಿಸಲ್ಪಟ್ಟು, ಅವಳು ಇಳಿದು "ಚುಬಾ? ಚುಬಾ?" ಎಂದು ಕರೆದಾಗ ಅವಮಾನದಿಂದ ದೂರದೂರ ಓಡಿದ.

"ಚುಬಾ? ಚುಬಾ? ಚುಬಾ?" - ಆರ್ತಳಾಗಿ ಕರೆದಳು - ಕರೆದಳು - ಕರೆದಳು, ತಾಯಿ... ಆ ತಾಯಿ.

* ನುಗ್ಗೇಹಳ್ಳಿ ಪಂಕಜಾ, ೧೯/೧, ೪ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - ೫೬೦ ೦೦೩.

ಪ್ರಭಾಸಿನಿ ಮಹಾಕುದ್

ಒರಿಯಾ ಭಾಷೆಯಲ್ಲಿ ಸ್ನಾತಕೋತ್ತರ ಪದವೀಧರೆ. ನೂರಾರು ಕವಿತೆಗಳನ್ನು ರಚಿಸಿರುವರು. ಇವರ ಕವಿತೆಗಳು ಒರಿಸ್ಸಾದ ಪ್ರತಿಷ್ಠಿತ ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ಬೆಳಕು ಕಂಡಿವೆ. ಒಂದು ಕಾದಂಬರಿಯನ್ನೂ ಬರೆದಿರುವರು. ಇವರ ಹಲವಾರು ಕವಿತೆಗಳು ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಅನುವಾದಿತವಾಗಿ ಪ್ರಕಟಣೆಗೊಂಡಿವೆ. ಇವರ ಕವಿತೆಗಳು ೧೯೮೬ರಲ್ಲಿ ಭಾರತೀಯ ಜ್ಞಾನಪೀಠದವರು ಪ್ರಕಟಿಸಿರುವ ಕಾವ್ಯ ಸಂಕಲನದಲ್ಲಿ ಸೇರಿವೆ. ಅನೇಕ ಕವಿ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಭೂಪಾಲದ ಭಾರತ್ ಭವನದಲ್ಲಿ ನಡೆಯುವ ಪ್ರತಿಷ್ಠಿತ ಅಂತರ ಭಾರತೀಯ ಕವಿ ಸಮ್ಮೇಳನದಲ್ಲೂ ಭಾಗವಹಿಸಿರುವ ಹಿರಿಮೆ ಇವರದು.

ನಿನ್ನ ಬಿಡುವುದು ಕಠಿಣ

ಒರಿಯಾ : ಪ್ರಭಾಸಿನಿ ಮಹಾಕುದ್
ಅನು : ಅಂದನೂರು ಶೋಭಾ

ಆ ನದಿ ಮೆಲು ನುಡಿಯಿತು
ಬಾ ನಾರಿ ಬಾ
ಲವಂಗ ದ್ವೀಪಕೆ ಬಾ

ನನ್ನ ಸಿಹಿಯಾದ ಗಂಗಾ ಪಾನಿ
ಬಾಯಾರಿಕೆಯ ತಣಿಸುವುದು
ಆ ಲವಂಗ ದ್ವೀಪವನು ಮತ್ತೆ ಮತ್ತೆ
ಕನರಿಸುವುದಿಲ್ಲವೆ ನೀನು?

ಅಸಂಖ್ಯಾತ ಹುಲ್ಲು, ಹೂವುಗಳು
ನನ್ನ ದಡದಂಚಿನಲಿ ಅರಳಿವೆ
ಮಿನುಗುತಾರೆಗಳೇ ಬಾನಿಂದ ಸುರಿದಿವೆ
ಹೊತಿಸಿವೆ ಎಲ್ಲೆಡೆಯೂ ಬೆಳಕಿನ ಬತ್ತಿಗಳ
ಚಂದ್ರಿಕೆಯ ಕಿರಣಗಳ
ಇನ್ನೇನು ಬೇಕಾಗಿದೆ ನಿನಗೆ?
ಪುಟ್ಟ ದೋಣಿಯಲಿ ನಿನ್ನ ಸಾಗಿಸುವೆ
ಆ ಲವಂಗ ದ್ವೀಪಕೆ
ಬಾ ನಾರಿ ಬಾ

ನಿನ್ನ ಸಮೀಪಿಸುವಾಗ
ನಾ ನದಿಯ ಬಳಿ ಹೋಗಲಾರೆ
ಓ ಗಂಗೆ, ನೀ ಬೇಸಿಗೆಯಾಗುವೆ, ಬರಿದಾಗುವೆ
ಈ ಗಳಿಗೆಯಲ್ಲದಿರೆ, ಮುಂದೆ
ಬೇಸಿಗೆಗೆ ಮುಂಚೆ, ನಿನ್ನ ಸಂಧಿಸುವೆ ನಾನು
ಲವಂಗ ದ್ವೀಪದ ಪರಿಮಳವು
ಎದೆಯ ನೋವು ಪುಟಿವಂತೆ

ಆಗಾಗ ಹೊಮ್ಮುವುದು ನನ್ನಲಿ
ಕಷ್ಟ ಸುಖಗಳ ಗಳಿಗೆಯಲಿ
ಬಾನು ಕರೆವುದು ಬಾ ನಾರಿ ಬಾ

ನನ್ನ ನೀಲಿಯಲಿ ನೀಲಿಯಾಗಲು
ಅಂದು ಬಯಸಿರಲಿಲ್ಲವೆ ನೀನು?
ಇತ್ತ ನೋಡು,
ಕಾಲ ಸರಿಯಲು ನಾನೆಷ್ಟುದೂರ ಸರಿದಿದ್ದೇನೆ?
ಆದರೂ, ಇನ್ನೂ ನೀಲಿಯಾಗಿಯೇ ಇದ್ದೇನೆ.
ನಿನಗಾಗಿ ನಿನಗಾಗಿ ಮಾತ್ರ.
ನೀಲಿ ಬಣ್ಣದಲಿ ಚಿತ್ರಬಿಡಿಸಲು
ನೀಲಿ ಶಾಯಿಯಲಿ ಪತ್ರ ಬರೆದೆ
ಅದು ಹೂವು ಅರಳುವ ಕಾಲ

ಹನಿ ಹನಿಯಾಗಿ ಹೇಗೋ
ನನ್ನೊಡನೆ ಸೇರುವೆ ನೀನು
ಅನಂತ ಮೌನದ ನನ್ನೆದೆಯ ಸಮೃದ್ಧ
ಸ್ನೇಹಭಾವ ಸಮಾಧಿಯಲಿ
ನೀನೂ ಮೌನವಾಗುವೆ
ಕರಗಿ, ನನ್ನೊಡನೆ, ಇದೇ ತಾಣದಲಿ
ಬಂದು ಸೇರುವೆ
ನಿನಗಾಗಿ ಕಾದಿರುವೆ ಆಕಾಶ ನಾನು
ಬಾ, ಸ್ವಾಗತಿಸುವೆ, ಇನ್ನು ಹತ್ತಿರ ಬಾ

ನಾ ಆಕಾಶವನು ಮುಟ್ಟಲಾರೆ
ನಾ ಕಣ್ಣು ತೆರೆದಾಗ ಕಾಣುವೆ
ಭೂತ ಕಾಲವ ಮಿನುಗಿಸಿದ ಬೆಳಗು
ಕರಗಿ ಹೋಗಿದೆ ಆ ಅರಳಿ ಪುಟಿಯುವ ಕ್ಷಣವು
ಜನನಿಬಿಡ ಬೀದಿಯ ಮಿನುಗುವ ಕಾಲ್ಕಡಗಗಳ
ಏಕಾಂತ ಪ್ರತಿಧ್ವನಿಯ ಝಣಝಣವಿಲ್ಲ

ಓ ಬಾನು, ನಿನ್ನ ನೀಲಿಯಲಿ ನಾ ನೀಲಿಯಾಗಲು
ತುಂಬಾ ಹವಣಿಸುವೆ ನಾನು
ಇಂದಾಗದಿರಬಹುದು, ಎಂದಾದರೊಂದು ದಿನ
ನಿನ್ನೊಡಗೂಡಲು ನಾ ಬರಲೇಬೇಕು.
ನಿಮ್ಮೊಡನೆ ಬಂದಾಗ ಸ್ವಾಗತದ ಹಂಬಲಿಕೆ
ಕನಸಲೂ ಮೆಲು ನುಡಿವುದು
ಹದಿಮೂರು ನದಿಗಳ ಏಳು ಸಾಗರಗಳಾಚೆ

ನಿನ್ನ ಹಾರಿಸಿಕೊಂಡೊಯ್ಯುವೆ ಬಾ
ಮಾಯಾಭೂಮಿಯ ರಾಜಕುವರನ ಸನಿಹಕೆ
ನಾನೆಲ್ಲ ಅರಿತಿರುವೆ ಹೂವುಗಳ ಪರಿಮಳದಿ
ಗುಲ್ಮೊಹರ ರಂಗಿನಲಿ ಕಳೆದುಂಬಿರುವೆ ನೀ
ಕರೆಯುವೆನು ಅದಕಾಗೆ, ಬಾ, ಸಾರಿ ಬಾ

ನನ್ನಲ್ಲಿ ನಿನ್ನೆಲ್ಲ ಭಾವಗಳ ಗೆರೆಯೆಳೆದು ಚಿತ್ರಿಸಿದೆ
ಪ್ರತಿ ರಾತ್ರಿ ನಿನ್ನೆಡೆಗೆ ನಿನ್ನಿರುವಿಕೆಯ ಕೆರಳಿಸಿ
ಮೋಹಗೊಳಿಸಲು ಬರುವೆ
ನಿನ್ನ ಸಿಹಿ ಬಯಕೆಗಳ ಮೇಲೆಲ್ಲಾ ಸುಗಂಧ ಸಿಂಪಡಿಸಿರುವೆ
ದೂರದ ವಿವಿಧ ದೇಶಗಳ, ವಿವಿಧ ವರ್ಣಗಳ
ಪುಷ್ಪಧೂಳಿಯನು ನಿನ್ನ ಮೇಲೆ ಸುರಿಸುವೆ
ಇಲ್ಲಿಂದ, ಈ ಜೀವನದಿಂದ ಬಹಿರ್ ಜೀವನಕೆ ಕಾಲಿಡುವೆ
ಈ ಭಂಗುರ ಕ್ಷಣಿಕ ಕನಸುಗಳಿಂದ
ಬಹಿರ್ ಕನಸುಗಳ ಜೊತೆಯಾಗುವೆ

ಕನಸೆ ಇದು, ನಾ ನಿನ್ನ ಸ್ಪರ್ಶಿಸಲಾರೆ
ನಾ ಕಣ್ಣು ತೆರೆದಾಗ ಜೀರೋ ಪವರ್ ಬಲ್ಬೊಂದು,
ಕಪ್ಪು ಛಾಪಿಯ ಪತ್ರಿಕೆ ಪುಸ್ತಕಗಳು,
ಮತ್ತೆ,
ಕಣ್ಣೀರಿಂದ ನೆನೆದ ತಲೆದಿಂಬೊಂದನ್ನು ಬಿಟ್ಟರೆ
ಕಾಣಸಿದ್ದಾದರೂ ಏನು?
ನಿನ್ನ ನಾ ಮುಟ್ಟಲಾರೆನಾದರೂ
ಪ್ರತಿ ರಾತ್ರಿ,
ಪ್ರತಿ ಋತುವು
ನನ್ನಲ್ಲಿ ಬಂದು ಹೋಗುತಿರು
ಅದೊಂದೇ ನೀ ನನಗೆ ತೋರುವ ಒಲವು..

* ಅಂದನೂರು ಶೋಭ, ಉಪನಿರ್ದೇಶಕರು, ಅಂಚೆ ಮತ್ತು ದೂರಶಿಕ್ಷಣ ಸಂಸ್ಥೆ, ಬೆಂಗಳೂರು ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಕ್ಯಾಂಪಸ್, ಬೆಂಗಳೂರು - ೫೬೦ ೦೦೧.

ಹೆಣ್ಣು

ಪಂಜಾಬಿ : ರಾಮಸಿಂಹ ಚಾಹಲ್
ಅನು : ಡಾ। ವಿಜಯಾ ಸುಬ್ಬರಾಜ್

ಐದು ಕವಿತೆಗಳು

ನಾನು ಹೆಣ್ಣು
ಬೆಂಕಿಯ ಹೊಳೆ
ನೀರ ದಾಹದಲಿ ದಣಿದು
ಕಡಲನರಸುತ್ತ ನಡೆದೆ
ನಡೆನಡೆದು ಸೋತೆ
ಆದರೆ
ಕಡಲೇ ಕಾಣಲಿಲ್ಲ.

ನಾನು ಹೆಣ್ಣು -
ನನ್ನನ್ನೊಂದು ಕಬ್ಬಿನ ಜಲ್ಲೆ
ಯೆಂದು ತಿಳಿದು
ಕತ್ತರಿಸಿ ಹಿಂಡಿ
ರಸವ ಸೆಳೆದೆ
ಆಕೆವಗಾಣದ ನೋವು
ನೀನೇನು ಬಲ್ಲೆ
ಸಾಕು ನಿಲ್ಲಿಸು ಪ್ರಿಯ
ಬಿಡು ನನ್ನ ನಾನೇ
ಉರಿಯಲು ಮಾತ್ರವೇ
ಉಳಿದಿದ್ದೇನೆ

ನಾನು ಹೆಣ್ಣು -
ಒಂದು ಮನೆ
ಅಡಿಗೆ ಮನೆ
ಜಗತ್ತಿನ ಪಂಚ ಭಕ್ಷ್ಯ
ಪರಮಾನ್ನಗಳೆಲ್ಲ

ಇಲ್ಲಿ ಸಿದ್ಧವಾಗುತ್ತವೆ
ರೊಟ್ಟಿ, ಪಲ್ಲೆ, ಪಾಯಸ
ಕಜ್ಜಾಯ - ಹೀಗೆ ಹೀಗೇ
ಎಷ್ಟೋ ತರ ತರ!
ಆದರೆ ನಾ ಬಯಸುವ
ಆ ಪೂರ್ಣ ಬದುಕಲ್ಲಿ ಪ್ರಿಯ!
ಅರ್ಧಕ್ಕಷ್ಟೇ ನಿಲ್ಲುತ್ತದೆ.

ನಾನು ಹೆಣ್ಣು -
ಬಯಸಿದಾಗೆಲ್ಲ ನನ್ನನ್ನು
ಹಾಸಾಗಿ ಹೊದಿಕೆಯಾಗಿ
ನಿನ್ನ ಮನದ ಋತುಗಳಿಗೆ
ಅನುಗುಣವಾಗಿ ಬಳಸಿಕೊಂಡೆ
ಅಷ್ಟೇ ಅಲ್ಲ ನನ್ನ ಹಿಫಾಜತಿಗಾಗಿ
ಮನೆಯೊಳಗಿನ ತಿಜೋರಿಯಲ್ಲಿ
ಬಂಧಿಸಿದೆ ಇರಲೆಂದು
ಆಪತ್ಕಾಲಕ್ಕೆ!
ನನ್ನ ಮಾನರಕ್ಷಣೆಯೂ ಅಲ್ಲೇ
ಆಗುತ್ತದೆಂದೂ ಆಲೋಚಿಸಿದೆ

ನಾನು ಹೆಣ್ಣು -
ನನಗೂ ಒಂದು ಮನಸ್ಸಿದೆ
ಎಂದು ಯಾರೂ ಏಕೆ
ತಿಳಿಯುವುದಿಲ್ಲವೋ!
ಪ್ರೀತಿಸಬೇಡ - ಬಾಯಿ ಮುಚ್ಚಿಕೊಂಡಿರು
ತಲೆತಗ್ಗಿಸಿ ನಡೆ - ಪ್ರಜ್ಞಾವಂತಳಾಗು -
ಓಹ್.....!!
ಇದೇನು ನನ್ನ ಹಣೆಬರಹ!?
ನನ್ನ ಬಗ್ಗೆ ನನ್ನ ಸ್ವಾತಂತ್ರ್ಯದ ಬಗ್ಗೆ
ವೇದಿಕೆಗಳಿಂದ ಈ ಪ್ರಪಂಚ
ಎತ್ತರದ ದನಿಯಲ್ಲಿ ಉದ್ದುದ್ದ
ಮಾತನಾಡುತ್ತದೆ.

* ಡಾ। ವಿಜಯಾ ಸುಬ್ಬರಾಜ್, ಕನ್ನಡ ಪ್ರಾಧ್ಯಾಪಕರು, ಎಂ. ಇ. ಎಸ್. ಕಾಲೇಜು, ಮಲ್ಲೇಶ್ವರಂ, ಬೆಂಗಳೂರು - ೫೬೦ ೦೦೩.

ಕೆಲವು ಗಜಲ್‌ಗಳು

ಅನು : ಶೈಲಜಾ ಉಡಚಣ

ಫೈಜ್ ಅಹಮ್ಮದ್ ಫೈಜ್

ಹೂಗಳಿಗೆ ರಂಗೇರಲಿ ಉನ್ಮತ್ತ ಮಧುಮಾಸವಿರಲಿ
ಬಾ ಬಂದುಬಿಡು ಹೂದೋಟ ಹೊಗರೇರಲಿ

ಮಿಡುಕಿಲ್ಲ ಎದೆಗೂಡಿನಲಿ ನಸುಕಿನೆಲರಿಗೆ ಹೇಳು ಏನಾದರೂ
ದಮ್ಮಯ್ಯ ದೇವರಾಣೆ ಅವಳ ಮಾತು ಮರುಕಳಿಸಲಿ

ಚೆಂದುಟಿಯ ಚೆಂಬೆಳಕಿನಲಿ ಉದಿಸಲಿ ಬೆಳಗು
ಇಂದಾದರೂ ಮುಂಗುರುಳ ಇರುಳು ತೂಗಿ ಹಿಗ್ಗು ತರಲಿ

ನಾ ಬಡವನೇನೋ ಸರಿ ಆದರಿಲ್ಲಿ ಘನವಿಹುದು ವಿರಹದನುಭವ
ನೋವ ನುಂಗಬಲ್ಲೆ ನಿರಂತರ ನಾ ನಿನ್ನ ನೆನಪಿಸಲಿ

ಬಂದುದೆಲ್ಲಾ ಬರಲಿ ಆದುದಾಯಿತು ವಿರಹದುರಿ ಬೆಳಕಿನಲಿ
ಬಂಗಾರವಾಗಲಿ ಬದುಕು ಎಂದು ನನ್ನೊಲುಮೆ ನಿನ್ನ ಹರಸುತಿರಲಿ

ಹುಚ್ಚ ಉನ್ಮತ್ತ ವಿರಹಿಯನು ಕೇಳಿದರೇನು ದಮ್ಮಯ್ಯ
ಉಟ್ಟಬಟ್ಟೆ ಚಿಂದಿಚೂರುಗಳೇ ಎಲ್ಲಾ ಪಸರದಲಿ

ಫೈಜ್ ಮನೆ ಬಿಟ್ಟನೆಂದರೆ ಅಡ್ಡದಾರಿಯಲ್ಲೇನು
ನೇಣುಗಂಬದತ್ತಲೇ ನೇರಗುರಿ ಗೆಳೆಯ ಗುರುತಿರಲಿ

ಮಜ್‌ರೂಂ ಮೊಹಿಯುದ್ದೀನ

ವಿರಹದುರಿಯನುರಿಸು ಒಂದಿಷ್ಟು ರಾತ್ರಿ ಬೆಳಗಲಿ
ಎದೆಯ ಕಿಡಿಗಳ ಹೊತ್ತಿಸು ತುಸು ನಿಣೆಯು ಸರಿಯಲಿ

ಅಗಲಿಕೆಯ ನೋವು ಬೆಳದಿಂಗಳ ಬೆಂಕಿ ಮಾಡಿದೆ
ಕರೆದುತಾ ಮಾಂತ್ರಿಕನ ನೋವು ನೀಗಲಿ ತುಸು ನಿಶೆಯು ಸರಿಯಲಿ

ಯಾರೂ ಕರಗುತ್ತಿಲ್ಲ ಯಾರೂ ಪರಿತಪಿಸುತ್ತಿಲ್ಲ
ಮೇಣವಾಗು ಕರಗು ಮತ್ತೆ ಮತ್ತೆ ಇನಿತು ರಾತ್ರಿ ಸರಿಯಲಿ

ಬೆಳಗಿಸು ನಿನ್ನ ಕದಪಕನ್ನಡಿಯ ಚೆಲುಕಣ್‌ನಗೆಯ
ಕೇಳಿಸು ಮತ್ತೆ ಮತ್ತೆ ಪ್ರೇಮಗೀತೆಯ ತುಸು ಕಪ್ಪು ಕರಗಲಿ

ಒಬ್ಬೊಬ್ಬರಿಗೆ ಹಿಡಿದು ಹಿಡಿದು ಕುಡಿಸು
ಇಂದಾಗಲ್ಲೆಲ್ಲರೂ ಉನ್ಮತ್ತರು ಪರವಶರು ತುಸು ರಾತ್ರಿ ಕಳೆಯಲಿ

ಈ ಯಾತನೆಯ ಶಿಖರ ಎತ್ತರೆತ್ತರ ಹಗುರವಲ್ಲ ಮತ್ತೆ
ಮೊನಚಾಗಲಿ ನಿನ್ನ ಗುದ್ದಲಿ ಹಾರಿ ತುಸು ರಾತ್ರಿ ಸವೆಯಲಿ

ಅಮೃತಾ ಪ್ರೀತಮ್‌ರ ಕವಿತೆಗಳು

ರಾಜನೀತಿ

ಕೇಳಿರುವೆ ನಾನು -
ರಾಜನೀತಿ ಎಂಬುದಿಲ್ಲಿ ಒಂದು ಕ್ಲಾಸಿಕ್ ಫಿಲ್ಮ್ ಇದ್ದಂತೆ
ಹೀರೋ -
ಬಹುಮುಖ ಪ್ರತಿಭೆಯ ನಿತ್ಯ ನಾಮಧಾಮ ಬದಲಿಸುವ ಒಡೆಯ
ಹೀರೋಯಿನ್ -
ಅಧಿಕಾರದ ಕುರ್ಚಿ ಅಲ್ಲೇ ಇದ್ದಲ್ಲೇ
ಐಕ್ಸ್‌ಟ್ರಾ -
ಲೋಕಸಭೆ, ರಾಜಸಭೆಗಳ ಸದಸ್ಯರು
ಫೈನಾನ್ಸರ್ -
ಹಳ್ಳಿಗಾಡಿನ ಅಜ್ಞಾನಿ ಕೂಲಿ ಗಮಾರ ರೈತ
(ಕೊಡುವವನಲ್ಲ, ಕಸಿದುಕೊಳ್ಳಲಾಗುವುದಲ್ಲಾ)
ಸಂಸತ್ತು -
ಇಂಡೋರ್ ಶ್ಯೂಟಿಂಗ್ ಸ್ಥಳ
ಪತ್ರಿಕೆ -
ಔಟ್ ಡೋರ್ ಶ್ಯೂಟಿಂಗ್ ಸಾಧನ ವ್ಯಾಪಾರ
ಈ ಸಿನಿಮಾ ನೋಡಿಲ್ಲ ಕೇಳಿರುವೆನೆಲ್ಲಾ

ಕಾರಣ ಸೆನ್ಸರ್ ಹೇಳುತ್ತಿರುವುದು
ವಯಸ್ಕರಿಗಾಗಿ ಅಲ್ಲ.

ಒಂದು ದೃಷ್ಟಿಕೋನ

ನೇಸರು ಮಾಡುವ ನೂರು ಕೊಲೆಗಳು ಮಾಫ್
ಜಗದ ಪ್ರತಿಯೊಬ್ಬನ ದಿನವನ್ನು ಅವನು ಮಾಡುತ್ತಾನೆ ಸಾಫ್

ಪ್ರತಿಯೊಬ್ಬನ ಆಯುವಿನ ಒಂದು ಚುಟುಕು
ಅವನ ನಾಲಿಗೆ ಚಪ್ಪರಿಕೆಯ ಒಂದು ಗುಟುಕು

ನಮ್ಮ ಕೈಯಲ್ಲಿರುವುದು ಕೇವಲ ಇಷ್ಟೇ
ಚಪ್ಪರಿಸಿದ ತುಂಡು ಗಾಬರಿಗೊಂಡು ಹೊರಗೆಸೆಯಲಿ

ಇಲ್ಲವೆ ಕಬಾಬ್ ಮಾಡಿ ಭೀತನಾಗಿ ಹುರಿದು ಮುಕ್ಕಲಿ
ಉಸಿರ ಉಗುಳ ನುಂಗುತ್ತಾ ಮತ್ತೊಂದಕ್ಕಾದರೂ ಕಾದಿರಲಿ

ರಾಜಸತ್ತ

ಯುದ್ಧ ಕಾರ್ಖಾನೆಯೊಂದು
ಕೂಗುವ ಕಿರುಚುವ, ದಿನವು ಹೊಗೆ ಉಗುಳುವ,
ಅದೇ ನೆಲೆಯಲ್ಲಿಯೇ ತಯಾರಾಗುತ್ತದೆ ರಾಜಸತ್ತ
ಜನ ಮಾಂಸದ ಮುದ್ದೆಗಳು, ಕಚ್ಚಾ ಮಾಲು;
ರಾಜನೀತಿಯ ವ್ಯಾಪಾರದಲ್ಲಿ ಖರೀದಿಸುತ್ತಾರೆ ಮತ್ತೆ;
ಕಾರ್ಖಾನೆಯ ಭಟ್ಟಿಯಲ್ಲಿ ಬೇಯಿಸುತ್ತಾರೆ,
ಆ ದೇವರು -
ಮಾಂಸದ ಮುದ್ದೆಗಳನ್ನು ಮಾರುವ ಕೇವಲ ಮಳಿಗೆಯವನು.

(ಮೇಲಿನ ಮೂರು ಕವಿತೆಗಳು ಅಮೃತಾ ಪ್ರೀತಂ ಅವರ 'ಕಾಗಜ್ ಔರ್ ಕ್ಯಾನ್‌ವಾಸ್' ಕವಿತಾ ಸಂಕಲನದಿಂದ ಆಯ್ದುಕೊಂಡವು)

ಧೂಮಿಲ್ ಅವರ ಹಿಂದಿ ಚುಟುಕಗಳು

ರೊಟ್ಟಿ ಮತ್ತು ರಾಜಕೀಯ

ಒಬ್ಬ ರೊಟ್ಟಿ ತಟ್ಟುತ್ತಾನೆ
ಮತ್ತೊಬ್ಬ ಅದನ್ನು ತಿನ್ನುತ್ತಾನೆ
ಮೂರನೆಯವನು -

ತಿನ್ನುವದಿಲ್ಲ, ತಟ್ಟುವದಿಲ್ಲ
ಆದರೊಂದಿಗೆ ಆಟವಾಡುತ್ತಾನೆ.
ಈ ಮೂರನೆಯವನು ಯಾರು ಎಂದೆ ನಾನು
ನಮ್ಮ ದೇಶದ ಸಂಸತ್ತಿನುತ್ತರ ಅದಕ್ಕೆ - ಕೇವಲ ಮೌನ.

ಕಬ್ಬಿಣದ ಕಜ್ಜಾಯ

ಕಬ್ಬಿಣದ ಸ್ವಾದವನ್ನು
ಕಮ್ಮಾರಗೇಕೆ ಕೇಳುತ್ತೀರಿ!
ಕಡಿವಾಣ ಹಾಕಿಕೊಂಡ
ಕುದುರೆಯನ್ನು ಕೇಳಿ.

* ಶೈಲಜಾ ಉಡಚಣ, ೧-೮೯೧/೪, 'ಚೇತನ', ಜೇವರ್ಗಿ ಕಾಲೋನಿ, ಗುಲಬರ್ಗಾ - ೫೮೫ ೧೦೨.

ಹೊಗೆಯ ಹಾಡು

ಮೂಲ : ವಿಲಿಯಂ ಎಡ್ವರ್ಡ್ ಬಗಾರ್ಥ್ ಡ್ಯುಬೋಯಿಸ್
ಅನು : ಎಚ್. ಎಸ್. ಆರತಿ

ನಾನೊಬ್ಬ ಧೂಮರಾಜ,
ನಾನು ಕಪ್ಪು.
ಬಾನಂಗಳದಲ್ಲಿ ಜೋಕಾಲಿಯಾಡಿ
ಗೋಳವನ್ನು ಸುರುಳಿಯಾಗಿ ಉರುಳಿಸುತ್ತಿರುವೆ
ಎದೆ ಬಡಿಯುವ ಯಂತ್ರದ ಯೋಚನೆಯಾಗಿ
ಕಷ್ಟ ಕೊಲ್ಲುವ ಆತ್ಮದಾತ್ಮವಾಗಿ
ತೊರೆ ಝರಿಗಳ ಕಲರವ ತರಂಗವಾಗಿ.

ಮಣ್ಣಿಂದಲೇ ಗುಂಗುರಾಗಿ ಮೇಲೆದ್ದು
ಸುಂಟರಗಾಳಿ ದೇವನ ಮನೆಯಾಗಿ,
ನಾನೊಬ್ಬ ಧೂಮರಾಜ
ನಾನು ಕಪ್ಪು.

ಮುರಿದ ಹೃದಯಗಳ ಮಾಲೆ ಹೆಣೆದು
ಭೂತದ ಭರ್ಜಿಯನ್ನು ಒರೆಯಲ್ಲಿ ಒತ್ತಿಟ್ಟು
ಉಕ್ಕುವ ಸಮಯದ ಕಗ್ಗತ್ತಲ ಸ್ಫೂರ್ತಿಯಾಗಿ
ದೇಶದ ಕಷ್ಟಗಳ ಕಷ್ಟವ ವರಿಸಿ
ರಕ್ತವಿಲ್ಲದ ಹಿಂಸೆಯ ರಕ್ತ ಸುರಿಸಿ
ಕೆಳಗೆ, ಅಂತರಾಳದಲ್ಲಿ ನಾನು ನೋವ ನೀಲಿಯಾಗಿ
ಮೇಲೆ ಸತ್ಯದ ಬುರುಜಾಗುವೆ
ನಾನೊಬ್ಬ ಧೂಮರಾಜ
ನಾನು ಕಪ್ಪು.

ನಾನು ನನ್ನ ಹಾಡೊಂದಿಗೇ ಕಪ್ಪಾಗುತ್ತಿರುವೆ
ತಪ್ಪನ್ನೆಲ್ಲ ಕೇಳುತ್ತ ಕಪ್ಪಿದ್ದಷ್ಟೂ
ಕಪ್ಪಾಗುತ್ತಿರುವೆ.
ಯಾವ ಬೆಳಗೂ ಬಸಿಯಲಾಗದು
ನೇರಳೆಯಾಗುವ ನನ್ನ ನಡುರಾತ್ರಿಗಳ
ರಾತ್ರಿಯಲ್ಲೇ ನಾನು ದೇವರ ಕೆತ್ತುತ್ತಾ
ನರಕಕ್ಕೆ ಬಿಳಿಬಣ್ಣ ಹಚ್ಚುತ್ತಿರುವೆ
ನಾನೊಬ್ಬ ಧೂಮರಾಜ
ನಾನು ಕಪ್ಪು.

ಮುಂಜಾವಿನ ಕೆಂಪನ್ನು ಶಪಿಸಿ
ಹುಟ್ಟದ ಹೃದಯಗಳ ಲಾಲಿಸುತ್ತಾ
ಬಳಿಯಲಿರುವ ಆತ್ಮಗಳು ರಾತ್ರಿ ಮಂಜಿನ ರೀತಿ
ಕಪ್ಪುಮಾನವನ ಬಿಳಿಯಾಗಿಸಿ
ನನ್ನ ಬಿಳುಪನ್ನು ಕಪ್ಪಾಗಿಸುವೆ
ಮಾನವ ಶಕ್ತಿಯ ಮುಂದೆ ಮುಚ್ಚಿಟ್ಟ ಆರ್ಭಟವೇ
ಅದಕ್ಕೆ, ಮಾಂಸ ಸುಡುವ ಮೈಲಿಗೆ ಕೈಗೆ ಜಯವಾಗಲಿ
ಪ್ರಿಯದೇವ, ಶ್ರಮದ ಭೂಮಿಗೆ ಕನಿಕರಿಸು,
ಧೂಮರಾಜನಿಗೆ ಕೋರು ಜಯ,
ಕಪ್ಪಿಗೆ ಜಯ ಕೋರು.

(ವಿಲಿಯಂ ಎಡ್ವರ್ಡ್ ಬಗಾರ್ಥ್ ಡುಬೋಯಿಸ್, ಎಂ.ಎ. ಪಿಎಚ್.ಡಿ. ಪದವೀಧರನಾಗಿ ಅರ್ಥಶಾಸ್ತ್ರ ಹಾಗೂ ಇತಿಹಾಸದ ವಿದ್ವಾಂಸ. 'The Crisis' ಪತ್ರಿಕೆಯ ಸಂಪಾದಕನಾಗಿ, ತನ್ನ ತೀಕ್ಷ್ಣ ಬರಹಗಳಿಗೆ ಪ್ರಸಿದ್ಧನಾಗಿದ್ದ. ಕಾದಂಬರಿಕಾರ್ತಿಯೊಬ್ಬಳನ್ನು ವಿವಾಹವಾಗಿ ಕಮುನಿಸ್ಟ್ ಪಕ್ಷದ ಕಾರ್ಯಕರ್ತನಾಗಿದ್ದ.)

ಅಪ್ರತಿಬಿಂಬ

ಮೂಲ : ವಾರಿಂಗ್ ಕ್ಯೂನೇ
ಅನು : ಎಚ್. ಎನ್. ಆರತಿ

ಸುಂದರಿ, ಅವಳಿಗೆ
ತನ್ನದೇ ಸೌಂದರ್ಯ ತಿಳಿದಿಲ್ಲ
ಅವಳ ಕಂದು ಮೈ ಸೊಬಗು ಅವಳಿಗೇ
ಇನ್ನೂ ಗೊತ್ತಿಲ್ಲ.

ತಾಳೆಮರಗಳ ಕೆಳಗೆ
ನಗ್ನಳಾಗಿ ನರ್ತಿಸಿ, ತನ್ನದೇ
ಪ್ರತಿಬಿಂಬ ನದಿಯ ತುಂಬಾ
ತೇಲುವಂದು ತಿಳಿಯಬಹುದೇನೊ?

ಆದರೆ, ನಮ್ಮ ರಸ್ತೆಯಲ್ಲೆಲ್ಲೂ ತಾಳೆ ಮರಗಳಿಲ್ಲ.
ಅಡುಗೆಯ ಬಟ್ಟಲ ನೀರೆಂದೂ ಅವಳಿಗೆ
ಯಾವುದೇ ಪ್ರತಿಬಿಂಬ ಕೊಡುವುದಿಲ್ಲ.

(ವಾರಿಂಗ್ ಕ್ಯೂನೇ ಒಬ್ಬ ಸಂಗೀತಕಾರ. ಸೈನ್ಯಕ್ಕೂ ಸೇವೆ ಸಲ್ಲಿಸಿದ. ತನ್ನ ಐವತ್ತರ ವಯಸ್ಸಿನಲ್ಲಿ ಇಡೀ ಸಮಾಜದಿಂದ ರೋಸಿ ಹೋಗಿ ತಾನೊಬ್ಬನೇ ಏಕಾಂಗಿಯಾಗಿದ್ದ. ತನ್ನ ಅತಿ ಆತ್ಮೀಯರನ್ನೂ ಭೇಟಿಯಾಗದೇ ತೊಳಲಾಡುತ್ತಿದ್ದ.)

ನೋವ ಕಂಬನಿಗಳು

ಮೂಲ : ರೇ ಡುರೆಂ
ಅನು : ಎಚ್. ಎನ್. ಆರತಿ

ಅತಿ ನೋವ ಕಂಬನಿಗಳೆಂದೂ
ಕಂದು ಹುಡುಗಿಯವು
ಎಷ್ಟು ಕಷ್ಟ ಹೊತ್ತರೂ ಅವಳು
ಅಳುವುದಿಲ್ಲ.

ಮಗನಿಂದ ಬೇರ್ಪಡಿಸಿ
ಗದ್ದೆಯಲ್ಲಿ ದುಡಿಸಿ
ಅವನನ್ನು ಕೊರಿಯಾದಲ್ಲಿ ಕೊಂದರೂ,
ಆ ವಿದ್ಯಾಶಾಲಿಯನ್ನು ಸೇವಕನಾಗಿಸಿದರೂ,
ಭಾವ ಮುಚ್ಚಿಡುವ ಕಂದು ಮುಖವಾಡ
ತೊಟ್ಟು, ಅವಳು ಕಹಿ ನಗುತ್ತಾಳೆ,
ಕಿರು ನಗುತ್ತಾಳೆ.
ರಕ್ತ ಕೆಂಪಗಿನ ಕಂಬನಿಗಳು
ಜಾರುತ್ತವೆ ಅವಳೊಳಗೇ.

ಇನಿಯನಿಂದ ಬೇರ್ಪಡಿಸಿ
ಮನೆಯಲ್ಲಿ ಗುಲಾಮಳಾಗಿಸಿ
ಬಂಡಿಗಳಲ್ಲಿ ಸವಾರಿ ಮಾಡಿ
ಆಹಾರ ಹಂಚಿ, ಒತ್ತೆಯಿಟ್ಟದ್ದಕ್ಕೆ
ಸಾವಿರ ದಿನ ದುಡಿದು ಹಣ ನೀಡುತ್ತಾಳೆ,
ಸಾವಿರಾರು ರಾತ್ರಿ ಸೇವೆಯ ಆಜ್ಞೆಯಿದ್ದರೆ
ಮಾಡುತ್ತಾಳೆ ಸೇವೆ.

ನೀನೆಂದೂ ಅವಳನ್ನು ಅಳಿಸಲಾರೆ,
ಏಕೆಂದರೆ, ಶತಮಾನಗಳಿಂದ ದುಃಖದೊಡತಿಯವಳು,
ಅವಳು ನಿನಗಾಗಿ ಅಳುವುದಿಲ್ಲ,
ಆದರೆ, ನನಗಾಗಿ ಬಿಕ್ಕುತ್ತಾಳೆ.

(ರೇ ಡುರೆಂ ಚಿಕ್ಕ ವಯಸ್ಸಿನಲ್ಲೇ ಮನೆ ಬಿಟ್ಟು ಓಡಿಹೋಗಿದ್ದವನು. ನಂತರ ಕ್ಯಾನ್ಸರ್‌ನಿಂದ ಅತಿ ದಾರುಣ ಮರಣವನ್ನಪ್ಪಿದ. ತನ್ನ ೪೦ ವರುಷಗಳ ನಂತರವೇ ಪದ್ಯಗಳ ರಚನೆಗೆ ಕೈ ಹಾಕಿದ್ದು ಈತನ ವೈಶಿಷ್ಟ್ಯ.)

* ಎಚ್. ಎನ್. ಆರತಿ, ಕಾರ್ಯಕ್ರಮ ನಿರ್ವಾಹಕರು, ಬೆಂಗಳೂರು ದೂರದರ್ಶನ ಕೇಂದ್ರ, ಜೆ. ಸಿ. ನಗರ, ಬೆಂಗಳೂರು - ೫೬೦ ೦೦೬.

ಸೀತಾಕಾಂತ ಮಹಾಪಾತ್ರ

ಒರಿಯ ಕವಿ ಸೀತಾಕಾಂತ ಮಹಾಪಾತ್ರ ಇಂದಿನ ಭಾರತೀಯ ಕಾವ್ಯದ ಪ್ರಮುಖ ದನಿಗಳಲ್ಲೊಂದು. ತಮ್ಮ ಮಾತೃಭಾಷೆಯಾದ ಒರಿಯದಲ್ಲಿ ಅವರು ಹತ್ತು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಕವನ ಸಂಕಲನಗಳು ಬಹುತೇಕ ಎಲ್ಲ ಭಾರತೀಯ ಭಾಷೆಗಳಿಗೆ ಮತ್ತು ಅನೇಕ ಯೂರೋಪಿಯನ್ ಭಾಷೆಗಳಿಗೆ ಅನುವಾದಗೊಂಡಿವೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿಗಳನ್ನು ಸೀತಾಕಾಂತರು ಪಡೆದಿದ್ದಾರೆ.

ಆಧ್ಯಾತ್ಮಿಕ ಧ್ವನಿಪೂರ್ಣವಾದ, ಅಪ್ಪಟ ಭಾರತೀಯವಾದ, ಭಾವಗೀತಾತ್ಮಕವಾದ ಕವಿತೆ ಅವರದು.

ಸೀತಾಕಾಂತರೇ ಒರಿಯದಿಂದ ಇಂಗ್ಲಿಷ್‌ಗೆ ಭಾಷಾಂತರಿಸಿರುವ ಅವರ ಕವನಗಳಲ್ಲಿ ನಾಲ್ಕನ್ನು ಇಲ್ಲಿ ಕನ್ನಡಿಸಲಾಗಿದೆ.

ಕೋಳಿ ಕಾಳಗ

ಇಂಗ್ಲಿಷ್ : ಸೀತಾಕಾಂತ ಮಹಾಪಾತ್ರ
ಅನು : ಸಿ.ಪಿ.ಕೆ.

ಪರಸ್ಪರ ಎದುರಿಸುತ್ತ ಅವರು ಉದ್ಘೋಷಿಸುತ್ತಾರೆ
ಆಪಾದಮಸ್ತಕ ಶಸ್ತ್ರಸನ್ನದ್ಧರಾದ
ಇಬ್ಬರು ವೀರರು.

ಗಬ್ಬು ನಾತವಡೆಗಳಲ್ಲಿ ಹುಳು ಹುಪ್ಪಟೆಗಳನ್ನು ಹುಡುಕುವ
ಅಥವಾ ಹಸಿದ ಬೆಕ್ಕುಗಳಿಂದ ಮತ್ತು ಇನ್ನೂ ಹಸಿದ
ಮನುಷ್ಯರಿಂದ ತಲೆ ಮರೆಸಿಕೊಳ್ಳುವ
ಗುಲಾಮಗಿರಿ ಇನ್ನಿಲ್ಲ.
ಕೊಡವುತ್ತಿದ್ದಾರೀಗ ಶತಮಾನಗಳ ಹೇಡಿತನವನ್ನು.

ಕಂಪಿಸುತ್ತದೆ ಹಳ್ಳಿ ಕೂಗುಗಳ, ರಣಘೋಷಗಳ
ಹುಚ್ಚು ಬಿರಿತದಲ್ಲಿ;
ಪಾಂಡವ, ಕೌರವರು ಕುರುಕ್ಷೇತ್ರ ರಂಗದಲ್ಲಿ
ವ್ಯೂಹಗೊಂಡಿದ್ದಾರೆ.

ವೀರರಿಗೆ ಏನೂ ಅರ್ಥವಾಗುವುದಿಲ್ಲ
ಏತಕ್ಕೆ ಈ ಯುದ್ಧ, ಏತಕ್ಕೆ ಈ ಬೊಬ್ಬೆಗಳು,
ಸದ್ದಿರದ ಹೊಲಗಳಲ್ಲಿ ಈ ಕೋಲಾಹಲ?

ಏನೋ ಕೇಳುತ್ತದೆ ನರಗಳನ್ನು,
ಏನೋ ಕುದಿಸುತ್ತದೆ ನೆತ್ತರನ್ನು,
ಉಬ್ಬುತ್ತವೆ ಕೊರಳು, ಮೇಲೇಳುತ್ತವೆ ಗರಿ
ಮೈಯಿಂದ ಹಾರಿಹೋಗುತ್ತವೋ ಎನ್ನುವಂತೆ.
ಕೋಪ ಮತ್ತು ಕೊಲೆಗಡುಕ ದ್ವೇಷ

ತುಂಬುತ್ತವೆ ಕಣಕಣವನ್ನು.
ಮಿಂಚಿನಲ್ಲಿ ಮೊದಲಾಗುತ್ತದೆ ಮಹಾಯುದ್ಧ;
ರಕ್ತರಂಜಿತವಾಗುತ್ತದೆ ಸಂಜೆಯ ಬಾನು.

ಒಂದೇ ಕ್ಷಣ.
ಅದು ಮುಗಿಯುತ್ತದೆ;
ಬಾಡುತ್ತದೆ ಸಂಜೆಯ ಕೆಂಪು ಮಿನುಗು ಆಗಸದಲ್ಲಿ;
ಹರಿಯುತ್ತದೆ ನೆತ್ತರು,
ಕೊನೆಗೊಳ್ಳುತ್ತದೆ ಒಂದು ದಿನ.
ಮರಳುತ್ತದೆ ಹಳ್ಳಿ ಚಕಿತ ಹೊಳಹಿನ
ಮುದ್ದೆಯೊಂದನ್ನು ಹೊತ್ತು
ಮೌನದಲ್ಲಿ.

❋

ಭಿಕ್ಷುಕ ಹುದುಗನ ಸಾವು

ಇಂಗ್ಲಿಷ್ : **ಸೀತಾಕಾಂತ ಮಹಾಪಾತ್ರ**
ಅನು : **ಸಿ.ಪಿ.ಕೆ.**

ಬೆಳಗಾಗುವ ವೇಳೆಗೆ ಅವನು ಅಲ್ಲಿರಲಿಲ್ಲ.
ಸಣಕಲ ಹಕ್ಕಿಯಂತೆ ಅವನ ದುರ್ಬಲ ದೇಹ ಬಿದ್ದಿತ್ತು
ಎಚ್ಚರಿಕೆಯಿಂದ ಬೆಳೆಸಿದ ಸಾರ್ವಜನಿಕ ಪಾರ್ಕಿನ
ಮೆತ್ತನೆಯ ಹುಲ್ಲಿನ ಮೇಲೆ.
ಅವನು ಬದುಕಿದ್ದಾಗ, ಇಂಥ ಮೃದುಸ್ಪರ್ಶವನ್ನೆಂದೂ
ಪಡೆದಿರಲಿಲ್ಲ.

ನಿಟ್ಟಿರುಳಿನುದ್ದಕ್ಕೂ ಅವನನ್ನು ನೋಡುತ್ತಿದ್ದುವು
ಒಂದು ಬುಟ್ಟಿ ನಕ್ಷತ್ರಗಳು -
ಸಾಯುತ್ತಿದ್ದ ಜ್ವಾಲೆಯ ಒಣ ದುಃಖವನ್ನರಿಯಲು,
ಅವನ ಒದ್ದೆಯಾದ ಉಳಿಕೆ ಮಾತುಗಳ ಸದ್ದನ್ನು
ಒಮ್ಮೆ ಮಾತ್ರ ತಳೆಯಲು;
ಆದರೆ ಅವನು ನಿಶ್ಶಬ್ದವಾಗಿದ್ದ;
ಹೇಳುವುದಕ್ಕೇನೂ ಅವನಲ್ಲಿರಲಿಲ್ಲ,
ಹೇಳುವ ಕೆಚ್ಚಾಗಲಿ ಬಯಕೆಯಾಗಲಿ ಅವನಲ್ಲಿರಲಿಲ್ಲ.
ಬೃಹತ್ ವಿಶ್ವದ ವಿರುದ್ಧ ಅವನಲ್ಲಿ
ದೂರಿನ ಒಂದು ಮಾತೂ ಇರಲಿಲ್ಲ.

ಚಂದ್ರ, ಬಹು ಹಿಂದೆ ಕಳೆದುಕೊಂಡ ತಾಯಂತೆ,
ಅವನನ್ನು ತನ್ನ ಕೋಮಲ ಬೆಳಕಿನಿಂದ ಮುದ್ದಿಸಿದ;
ನಕ್ಷತ್ರಗಳು, ಹೊಳೆಯುವ ಎರಡು ಪೈಸೆ,
ಐದು ಪೈಸೆ ನಾಣ್ಯಗಳಂತೆ ಅವನ ಅಸ್ಥಿಪಂಜರ ಸದೃಶ
ತವರದ ಡಬ್ಬಕ್ಕೆ ಬೀಳುತ್ತಿದ್ದವು;

ಅವನು ಮಗುವಷ್ಟೆ ಆಗಿದ್ದಾಗ ಮಾಡಿದ್ದಂತೆ,
ಗಾಳಿಯ ಸೋಂಕು ಅವನಿಗೆ ತಂದುಕೊಟ್ಟಿತು
ಮೊದಲ ದಿನಗಳ ಹಾಡನ್ನು ("ತಿಂಗಳು ಮಾವ ಬಾ, ಬಾ...")
ಎಲ್ಲೂ ಇಲ್ಲದ ಕಪ್ಪು ನಿದ್ದೆ ಅವನನ್ನು ತಬ್ಬಿತು.

ಬೆಳಗಿನಲ್ಲಿ ಅವನು ಅಲ್ಲಿರಲಿಲ್ಲ;
ಬೆಳಗು ಅಲ್ಲಿರಲಿಲ್ಲ.

ನಿಮ್ಮ ಹಳ್ಳಿ

ಇಂಗ್ಲಿಷ್ : ಸೀತಾಕಾಂತ ಮಹಾಪಾತ್ರ
ಅನು : ಸಿ.ಪಿ.ಕೆ.

ಕಡೆಗೂ ಮಧ್ಯಾಹ್ನ ಉರಿದುರಿದು
ತೆಳ್ಳಗಾಗಿದೆ;
ಕಡಿದಾದ ಗಿರಿಮುಖಿ ಗುಂಡಿ ಬಿಚ್ಚುತ್ತವೆ ಏಕಾಂತದಲ್ಲಿ
ಬಳಲಿದ ಪಯಣಿಗನಿಗೆ ತೋರಲು
ನೆತ್ತರು ಬಳಿದ ದಿಗಂತ,
ಹಾರುಗಪ್ಪೆಯ ಆಟವಾಡುವ ಹುಡುಗಿಯರಂತೆ
ನಿಮ್ಮ ಹಳ್ಳಿಯ ಸುತ್ತಲು ಗುಡ್ಡಗಳ ಹಾರ.

ಸೂರ್ಯ ನಿಮ್ಮ ನುಣುಪುಗೆನ್ನೆಗಳ ಮೆಟ್ಟಿಲುಗಳನ್ನು
ಅವಸರದಿಂದಿಳಿಯುತ್ತಾನೆ.
ಎರಡು ಗುಡ್ಡಗಳ ಚಿಮುಟಗಳು
ಬೆಂಕಿಯ ಜ್ವಲಿಸುವ ದೊಡ್ಡ ತುಣುಕನ್ನು
ಹಾಕುತ್ತವೆ ಗಾಳಿಯ ಪ್ರಶಾಂತ ನಿರಾಶೆಯೊಳಕ್ಕೆ

ಕೆಳೆ ಬೆಳೆಸುತ್ತದೆ ನನ್ನ ಮಂಕು
ಮಸುಕಾದ, ಕಪ್ಪಾದ ಸಾಲವೃಕ್ಷಗಳೊಡನೆ.

ನಿಮ್ಮ ಹಳ್ಳಿಯಲ್ಲಿ ನರ್ತಿಸುತ್ತವೆ ಆಸೆಗಳು
ಜೇಡಿಮಣ್ಣಿನ ಅಲಂಕೃತ ಗೋಡೆಗಳ ಮೇಲೆ,
ಹೂಗಳು ಮತ್ತು ಜೇನು ಹುಟ್ಟುಗಳು ಸಾಲಕಾಂಡಗಳ ಮೇಲೆ.
ತರುಣ ಆದಿವಾಸಿ ಜೇನುತುಪ್ಪದ ಅನ್ವೇಷಣೆಯಲ್ಲಿ
ಅಲೆಯಂತೆ ಜಾರುತ್ತಾನೆ ಕೆಳಕ್ಕೆ
ನೀಲಿ ಕತ್ತಲೆಯೊಳಕ್ಕೆ

ಆರ್ದ್ರ ನಕ್ಷತ್ರಗಳತ್ತ, ಹರಿದು ಹೊಸಕಿದ
ದಳಗಳತ್ತ.
ಯಾರೊಬ್ಬರೂ ಎಂದೂ ಮರಳುವುದಿಲ್ಲ
ಹೂವಿನ ಸುರುಳಿಗೊಂಡ ಕೇಂದ್ರದ ಪೂಜೆಯಿಂದ.

ನಕ್ಷತ್ರಗಳ ಬೆಳಕು ಒಡೆಯುತ್ತದೆ
ಮೌನದ ಹೂಜಿಯನ್ನು
ದುಃಖಿಸುವ ಗರ್ಭಾಶಯಗಳೆಲ್ಲ ಮೊದಲು ಮಾಡುತ್ತವೆ
ತಮ್ಮ ಕುಣಿತವನ್ನು
ಸೊಂಟದ ಮೇಲೆ ಕೈ, ಲಯಬದ್ಧ ರೋಷದಲ್ಲಿ
ಪರಸ್ಪರ ತೊಡರಿಕೊಂಡ ನಿರಾಶೆಗಳು;
ಕಚ್ಚುಕಚ್ಚಾದ ಅನಾಹೂತ ನೆರಳುಗಳ ದರ್ಶನ
ಮತ್ತು ಕಾಮನಬಿಲ್ಲುಗಳ ಹಿಡಿಹಿಡಿ ಧೂಳು.

ಮಾರನೆಯ ಬೆಳಗ್ಗೆ ನಾವು ಮರಳುವಾಗ,
ನಿಮ್ಮ ಬಳಲಿದ ಹಳ್ಳಿ ಮಲಗಿರುತ್ತದೆ ಇನ್ನೂ,
ಗುಡ್ಡಗಳ ನಡುವಣ ಟೊಳ್ಳಿನಲ್ಲಿ ತಲೆ ಹಾಕಿಕೊಂಡು
ಪೂತನಿಯ ದೊಡ್ಡ ಮೊಲೆಗಳ ನಡುವಣ ಬಾಲಕೃಷ್ಣ.

* ಡಾ। ಸಿ. ಪಿ. ಕೃಷ್ಣಕುಮಾರ್, ವಿಶ್ರಾಂತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬.

ನಿದ್ರಿಸು ಗಾಂಧೀ

[illegible]

ನೀ ನಿದ್ರಿಸು ಗಾಂಧೀ

[illegible]

ಪಾಪಿ ಜಮಾಯಿಸಿದಾಗ
ನಿನ್ನನ್ನು ದಂತಕಥೆಗಳ ರಾಜಮಹಲಿಗೆ
ಕರೆದೊಯ್ಯುವೆ ಗಾಂಧೀ!
ನಂತರ ಕ್ರಿಸ್‌ಮಸ್‌ನ ಮೇಣದ ಬತ್ತಿಗಳನ್ನು ಹಚ್ಚಿ,
ಜಗತ್ತಿನ ಎಲ್ಲಾ ಎಳೆಯರು
ಹಾಡುವೆವು ಕೂಡಿ
ಮತ್ತೆ ಪತ್ರಗಳನ್ನು ಸಾಂತಾಕ್ಲಾಸನಿಗೆ
ನಿದ್ರಿಸುವೆವು ಬರೆದು -
ಅಜ್ಜಾ!
ಹೊಸ ವರುಷದ ಉಡುಗೊರೆ!!
ಗಾಂಧೀಜಿಯ ಅಧರಗಳು ಭೂಮಿಯಲ್ಲಿ ಅರಳಿದ
ಕಾಮನಬಿಲ್ಲುಗಳನ್ನು ಅಡಗಿಸುವುದು
ನಮ್ಮ ದಿನನಿತ್ಯದ ಎಳೆ-ಎಳೆ
ಮಂಜಿನಿಂದ ತೊಯ್ದ ಗುಲಾಬಿಗಳ ಸಮೇತ!
ಎಳೆಯ ಶಿಲಾಶಿಲ್ಪಿ* ತಾಯಿಯ ಬೆರಳು ಹಿಡಿದು
ತೀರದ ಮರಳಿನಲ್ಲಿ
ಗವುಜು ಹಕ್ಕಿಯ ರೆಕ್ಕೆಗಳಿಂದ ಪುರ್ರನೆ ಹಾರುತ್ತಾ
ಬಿಸಿಲಿನ ಹೊಲಗಳಲ್ಲಿ
ನೀರಿನ ನಾಲೆಗಳನ್ನು ತೋಡುತ್ತಿರುವಾಗ
ನಿತ್ಯ ನಿನ್ನ ಹೂ-ತುಂಬಿದ ಪ್ರೇಮದ -
ದೋಣಿ ಹಿಡಿದು
ನಾ ಬರುವೆ ನಗರವ ಘಟ್ಟಗಳಲ್ಲಿ
ಈಗ ಬಂದು ಕೂರು
ಕಣ್ಣುಗಳಲ್ಲಿ ಮೌನಿಯಾಗಿ!
ಪುಷ್ಯಮಾಸದ ಮೋಡಗಳೇ
ನಿದ್ರಿಸಿಬಿಟ್ಟಿದ್ದಾರೆ ಗಾಂಧೀ!!

---

* 'ಶಿರೀನ್-ಫರಹಾದ' ಎಂಬ ಕತೆಯ ನಾಯಕ. ಈತ ತನ್ನ ಪ್ರೇಯಸಿ 'ಶೀರಿ' ಎಂಬ ರಾಜಕುಮಾರಿಯನ್ನು ಭೇಟಿಯಾಗಲು ಪರ್ವತವನ್ನು ಕೊರೆದು ಸುರಂಗ ಮಾರ್ಗವನ್ನು ರಚಿಸಿ, ಕಡೆಗೆ ಆಕೆಗಾಗಿ ಪ್ರಾಣ ತೆರುತ್ತಾನೆ.

* ಡಿ. ಎನ್. ಶ್ರೀನಾಥ್, 'ನವನೀತ್', ೨ ನೇ ಕ್ರಾಸ್, ಅಣ್ಣಾಜಿರಾವ್ ಲೇಔಟ್, ವಿನೋಬನಗರ, ಶಿವಮೊಗ್ಗ - ೫೭೭ ೨೦೪.

ಸೀ ಕವಿತೆ ಕುರಿತು

ಚೀನೀ ಭಾಷೆಯಿಂದ ಕನ್ನಡಕ್ಕೆ : **ಶ್ರೀಧರರಾವ್ ಪಿಸ್ಸೆ**

ಸೀ ಕವಿತೆಯ ಬೇರುಗಳು, ಹಾಡುಗಳನ್ನು ಕುರಿತ ಪ್ರಾಚೀನ ಮಹಾಗ್ರಂಥ 'ಸೀ ಜಿಂಗ್ ' ನಲ್ಲಿವೆ. ಇದು ಪ್ರಾಸ ನಿಯಮ, ಸ್ವರ ವಿನ್ಯಾಸ, ಹಾಡಿನ ಸಾಲುಗಳ ಉದ್ದ ಹಾಗೂ ಅವುಗಳಿಗೆ ಸಂಗೀತ ಸಂಯೋಜನೆ ಕುರಿತ ಒಂದು ಆಕರ ಗ್ರಂಥ. ಹಾನ್ ಸಂತತಿಯ ಕಾಲದಲ್ಲಿ ಕಾವ್ಯವು ರೂಪನಿಷ್ಠ ಧೋರಣೆಯಿಂದ ನಿಯಂತ್ರಿತಗೊಂಡಿತ್ತು. ಹಾಗೂ ಸಭೆ ಸಮಾರಂಭಗಳಲ್ಲಿ ಹಾಡುವ ಪದ, ಹಾಡು, ಕೀರ್ತನೆ (hymns) ಗಳ ಮೇಲೆ ಸಂಗೀತದ ಒತ್ತು ಹೆಚ್ಚು ಬಿದ್ದಿರುತ್ತಿತ್ತು. ಸುಯಿ, ತಾಂಗ್ ಮತ್ತು ಮುಖ್ಯವಾಗಿ ಸಾಂಗ್ ಸಂತತಿಯ ಅವಧಿಯಲ್ಲಿ ಸಂಗೀತ ಅಕಾಡೆಮಿಯು ಕಾವ್ಯವನ್ನು ಸಂಗೀತದಿಂದ ಪೂರ್ತಿ ಹೊರಗಿಟ್ಟಿತ್ತು. ಪಶ್ಚಿಮ ಪ್ರಾಂತಗಳು ಹಾಗೂ ಮಧ್ಯ ಏಷಿಯಾದೊಂದಿಗೆ ಸಂಪರ್ಕ ಹೆಚ್ಚುತ್ತ ಹೋದಂತೆ ಅಲ್ಲಿಯ ಸಂಗೀತದ ಮಟ್ಟುಗಳು-ಹಾಡುಗಳು ಪದ ಬಳಕೆ ಇಲ್ಲದ ಅಥವಾ ಅಲಿಖಿತ ಅನುವಾದದಲ್ಲಿ ಚೀನಾದಲ್ಲಿ ರೂಢಿಗೆ ಬರತೊಡಗಿತ್ತು. ಹಾಡು ರಚಿಸಬಯಸುವ ಕವಿಗಳು ಹಾಡಿನ ಸ್ವರ ವಿನ್ಯಾಸ ಹಾಗೂ ಅನಿಯತ ಸಾಲು ನಿಯಮಗಳನ್ನು ಅಳವಡಿಸಿಕೊಂಡು 'ಮಟ್ಟುಗಳಿಗೆ ಪದ ತುಂಬುವ ಕೆಲಸ' ಮಾಡಬೇಕಿತ್ತು. ಸೀ ಕವಿತೆ ರೂಪ ಪಡೆದದ್ದು ಈ ಹಂತದಿಂದಲೇ. ಈ ಕೆಲಸ ಕವಿಗಳ ಸ್ವತಂತ್ರ ಮನೋಧರ್ಮಕ್ಕೆ ಸರಿ ಹೊಂದುವ ಕೆಲಸವಾಗಿರಲಿಲ್ಲ. ಅವರು ಗೀತೆ ರಚನೆಯ ನಿಯಮಗಳನ್ನು ಬೇಕಿರುವ ಕಡೆ ಉಳಿಸಿಕೊಂಡು ಬೇಡವಾದಗಳೆಲ್ಲ ಬಿಟ್ಟುಕೊಟ್ಟು ಯುಕ್ತವಾದ ರೀತಿಯಲ್ಲಿ ಮುರಿದುಬಿಟ್ಟರು. ಕೆಲವು ಕವಿಗಳು ಕವಿತೆಯ ಮೂಲಭಾವವನ್ನು ಬಿಟ್ಟುಕೊಟ್ಟು ಮಟ್ಟುಗಳಿಗೆ ಅನುಸಾರವಾಗಿ ಹಾಡಿನ ರಚನೆ ಮಾಡಿದರು. ಕರುಣೆ, ವ್ಯಥೆಯಂತಹ ಭಾವಗಳೇ ಬಹುಪಾಲು ಹಾಡುಗಳ ಮೂಲಮಟ್ಟು ಅಥವಾ ಧಾಟಿಯಾಗಿದ್ದರೂ ಕವಿಗಳು ಯುದ್ಧ ಅಥವಾ ಚರಿತ್ರೆ ಇಲ್ಲದೆ ಮತ್ತೊಂದು ವಿಷಯವನ್ನು ಕುರಿತೂ ಬರೆಯುತ್ತಿದ್ದರು. ಹಾಗಾಗಿ ಹಾಡಿನ ಮಟ್ಟು ಕವಿತೆಯ ಅರ್ಥಕ್ಕೆ ಸಂಬಂಧವಿರದೆ ಅದು ಕೇವಲ ರೂಪ ಸಂಬಂಧಿಯಾಗಿ ಮಾತ್ರ ಉಳಿದುಬಿಟ್ಟಿತು.

ಇಷ್ಟರಿಂದ ಹೇಳಬಹುದಾದುದು ಅಂದರೆ ಸೀ ಕವಿತೆಯ ರಚನೆ ಚೀನೀ ಕಾವ್ಯವನ್ನು ಸೊಗಸುಗೊಳಿಸಿತು ಮಾತ್ರವಲ್ಲ, ಇಡಿಯಾಗಿ ಸಮೃದ್ಧಗೊಳಿಸಿತು.

೧. ಬೆಸ್ತನ ಹಾಡು

ಬೆಳ್ಳಕ್ಕಿ ಹಾರಿತೊ ಮಲೆಯ ಮ್ಯಾಲೆ
ಬಳ್ಳಿ ಹೂ ಉದುರಿತೊ ನೀರಮ್ಯಾಲೆ
ಅರಳಿದ ಹೂವೆಲ್ಲ ನದಿಗುಂಟ ಗಮಗಮ
ನಾನೆಂಗೆ ಮನೆಗೆ ಹೋಗೇಲಿ?

ತಂಗಾಳಿ ಬೀಸಿತೊ ಸೋಗೆ ಸೋ ಅಂತೋ
ಸೋನೆ ಮಳೆ ಜಿನುಗಿತೊ ಹಾ ಹಾ ಅಂತೋ
ನೀಲಿ ಬಿದಿರ ಟೊಪ್ಪಿ ಹಸಿರು ಮೆತ್ತೆ ಕೋಟು
ಧರಿಸಿ ನಾ ಮನೆಗೆ ಹೋಗಲೆ?

– ಜಾಂಗ್ ಜಿಹೆ

ಜಾಂಗ್ ಜಿಹೆ (೭೩೦-೮೧೦) ತಾಂಗ್ ಸಂತತಿಯ (೬೧೮-೯೦೭) ಕವಿ. ಈತನು ಒಬ್ಬ ಒಳ್ಳೆಯ ಲಿಪಿಕಾರನೂ ಚಿತ್ರಕಾರನೂ ಆಗಿದ್ದನು.

೨. ಕಡಲು ಕೂಡುವ ನದಿಯ ಅಲೆಗಳು

ಬಂದನೋ ಬಂದ ಅಷ್ಟಮಿ ಚಂದ್ರ
ತೆರೆಯುಕ್ಕಿ ನೊರೆಮೊರೆದು ಬೆಳ್ಳಿ ತೀರ
ಎದ್ದ ಅಲೆ ಬಂಡೆ ಅಪ್ಪಳಿಸಿ ಮರಳಿ
ಕಡಲ ಕಡೆ ಇಳಿದಿಳಿದು ಹೋದ ಗಳಿಗೆ
ಕೊಚ್ಚಿತೋ ಮರಳು ಹಿಮದಂತೆ ಉರುಳಿ

– ಲಿಯು ಯುಷಿ

ಲಿಯು ಯುಷಿ (೭೭೨-೮೪೨) ಲಿಯು ಮೆಂಗಡೆ ಎಂದೂ ಹೆಸರು ಪಡೆದಿದ್ದ ಒಬ್ಬ ವಿದ್ವಾಂಸ ಹಾಗೂ ತತ್ವಜ್ಞಾನಿ. ಈತ ತಾಂಗ್ ಸಂತತಿಯ ಚಕ್ರವರ್ತಿ ಡಿ ಜಾಂಗ್‌ನ ಆಳ್ವಿಕೆಯಲ್ಲಿ ಅಧಿಕಾರಿಯಾಗಿದ್ದ ಹಾಗೂ ತನ್ನ ಕಾಲದ ಶ್ರೇಷ್ಠ ಕವಿಗಳಲ್ಲಿ ಒಬ್ಬನಾದ ಬುಯಿ ಜೂಯಿಯ ಆತ್ಮೀಯ ಗೆಳೆಯನಾಗಿದ್ದ.

೩. ನದಿ ದಂಡೆ ಮ್ಯಾಲೆ

ನದಿ ದಂಡೆ ಮ್ಯಾಲೆ ಗೇಟು ಗೋಪುರಾ
ಹಾಯಿತೊ ದೋಣಿಸಾಲು ಸಾಸಿರಾ
ಯಾ ದೋಣಿ ಪತ್ತೆ ಇನ್ನೂ ಹತ್ತಿಲ್ಲ

ಬೆಳಗುತಾನೆ ಮುಳುಗೊ ಸೂರ್ಯಶಾಂತ
ಹರಿವುದೋ ಕೊನೆ ಕಾಣದಂತೆ ನದಿ ಪಾತ್ರ
ಹೊರಟು ಕೂತಿವಿನಿ ನಾನಿಲ್ಲೆ ಮಾತ್ರ

ಬಿಳಿಹೂವ ದ್ವೀಪ ಬೆಳಗಿತೊ ಪೂರಾ
ಸೊರಗಿದ ಜೀವ ಅರಳೀತೊ ಆಹಾ
ನಾ ನಿನ್ನ ಯಾಕೆ ಹಾರಿ ಹೋಗಿಲ್ಲ?

- ವೆನ್ ತಿಂಗ್‌ಯುನ್

ವೆನ್ ತಿಂಗ್‌ಯುನ್ (೮೧೨-೮೬೬) ತಾಂಗ್ ಸಂತತಿಯ ಪ್ರಸಿದ್ಧ ಭಾವಗೀತೆ ರಚನೆಕಾರ.

೪. ತೆಂಕಣನಾಡು

- ೧ -

ಲೋಕವೆ ಹೊರಳಿತೊ ತೆಂಕಣ ನಾಡಾ
ಅದೇ ಪಸಂದು ನೀ ಹೋಗು ಕಳಿಕಾಲ

ವಸಂತ ಕಾಲದ ನೀರು ಪನ್ನೀರು
ಇಣುಕಿ ಮುಗಿಲಪ್ಪ ಮಕ ಕಂಡನಂತೆ!

ಜೋಗುಳ ಹಾಡುತ್ತ ಮಳೆರಾಯ ಬಂದು
ತೆಪ್ಪದಲ್ಲಿ ತಟ್ಟೆ ಮಲಗಿಸುತಾನಂತೆ!

ಕನ್ನೆಯರು ಇಲ್ಲಿ ದುಂಡು ಚಂದಿರನಂತೆ
ಕೈಕಾಲು ಆಡಿದರೆ ಇಬ್ಬನಿ ಹೊಳೆದಂತೆ!

ಮುಪ್ಪು ಬಂದರೂ ಮನೆಗೆ ಹೋಗಬ್ಯಾಡ
ಹೋಗಿ ನೀನೆದೆ ಒಡೆದು ಸಾಯಲು ಬ್ಯಾಡ

- ೨ -

ಈಗ ನಾ ನೆನಿತೀನಿ ತೆಂಕಣ ನಾಡಾ!
ನನ್ನಾಸೆ ಕನಸಲ್ಲು ಮನೆಯ ನೆನಪಿಲ್ಲ.

ಚಿಕ್ಕವರಂಗೇ ನಾನೂ ವಸಂತ
ಚಿಗುರು ಮೈ ಮಿರುಗು ಒಡೆದು ಕಾಣದಂತ
ತೂಗು ಸೇತುವೆ ಕುದುರೆ ನಾನೇರಿದ್ದೆ
ಮಾಡೆಲ್ಲ ಕೈ ಬೀಸಿ ಕರೆದದ್ದು ನೋಡಿದ್ದೆ

ಹಚ್ಚ ಹಸಿರು ಪರದೆ ಹೊಂಬಾಗಿಲು ಹಿಂದೆ
ಪ್ರೀತಿ ಪೊದೆ ಹೂವಲ್ಲಿ ಮಲಗಿ ಚಿತ್ತಾಗಿದ್ದೆ
ಅಂದದ ಆ ಹೂವ ಮತ್ತೆ ಕಾಣುತೀನ?
ನೆರೆಗೂದಲು ಬಂದರೂ ಬಿಟ್ಟು ಬರುತೀನ!

- ವೆಯಿ ಜುಯಾಂಗ್

೫. ಇನ್ನೂ ಬರಲಿಲ್ಲ

ಬರುವ ವಸಂತ ಇನ್ನೂ ಬರಲಿಲ್ಲ
ಒಂಟಿ ಮಂಟಪಕೆ ಹೊರಡುತೀನಿ
ಗಡಿದಾಟಿ ಸಾಗುವ ಹುಲ್ಲುಗರಿಕೆ ಹಾದಿ
ಬಿಕ್ಕಳಿಸಿ ಒಮ್ಮೆ ನೋಡುತೀನಿ

ಅಲ್ಲಿಂದ ಯಾವುದೂ ಸುದ್ದಿ ಬಂದಿಲ್ಲ
ಹಾದಿಗರು ಯಾರೂ ಹಾಯಲಿಲ್ಲ
ಮಕ ಬಾಡಿ ಬೇಸತ್ತು ಹುಬ್ಬುಗಂಟಿಕ್ಕಿ
ಒಳಕೋಣೆಗೆ ಮರಳುತೀನಲ್ಲ!

ಕೂತು ಕಾಯುತೀನಿ ಉದುರುವ ಎಲೆಗಳ
ನಿಟ್ಟುಸಿರು ಬಿಟ್ಟರೂ ಉಳಿಯಲಿಲ್ಲ
ಕಂಬನಿ ನನ್ನ ಕವಚವ ಕಲೆ ಮಾಡಿ
ಮನಸಿನ ದುಕ್ಕ ಹೆಚ್ಚಿಸಿತಲ್ಲ!

ಸಾವಿರ ಬೆಟ್ಟ ಸಾವಿರಾರು ನದಿಗಳ
ದಾಟಿ ಪಯಣ ನಾ ಮಾಡಲಿಲ್ಲ
ಯಾರದೆ ಸುಳಿವು ಕನಸಲ್ಲು ಸಿಗಲಿಲ್ಲ
ಯಾಕಿಂಗೆ ನಂಗೆ ಉಳಿಗಾಲವಿಲ್ಲ?

- ವೆಯಿ ಜುಯಾಂಗ್

ವೆಯಿ ಜುಯಾಂಗ್ (೮೩೬-೯೧೦) ಐದು ಸಂತತಿಯ ಕವಿ. ಈತನು ರಮ್ಯ ವಿಲಾಸ ಧ್ವನಿಯ ಸುಂದರ ಭಾವಗೀತೆಗಳಿಗೆ ಹೆಸರು ಪಡೆದಿದ್ದನು.

೬. ಕೋಡುಗಲ್ಲಿನ ಗುಡಿ

ಕೋಡುಗಲ್ಲ ಮ್ಯಾಲೆ ನಿಂತ್ಯೆತೊ ಹಳೆಗುಡಿ
ರಾಯರ ಬಂಗಲೆ ಹಬ್ಬೀತೊ ಹೊಳೆಬಳಿ
ಬೆಟ್ಟದ ನೆರಳು, ಹರಿವ ಜುಳಜುಳ ನೀರು
ಗವಿ ಸುತ್ತ ಹರಡ್ಯೆತೊ ಗಿಡಮರ ಹಸಿರು

ಬೆಳಗು ಬೈಗಿನಂಗೆ ಮಳೆ ಮೋಡದಲ್ಲಿ
ವಸಂತ ಮಳೆಗಾಲದಲ್ಲಿ ಹೂ ಇಬ್ಬನಿ
ಮಂಗಗಳ ಅರಚಾಟ ನೇಣೇರಿಸಿಲ್ಲ
ಒಂಟಿ ಅಲೆಮಾರಿ ನಾದುಕ್ಕ ಕೈ ಬಿಟ್ಟಿಲ್ಲ
ಕೆದಕೆದಕಿ ಹಳೆಚಿಂತೆ ಕೊನೆ ಕಾಣೆನಲ್ಲ

-ಲೀ ಷುನ್

ಲೀ ಷುನ್ (೮೫೫-೯೩೦) ಪರ್ಷಿಯನ್ ವಂಶದವನು. ಈತ ಐದು ಸಂತತಿಯ ಭಾವಗೀತೆಯ ಕವಿ. ಈತನ ಐಹುತೇಕ ಕವಿತೆಗಳು ದಕ್ಷಿಣ ಚೀನಾದ ಪದ್ಧತಿಗಳು ಹಾಗೂ ಸುಂದರ ಸ್ಥಳಗಳ ವರ್ಣನೆಯನ್ನು ಒಳಗೊಂಡಿವೆ.

೭. ಬರುತಾನೊ ಇಲ್ಲವೋ

ಬರುತಾನೊ ಇಲ್ಲವೊ ಮುಸ್ಸಂಜೆ ಗೆಳೆಯ
ಸೊಟ್ಟಮೂತಿ ಚಂದ್ರ ಮುಳುಗುತಾನಲ್ಲೋ
ಬೀಸುವ ಚಳಿಗಾಳಿ ಮಳೆಗಾಳಿಯಂತೋ
ತೆಂಗಿನ ನೆರಳಿರೋ ತನಕ ನಾ ಕಾಯುತೀನಿ
ಬರುತಾನೊ ಇಲ್ಲವೋ...

- ಲೂ ಯಾನ್

ಲೂ ಯಾನ್ ತಾಂಗ್ ಸಂತತಿಯ ಕವಿ. ಈತನ ಕಾಲ ಸ್ಪಷ್ಟವಾಗಿ ತಿಳಿದಿಲ್ಲ. ಈತ ಸುಮಾರು ೮೫೭ರಲ್ಲಿ ಕ್ರಿಯಾಶೀಲನಾಗಿ ಇದ್ದನೆಂಬುದು ಮಾತ್ರ ತಿಳಿದುಬರುತ್ತದೆ.

೮. ಮುರಿದ ಕನಸಂತೆ

ಹೂ ಚಿಲುಮೆ ಗವಿಯಲ್ಲಿ ಒಮ್ಮೆ ಬನದೂಟ
ಒಸಗೆ ಹಾಡೂ ಕುಣಿತ ಜೊತೆ ಜೊತೆ ಆಟ

ಬಿಡದೆ ಕಾಡಿಸಿತೊ ಅಗಲಿ ಬಂದಾ ನೆನಪು
ಹೊಸಿಲಾ ಬಿಗಿದಪ್ಪಿ ಬಿಕ್ಕಿ ದುಕ್ಕ ಕಳಿಸೀದೆ

ಮುರಿದ ಕನಸಂತೆ ಮ್ಯಾಲೆ ಚಂದಿರನಿಲ್ಲ
ಉದುರಿ ಹೂ, ಕೊರೆ ಬಿದ್ದು ಮೈ ನಡುಗಿತಲ್ಲ!

-ಲೀ ಕುನ್ ಷು

ಲೀ ಕುನ್ ಷು (೮೮೫-೯೨೬) ಹೊಸ ತಾಂಗ್ ಸಂತತಿಯ (೯೨೩-೯೩೬) ಸಂಸ್ಥಾಪಕ. ಈತ ೯೨೩ರಲ್ಲಿ ಚಕ್ರವರ್ತಿಯಾದ. ಈತ ೯೨೬ರಲ್ಲಿ ಎದ್ದ ದಂಗೆಯಲ್ಲಿ ಕೊಲೆಯಾದ.

೯. ನವಿಲು

ಇಳಿಜಾರು ಹರಡಿತೊ ಮರಳು ನದಿ ದಂಡೆ
ಮನೆಹಾದಿ ಬೆಳಗಿತೊ ಸೂರ್ಯ ಮುಸ್ಸಂಜೆ

ಮೈ ಮರೆತು ಗರಿಬಿಚ್ಚಿ ನವಿಲು ಕುಣಿತಿತ್ತು
ಬಂದ ದೋಣಿ ಕಡೆಗೆ ಕಣ್ಣು ನೆಟ್ಟಿತ್ತು.

ನನ್ನನ್ನು ಕಂಡು ಓಡಿ ಹೋಗಲಿಲ್ಲ
ಪಿಳಿ ಪಿಳಿ ಕಣ್ಬಿಟ್ಟು ಬೆಚ್ಚಿ ಬೆದರಿತಲ್ಲ!

–ಓಯಾಂಗ್ ಜಿಯಾಂಗ್

೧೦. ತೆಂಕಣನಾಡು

ಇಬ್ಬನಿಯಂತೇ ಕೊನ್ನಾರಿ ಚಿಗುರು
ಆಗಸ ತುಂಬಾ ದಾಳಿಂಬೆ ಹೂವು

ನದಿ ಬಳ್ಳಿ ಮಾಡು ತೂಗುತ ಬಾಗಿದೆ
ಸಂಜೆ ಹಸುರಲ್ಲಿ ವಸಂತ ನೆರಳಿದೆ

ಒಲವಿನ ಬಾತು ಕೂಡಿ ನೀರಾಡಿವೆ
ಬಚ್ಚಿಟ್ಟ ಮನಸು ಬಿಚ್ಚಿಟ್ಟು ನಲಿದಿವೆ

ಇಲ್ಲಿ ತಣಿವಿಲ್ಲ, ದಣವು ನೆನಪಿಲ್ಲ
ನದಿಬೆಟ್ಟ ಸಾಲು ಕೊನೆ ಕಾಣದಲ್ಲ!

–ಓಯಾಂಗ್ ಜಿಯಾಂಗ್

ಓಯಾಂಗ್ ಜಿಯಾಂಗ್ (೮೯೬-೯೭೧) ಐದು ಸಂತತಿಯ ಭಾವಗೀತೆ ರಚನೆಕಾರ. ಈತನ ಕೃತಿಗಳು ಸಂಪೂರ್ಣವಾಗಿ ನವಿರಾದ ಪ್ರೇಮಗೀತೆಗಳು.

೧೧. ಬೆಸ್ತರ ಹುಡುಗಿ

ತೇಲು ಕಂಗಳ ಬೆಸ್ತರ ಹುಡುಗಿ
ತೇಲಿ ಬಂದಳೊ ತಳತಳ ಬೆಳಗಿ

ಹಾಗಿ ಹರಿಗೋಲು ಹರಿಯಬಿಟ್ಟಳು
ಪಡ್ಡೆ ಹುಡುಗನ ನುಂಗಿ ನೋಡುವಳು

ಮೈಸೊಕ್ಕಿ ಒಗೆದಳು ಹೂವ ದಂಡೆಮ್ಯಾಗೆ
ಹೋಗಿ ಬಿತ್ತು ನಿಂತಾ ಬೆಪ್ಪನ ಕಾಲಿಗೆ

ಯಾರೊ ಕಂಡರಂತ ನಾಚಿ ನುಲಿವಳು
ಕಣ್ಣಿಗೆ ಬೀಳದೆ ಅಡಗಿ ಕುಂತಳು

–ಹುಯಾಂಗ್ ಪು ಸಾಂಗ್

ಹುಯಾಂಗ್ ಪು ಸಾಂಗ್ ಸುಮಾರು ೯೦೦ರಲ್ಲಿ ಹುಟ್ಟಿದ.

೧೨. ಮಾಗುವ ವಸಂತ

ಗಾಳಿಯ ಮುತ್ತಿನ ಮಸಣಿ ಕಾಮಾಂಚ
ಅಯ್ಯೋ! ಮುಗಿಯುತ್ತು ಮಾಗುವ ವಸಂತ
ನಾ ಬಿಕ್ಕುಟ್ಟು ಹೂ ಚೆಲ್ಲಿತಲ್ಲ
ಜಾಣನ ತೂಗಿಗೆ ಹಿನ್ನೆಯಿಲ್ಲವಂತಾ?

ಮುಗಿಲಾಚೆ ಉಂಚೆ ಹೊಸ್ತ ಜಾರಿಲ್ಲ
ಮಳೆಗೆ ಬೀಳುವ ಬಿಮ್ಮಗೆಲ್ಲ!
ಮಮ ಮಮ ಹೊಗೆ ಎದ್ದ ಬಿಟ್ಟು ದೆಸೆಯಿಲ್ಲ
ಬತ್ತಿ ಸಾಗಾಣ ಮನಸಾಯಿತಲ್ಲ!

—ಲೀ ಚಿಂಗ್

[illegible]

೧೩. ಒಬ್ಬೊಂಟಿ

ಯಾರೂ ಕಾಣದಲ್ಲಿ
ಬೇಗಿನಾ ಹೊಸಲಲ್ಲಿ!

ನಾನಿಲ್ಲವಾ ನನ್ನ ನೆನಪಿಲ್ಲವಾ!

ಹೋಗಿಬಿ ಮಲಗಿದವನಾದೆ
ನೆನಪಿನಾ ಮನೆಯಲ್ಲಿ

ನಾನಿಲ್ಲವಾ ನನ್ನ ನೆನಪಿಲ್ಲವೆ!

—ಪಿಯಾಂಗ್ ಗಾವ್ರಿ

[illegible]

೧೪. ಅಂಬಿಗನ ಹರುಷ

ಸುಖಿ ಯಾರೂ ನನ್ನಂತೆ ಈ ನೆಲದಲ್ಲಿ?
[illegible]
ರಂಗು ರಂಗಿನ ಹೂ-ಚಿಗುರು ಕಾಲದ ಬಿಂದೋ
ಮುಖಿಕೆಯ ಸಾರೆಯೋ ಹೊತ್ತರ ಕಾಲೋ
ಸುಖಿ ಯಾರೂ ನನ್ನಂತೆ ಈ ನೆಲದಲ್ಲಿ!

ಮುಂಗಾರು ಹರಿಗೋಲು ಎಲೆಯೊ ಬರಿ ತೆಪ್ಪ
ಚಿಕ್ಕ ಚಿಕ್ಕ ಗಾಳ ರೇಷಿಮೆಯೋ ದಾರ
ಮಣಿ ದ್ವೀಪ ಪೂರಾ ಹರಡಿತೋ ಹೂವಾ
ಸಾಗರ ನೀರಂತೆ ನಾ ಬಟ್ಟಬಯಲೊ
ಸುಖಿಯಾರೊ ನನ್ನಂತೆ ಈ ನೆಲದಲ್ಲಿ?

-ಲೀ ಯೂ

ನಿಷಾದ

ಹೂವಿನ ಮರ ಚೈತ್ರದ ಸೊಗ
ಕಳೆದು ಹೋದುವಲ್ಲಾ
ಜಡಿ ಜಡಿ ಮಳೆ ಮೀಸಲು ಬೆಳಗು
ಬೈಗು ಬರಲೇ ಇಲ್ಲಾ

ಅದೇ ಕಥೆ ಮತ್ತೆ ಮತ್ತೆ!
ಕಂಬನಿ ಕರೆ, ಅವಳದೆ ಮೊರೆ -
ನಿಲ್ಲಲಾರೆ ಕೂಡಲಾರೆನಲ್ಲಾ
ಕೂತುಕೊಂಡರೆ ಕುಡಿತ ಮತ್ತೂ!

ಈ ವಿಧಿ
ಸಾಗರ ಸೇರೋ ನದಿ
ಈ ಬಾಳು
ವಿಷಾದ ನಿಷಾದದ ಕುದಿ!

- ಲೀ ಯೂ

ಲೀ ಯೂ (೯೩೬-೯೭೮) ಲೀ ಹೂವ್ ಜು ಎಂದೂ ಹೆಸರಾಗಿದ್ದನು. ಈತನು ದಕ್ಷಿಣದ ತಾಂಗ್ ಸಂತತಿ(೯೩೭-೯೭೫)ಯ ಕೊನೆಯ ದೊರೆ. ತೀವ್ರತರ ನೋವನ್ನು ನವಿರಾದ ಭಾವಗೀತೆಯಾಗಿ ಕವನಿಸುವ ಲೀಯೂನ ಪರಿಣತ ಶೈಲಿ ಸೀ ಕವಿತೆಗಳಲ್ಲಿ ಈತನನ್ನು ಅಗ್ರ ಸ್ಥಾನಕ್ಕೆ ಏರಿಸಿದೆ.

೧೬. ಹೋಗು ವಸಂತನ ಜೊತೆಗೆ

ನೀರ ಒರತೆಗಳು ಕಂಗಳ ಬೆಳಗಿನ ಹಾಗೆ
ಬೆಟ್ಟ ಗುಡ್ಡ ಹುಬ್ಬು ನೀಲಿ ಸಾಲಿನ ಹಾಗೆ
ಕೇಳುತೀರಿ ನೀವು ಎಲ್ಲಿಗೆ ಪಯಣಿಗರೆ
ಕಣ್ಣು ಹುಬ್ಬು ಸೆಳೆವ ಸೂಜಿಕಲ್ಲ ಕಡೆಗೆ

ನೊನ್ನೆ ಮೊನ್ನೆ ತಾನೇ ಸರಿದು ಹೋದಾ ವಸಂತಾ
ಈ ನಡುವೆ ಕಂಡದ್ದು ಹಿಗ್ಗು ಮೊಗ್ಗಿನ ಕಾಂತಾ
ಇನ್ನು ಯಾರ ಗೊಡವೆ ಯಾವ ಚಿಂತೆಯೇ ಅಂತಾ
ಹೋದ ತೆಂಕಣಕೆ;ನಿನ್ನ ಕೂಡ ವಸಂತಾ

- ವ್ಯಾಂಗ್ ಗಾನ್

ವ್ಯಾಂಗ್ ಗಾನ್‌ನ ಕಾಲ ತಿಳಿದುಬರುವುದಿಲ್ಲ.

---

* ಶ್ರೀಧರರಾವ್ ಪಿಸ್ಸೆ, ದೇಸಾಯಿ ಓಣಿ, ೭ನೇ ವಾರ್ಡ್, ಕಮಲಾಪುರ - ೫೮೩ ೨೨೧.

‘ಕನ್ನಡ ನವೋದಯ ಮತ್ತು ಸಾಲಿ ರಾಮಚಂದ್ರರಾಯರ ಕಾವ್ಯ’

ವಿಚಾರ ಸಂಕಿರಣ : ೮.೧೧.೧೯೯೮ ಧಾರವಾಡ

ಸಾಲಿ ರಾಮಚಂದ್ರರಾಯರು ಮತ್ತು ನವೋದಯ

ಎನ್ಕೆ

ಅದು ೬೬ ವರ್ಷಗಳ ಹಿಂದೆ ನಡೆದ ಒಂದು ಚಿಕ್ಕ ಸಂಗತಿ. ನಾನು ೧೯೩೨ರ ಜೂನ್‌ನಲ್ಲಿ ಅದೇ ಗದುಗಿನ ಮುನಿಸಪಲ್ ಹೈಸ್ಕೂಲ್‌ನಿಂದ ಮ್ಯಾಟ್ರಿಕ್ ಪಾಸಾಗಿ, ಧಾರವಾಡ ಕರ್ನಾಟಕದ ಕಾಲೇಜ್ ಕಟ್ಟೆ ಹತ್ತಿದ್ದೆ. ಪ್ರಥಮ ವರ್ಷದ ಕ್ಲಾಸ್ (First year Arts)ಗೆ ಪಥ್ಯವಾಗಿರುವ ಯಾವಾದರೂ ಸೆಕೆಂಡಹ್ಯಾಂಡ್ ಪುಸ್ತಕಗಳು ಸಿಗಬಹುದೇನೊ ಅಂತ ಗಾಂಧೀಚೌಕ ಕೂಟಿಗಿದ್ದ ಸಾಠೆ ಅವರ ಪುಸ್ತಕದಂಗಡಿಗೆ ಬಂದಿದ್ದೆ. ಅಂಗಡಿಯ ಮಾಲಕರಿದ್ದಿಲ್ಲ. ಕಾಯುತ್ತ ನಿಂತಿದ್ದೆ. ಅಷ್ಟರಲ್ಲಿ ಲಂಡ ಪಂಚೆ, ಲಂಡ ಅಂಗಿ ತೊಟ್ಟು ತೆಳ್ಳಗಿನ ವ್ಯಕ್ತಿಯೊಬ್ಬರು ಕೈಯಲ್ಲಿ ಒಂದು ಇಂಗ್ಲಿಷ್ ಪೇಪರ ಹಿಡಿದುಕೊಂಡು ಬಂದರು. ಮಾಲಕರಿಲ್ಲದ್ದನ್ನು ಕಂಡು ಆ ಸಾದಾಸೀದಾ ವ್ಯಕ್ತಿ ನನ್ನತ್ತ ಮುಖ ಮಾಡಿ...'ಏನ್ರೆಪಾ ಒಂದು ಉಪಕಾರ ಮಾಡ್ತೀರಾ?' ಎಂದು ಕೇಳಿದಾಗ ನಾನು ಹೂಂಗುಟ್ಟಲು, ಈ 'Times of India' ಇಲ್ಲಿಡತೀನಿ, ಸಾಲಿ ರಾಮಚಂದ್ರರಾಯ ಕೊಟ್ಟು ಹೋದಾ-ಅಂತ ಹೇಳ್ತೀರಾ?' ಸಾಲಿ ರಾಮಚಂದ್ರರಾಯ! ಮೊನ್ನೆ ಮೊನ್ನೆ ಪ್ರಕಟವಾದ "ತಿಲಾಂಜಲಿ" ಬರೆದ ಸಾಲಿ ರಾಮಚಂದ್ರರಾಯರೆ? ನಾನು ಓದಿ ಕೆಡುಕೆನಿಸಿಕೊಂಡ ಕಾವ್ಯದ ರಚಯಿತರೇ ಇರಬೇಕು... ಎಂದುಕೊಂಡವನೆ ಅವರ ಪಾದ ಮುಟ್ಟಿ ನಮಸ್ಕಾರ ಮಾಡಿಬಿಟ್ಟೆ.

"ಯಾಕ್ರಿ? ನನಗ್ಯಾಕ?" ಎಂದು ಪ್ರಶ್ನಿಸಿದರು.

"ನಿಮ್ಮ ತಿಲಾಂಜಲಿ ಓದೀನ್ರಿ. ಓದಿದಾಗ ಭಾಳ ಕೆಟ್ಟ ಅನಿಸಿತು. ನಿಮ್ಮ 'ಅಭಿಸಾರ', 'ಕುಸುಮಾಂಜಲಿ' ಓದೀನ್ರಿ" ಎಂದಾಗ ಅವರಿಗೂ ಸಂತೋಷವಾಗಿ ನನ್ನ ಬಗ್ಗೆ ಎಲ್ಲಾ ಕೇಳಿಕೊಡರು.

ಮುಂದೆ ನಾನು ೧೯೪೦ರಲ್ಲಿ ಎಂ.ಎ.ಬಿ.ಟಿ. ಮುಗಿಸಿದ ಮೇಲೆ ಯಾವ ಕೆ.ಇ.ಬೋರ್ಡ ಸಂಸ್ಥೆಯ ಒಂದು ಹೈಸ್ಕೂಲಿನಲ್ಲಿ ಶಿಕ್ಷಕನಾದೆನೊ ಅವರೂ ಅದೇ ಸಂಸ್ಥೆಯ ಇನ್ನೊಂದು ಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿದ್ದರು. ಆದರೆ ಅವರ ಸೇವೆ ತೀರ ದೀರ್ಘವಾದುದಾಗಿತ್ತು. ಖ್ಯಾತ ಶ್ರೀ ಡಿ.ಪಿ.ಕರಮರಕರ, ಡಾ।ಎಸ್.ಬಿ. ಕಟ್ಟೂರ ಅವರೆಲ್ಲಾ ಸಾಲಿಯವರ ಕೈಯಲ್ಲಿ ಕಲಿತವರು. ಒಂದು ದೃಷ್ಟಿಯಿಂದ ಗುರುವಿನ ಗುರುಗಳಾದರು. ಅವರ ಶಿಷ್ಯರೇ ಅನೇಕರು ಈ ಸಂಸ್ಥೆಯ ಶಾಲೆಗಳ ಶಿಕ್ಷಕರಾಗಿದ್ದರು.

ಶಿಕ್ಷಕ ಸಾಲಿ ಅವರು ಅಹಿಂಸಾಮೂರ್ತಿ, ಸೌಜನ್ಯದ ಸಾಕಾರಪುರುಷ. ಅವರಿಗೆ ಧಾರವಾಡದ ಗಾಂಧಿ ಎಂದೂ ಕರೆಯುತ್ತಿದ್ದರು. ಶಾಲೆಗೆ ವಿದ್ಯಾರ್ಥಿಯೊಬ್ಬನು ತಡಮಾಡಿ ಬಂದರೆ, ಅವನು ಎಷ್ಟು ಕಾಲ ತಡಮಾಡಿದ್ದನೊ ಅಷ್ಟೊತ್ತು ಗುರುಗಳೇ ಎದ್ದುನಿಂತು ಆ ಶಿಕ್ಷೆಯನ್ನು ತಾವೇ ಅನುಭವಿಸುತ್ತಿದ್ದರು.

[illegible]
ಸಕಾಲಕ್ಕೆ ಶಾಲೆಗೆ ಬರುತ್ತಿದ್ದ.

[illegible]
ಸೇರಿದಾಗ ಹಾಡಿಯುವವರೂ ಹಾಜರ ಇರುತ್ತಿದ್ದರು.

[illegible]

[illegible]

[illegible]

[illegible]
ಕವನಗಳು ಬರತೊಡಗಿದವು.

[illegible]
ಕನ್ನಡ ಕಳಕಳಿಯ ಗಾಯತ್ರಿ ಮಂತ್ರದಂತಿದೆ.

[illegible]

ಕರುಣ ಕಾವ್ಯವನ್ನಾಗಿ ಪರಿವರ್ತಿಸಿತು ಎನ್ನಬೇಕು. 'ದುಃಖ ಸಂವೇದನಾಯೈವ ರಾಮೇ ಚೈತನ್ಯಮಾಹಿತಂ' ಎಂದು ಭವಭೂತಿ ಕವಿಯ ಶ್ರೀರಾಮಚಂದ್ರನು ಉತ್ತರರಾಮ ಚರಿತದಲ್ಲಿ ಹೇಳುವ ಮಾತನ್ನು ಕವಿ ಸಾಲಿ ರಾಮಚಂದ್ರರಾಯರು ತಮಗೇ ಅನ್ವಯಿಸಿಕೊಂಡು ಹೇಳುತ್ತಿದ್ದರು. ಬದುಕಿನ ಈ ತಾಪವನ್ನು ತಪವಾಗಿಸಿ ತಮ್ಮ ಸೃಜನಶೀಲ ವಾಙ್ಮಯ ತಪವನ್ನಾಗಿ ಪರಿವರ್ತಿಸಿದ್ದರು. ಎದೆಯುದ್ದದ ಒಬ್ಬನೆ ಮಗನು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಜೇಲನನುಭವಿಸಿ ಆರೋಗ್ಯವನ್ನು ಹಾಳು ಮಾಡಿಕೊಂಡು ಬಿಡುಗಡೆಯೊಂದಿಗೆ ಪಿಡುಗಿನ ಗಂಟನ್ನು ಕಟ್ಟಿಕೊಂಡು ಬಂದನು. ಪಿಡುಗಿನ ಮಾರಿಗೇ ಆಹುತಿಯಾದನು.

'ರೆಕ್ಕೆ ಮೊಳೆಯದ ಮುನ್ನ ಹಕ್ಕಿ ಹಾರಲು ಹೋಗಿ
ಕಕ್ಕುತಲಿ ನೆತ್ತರನು ಮುಕ್ಕದಿರುವುದೆ ಮಣ್ಣ'

ಎಂದು ಮೊದಲಾಯಿತು-'ತಿಲಾಂಜಲಿ'

'ಇದು ತಿಲಾಂಜಲಿ ಮಗನೆ। ಇದು ತಿಲಾಂಜಲಿ ತಂದೆ
ಅಜ್ಜ ಮುತ್ತಜ್ಜ ಇದು ತಿಲಾಂಜಲಿ ನಿಮಗೆ"

ಎಂದು ಮುಕ್ತಾಯ! ಮ್ಯಾಟ್ರಿಕ್ಯುಲೇಶನ್ ವಿದ್ಯಾರ್ಥಿಯಾಗಿದ್ದ ನನ್ನಲ್ಲಿ ಈ ಕಾವ್ಯ ಕರುಳನ್ನು ತಟ್ಟಿ ಅಂತಃಕರಣವನ್ನು ಮುಟ್ಟಿ ದಿವಸಗಟ್ಟಲೆ ವಿಷಾದದ ಛಾಯೆ ಆವರಿಸಿಬಿಟ್ಟಿತ್ತು.

ಇನ್ನೂ ನಾಲ್ವತ್ತರ ಪ್ರಾಯ ದಾಟಿರಲಿಕ್ಕಿಲ್ಲ ಸಾಲಿ ಅವರಿಗೆ ವಿಧುರತ್ವ ಪ್ರಾಪ್ತಿ! ಪತ್ನಿ ತೀರಿಕೊಂಡಾಗ ಅಂತ್ಯಕ್ರಿಯೆಗೆ ನಾಲ್ಕು ಹೆಗಲುಗಳು ಸಿಗಲಿಲ್ಲ. ಇನ್ನೇನು ತಾವೇ ಟಾಂಗಾದಲ್ಲಿ ಶವವನ್ನು ಸಾಗಿಸಬೇಕೆಂದು ಗಾಡಿಗಾಗಿ ದಾರಿಯಲ್ಲಿ ನಿಂತಾಗ ಪುಣ್ಯಾತ್ಮರಾರೋ ಸಿಕ್ಕರು. ಸತಿಯನ್ನು ಚಿತೆಗೇರಿಸಿ ಮನೆಗೆ ಬಂದರು. ಮುಂದೆ ಜೀವನದುದ್ದಕ್ಕೂ ವಿಧುರತ್ವ ಅವರ ಸಂಗಾತಿಯಾಯಿತು.

ಮಗನೂ ತೀರಿಹೋಗಲು ಇಬ್ಬರು ಚಿಕ್ಕ ಹೆಣ್ಣುಮಕ್ಕಳನ್ನು ತಾವೇ ತಾಯಿಯಾಗಿ ಬೆಳೆಸಿದರು. ಮದುವೆ ಮಾಡಿಕೊಟ್ಟರು. ಹಿರಿಯ ಮಗಳು ಸುಬ್ಬಕ್ಕ! ಅವಳ ಕೈಹಿಡಿದವರು ಖ್ಯಾತ ಇತಿಹಾಸ ಸಂಶೋಧಕ-ಲೇಖಕ-ಪಂಡಿತಪುರುಷ ಪಾಂ.ಭಿ.ದೇಸಾಯಿ ಅವರು. ಅವರಿಂದ ಮೊಮ್ಮಕ್ಕಳ ಸುಖ ಸಮೃದ್ಧಿ ಕಂಡರು. ಜೀವನದ ನೋವನ್ನು ಮರೆತಿದ್ದರು. ಬಾಲ್ಯದಿಂದಲೂ ಅಂಟಿಕೊಂಡು ಬಂದಿದ್ದ ಬಡತನ ನೋವುಗಳನ್ನು ಮೊಮ್ಮಕ್ಕಳ ಸಮ್ಮುಖದಲ್ಲಿ ಮರತಿದ್ದರು. ಎರಡನೆಯ ಮಗಳನ್ನು ಕೆ.ಇ.ಜೋರ್ಡಿನ ಹರಪನಹಳ್ಳಿ ಮಾಸ್ತರರಿಗೆ ಕೊಟ್ಟಿದ್ದರು.

ವಿದ್ಯಾರ್ಥಿ ಸಾಲಿ ಅವರು ವಾರಾನ್ನದಿಂದ ವಿದ್ಯಾಭ್ಯಾಸ ಸಾಗಿಸಿದರು. ಯಾರೊ ಪುಣ್ಯಾತ್ಮರು ದೈವುಳ್ಳವರು ಈ ತಬ್ಬಲಿ ಬಾಲಕನನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡರು. ವಿಜಾಪುರದಲ್ಲಿ ಮಾಧ್ಯಮಿಕ ಶಾಲಾಭ್ಯಾಸ ಮುಂದರಿಯಿತು. ಆದರೇನು ಆ ಅನ್ನದಾತನಿಗೆ ನಿತ್ಯ ರಾತ್ರಿ ಸೆರೆಯ ಅಂಗಡಿಗೆ ಹೋಗಿ ಈ ಮುಗ್ಧ ಬಾಲಕ ಸೆರೆ ತಂದು ಸುರಿಯಬೇಕು. ಈ ಬಾಲ್ಯದ ಅಸಹಾಯ ನೋವನ್ನೆಲ್ಲ ತಮ್ಮ 'ಯದುಪತಿ' ಎಂಬ ಚಿಕ್ಕ ಕಾದಂಬರಿಯಲ್ಲಿ ಚಿತ್ರಿಸಿದರು.

ಸಾಲಿ ಅವರು ಗದ್ಯ ಬರೆದಿದ್ದರೂ ಪದ್ಯವೇ ಅವರ ಸೃಜನ ಕ್ಷೇತ್ರವಾಯಿತು. 'ಕುಸುಮಾಂಜಲಿ'ಯ ತರುವಾಯ ಎಷ್ಟೋ ವರ್ಷಗಳ ಮೇಲೆ ಬೆಳಕು ಕಂಡಿತು ಅವರ 'ಚಿತ್ರಸೃಷ್ಟಿ' ಕವನಸಂಗ್ರಹ ೧೯೪೦ರ ದಶಕದಲ್ಲಿ. 'ಜಯಕರ್ನಾಟಕ' ದಲ್ಲಿ ಅವರ ಬಿಡಿ ಕವನಗಳೂ ಪ್ರಕಟವಾಗುತ್ತಿದ್ದವು. ಅದರಲ್ಲಿ ಮೂಡಿಬಂದ 'ಇಂಚರ', 'ನೀರಗುಳ್ಳಿ', 'ಮಳೆಬೀಳುತಲಿದೆ ಮಗಳೆ' ಈ ಕವನಗಳನ್ನು ನಾನು ವಿದ್ಯಾರ್ಥಿ ದೆಸೆಯಲ್ಲೇ

ಓದಿದ್ದೆ. ಅವರ 'ಇಂಚರ'ದಲ್ಲಿ ಕೊನೆಯ ಸಾಲಿನಲ್ಲಿ ಆ ಇಂಚರ ಕೇಳಿಸಿದ ಕಂಠಕ್ಕೆ 'ಅಭೀಪ್ಸಿತಂ ಸಂಪ್ರಾಪ್ತಮಸ್ತುತೇ ಎಂಬುದೇ ಎನ್ನ ಪರಕೆ' ಎಂಬ ಹರಕೆಯ ವಾಕ್ಯ ಇಂದಿಗೂ ನನ್ನ ನಾಲಗೆಯ ಮೇಲೆ ನಿಂತಿದೆ.

ಸಾಲಿಯವರು ಮ್ಯಾಟ್ರಿಕ್ಯುಲೇಶನ್ ಪೂರೈಸಿದ ಕೂಡಲೆ ಅಂಚೆ ಇಲಾಖೆಯಲ್ಲಿ ಒಂದು ಕಾರಕೂನಿಕೆ ಕೆಲಸ. ಉದರಕ್ಕೆ ಆಸರ ಎಂದು ಆ ನೌಕರಿ ಕೈಕೊಂಡರೂ ಕಾಲೇಜ್ ಕಲಿಯುವ, ಹೆಚ್ಚಿನ ಓದು ಮಾಡುವ ಹಂಬಲ. ಕೈಯಲ್ಲಿ ಸ್ವಲ್ಪ ಹಣ ಮಾಡಿಕೊಂಡು ಕಾರುಕೂನಿಕೆ ಕೆಲಸಕ್ಕೆ ರಾಜೀನಾಮೆ ನೀಡಿ ಕಾಲೇಜ್ ಕಟ್ಟೆ ಹತ್ತಿದರು. ಬಿ.ಎ. ಮಾಡಿಕೊಂಡು 'ಸಾಲಿ' ಎಂಬ ಅಡ್ಡ ಹೆಸರಿಗೆ ಅರ್ಥ ಬರುವಂತೆ 'ಸಾಲಿ ಮಾಸ್ತರ' ಆದರು.

ವೃದ್ಧಾಪ್ಯವನ್ನಾದರೂ ನೆಮ್ಮದಿಯಿಂದ ಕಳೆಯಲು ದೈವ ಇವರಿಗೆ ಸೌಲಭ್ಯ ನೀಡಲಿಲ್ಲ. ಹಿರಿಯ ಅಳಿಯ, ಹಿರಿಯ ವಿದ್ವಾಂಸ ಸಾಹಿತಿ ಪಾ.ಭಿ. ದೇಸಾಯಿ ಅವರು ಮುಪ್ಪಿನ ಸಾಲಿಯವರ ಕಣ್ಮುಂದೆಯೆ ಕಣ್ಮುಚ್ಚಿದರು. ಹಿರಿಯ ಮಗಳಿಗೆ ವೈಧವ್ಯ ಪ್ರಾಪ್ತಿ. ನೋವುಂಡ ಮುದಿಜೀವ ಮಗಳನ್ನು ಸಾಂತ್ವನ ಪಡಿಸಬೇಕಾದ ಪ್ರಮೇಯ.

ಇಂತಹ ದುಃಖ ಸಂವೇದನೆಯಲ್ಲಿಯೆ ಸಾಲಿಯವರು ೯೦ ವರ್ಷಕಾಲ ಬಾಳಿದರು. ಸಂಸ್ಕೃತದಲ್ಲೂ ಬರೆವಣಿಗೆ ಮಾಡಿದರು. ಸಂಸ್ಕೃತದಲ್ಲಿ ಒಂದು ಗ್ರಂಥವನ್ನೂ ರಚಿಸಿ ಇಟ್ಟಾಗ ಬೆಳಗಾಗುವುದರೊಳಗಾಗಿ ಹಸ್ತಪ್ರತಿ ಗೆದ್ದಲಿಗೆ ಆಹುತಿಯಾಗಿ ಹೋಗಿತ್ತು!

ಅದೇನೊ ಹೇಳುತ್ತಾರಲ್ಲ 'ಕಾಡುವ ಕಾಲಕ್ಕೆ ಕಂಭವೂ ಎದ್ದು ಬಡೆಯುತ್ತದಂತೆ' ಹಾಗೆ!

ಸಾಲಿಯವರಂತಹ ಸಾತ್ವಿಕ ಸಾಹಿತಿ ಅಪರೂಪಕ್ಕೊಬ್ಬರು ಸಿಗುತ್ತಾರೆ ಎಂದರೆ ಅತಿಶಯೋಕ್ತಿಯಲ್ಲ. ಇಂತಹ ಸಚ್ಚರಿತ್ರರು ಅಲ್ಪಜ್ಞಾತ, ಏಕೆ ಅಜ್ಞಾತವಾಗಿಯೆ ಹೋಗಿಬಿಡುತ್ತಿದ್ದರೇನೊ. ಪ್ರೊ। ಸಿದ್ಧಲಿಂಗ ಪಟ್ಟಣ ಶೆಟ್ಟಿ- ಇವರ ವಿಶ್ವಾಸದ ವಿದ್ಯಾರ್ಥಿ-ಸಾಲಿಯವರ ತರುವಾಯ 'ಸಾಲಿ ರಾಮಚಂದ್ರರಾಯರು' ಎಂಬ ಗ್ರಂಥವನ್ನು ಹೊರತಂದು ಹೊರಜಗತ್ತಿಗೆ ಅವರನ್ನು ಪರಿಚಯಿಸಿದರು.

ಸಾಲಿರಾಮಚಂದ್ರರಾಯರು ಕನ್ನಡ ಬಾಲಕ ವಾಚಕರಿಗಾಗಿ ರಾಮಾಯಣವನ್ನು ಬರೆಯ ತೊಡಗಿ-ಬಾಲ್ಯ-ಅಯೋಧ್ಯಾ ಕಾಂಡಗಳನ್ನು ಹೊರತಂದರು.

"ಶ್ರೀ ರಘು ಕುಲಮಣಿ
ವೀರಶಿರೋಮಣಿ
ಕಾರುಣಿಕಾಗ್ರಣಿ। ತಾರಕ ಶರಣು॥"

ಎಂದು ಮೊದಲಾಗುವ ಸುಂದರ ಶರಷಟ್ಪದಿಯ ಚಿಕ್ಕ ಛಂದೋರಚನೆ ಎರಡೇ ಕಾಂಡಗಳಿಗೇ ನಿಂತುಹೋಯಿತು. ಆ ಎರಡು ಕಾಂಡಗಳ ಬಗ್ಗೆ-ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಎಂಬಂತೆ ಒಂದು ಕಟುಕಠೋರ ವಿಮರ್ಶೆ ಯೊವುದೊ ದುಷ್ಪೇರಣೆಯಿಂದ ಪ್ರಚೋದಿತವಾಗಿ ಕಾಲೇಜ್ ಪತ್ರಿಕೆಯಲ್ಲಿ ಪ್ರಕಟವಾದಾಗ ಶಿರೀಷ ಕುಸುಮದಂತಹ ಮನಸ್ಸಿನ ಸಾಲಿಯವರಿಗೆ ಆದ ಆಘಾತ ಆ 'ಸಾಲಿ ರಾಮಾಯಣ', ರಾಮಾಯಣದ ವಿಮರ್ಶಾ ರಾಮಾಯಣದಿಂದಾಗಿ, ಅದು ಮುಂದುವರಿಯದೆ ಮುಗ್ಗರಿಸುವಂತೆ ಮಾಡಿತು. ಇದು ಸಾಲಿಯವರ ದುರ್ದೈವವಲ್ಲ' ಕನ್ನಡಿಗರ ದುರ್ದೈವ!

---

* ಎನ್ಕೆ 'ಪರಿಮಳ' ರೇಲ್ವೆಸ್ಟೇಷನ್ ಹಿಂಭಾಗ, ಆನಂದನಗರ, ಧಾರವಾಡ - ೫೮೦ ೦೦೭.

ಸಾಲಿಯವರ ಕಾವ್ಯದಲ್ಲಿ ಪ್ರಕೃತಿ

ಡಾ। ಶ್ಯಾಮಸುಂದರ ಬಿದರಕುಂದಿ

೧೯೪೦ರಲ್ಲಿ ಹೊರಬಂದ 'ಚಿತ್ರಸೃಷ್ಟಿ' ಸಂಕಲನದ ಶೀರ್ಷಿಕೆಕವನದಲ್ಲಿ ಸಾಲಿ ರಾಮಚಂದ್ರರಾಯರು ಉದ್ಗರಿಸುವ ಒಂದು ಮಾತು, ಅವರ ಮನೋಭಾವ, ಕಾವ್ಯದೃಷ್ಟಿಯ ಉದಾಹರಣೆಯಾಗಿದೆ:

ವಿಶ್ವಮೆಂಬುದು ಚಿತ್ರಮಂದಿರಂ
ಸೌಂದರ್ಯನಿಧಿ; ಸೃಷ್ಟಿಕರ್ತನ ಆನಂದದ ಆವಿಸ್ಕೃತಿಗಳ್ಳೆ
ಕ್ಷಣಕ್ಷಣಕೆ ಒಗೆವ ವಿಧವಿಧದ ಚಿತ್ರಸೃಷ್ಟಿ।

ಎಂ. ಗೋವಿಂದ ಪೈಯವರು ಹೇಳುವಂತೆ "ಸಾಲಿಯವರು ಸ್ವಭಾವತಃ ಅಂತರ್ಮುಖಿ. ಬಾಹ್ಯ ಸೃಷ್ಟಿಯನ್ನು ಅವರು ನೋಡುವುದು ಒಳಮೊಗವಾಗಿಯೇ". ಹೀಗಾಗಿ ಕವನದಲ್ಲಿ ಪಡಿ ಮೂಡಿಸಿದ್ದರಲ್ಲಿ ಅವರು ಸಹಜವಾಗಿ ಮಗ್ನರಾಗುತ್ತಾರೆ. ಈ ಅನುಭವವನ್ನು ಸಾಲಿಯವರು ಸೂತ್ರರೂಪದಲ್ಲಿ ಹೇಳಿಕೊಂಡಿದ್ದಾರೆ:

ಮನದೊಳ್ ಒದವಿದುದು ಮೃದು ಮಧುರ ಭಾವನೆ
ಎನ್ನ ಮನವೇ ಈ ಬಾಹ್ಯಸೃಷ್ಟಿಯ ರೂಪೋ
ಸೃಷ್ಟಿಯೇ ಮನದ ರೂಪೋ
ಮನದೊಳ್ ಇರ್ಪುದಂ ಸೃಷ್ಟಿಯೊಳ್ ಕಂಡಪೆಂ ಚಿತ್ರಂ ಎನಿತೋ।
ಮನಂ ಅಳಿದುದೋ ಸೃಷ್ಟಿ ಅಳಿದುದೋ ಮೇಣ್ ತಿಳಿಯೆ
ನನಗೀಗಳೂ ಎತ್ತಲುಂ ತೋರ್ಪುದೊಂದೇ ಒಂದು-
ಮನಂ ಇಲ್ಲ; ಸೃಷ್ಟಿ ಇಲ್ಲ; ಆನಂದ ಆನಂದ
ಆನಂದಂ ಒಂದೆ ಒಂದು।

ಕುವೆಂಪು ಅವರು 'ಸೂರ್ಯೋದಯ ಚಂದ್ರೋದಯ ದೇವರ ದಯೆ ಕಾಣೋ' ಎಂದು ಉದ್ಗರಿಸಿದಂತೆ, ಸಾಲಿಯವರೂ ಪ್ರಕೃತಿಯ ಪ್ರತಿಯೊಂದು ಆಗು ಹೋಗನ್ನು "ಎಂದಿಗುಂ ಮುಗಿಯದ ಈ ಸೃಷ್ಟಿ ಐಸಿರಿ ಎಣಿಕೆ; ತಂದೆ, ನಿನ್ನಯ ಲೀಲೆಯಿಂದಂ ಎಲ್ಲೆಲ್ಲಿಯುಂ ಬೀಡುಗೊಂಡಿರ್ಪುದುಂ ಅಮಮ!" ಎಂದು ಪರಿಭಾವಿಸಿದವರು. ದೇವರು ನಿತ್ಯ ನಿರ್ದ್ವಂದ್ವನು. ಆದ್ದರಿಂದ ಅವನ ಸೃಷ್ಟಿಯಲ್ಲಿಯ ಚೆಲುವು ಸಂತೋಷ ಕೊಟ್ಟಾಗ ಸಂತೋಷವನ್ನು ಪಡುವ ಸಾಲಿಯವರು, ಸೃಷ್ಟಿಯು ನೆಲದ ಜೀವರಾಳಿಗೆ ಬಿರುಬೇಸಿಗೆ, ಅತಿವೃಷ್ಟಿಯಂತಹ ಕೆಡುಕುಗಳನ್ನು ಕೊಟ್ಟಾಗಲೂ

ತಲೆವಾಗಿ ಬೆಸಕೆಯ್ವೆನ್ ಎನ್ನೊಡೆಯ ನಿನ್ನನು ಆಂ
ನಿರ್ದ್ವಂದ್ವ ವೃತ್ತಿಯ ದಯಪಾಲಿಸೆನಗೆ

ಎಂದು ಬೇಡಿಕೊಳ್ಳುತ್ತಾರೆ. ಪ್ರಕೃತಿಯು ತಮಗೆ ಹೊರತಾದುದಲ್ಲ ಎಂಬುದು ಸಾಲಿಯವರಿಗೆ ಮನವರಿಕೆಯಾದ ಸಂಗತಿ. ಅವರ ವೈಯಕ್ತಿಕ ಬದುಕು, ಸಮ- ವಿಷಮಗಳ ಆಗುಹೋಗಿನಿಂದ ತುಂಬಿದೆ. ನಿರ್ದ್ವಂದ್ವ ವೃತ್ತಿ ಅವರ ಪಾಲಿಗೆ ದಕ್ಕಿದೆ.

ಪ್ರಕೃತಿಪ್ರಿಯತೆ ಸಾಲಿಯವರಲ್ಲಿ ಹವ್ಯಾಸವಾಗಿ ಬೆಳೆದದ್ದರಿಂದ 'ಚಿತ್ರಸೃಷ್ಟಿ'ಯ ಮೂವತ್ತಕ್ಕೂ ಹೆಚ್ಚು ರಚನೆಗಳು ಪ್ರಕೃತಿಯ ವೀಕ್ಷಣೆ ಮತ್ತು ರಸಾನುಭವಗಳಿಂದಲೇ ಹುಟ್ಟಿಕೊಂಡಿವೆ. ಕಾಲ ಅಥವಾ ಋತುವಿಗೆ ಕವಿ ಪ್ರತಿಕ್ರಿಯಿಸುವ ಪದ್ಯಗಳು, ಕವಿಯ ವೈಯಕ್ತಿಕ ಬಾಳಿನ ಅನುಭವಗಳನ್ನು ಸೂಚ್ಯವಾಗಿ ಧ್ವನಿಸುವಂತಿವೆ. ಬೇಸಗೆ, ಬಿರುಗಾಳಿ, ಮುಂಗಾರ್, ಹಿಂಗಾರ್, ಮುಂಜಾವು, ಮಳೆಯಿಲ್ಲದ ಮುಂಜಾವು, ಚಂದಿರನ ತಂಬೆಳಗು, ಕಾರ್ಮೋಡಗಳು, ಮಲ್ನಾಡ್, ಮಳೆ ಬೀಳುತಲಿತ್ತು- ಈ ಕವನಗಳು ಆಯಾಹೊತ್ತಿನ ದೃಶ್ಯಗಳನ್ನು ಅನುಭವಿಸುವ ಶಬ್ದಚಿತ್ರಗಳಾಗಿವೆ. ಬೇಸಗೆಯ ಎರಡು ಚಿತ್ರಗಳನ್ನು ಸಾಲಿಯವರು ಬರೆದಿದ್ದಾರೆ. ಮೊದಲನೆಯದರಲ್ಲಿ ಬೇಸಗೆಯ ದಾರುಣತೆಯಿಂದ ಸಸ್ಯ-ಪ್ರಾಣಿವರ್ಗಕ್ಕೆ, ಮನುಷ್ಯರಿಗೆ ಉಂಟಾಗುವ ತೊಂದರೆ, ಕಷ್ಟಕೋಟಲೆಗಳ ವಿವರಗಳಿವೆ. ಎರಡನೆಯದರಲ್ಲಿ ಬೇಸಗೆಯನ್ನು ಮಾನವೀಕರಣ (Personfication) ಗೊಳಿಸಿ ,ಈ ದುರುಳನಿಂದ ಸಸ್ಯಲೋಕ, ಪ್ರಾಣಿಲೋಕಕ್ಕೆ ಆಗುವ ಅನಾಹುತಗಳನ್ನು ತಪ್ಪಿಸಬೇಕೆಂಬ ಬೇಡಿಕೆಯ ಮಂಡನೆ ಇದೆ. ಬಿರುಬೇಸಿಗೆ ನೀಗಿ, ಮಳೆ ಸುರಿದು ಇಳೆ ತಣ್ಣಗಾದಾಗ 'ನವವೃಷ್ಟಿ'ಯ ಹೊಸ ಆಸೆ, ಹೊಸ ಚೇತನಗಳಿಂದ ತಮಗಾದ ಧನ್ಯಭಾವವನ್ನು ಕವಿ ದಾಖಲಿಸುತ್ತಾರೆ.

ಕಾಡುಮೇಡುಗಳಲ್ಲಿ ಹೊಕ್ಕುಹರಿಯುವ ನದಿಯ ಸೆಳವಿನ ವೈಚಿತ್ರ್ಯವನ್ನು, ಅದರ ಭೀಭತ್ಸಭಾವವನ್ನು ಸಾಲಿಯವರು 'ಕಾಳ್ಪುರ' ಪದ್ಯದಲ್ಲಿ ವರ್ಣಿಸುತ್ತಾರೆ. ಕವನ, ಅವರ ಬಾಳಿನ ಅನುಭವಕ್ಕೇ ಒಂದು ರೂಪಕವಾದಂತಿದೆ: ಮುಂಗಾರ್, ಹಿಂಗಾರ್‌ಗಳನ್ನು ಅವಲೋಕಿಸುವ ಕವಿ, ಅವೆರಡೂ ಬಗೆಯ ಮಳೆಗಳಲ್ಲಿರುವ ಗುಣ, ವ್ಯತ್ಯಾಸಗಳನ್ನು ಶಾಬ್ದಿಕ ಅನುಭವದಿಂದ ಪ್ರಕಟಿಸುತ್ತಾರೆ. ಮುಂಗಾರು "ಕಡಕಡಲ್ ಎಂದು ಕರ್ಮೋಗದ ಕಾರ್ಮುಗಿಲಿನ ಗುಡುಗುಡು" ಸದ್ದಿನಿಂದ ಅಬ್ಬರಿಸಿ ಬಂದರೆ, ಹಿಂಗಾರು "ಬೀಣೆ ಇಂಚರದ ಇಂಪಿನೈಸಿರಿಯಂತೆ, ಮತ್ ಚಿತ್ತಮಂ ಸರಭಸಂ ಸೆರೆಗೊಳ್ಳುವ ಸ್ವನದಂತೆ" ಮೆಲುಗಾಳಿಯ ಜತೆ ಬರುತ್ತದೆ. ಕಿವಿಗೆ ಕೇಳುವ ದನಿ, ಕಣ್ಣಿಗೆ ಕಾಣುವ ನೋಟಗಳನ್ನು ಸಾಲಿಯವರು ಶಬ್ದಗಳಲ್ಲಿ ಹಿಡಿದಿಡುವ ಕಲೆಯಲ್ಲಿ ಪರಿಣತರಾಗಿರುವುದು ಈ ಪದ್ಯಗಳಿಂದ ಅನುಭವಕ್ಕೆ ಬರುತ್ತದೆ.

'ಅಡವಿ' ಕವನವಂತೂ ಸಾಲಿಯವರ ಬಾಲ್ಯ ಮತ್ತು ಯೌವನ ಕಾಲದ ಜೀವನಾನುಭವಗಳ ಸ್ಪಷ್ಟ ರೂಪಕ. ಬದುಕಿನ ಅಡವಿಯನ್ನು ಕ್ರಮಿಸಿ ಮುಂದೆ ಸಾಗಬೇಕಾದ ಒಂದು ಅವಸ್ಥೆ (ಸ್ಥಿತಿ) ಯನ್ನು ಅವರು ಭಾವಗರ್ಭಿತ ಪದಗಳಲ್ಲಿ ಮೂಡಿಸಿದ್ದಾರೆ. ಭೀತಿ ಅಳುಕುಗಳ ಭಾವನೆಯನ್ನು 'ಅಡವಿ'ಯ ಭೀಕರಪರಿಸರದ ವರ್ಣನೆಯಿಂದ ತೋರಿಸುವ ಕವಿ, ಕಟ್ಟಡವಿಯಲ್ಲಿ ತಾನು ದೆಸೆಗೆಡುವೆನೆ ಅಥವಾ ಜೀವಹಂತಕ ಪ್ರಾಣಿಗೆ ಬಲಿಯಾಗುವೆನೆ ಎಂದು ಆತಂಕಗೊಳ್ಳುತ್ತಾನೆ. ಆದರೆ ಕವನದ ಕೊನೆಯ ನುಡಿಯಲ್ಲಿ-

ಬಗೆ ಒಪ್ಪದು, ಈ ಬಗೆಯ ದೆಸೆಗೆ।
ಅಳಿವಿಗೆ ಎಡೆಯಾಗೆನ್ನೈ। ಬಲ್ಲೆ ನಾಂ ಬಲ್ಲೆನು
ಎನ್ನೊಳಗೆ ಇರ್ಪುದು ಅಮಿತ ಬಳಂ ಎಂಬುದಂ।

ಮೊತ್ತಳಂ ತುಳಿಯುತ್ತೆ ಕಾಲ್ಕೆಳಗೆ ಬಳಲಿಸುವ
ಕುತ್ತಮಂ, ಕಲಿಯಂತೆ ನಡೆವೆನಿನ್ನು

ಸಾಲಿಯವರು ತೋರುವ ಈ ಧೀಮಂತಿಕೆ ೧೯೨೬ರಲ್ಲಿಯದು. ಮುಂದೆ ಅವರ ಒಬ್ಬನೇ ಒಬ್ಬ ಮಗ ಕೃಷ್ಣ, ತುಂಬು ಹರಯದಲ್ಲಿ ತೀರಿಕೊಂಡ; ಹೆಂಡತಿ ಆ ಮೊದಲೇ ತೀರಿಹೋಗಿದ್ದರು. ಬಾಳಿನ ಕಟ್ಟಡವಿಯಲ್ಲಿ ಒದಗಿದ ಈ ಮರಣಾಂತಿಕ ಪೆಟ್ಟಿನಿಂದ ಚೇತರಿಸಿಕೊಂಡೇಳುವ ಮನಃಶಕ್ತಿ (ವಿಚಾರಶಕ್ತಿ) ಅವರಲ್ಲಿ ಆದಾಗಲೇ ಸಿದ್ಧವಿತ್ತು.

ಪ್ರಕೃತಿಯ ಸಹಜವರ್ತನೆ, ಪರಿವರ್ತನೆಗಳನ್ನು ಮನಸ್ಸು ತುಂಬಿ ವರ್ಣಿಸುವ ಸಾಲಿಯವರು, ಅದರಿಂದ ಪ್ರೇರಣೆ ಪಡೆದು ಬಾಳಿನಲ್ಲಿ ಕಲಿತರು; ತಮ್ಮನ್ನು ಬಾಳಿಸಿಕೊಂಡರು. "ತೀತಿ" ಎಂದು ಕೂಗುವ ಒಂದು ನೀರ್ವಕ್ಕಿಯ ಒನಪು ಒಯ್ಯಾರವನ್ನು ಶಬ್ದಗಳಲ್ಲಿ ಹಿಡಿದಿಟ್ಟ ಸಾಲಿಯವರು ಮುಗ್ಧತೆಯೊಳಗಿನ ಚೆಲುವಿಗೆ ಬೆರಗಾಗಿ ಹೇಳುತ್ತಾರೆ:

"ನೊಂದ ಹೃದಯಂ ತನ್ನ ನೋವನ್ ಈಗಳ್ ಮರೆತು
ನಿಂದುದು ಆನಂದಸೌರಭಮನೇ ಸವಿಯುತುಂ
ಪೆಂಪೆನಿತೋ ಸೌಂದರ್ಯದಾ।
ಸೌಂಧರ್ಯಂ ಎಂಬುದಿದು ಜೀವಿತದ ಸರ್ವಸ್ವ"

ಎಂದು ನಿಶ್ಚಯಿಸುವ ಈ ಕವಿಯ ದನಿ, ನಡೆಗಳನ್ನು ಕಾಡಿನಲ್ಲಿ ಕಂಡ ಬನದೇವಿ, 'ಶಾಂತಿಗೆ ಈತನೆ ಉಗಮದ ಎಡೆಯಲ್ತೆ' ಎಂದು ಒಲವಿನಿಂದ ಕೈಮುಗಿಯುವ ಕಲ್ಪನೆ ಸಾಲಿಯವರ ಕಾವ್ಯಜೀವನದ ನಂಬಿಕೆಗೆ ನಿದರ್ಶನ.

ಪ್ರಕೃತಿಯ ಕ್ರೌರ್ಯ, ಅದು ಎಸಗುವ ಪ್ರತೀಕಾರದ ಕ್ರಿಯೆಗಳನ್ನು ಕವಿ ಸಾಲಿಯವರು ಪ್ರತಿಭಟಿಸುವುದಿಲ್ಲ. ವ್ಯತಿರಿಕ್ತವಾಗಿ ಸಹನೆಯಿಂದ ಕಾಣುತ್ತಾರೆ. ಶಾಂತಿ, ಸಹನೆಯ ಸ್ಥಾಯೀಭಾವ ಸಾಲಿಯವರ ಸ್ವಭಾವ. ಅದರಿಂದಲೇ ಪ್ರಕೃತಿಯನ್ನವರು 'ಸ್ವಪ್ನಸೃಷ್ಟಿ' ಎಂದು ಗುರುತಿಸಿದ್ದು. ಪ್ರಕೃತಿಯಲ್ಲಿ ದುರ್ಬಲರನ್ನು ಪ್ರಬಲರು ಶೋಷಿಸುವ ವಾಸ್ತವಸ್ಥಿತಿಯನ್ನು ಸಾಲಿಯವರು ಗಮನಿಸಿದ್ದಾರೆ. ಒಂದು ಪೆರ್ಮುಗಿಲು ಇನ್ನೊಂದು ತೆಳುಮುಗಿಲನ್ನು ಆರ್ಭಟದಿಂದ ಅಟ್ಟಿಸಿಕೊಂಡು ಹೋಗುವ ಒಂದು ಚಿತ್ರ ಬರೆದು "ದುರ್ಬಲರು ಬಲ್ಲಿದರ ಬಾಯ್ಗೆ ತುತ್ತೋ' ಎಂದು ಹತಾಶೆಯಿಂದ ಪ್ರಶ್ನಿಸುತ್ತಾರೆ. ಸೃಷ್ಟಿಯ ಪ್ರತಿಯೊಂದು ಕೃತಿಯಲ್ಲಿ ಕೌತುಕಕ್ಕೆ ಆಸ್ಪದವಿದೆ; 'ಅಚ್ಚರಿ-ಅದ್ಭುತ' ಉದ್ಗಾರಗಳೇ ಮನುಷ್ಯನಾದವ ಪ್ರಕೃತಿಯ ಆಗುಹೋಗುಗಳಿಗೆ ಕೊಡಬೇಕಾದ ಪ್ರತಿಕ್ರಿಯೆ. ಇದು ಸಾಲಿಯರರ ಇಂಗಿತ. ಪ್ರಕೃತಿ, ಸೃಷ್ಟಿಕರ್ತನ ಮಹಿಮೆಯ ಕ್ರಿಯೆ. 'ಮನದ ಮಾಲಿನ್ಯವನ್ನು ತೊಳೆವ ಪಾವನ' ನಿಸರ್ಗದಲ್ಲಿದೆ ಕಾರ್ಪಣ್ಯ ತೊಲಗಿಸುವ ಪವಾಡವೂ ಇದೆ. ಕ್ಷುದ್ರವಾದ ಹೃದಯದ ದೌರ್ಬಲ್ಯವನ್ನು ನೀಗುವ ಹಿರಿಮೆಯೂ ಪ್ರಕೃತಿಯ ಹಿಂದಿದೆ. ಕವಿಯ ಈ ಮನೋಭಿತ್ತಿಯ ಹಿಂದಿರುವುದು, ಪರಮಾತ್ಮನನ್ನು ಅಖಂಡವಾಗಿ, ಅವಿರತವಾಗಿ ಸೇವಿಸುವ ಭಕ್ತಿಭಾವ. ಅಪ್ರಶ್ನಿತ ದೈವಶ್ರದ್ಧೆಯೊಂದೇ ಕವಿಯನ್ನು ನಿರ್ದಿಷ್ಟ ಕಲ್ಪನೆಯ ಕಡೆಗೆ ಒಯ್ದು ನಿಲ್ಲಿಸುತ್ತದೆ.

ಬೆಳದಿಂಗಳಿನ ಸೌಂದರ್ಯವನ್ನು ಪಂಚೇಂದ್ರಿಯಗಳ ಮೂಲಕ ಅನುಭವಿಸುವ ಸಾಲಿಯವರು, ಕತ್ತಲೆಯನ್ನು 'ಒಳ್ಳು' ಎಂದು ಬಗೆದಿರುವುದು ಅವರ ಜೀವನದ ಒಂದು ಮುಖ್ಯ ಗ್ರಹಿಕೆ. ಚಂದ್ರನಿಲ್ಲದ ರಾತ್ರಿಯಲ್ಲಿ ನಕ್ಷತ್ರ ಪುಂಜಗಳಿಂದ ಆಗಸ ಬೆಳಗುತ್ತಿರುವುದನ್ನು 'ಪೆಂಪು', 'ವಿಸ್ಮಯ' ನೋಟದಿಂದ ನೋಡುವ ಕವಿಗೆ, ಸೃಷ್ಟಿಕರ್ತನ ಈ ಕೃತಿಕೌಶಲ "ಇಂದು ನಿನ್ನೆಯದಲ್ಲ" ಎಂದು ಗೊತ್ತಿದೆ. ಹಲವು ತೆರದಿಂದ

ನೊಂದಮಸಕ್ಕೆ ಕತ್ತಲೆಯು ಆನಂದ, ನೆಮ್ಮದಿ ಕೊಡುವ ಕಾಲವೇ ಆಗಿರುವುದರಿಂದ ಅದನ್ನು ಅನಿಷ್ಟ, ಅಶುಭ ಎಂದು ಅರರು ತಿರಸ್ಕರಿಸುವುದಿಲ್ಲ. ಬದುಕಿನಲ್ಲಿ ಬೆಳದಿಂಗಳು ಮತ್ತು ಕತ್ತಲೆ ಪರಸ್ಪರ ವಿರುದ್ಧವಿರುವ ಅನುಭವಗಳಲ್ಲ ಎಂಬ ಸಾಲಿಯವರ ಕಲ್ಪನೆ ಅವರ ಕಾವ್ಯ ತತ್ವಕ್ಕೆ ಧೀಮಂತಿಕೆಯ ರೂಪ ಕೊಟ್ಟಿದೆ. ಪ್ರಕೃತಿಯಲ್ಲಿ ಇತ್ಯಾತ್ಮಕತೆ, ನೇತ್ಯಾತ್ಮಕತೆ ಎಂಬುದಿಲ್ಲ. ಈ ಭೇದದ ಕಲ್ಪನೆ ನಮ್ಮ ಮನಸ್ಸಿನದೇ ಹೊರತು, ದೈವದ ದ್ವಂದ್ವ ಅದಕ್ಕೆ ಹೊಣೆ ಅಲ್ಲ. ಈ ತಿಳುವಳಿಕೆ ಕವಿಯ ಭಕ್ತ ಹೃದಯದ ದೃಢ ನಂಬಿಕೆ.

ಪ್ರಕೃತಿಯನ್ನು ಅಡ್ಡಾಡಿ ನೋಡುವ ಹವ್ಯಾಸ ಸಾಲಿಯವರದಾಗಿತ್ತು. ೧೯೨೮ರಲ್ಲಿ ಮಾಸ್ತಿಯವರ ಸ್ನೇಹದ ಆಮಂತ್ರಣ ಮನ್ನಿಸಿ, 'ಕೊಡಗು' ನೋಡಿ ಬಂದರು; ಮತ್ತೊಮ್ಮೆ ಕಾರವಾರದ ಸಮೀಪವಿದ್ದ 'ರಾಮನಗುಳಿ' ನೋಡಿ ಬಂದರು. ಅವೆರಡೂ ಸ್ಥಳಗಳ ನಿಸರ್ಗ ಚೆಲುವನ್ನು ದಾಖಲಿಸುವ ಪದ್ಯಗಳಲ್ಲಿ ಧನ್ಯತೆಯ ಭಾವ ತುಂಬಿದೆ ಕೊಡಗನ್ನು 'ಕರುನಾಡ ಮುದ್ದುಗೂಸು' ಎಂದು ವರ್ಣಿಸುತ್ತ ಅಲ್ಲಿಯ ಗಿರಿ-ಕಂದರ, ಹಕ್ಕಿ-ಮೃಗಗಳ ಅಲೆದಾಟ, ನದಿ-ಹಳ್ಳಗಳ ಹರಿದಾಟಗಳನ್ನು ಚಿತ್ರಿಸುತ್ತಾರೆ.

"ಪೊರಗಣ್ಗೆ ನೀಮಿನ್ನು ಮರೆಯಾದೊಡಂ, ಹೃದಯ ಭಿತ್ತಿಯೊಳ್ ಚಿತ್ರಿತರ್, ನಿಮ್ಮನಾಂ ಮರೆವುದೆಂತು?" ಎಂದು ಕವಿತೆಯಲ್ಲಿ ಉದ್ಗರಿಸುತ್ತಾರೆ. ಕನ್ನಡನಾಡಿನ ನೆಲ, ನೀರು, ಕಾಡು, ಬೆಟ್ಟ, ಬಯಲು, ತೋಟಗಳನ್ನು 'ಚಿತ್ರ ಸೃಷ್ಟಿ'ಯ ತುಂಬ ಹಿಡಿದಿಟ್ಟಿರುವ ಸಾಲಿಯವರಿಗೆ, 'ಪಿರಿದೆನ್ನ ತಾಯ್ನಾಡು; ಪಿರಿದಿಂದು ಪಿರಿದಂದು ಪಿರಿದು ಆವಗಂ ಮುಂದು' ಎನ್ನುವ ಅಭಿಮಾನ, ಹೆಮ್ಮೆ. ತಾಯಿನಾಡು ಮತ್ತು ತಾಯಿನುಡಿಗಳನ್ನು ಕುರಿತು ಬರೆದ ಪದ್ಯಗಳಲ್ಲಿ ಕವಿ ಸಾಲಿ, ಮತ್ತೆ ಮತ್ತೆ ನಿಸರ್ಗವನ್ನು ಪ್ರಸ್ತಾಪಿಸುತ್ತಾರೆ. 'ಪರಿದೊರೆ, ತಿಳಿಗೊಳ, ಪೊಸಬನ, ಬೆಳವೊಲ, ನರುಹೂ, ಪಾಲ್ದೆನೆ, ತಣವಣ್ಗಳಿನ್ ಅನವರತಂ ಮೆರೆವುದು' ಎಂದು ಹೇಳುವಾಗ, ಪಂಪನ ಬನವಾಸಿದೇಶದ ವರ್ಣನೆ ನೆನಪಾಗುತ್ತದೆ. ಕನ್ನಡನುಡಿಯ ಸೊಗಸು, ಚೆಲುವು ವರ್ಣಿಸುವಾಗಲೂ ನಿಸರ್ಗದ ಅಂಶಗಳು ಉಪಮೆಯಾಗಿ ಬರುತ್ತವೆ. ತಂಗೊಳದ ಮೆಲ್ಲೆಲರು; ಮಾವಿನ ಎಳದಳಿರ ಸೊಗಯಿಪ ನುಣ್ಪು; ಹೊಸಪೂವ ಮೆಲ್ಪು; ನರುಗಂಪು... ಇತ್ಯಾದಿ.

ದೇಶದ ವಿಮೋಚನೆಗಾಗಿ ಹಂಬಲಿಸಿ, ಗುಪ್ತವಾಗಿಯೇ ಗಾಂಧೀವಾದಿಯಾಗಿ ಬದುಕಿದ್ದ ಸಾಲಿ ರಾಮಚಂದ್ರರಾಯರು ಸ್ವಾತಂತ್ರ್ಯನಂತರ ಬರೆದ "ಬಾಳಿನಲಿ ಸೊಗಸು" ಹಾಡಿನಲ್ಲಿ-

"ಬದುಕಿಸುತೆ ಬದುಕಬೇಕೆಂಬುದೇ ವಿಶ್ವಧರ್ಮದ ತಿರುಳು; ಕೊಂದು ಬದುಕುವುದಕಲ್ಲವೋ! ಮುದುಡಬಾರದು ಜೀವ; ಜೀವ ಅರಳಬೇಕಯ್ಯ" ಎಂದು ಆಶಿಸಿ, ನಿಸರ್ಗದ ಸ್ವತಂತ್ರ, ಸುಂದರ, ಸಹಜ ಇರವಿನ ಜತೆಗೇ ಬದುಕಿದರು. ಹಳಗನ್ನಡ ನುಡಿಗಟ್ಟಿನಲ್ಲಿ, ವಾರ್ಧಕ ಷಟ್ಪದಿಯ ಸಾಂಪ್ರದಾಯಿಕ ಬಂಧದಲ್ಲಿ ಮೂಡಿರುವ ಪ್ರಕೃತಿಯೊಂದಿಗಿನ ಸಾಲಿಯವರ ಸಂಬಂಧ, ಆಧುನಿಕ ಸಂವೇದನೆಯದಂತೂ ಅಲ್ಲ, ಭಕ್ತಿ ಕಾವ್ಯದ ಆಧುನಿಕ ಮಾದರಿ ಎಂದು ಗುರುತಿಸಬಹುದು.

ಪ್ರಕೃತಿ ವಸ್ತುವನ್ನು ಅವರು, ತಮ್ಮಿಂದ ಹೊರತಾದ ಬಾಹ್ಯವಾಗಿರುವ ಅಂಶ (ಸ್ವತಂತ್ರ ಅಸ್ತಿತ್ವ) ವೆಂದು ಬಗೆಯುವುದಿಲ್ಲ. 'ವಿಶ್ವಮಿದು ಚೈತನ್ಯಮಯಂ' ಎಂದೂ 'ಜಡಮಲ್ಲ' ಎಂದೂ ಭಾವಿಸುವ ಕವಿ ಸಾಲಿಯವರು ಪ್ರಕೃತಿಯೊಳಗೆ ತಾವಿರುವುದನ್ನು ಗುರುತಿಸಿಕೊಳ್ಳುತ್ತಾರೆ. ಅಂದರೆ, ಹಳೆಯ ಕವಿಗಳ ಹಾಗೆ, ಕತೆಯ ಒಂದು ಸನ್ನಿವೇಶದ ಅಂಶವಾಗಿಯೋ, ಸಾಂದರ್ಭಿಕ ವರ್ಣನೆಗಾಗಿಯೋ ಪ್ರಕೃತಿಯನ್ನು ಪರಿಭಾವಿಸದೇ ತಮ್ಮ ವೈಯಕ್ತಿಕತೆಯನ್ನು ಶೋಧಿಸಲು ಸಾಲಿಯವರು ಬಳಸಿಕೊಳ್ಳುತ್ತಾರೆ. ಸಮಷ್ಟಿ ಬದುಕಿನಲ್ಲಿ ವ್ಯಕ್ತಿ ಮತ್ತು ಸಮಾಜ ಮಾತ್ರವೇ ಸೇರುವದಿಲ್ಲ; ಪ್ರಕೃತಿಯೂ ಚಲನಶೀಲ ಘಟಕವಾಗಿ ಅದರೊಳಗಿರುತ್ತದೆ. ಸಹಜ ಪರಿಸರದ ಪ್ರಜ್ಞೆ ಮತ್ತು ಅದರೊಂದಿಗಿನ ಸಹಜ ಒಡನಾಟವೇ ನಿಜವಾದ

ಸಮಷ್ಟಿ ಬದುಕು. ಏಕೆಂದರೆ ಮನುಷ್ಯ ಬುದ್ಧಿಜೀವಿಯಾಗಿದ್ದರೂ, ಸಮಾಜವ್ಯವಸ್ಥೆ (ನಾಗರಿಕತೆ)ಯನ್ನು ಕಟ್ಟಿಕೊಂಡಿದ್ದರೂ ಅವನ ಮೂಲ ಚೇತನ ಪ್ರಾಕೃತಿಕ. ಸಾಲಿಯವರು ಪ್ರಕೃತಿಯ ಸಹವಾಸದಲ್ಲಿ ತಮ್ಮ ಸುಸಂಸ್ಕೃತ (ನಾಗರಿಕ) ಮನಸ್ಸನ್ನು ಅರಳಿಸಿಕೊಂಡವರು. ಹೀಗಾಗಿ, ಅಸ್ಥಿರತೆಗೆ ಎಡೆಯಿಲ್ಲದಂತೆ ಅವರು ಪ್ರಕೃತಿಯೊಂದಿಗೆ ಬೆರೆತು, ಅದರ ಆಗುಹೋಗುಗಳ ಮುಖಾಂತರವೇ ಸಂವೇದನೆಗೆ ಹಾದಿ ಹುಡುಕಿದವರು. ಸಂವೇದನೆ ಸ್ವತಂತ್ರವಾಗಿದ್ದು ಸಾಂಪ್ರದಾಯಿಕ ಪದಬಂಧ, ನುಡಿಕಟ್ಟು ಮತ್ತು ಸವಕಲಾದ ಲಯ ಯೋಜನೆಯಲ್ಲಿ ಅವರು ಪ್ರಕಟಗೊಳ್ಳುವುದರಿಂದ, ಕಾವ್ಯಾಭಿವ್ಯಕ್ತಿಗೆ ಮಿತಿಯೇರ್ಪಡುತ್ತದೆ. ಈ ಮಿತಿಯು ಕವಿಗಿರಬೇಕಾದ ಮುಕ್ತತೆ, ಚಂಚಲತೆಗಳನ್ನು ಕಟ್ಟಿಹಾಕುವಂತಹದು. ಸಂಸ್ಕೃತ ಸಮಾಸ ಪದಗಳ ಸಾಲಿಯವರ ನುಡಿಗಾರಿಕೆ ಪ್ರತಿಸಲವೂ ಶೈಲೀಕೃತಗೊಂಡು, ಆಯಾ ಅನುಭವದ ವಿಶಿಷ್ಟತೆ, ತಾಜಾತನಗಳಿಂದ ವಂಚಿತಗೊಳಿಸುತ್ತದೆ. 'ನವವೃಷ್ಟಿ' ಪದ್ಯದಲ್ಲಿ ಹೊಸಮಳೆಯು ಸುರಿದುಹೋದ ಮೇಲೆ ನದಿ-ಹಳ್ಳಗಳು ತುಂಬಿ ಹರಿದ ನಂತರದ ಇಳೆಯು ಸಾಲಿಯವರಿಗೆ "ಪ್ರಾಗಲ್ಭ್ಯ" ವಾಗಿ ಕಂಗೊಳಿಸುತ್ತದೆ. ಈ ಪದ, ಕವಿಯ ಪಾಂಡಿತ್ಯದ ಕಲ್ಪನೆಯ ಫಲ; ಇಲ್ಲಿ ಸಹಜತೆ ಬುದ್ಧಿಪೂರ್ವಕ ದೂರ ಉಳಿದಿದೆ. ಮಳೆಯೊಳಗೆ ಮಿಂದ ಇಳೆಯು ಸಾಲಿಯವರಿಗೆ "ನಾಲ್ಕು ನೀರ್ ಮಿಂದ ನವ ತರುಣಿ ಅಂಗದ ವಿಳಾಸಂ ಬಡೆದು ಕಣ್ಮನಕೆ ಕರೆಯುವುದು ಉತ್ಸವಮನ್". (ಮುಟ್ಟಿನ ಮೂರು ಮೈಲಿಗೆಯ ದಿನಗಳು ಕಳೆದು, ನಾಲ್ಕನೆಯ ದಿನ ಮೈತೊಳೆದು ಬಂದ ಹರಯದ ಹುಡುಗಿಯ ಮೈಯ ಸೊಗಸು- ಸೊಬಗು, ನೋಡುವ ಕಣ್ಣು ಹಾಗೂ ಅನುಭವಿಸುವ ಮನಸ್ಸಿಗೆ ಹಬ್ಬವನ್ನುಂಟುಮಾಡಿದೆ) ನಿಜ, ಈ ರೂಪಕದ ಸಾರ್ಥಕತೆಯು ನುಡಿಗಟ್ಟಿನ ಬಿಗಿಯಲ್ಲಿ, ಹಳಮೆಯಲ್ಲಿ ಮುಚ್ಚಿಹೋಗಿದೆ. ಈ ಕವನದ ಕೊನೆಗೆ ಕವಿ ತೆಗೆಯುವ ಉದ್ಗಾರ ಕೂಡ ಒಂದು ಹೇಳಿಕೆಯಾಗಿ ಮಾತ್ರ (ಅನುಭರದ, ಕ್ರಿಯೆಯ ಪ್ರತಿಪಾದನೆಯಿಲ್ಲದೆ) ಕಾಣುತ್ತದೆ: "ನವದೃಷ್ಟಿಯಿಂದದೇಂ ಪೊಸದೇಸಿ ಪಸರಿಸಿದುದೋ!" 'ಹೊಸದೇಸಿ' ಯ ಕಲ್ಪನೆ ಕವಿಗಿದೆ; ಆದರೆ ಇಲ್ಲಿ ಅದು ರೂಪುಗೊಳ್ಳದೇ ಉಳಿದಿದೆ. ದೇಸೀ ಸೊಗಡಿನ ಒಲವು ತಮಗಿದೆ ಎನ್ನುವ ಸೂಚನೆಯನ್ನು ಸಾಲಿಯವರು ಕೊಡುತ್ತಾರೆ. ಅಷ್ಟಕ್ಕೇ ಸಂತೃಪ್ತರಾಗಿ ಬಿಡುತ್ತಾರೆ. ದೇಸೀ ಸೊಬಗು-ಸೊಗಡಿನ ಶೋಧಕ್ಕೆ ಅವರ ಕಾವ್ಯಾಭಿವ್ಯಕ್ತಿ ಹೊರಡುವುದಿಲ್ಲ. ಕಾವ್ಯದಿಂದ ಪಡೆಯಬೇಕಾದುದೇನು ಎನ್ನುವ ದಿಸೆಯಲ್ಲಿ ಮಹತ್ವಾಕಾಂಕ್ಷಿಯಾಗಿ ದುಡಿಯದ ಸಾಲಿಯವರ ಪ್ರಕೃತಿ ಕಾವ್ಯವು ನವನವೋಲ್ಲೇಖಶಾಲಿನಿಯಾಗಿ ಮೆರೆಯುವ ಅವಕಾಶದಿಂದ ವಂಚಿತವಾಗಿದೆ.

❁

---

* ಡಾ। ಶ್ಯಾಮಸುಂದರ ಬದರಕುಂದಿ, ಆದರ್ಶ ಶಿಕ್ಷಣ ಸಮಿತಿಯ ಕಾಮರ್ಸ್ ಕಾಲೇಜು, ಗದಗ - ೫೮೨ ೧೦೨.

ಸಾಲಿಯವರ ಕಾವ್ಯದಲ್ಲಿ ದೇಶಪ್ರೇಮ

ಡಾ। ಜಿ.ಎಂ. ಹೆಗಡೆ

ಕನ್ನಡ ನವೋದಯ ಸಾಹಿತ್ಯದ ಹಿರಿಯ ಚೇತನವಾಗಿದ್ದ ಸಾಲಿ ರಾಮಚಂದ್ರರಾಯರ ವ್ಯಕ್ತಿತ್ವ ಬಹುಮುಖವಾದುದು. ಅವರು ಕವಿ, ಸಾಹಿತಿ, ಶಿಕ್ಷಕ, ಕನ್ನಡನಾಡು - ನುಡಿಯ ಚಿಂತಕರಾಗಿ ಅಮೂಲ್ಯ ಕಾರ್ಯ ಮಾಡಿದರು 'ಕನ್ನಡದ ಹುಲ್ಲೆಸಗೆ ಪಾವನ ತುಳಸಿ' ಎಂದು ಹಾಡಿದ ಸಾಲಿಯವರು ಕನ್ನಡ ಪರಂಪರೆಯ ಉನ್ನತಾದರ್ಶಗಳನ್ನು ಪ್ರಸಾರ ಮಾಡಿದವರು. ಮರಾಠಿಮಯವಾಗಿದ್ದ ಧಾರಾವಾಡದಲ್ಲಿ ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಕನ್ನಡಪ್ರಜ್ಞೆ, ಸಾಹಿತ್ಯ ಪ್ರೀತಿ ಬೆಳೆಸುವಲ್ಲಿ ಶ್ರಮಿಸಿದರು. ಗಾಂಧಿವಾದಿಯಾಗಿ, ಭಾವಜೀವಿಯಾಗಿ, ಧ್ಯೇಯಸಂಪನ್ನರಾಗಿ ಬಾಳಿದ ಸಾಲಿಯವರು ತೊಂಬತ್ತು ವರ್ಷಗಳ ತುಂಬು ಜೀವನ ನಡೆಸಿದವರು. ಕನ್ನಡ, ಇಂಗ್ಲಿಷ್, ಸಂಸ್ಕೃತ, ಮರಾಠಿ, ಗುಜರಾತಿ ಹೀಗೆ ಬಹುಭಾಷಾ ಪಾಂಡಿತ್ಯ ಪಡೆದಿದ್ದ ಸಾಲಿಯವರು ಭಾರತೀಯ ಸಾಹಿತ್ಯ ಸಂಸ್ಕೃತಿಗಳಲ್ಲಿ ಆಳವಾದ ಶ್ರದ್ಧೆ ಹೊಂದಿದವರು. ಸಾಲಿ ರಾಮಚಂದ್ರರಾಯರ ಕಾವ್ಯ ಮತ್ತು ವ್ಯಕ್ತಿತ್ವದಲ್ಲಿ ದೇಶಪ್ರೇಮ, ರಾಷ್ಟ್ರೀಯತೆ ಮೂಲಸ್ರೋತವಾಗಿ ಹರಿದು ಬಂದ ಬಗೆಯನ್ನು ವಿವೇಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಕನ್ನಡ ನವೋದಯ ಸಾಹಿತ್ಯದ ಮುಖ್ಯ ಕೇಂದ್ರವಾದ ಧಾರವಾಡದಲ್ಲಿ ಹೊಸ ಕಾವ್ಯದ ಮೂಲಸೆಲೆಗಳನ್ನು ಗುರುತಿಸುವ ಪ್ರಯತ್ನ ಈಗ ನಡೆದಿದೆ. ಬಿ.ಎಂ. ಶ್ರೀಕಂಠಯ್ಯನವರ 'ಇಂಗ್ಲಿಷ್‌ಗೀತಗಳು' ಪ್ರಕಟವಾಗುವುದಕ್ಕೆ ಮೊದಲೇ ಧಾರಾವಾಡದಲ್ಲಿ ಹೊಸಕಾವ್ಯದ ಪ್ರಯೋಗ ನಡೆದದ್ದು ಐತಿಹಾಸಿಕ ಸತ್ಯವಾಗಿದೆ. ಇಂಗ್ಲಿಷ್ ಸಾಹಿತ್ಯದಿಂದ ಪ್ರಭಾವಿತವಾಗದೆ ಕನ್ನಡದ ದೇಶಿನಿಷ್ಠ ಕಾವ್ಯದ ಮೂಲಸೆಲೆಗಳನ್ನು ಬಳಸಿಕೊಂಡು ಕನ್ನಡದ ಹೊಸಕಾವ್ಯವನ್ನು ವಿಕಾಸಗೊಳಿಸುವ ಆಶಯವನ್ನು ಕನ್ನಡ ನವೋದಯದ ಹಿರಿಯ ಕವಿ ಸಾಲಿಯವರು ಈ ಶತಮಾನದ ಮೊದಲ ದಿನಗಳಲ್ಲಿ ನಡೆಸಿದ ಕಾವ್ಯಪ್ರಯೋಗ ಸಾಕ್ಷಿಯನ್ನೊದಗಿಸುತ್ತದೆ. ಆಂಗ್ಲ ರೊಮ್ಯಾಂಟಿಕ್ ಕಾವ್ಯದ ಪ್ರಭಾವಕ್ಕೆ ಗುರಿಯಾಗಿ ಆಧುನಿಕೀಕರಣ ಹೊಂದುತ್ತಿದ್ದ ಸಂಧಿಕಾಲದಲ್ಲಿ ಸಾಲಿಯವರು ಕನ್ನಡದ ದೇಶಿಕಾವ್ಯ ಪರಂಪರೆಯಲ್ಲಿ ತೋರಿದ ಆಳವಾದ ಆಸ್ಥೆ ಮಹತ್ವದ ಅಂಶವಾಗಿದೆ. ಸಾಲಿ ರಾಮಚಂದ್ರರಾಯರು ವಿದ್ಯಾರ್ಥಿಜೀವನದಿಂದಲೂ ಕನ್ನಡಪ್ರೀತಿ, ಸಾಹಿತ್ಯಾಸಕ್ತಿ ಹೊಂದಿದ್ದರು. ಈ ಶತಮಾನದ ಮೊದಲ ಎರಡು ದಶಕಗಳ ಅವಧಿ ಭಾರತೀಯತೆಯ ಮೂವರು ಮಹಾನುಭಾವರು ಪ್ರಭಾವ ಬೀರಿದ ಕಾಲವದು. ಅರವಿಂದರ ಕ್ರಾಂತಿಮಂತ್ರ, ಲೋಕಮಾನ್ಯ ತಿಲಕರ ಧ್ಯೇಯವಾದ, ಗಾಂಧೀಜಿಯವರ ರಾಷ್ಟ್ರೀಯ ಜಾಗೃತಿಯ ಕರೆ ಯುವಜನರನ್ನು ಆಕರ್ಷಿಸಿ ಪರಕೀಯರ ದಾಸ್ಯದಿಂದ

ಬಿಡುಗಡೆಗೊಂಡು ಭಾರತೀಯತೆಯ ಪುನರುತ್ಥಾನಕ್ಕಾಗಿ ಹಂಬಲಿಸಿದ ಸಂದರ್ಭದಲ್ಲಿ ಸಾಲಿಯವರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ರಾಷ್ಟ್ರೀಯತೆಯ ಪ್ರವಾಹದಲ್ಲಿ ಧುಮುಕಿದರು. ೧೯೧೬ರಲ್ಲಿ ಅವರು ಬರೆದ 'ಹಂಬಲು' ತುಂಬ ಮಹತ್ವಪೂರ್ಣವಾದುದು.

ಅವಿನದು ನೊರೆಹಾಲನೊಲ್ಲೆನು
ದೇವಲೋಕದ ಸುಧೆಯನೊಲ್ಲೆನು
ದೇವಿ ನಿನ್ನಯ ನಾಮದನುಪಮ ರುಚಿಯನರಿತಿಹೆನು
ಪಾವನೆಯೆ ನಿನ್ನಂಘ್ರಿಕಮಲದ
ಸೇವೆ ದೊರೆತಿಹುದೆನಗೆ ತಾಯೇ
ಶ್ರೀವರನ ದಯೆಯಿಂದ ಮತ್ತಿನ್ನೇನು ಬೇಡೆನಗೆ

ಸಾಲಿಯವರು 'ತಾಯೆ ನಿನ್ನುದರದಲಿ ಜನಿಸುವದೇ ಪರಮಭಾಗ್ಯ'ವೆಂದು ಭಾವಿಸಿದವರು. ಅವರ ಆರಂಭದ ಕವಿತೆಯಲ್ಲಿ ಜಾಗೃತವಾದ ಭಕ್ತಿನಿಷ್ಠೆ ಮುಂದಿನ ಅವರ ಕಾವ್ಯದಲ್ಲಿ ಸ್ಥಾಯಿಯಾಗಿ ಬಂದದ್ದನ್ನು ನಾವುಲೆ ಕಾಣುತ್ತೇವೆ. ಭಾರತೀಯತೆಯ ಪುನಃಶೋಧ ಸಾಲಿಯವರ ಕಾವ್ಯದ ಮುಖ್ಯ ಆಸ್ಥೆಯಾಗಿತ್ತು.

ಇರಲೆನಗೆ ಕರಿಕನ್ನವುಣ್ಣಲು
ಬರಿಯ ನೆಲವಿರಲೆನಗೆ ಮಲಗಲು
ಹರಕು ಬಟ್ಟೆಗಳೆನ್ನ ಮೆಯ್ಯನು ಮುಚ್ಚಲಿರಲೆನಗೆ
ಮುರುಕು ಗುಡಿಸಲು ವಾಸಕಿರಲೈ
ಸಿರಿಯರಸ, ಮತ್ತೇನನೊಲ್ಲೆನು
ಭರತಭೂಮಿಯೊಳಿರುವದೇ ಎನಗೊಂದು ಸುಖವಿಹುದು

'ಎನ್ನಯ ಜನ್ಮಭೂಮಿಯ ನೆನಪು, ಸತತವು ಸವೆಯಲೀತನುವವಳ ಸೇವೆಯಲಿ' ಎಂದು ತಮ್ಮ ಜೀವಧ್ವನಿಯನ್ನು ಪ್ರಕಟಿಸಿದ ಸಾಲಿಯವರು ತಮ್ಮ ಜೀವಿತದ ಕೊನೆಯವರೆಗೂ ಭಾರತೀಯತೆಯ ಪ್ರತೀಕವಾಗಿ ಬಾಳಿದರು. ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಯತ್ತ ಪ್ರಭಾವಿತರಾಗದೆ ನಮ್ಮ ಸಂಸ್ಕೃತಿಯ ಉನ್ನತಾದರ್ಶಗಳನ್ನು ಸಾಹಿತ್ಯದ ಮೂಲಕ ಪ್ರಸಾರ ಮಾಡಿದರು.

ಸಾಲಿಯವರು ಕನ್ನಡದ ದೇಶಿಕಾವ್ಯ ಪರಂಪರೆಯನ್ನು ಮುಖ್ಯವಾಗಿ ಷಟ್ಪದಿಯಲ್ಲಿ ಪ್ರಾಸಬದ್ಧವಾಗಿ ನವೋದಯದ ಆರಂಭದಲ್ಲಿ ಕಾವ್ಯರಚನೆ ಮಾಡಿದ್ದರೂ ಹೊಸ ಭಾಷೆ, ಭಾವಲಯಗಳಿಗೆ ಅವರ ಮನಸ್ಸು ಸ್ಪಂದಿಸುತ್ತಿತ್ತೆಂಬುದಕ್ಕೆ ಅವರ 'ಹೊಸಬಾಳು' ಕವಿತೆಯ ಈ ಸಾಲು ಸಾಕ್ಷಿಯಾಗಿವೆ.

ಹೊಸಬಗೆಯ ತೋರ್ದಪುದು ನೆಲಸಿರ್ದ ಕಾರಿರುಳ
ಮ-ಸುಕು ಹರಿದಳಿದುದೌ ನೋಡಲೆಲ್ಲೆಲ್ಲಿಯೂ
ಎಸೆದಪುವು ನವನವೋತ್ಸಾಹಂಗಳಗ್ಗಳಿಸಿ ನೇತ್ರ ಪ್ರಮೋದಂಗಳು
ಹೊಸದಳಿರು, ಹೊಸಮುಗುಳು, ಹೊಸಮಲರು, ಹೊಸಗಂಪು
ಹೊಸಸುಗ್ಗಿ, ಹೊಸಬಾಳು, ಸಲಿಯೆ ತಾ ತಾಯ್ನೆಲವ
ಸುಸುಳಿದತ್ತಂಡಲೆದ ಕುತ್ತವದು ಸಮರದೊಳು ವಿಜಯಸಿರಿ ನಿನ್ನದಿನ್ನು

ಕನ್ನಡದಲ್ಲಿ ಹೊಸತನದ ಗಾಳಿ ಬೀಸುತ್ತಿರುವಾಗ ಭಾವಗೀತೆಯ ಸೃಷ್ಟಿ ಆಗುತ್ತಿರುವದನ್ನು ತೆರೆದ

ಮನಸ್ಸಿನಿಂದ ಸ್ವಾಗತಿಸಿದ ಕವಿ ಸಾಲಿಯವರು ನಿಸರ್ಗ ಪ್ರೀತಿ, ದೈವಭಕ್ತಿ, ಆಧ್ಯಾತ್ಮಿಕತೆ, ರಾಷ್ಟ್ರೀಯ ಭಾವಲಹರಿಯ ಸ್ಪಂದನವನ್ನು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸಿದರು. ನವೋದಯ ಕಾವ್ಯದ ಮುಖ್ಯ ಆಶಯವಾದ ದೇಶಪ್ರೇಮ, ಆದರ್ಶವಾದ, ಗಾಂಧಿಯುಗದ ಮೌಲ್ಯಗಳು ಸಾಲಿಯವರ ಕಾವ್ಯದಲ್ಲಿ ಹರಿದುಬಂದವು. 'ಭರತಭೂಮಿ' ಕವಿತೆಯಲ್ಲಿ ಭಾರತದ ನದಿ ವನಗಳು, ಹಿಮಶೈಲಗಳು ಕವಿಯಲ್ಲಿ ಭಾವೋನ್ನತಿಯನ್ನುಂಟು ಮಾಡಿವೆ.

ಭರತಭೂಮಿಯೆ ಇರಲಿ ತಾಯ್ನಾಡು! ನನ್ನ ತನು
ಭರತಭೂಮಿಯ ಸೇವೆಯಲಿ ಸವೆಯುತಿರಲಿ!
ಭರತಭೂಮಿಯ ದಿವ್ಯನಾಮಸುಧೆ ನಾಲಗೆಯ
ಲಿರಲಿ, ದೇವರದೇವ ಜನ್ಮಜನ್ಮದಲಿ!

ಸಾಲಿಯವರು ನಾಡಿನ ಎಳೆಯ ಚೇತನಗಳಲ್ಲಿ ಭಾರತೀಯತೆಯ ಅಭಿಮಾನವನ್ನು ಬೆಳಸಿದರು. ಮಕ್ಕಳಿಗಾಗಿ ಧ್ವಜಗೀತೆಗಳನ್ನು ಬರೆದ ಸಾಲಿಯವರ ಆದರ್ಶ ಭಾರತೀಯ ಸಂಸ್ಕೃತಿಯ ಪ್ರತೀಕವಾದ ಧ್ವಜವು ನಮಗೆ ಉನ್ನತಿಯ ಮಾರ್ಗ ತೋರುವಂತಾಗಲಿ, ಧವಲಧ್ವಜವು ಸೌಜನ್ಯವನ್ನೇ ಕಲಿಸಲಿ ಎಂಬುದು. 'ತೇಜಸ್ವಿ ನಾವಧೀತಮಸ್ತು' ಎಂಬ ದಿವ್ಯಮಂತ್ರವನ್ನು ಭಾರತೀಯ ಯುವಚೇತನಗಳಿಗೆ ಸಾಲಿಯವರು ಸಾರುವಲ್ಲಿ ಅವರ ಆರ್ಷೇಯ ದೃಷ್ಟಿ ಗೋಚರಿಸುತ್ತದೆ. 'ನಮ್ಮಧ್ವಜ' ಎಂಬ ಇನ್ನೊಂದು ರಚನೆಯಲ್ಲಿ ಸಾಲಿಯವರ ಹೃದಯದಿಂದ ಆಶಯ ಪರಿಣಾಮಕಾರಿಯಾಗಿ ಪ್ರಕಟವಾಗಿದೆ. ಮಹಾತ್ಮಗಾಂಧಿಯವರು ಕಲ್ಪಿಸಿದ ಧ್ವಜ ಭರತಸಂತತಿಯ ಸರ್ವಸ್ವವಾಗಿದೆ. ಅದರಲ್ಲಿ ಶಕ್ತಿಸೌಭಾಗ್ಯ ಚೈತನ್ಯ ಮೊದಲಾದ ಸದ್ಗುಣಗಳಿವೆ. ಭಾರತ ಸ್ವಾತಂತ್ರ್ಯ, ವಿಶ್ವದಭ್ಯುದಯವನ್ನು ವರ್ಣಿಸುವ ಸಾಲಿಯವರು ನಮ್ಮನ್ನು ಮಾರ್ಮಿಕವಾಗಿ ಎಚ್ಚರಿಸುತ್ತಾರೆ.

ಇದರ ರಕ್ಷಣದಿಂದೆ ನಮ್ಮ ಸಂರಕ್ಷಣವು!
ಇದರ ಮಾನವು ನಮ್ಮ ಸನ್ಮಾನವು
ಇದರ ಪಾವನಕೀರ್ತಿ ಸಕಲಭುವನವ್ಯಾಪಿ
ಇದು ಜಗಕೆ ಮಂಗಲವು ನಮ್ಮ ಧ್ವಜವು

ದೇಶಾದ್ಯಂತ ನಡೆದ ಸ್ವಾತಂತ್ರ್ಯಸಮರದ ಸಂದರ್ಭದಲ್ಲಿ ಸಾಲಿಯವರು ದೇಶಸೇವೆಗಾಗಿ ಜನರನ್ನು ಹುರಿದುಂಬಿಸಿದರು. ಸತ್ಯಾಗ್ರಹಿಗಳಿಗೆ ಆಶ್ರಯ ನೀಡಿದರು. ಗಾಂಧಿ ತತ್ವ ವಿಚಾರಗಳನ್ನು ಪ್ರಸಾರ ಮಾಡಿದರು. ರಾಷ್ಟ್ರೀಯ ಶಾಂತಿಯ ಶಿಕ್ಷಕರಾಗಿದ್ದ ಸಾಲಿಯವರು ಬಡತನದ ಕಹಿಯನ್ನುಂಡು ರಾಷ್ಟ್ರಭಕ್ತಿಯನ್ನು ತೋರಿದರು. 'ಜಯಕರ್ನಾಟಕ' ಪತ್ರಿಕೆಯ ಬಳಗ ಸೇರಿದಾಗಲೂ ಅವರಿಗೆ ಸಂಕಷ್ಟಗಳು ಬಗೆಹರಿಯದೆ 'ನಿರಶನಂ ನಿನ್ನೆ, ಕೂಳಿಲ್ಲಮಿಂದೆಲೆ ನಾಳೆಯರೆಯೊಡಲ್!' ಎಂದು ವಾಸ್ತವ ಸ್ಥಿತಿಯನ್ನು ತೆರೆದಿಟ್ಟಿದ್ದಾರೆ. ಬಡತನದ ಬವಣೆಯಲ್ಲೂ, ದೇಹ ಕೃಶವಾದರೂ ವಿಚಲಿತರಾಗದ ಸಾಲಿಯವರು

'ಭರತಭೂಮಿಯ ಸೇವೆ ಪೂರ್ವಪುಣ್ಯಮಿದೆನಗೆ
ದೊರೆತಿರ್ಪುದೆಂಬೊಸಗೆಯಿಂದೆ ಬದುಕಿರ್ಪೆನಾಂ
ತಿರೆಯ ಮೇಲೆಂತಾನುಮಿಂ ಕೇಳದಿರ್, ಬದುಕುವಾಸೆ ನಿನಗೇಕಿದೆಂದು'

ಕೇಳಿಕೊಂಡು ನಿಷ್ಕಾಮ ಸೇವೆಯ ಆದರ್ಶ ಭಾರತಕ್ಕಾಗಿ ತನುಮನಧನ ಅರ್ಪಿಸಲು ಸನ್ನದ್ಧರಾದ

ಅವರು ಅಪ್ಪಟ ಗಾಂಧಿವಾದಿಯಾಗಿದ್ದರು. ಸಾಲಿಯವರ ಏಕಮಾತ್ರ ಪುತ್ರ ಶ್ರೀಕೃಷ್ಣ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದುತ್ತಿರುವಾಗ ಗಾಂಧೀಜಿ ನೀಡಿದ ಕರೆಗೆ ಓಗೊಟ್ಟು ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡಾಗ ಸಾಲಿಯವರು 'ರಣಗೊಂಬು ಕರೆದೊಡನೆ ಕುಣಿದುದಾತನ ಹೃದಯ, ಮಣಿದೆನ್ನ ಕಾಲ್ಗಳಿಗೆ ರಣಕೆ ನಡೆದನು ವೀರ' ಎಂದು ಮಗನ ರಾಷ್ಟ್ರಭಕ್ತಿಯನ್ನು ವರ್ಣಿಸುತ್ತಾರೆ.

'ರೆಕ್ಕೆ ಮೊಳೆಯದ ಮುನ್ನ
ಹಕ್ಕಿ ಹಾರಲು ಹೋಗಿ
ಕಕ್ಕುಲತಲಿ ನೆತ್ತರನು
ಮುಕ್ಕದಿರುವುದೆ ಮಣ್ಣ'

'ತಿಲಾಂಜಲಿ'ಯಲ್ಲಿ ಮಗ ಶ್ರೀಕೃಷ್ಣನ ದೇಶಪ್ರೇಮವನ್ನು ನೆನೆದು ಆತನ ಸಾವಿನಲ್ಲಿ ಶೋಕತಪ್ತರಾಗುವ ಸಾಲಿಯವರು ಬಾಳನ್ನು ಎದುರಿಸಿದ ರೀತಿ ಅಚ್ಚರಿಯನ್ನುಂಟುಮಾಡುತ್ತದೆ.ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದಿಂದ ಭಾರತಕ್ಕೆ ಸ್ವಾತಂತ್ರ್ಯ ಬಂದೇ ಬರುವದೆಂಬ ಆಶಾವಾದ ಸಾಲಿಯವರದಾಗಿತ್ತು. ೧೯೩೦ರಲ್ಲಿ ಅವರು ಬರೆದ 'ಸ್ವಾಗತಂ ಸ್ವಾತಂತ್ರ್ಯಭಾನು' ಕವಿತೆ ಇದಕ್ಕೆ ಸಾಕ್ಷಿ.

ಇದೋ ಇದೋ ಸ್ವಾತಂತ್ರ್ಯ ರವಿಯಖಿಲ ವೈಭವದಿ
ನುದಯಿಸಿದನೆಮ್ಮ ರಾಷ್ಟ್ರದ ನಭದೊಳಿಲ್ಲಿ ನೆಲ
ಸಿದ ದಾಸ್ಯದಂಧಕಾರಮನಾತ್ಮಕಿರಣಂಗಳಿಂದೊತ್ತಿಯಂಡಲೆಯುತೆ
ಇದೊ ಇದೋ ದಿಗ್ವಲಯಮಂ ಪಳಂಚಲೆಯುತೇ
ಳ್ವುದು ಗಗನದೊಳ್ ಭರತಸಂತಾನಕಂಠದಿಂ
ದೊದವಿದುಘ್ಹೋಷಣಂ! ಸ್ವಾಗತಂ ಸ್ವಾತಂತ್ರ್ಯಭಾನು!

ಗಾಂಧೀಜಿಯವರು ಕೊಟ್ಟ ರಾಷ್ಟ್ರವ್ಯಾಪಿ ಸ್ವಾತಂತ್ರ್ಯ ಕರೆಗೆ ಕನ್ನಡಿಗರು ಭಾರತದ ಜಯಕಾರ ಮಾಡಲು ಮುಂದಾಗಬೇಕೆಂದೂ ಭಾರತದ ಉದ್ದಾರ ಭಾರತ ಸ್ವಾತಂತ್ರ್ಯದಲ್ಲಿದೆಯೆಂದೂ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಇದು 'ಸುಮುಹೂರ್ತ' ವೆಂಬ ಕವಿತೆಯಲ್ಲಿ ಕರೆ ನೀಡಿದ್ದಾರೆ. ಸಾಲಿಯವರ 'ಇದು ರಂಗಭೂಮಿ' ಮಹತ್ವದ ಆಶಯದ ಕವಿತೆಯಾಗಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮವು ವಿಶ್ವದ ಇತಿಹಾಸದಲ್ಲೇ ಅಪೂರ್ವವಾದುದು. ಪ್ರಪಂಚದ ಜನ ಕುತೂಹಲದಿಂದ ನೋಡುತ್ತಿರುವ ಈ ಸ್ವಾತಂತ್ರ್ಯ ಯುದ್ಧ ಶಾಂತಿ ಸಂಗ್ರಾಮವಾಗಿದೆ. ವೈರವನ್ನು ಪ್ರೇಮದಿಂದ, ಅಸತ್ಯವನ್ನು ಸತ್ಯದಿಂದ, ಹಿಂಸೆಯನ್ನು ಅಹಿಂಸೆಯಿಂದ ಎದುರಿಸಿದ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧೀರೋದಾತ್ತರಾದ ಭಾರತ ವೀರರಿಗೆ ವಿಜಯ ಕಟ್ಟಿಟ್ಟದ್ದು ಎಂಬುದನ್ನೇ ಸಾಲಿಯವರು ತುಂಬ ಪರಿಣಾಮಕಾರಿಯಾಗಿ ವರ್ಣಿಸಿದ್ದಾರೆ.

ಸಾಲಿಯವರು ಗಾಂಧಿವಾದಿಗಳಷ್ಟೇ ಅಲ್ಲ ಗಾಂಧಿಯವರ ವ್ಯಕ್ತಿತ್ವದಿಂದ ಸಮಗ್ರ ಭಾರತ ಸ್ವಾತಂತ್ರ್ಯ ಜಯಮಾಲೆ ಪಡೆಯುವದೆಂದು ಆಶಿಸುತ್ತಾ ಬಂದವರು. ಗಾಂಧಿ ವಿಚಾರ ಸಿದ್ಧಾಂತಗಳಿಂದಲೇ ಭಾರತಕ್ಕೆ ಭವ್ಯ ಭವಿಷ್ಯತ್ತು ಇದೆಯೆಂದು ನಂಬಿದ ಸಾಲಿಯವರು ಗಾಂಧೀಜಿ ಭೂಮ ವ್ಯಕ್ತಿತ್ವವನ್ನು 'ಜಯಮಾಲೆ' ಕವಿತೆಯಲ್ಲಿ ಹೀಗೆ ವರ್ಣಿಸಿದ್ದಾರೆ.

ಇವನ ಪುಣ್ಯ ಪ್ರಭಾವದಿಂದಲ್ತೆ ಎಮಗೆ ಸಂ
ಭವಿಸಿದುದು ವಿಜಯಲಕ್ಷ್ಮಿಯ ಪುಣ್ಯದರ್ಶನೋ
ತ್ಸವಮಿಂದು ದಾಸ್ಯವಿಷಚುಷ್ಟಾಂಗಿಗಿವನತ್ತಿ ಸಂಜೀವನಂ ಜನನಿಗೆ?

ಇವನ ತಪದಿಂದಖಿಲ ವಿಶ್ವಕಲ್ಲವೆ ಶಾಂತಿ?
ಇವನಿಂದಮುತ್ಸಾಹಪ್ಪೆ ಭರತಸಂತಾನ-
ಶಿವನಿಂದೆ ಭಾಗ್ಯೋದಯಂ! ನಿನ್ನ ಜಯಮಾಲೆಯೆಂಕೃತಿಯೊ ವಿಜಯಲಕ್ಷ್ಮೀ

ಸಾಲಿಯವರು ಭಾರತ ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ದೇಶಪ್ರೇಮವನ್ನು ತಮ್ಮ ವಿದ್ಯಾರ್ಥಿಗಳಲ್ಲಿ ಪ್ರಸಾರ ಮಾಡುವವರ ಜೊತೆಗೆ ಉದ್ಬೋಧಕ ಭಾಷಣಗಳನ್ನೂ ಮಾಡಿ ಹುರಿದುಂಬಿಸುತ್ತಿದ್ದರು. ಕನ್ನಡದ ಕವಿಯೊಬ್ಬರು ನಡೆಸಿದ ರಾಷ್ಟ್ರಚಿಂತನೆ, ಭಾರತೀಯ ಸಂಸ್ಕೃತಿಯ ಪ್ರೀತಿ ಅವರ ಕಾವ್ಯದಲ್ಲಿ ಹರಿದುಬಂದಿರುವದು ಚಾರಿತ್ರಿಕ ಮಹತ್ವ ಪಡೆಯುತ್ತದೆ. 'ಆಗುವೆನು ನಾನೆಂದು ನಿನ್ನವನು ಹರಿಯೆ' ಎಂದು ಹಾಡಿದ ಸಾಲಿಯವರು ಭಾರತಮಾತೆಯಲ್ಲಿ ಸರ್ವಸ್ವವನ್ನೂ ಕಂಡರು. ಭಾರತೀಯತೆಯನ್ನು ಅಪ್ಪಿಕೊಂಡರು. ಇಂದು ನಾವು ಕನ್ನಡದ ದೇಶೀಯ ಕಾವ್ಯಲಯವನ್ನು ಕಳೆದುಕೊಂಡಿದ್ದೇವೆ. ಷಟ್ಪದಿ ಛಂದಸ್ಸಿನಲ್ಲಿ ನವೀನಭಾವಲಯಗಳನ್ನು ತಮ್ಮ ಕಾವ್ಯದಲ್ಲಿ ತಂದು ಪ್ರಯೋಗಿಸಿದ ಸಾಲಿಯವರು ರಾಷ್ಟ್ರೀಯತೆಯನ್ನು ತಮ್ಮ ಕಾವ್ಯದ ಮೂಲಕ ಅಭಿವ್ಯಕ್ತಿಸಿದರು. ಪಾಶ್ಚಾತ್ಯ ಪ್ರಭಾವ, ಆಧುನಿಕೀಕರಣದ ಪ್ರಕ್ರಿಯೆಯಿಂದ ಹೊರಗುಳಿದು ಸಾಲಿಯವರು ಕನ್ನಡದ ಜೀವಸತ್ವವನ್ನು ಪ್ರಕಟಿಸಿದರು. ಸಾಲಿ ಕಾವ್ಯವೆಂದರೆ ವಿಶಾಲವಾದ ಅರ್ಥದಲ್ಲಿ ಭಕ್ತಿಕಾವ್ಯ ಎಂದು ಕರೆಯಬಹುದಾದರೆ ಅದರಲ್ಲಿ ದೈವಭಕ್ತಿ, ಕನ್ನಡಭಕ್ತಿ, ದೇಶಭಕ್ತಿಗಳ ತ್ರಿವೇಣಿ ಸಂಗಮವಿದೆ.

ಸಾಲಿಯವರು ಭಾರತೀಯ ಮತ್ತು ಕನ್ನಡ ಸಾಹಿತ್ಯ ಪರಂಪರೆ, ಸಂಪ್ರದಾಯಕ್ಕೆ ಶರಣಾದವರು. ಅವರು ಕ್ಲಾಸಿಕಲ್ ಅಥವಾ ಅಭಿಜಾತ ಮನೋಧರ್ಮ ಹೊಂದಿದ್ದರು. ಇದಕ್ಕೆ ಅವರು ರಚಿಸಿರುವ ರಾಮಚರಿತ ಕಾವ್ಯದ ಭಾಗವೇ ಸಾಕ್ಷಿ. ನವೋದಯದ ಮುಖ್ಯಧಾರೆಯಾದ ರೊಮೆಂಟಿಕ್ ಅಥವಾ ರಮ್ಯವಾದದ ಎಲ್ಲ ಆಶಯಗಳನ್ನು ತಮ್ಮ ಭಾವಗೀತೆ, ಇತರ ರಚನೆಗಳಲ್ಲಿ ಪ್ರಕಟಪಡಿಸಿದ್ದಾರೆ. ನವ್ಯರಚನೆಯನ್ನು ಅವರು ತಿರಸ್ಕರಿಸಲಿಲ್ಲ. ನವ್ಯಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಹಾಗೂ ಅವರ ಕಾವ್ಯದ ಬಗೆಗೆ ಪ್ರೀತಿ ತೋರಿದರು. ಹೀಗೆ ಒಳ್ಳೆಯದನ್ನು ಸ್ವೀಕರಿಸುವ ಮನೋಧರ್ಮದ ಸಾಲಿಯವರ ಕನ್ನಡಪ್ರೇಮದ ಕಾವ್ಯಾತ್ಮಕ ಅಭಿವ್ಯಕ್ತಿ ಪ್ರತ್ಯೇಕ ವಿಚಾರಮಂಥನೆಗೆ ವಸ್ತುವಾಗುತ್ತದೆ. ಸಾಲಿಯವರ ಕಾವ್ಯದಲ್ಲಿ ಬರುವ ದೇಶಪ್ರೇಮದ ಭಾವಲಹರಿ ಸಮಕಾಲೀನ ಕನ್ನಡ ಕವಿಗಳ ರಾಷ್ಟ್ರೀಯ ಭಾವನಾ ಸ್ತೋತ್ರದ ಕವಿತೆಗಳೊಂದಿಗೆ ಸ್ಥಾನ ಪಡೆಯುವದಾದರೂ ಬೇಂದ್ರೆ ಮೊದಲಾದ ಇತರ ಕವಿಗಳ ಜೊತೆಗೆ ಹೋಲಿಸಲಾಗದು ಎಂದು ಜಿ.ಎಸ್.ಆಮೂರರು ಹೇಳಿದ ಮಾತು ಗಮನಾರ್ಹವಾಗುತ್ತದೆ. ತಮ್ಮ ಬರಹದಂತೆ ಬದುಕಿದ, ಗಾಂಧಿಯುಗದ ಮೌಲ್ಯಗಳನ್ನು ಕನ್ನಡ ನವೋದಯ ಸಾಹಿತ್ಯದಲ್ಲಿ ತಂದ ಸಾಲಿಯವರ ಕಾವ್ಯ ಮತ್ತು ವ್ಯಕ್ತಿತ್ವ ವಿಶಿಷ್ಟವಾದದ್ದು. ಭಾರತೀಯ ಸಂಸ್ಕೃತಿ ಕನ್ನಡದ ದೇಶೀಯ ಪರಂಪರೆಯ ಹುಡುಕಾಟ ನಡೆಸುತ್ತಿರುವ ಈ ದಿನಗಳಲ್ಲಿ ಸಾಲಿಯವರ ಕಾವ್ಯ ಪುನರ್ವಿಮರ್ಶೆಗೆ ದಾರಿ ಮಾಡಿ ಕೊಡುತ್ತದೆ.

---

* ಡಾ। ಜಿ. ಎಂ. ಹೆಗಡೆ, ೭ನೇ ಕ್ರಾಸ್, ಕಲ್ಯಾಣನಗರ, ಧಾರವಾಡ - ೫೮೦ ೦೦೭.

ಜೀವನ ಶ್ರದ್ಧೆಯ ಸಾಲಿ ರಾಮಚಂದ್ರರಾಯರು

ಡಾ। ಗುರುಲಿಂಗ ಕಾಪಸೆ

ನವೋದಯ ಸಾಹಿತ್ಯದ ಪ್ರಾರಂಭದ ಘಟ್ಟದ ಬಗ್ಗೆ ಪುನರ್‌ವಿಮರ್ಶೆಯಾಗುವುದು ಈಗ ತೀರ ಅವಶ್ಯವೆಂದು ತೋರುತ್ತದೆ. ೧೯೨೧ರಲ್ಲಿ ಪ್ರಕಟವಾದ 'ಇಂಗ್ಲೀಷ್ ಗೀತಗಳು'ನವೋದಯ ಸಾಹಿತ್ಯಕ್ಕೆ (ಕಾವ್ಯಕ್ಕೆ) ನಾಂದಿ ಹಾಡಿತು ಎಂದು ಹೇಳುವುದೀಗ ಒಂದು ರೂಢಿಯಾಗಿದೆ. ಇದು ಮೈಸೂರಿನ ಕಡೆಯ ಕಾವ್ಯಕ್ಕೆ ಅನ್ವಯಿಸಿ ಹೇಳಿದ ಮಾತು ಎಂದು-(ಉತ್ತರದ ಕರ್ನಾಟಕದ ಆಗಿನ ಕಾವ್ಯ ಚಟುವಟಿಕೆಯನ್ನು ಪರಿಶೀಲಿಸಿ)- ಸೀಮಿತಗೊಳಿಸಬೇಕಾಗುತ್ತದೆ. ಯಾಕೆಂದರೆ ಉತ್ತರ ಕರ್ನಾಟಕದ ಪ್ರಾರಂಭದ ಕವಿತೆಗಳು-(ಸಾಲಿಯವರನ್ನೊಳಗೊಂಡು ಬೇಂದ್ರೆ, ಮಧುರಚೆನ್ನ-ಮೊದಲಾದವರು ಬರೆದ ಕವಿತೆಗಳು) ಷಟ್ಪದಿಯಲ್ಲಿಯೇ ಇವೆ. ಕನ್ನಡ ಪರಂಪರೆ ಈ ಛಂದಸ್ಸನ್ನು ವಿವಿಧ ರೀತಿಯಲ್ಲಿ ಬಳಸುತ್ತ, ಸಾಂಗತ್ಯ, ತ್ರಿಪದಿ, ರಗಳೆ ಮುಂತಾದ ಛಂದಸ್ಸುಗಳನ್ನು ಸ್ವೀಕರಿಸುತ್ತ, ಜನಪದ ಲಯಗಳನ್ನು ಬರಮಾಡಿಕೊಳ್ಳುತ್ತ ಈ ಕಡೆಯ ಕವಿಗಳು ಇಂಗ್ಲಿಷ್ ಕವಿತೆಗಳಿಗಿಂತ ಭಿನ್ನವಾದ ದಾರಿಯಲ್ಲಿಯೇ ನಡೆದಿದ್ದುದು ಕಂಡುಬರುತ್ತದೆ. ಕನ್ನಡ ಸಾಂಸ್ಕೃತಿಕ ಜೀವನದ ಪುನರುಜ್ಜೀವನವು ಈ ಕವಿಗಳ ಮುಖ್ಯ ಕಾಳಜಿಯಾಗಿದ್ದರಿಂದ ಕನ್ನಡ ಪರಂಪರೆಯ ಹಿನ್ನೆಲೆಯಲ್ಲಿಯೇ ಹೊಸದನ್ನು ಸಾಧಿಸಲು ಯತ್ನಿಸಿರುವುದನ್ನು ಗಮನಿಸಬೇಕಾಗುತ್ತದೆ. ದೇಶಿನಿಷ್ಠರಾಗಿರುವ ಈ ಕವಿಗಳು ವಿದೇಶಿ ಕಾವ್ಯವನ್ನು ಹಿಡಿದುಕೊಂಡು ಬೆಳೆಯಲಿಲ್ಲವೆಂಬುದು ಪುನರ್-ಚಿಂತನೆಗೆ ಒಳಪಡಿಸುತ್ತದೆ. ಅಷ್ಟಲ್ಲದೆ ಬೇಂದ್ರೆಯವರ 'ಬೆಳಗು' ಮಧುರಚೆನ್ನರ 'ಧ್ರುವ' ಎಂಬ ಭಾವಗೀತೆಗಳು 'ಇಂಗ್ಲೀಷ್ ಗೀತಗಳು' ಪ್ರಕಟವಾಗುವುದಕ್ಕಿಂತ ಮುಂಚೆಯೇ ಸೃಷ್ಟಿಯಾಗಿವೆ. ಈ ವಸ್ತುಸ್ಥಿತಿಯನ್ನು ಲಕ್ಷ್ಯಕ್ಕೆ ತೆಗೆದುಕೊಂಡು, ಕನ್ನಡದ ನವೋದಯ ಕಾವ್ಯ ಒಂದು ಕಡೆಯಿಂದ ಕನ್ನಡ ಪರಂಪರೆಯಿಂದ ಹೊಸತನವನ್ನು ಅರಸುತ್ತ ಸಾಗಿದ್ದರೆ, ಇನ್ನೊಂದು ಕಡೆಯಿಂದ ಇಂಗ್ಲೀಷ ಗೀತಗಳ ಮಾದರಿಯನ್ನು ಮುಂದಿಟ್ಟುಕೊಂಡು ಸಾಗಿಬಿಟ್ಟು ಕನ್ನಡ ಕಾವ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿತೆಂದು ಹೇಳಬಹುದು.

ಸಾಲಿ ರಾಮಚಂದ್ರರಾಯರು ಬೇಂದ್ರೆಯವರ ಹಿರಿಯ ಸಮಕಾಲೀನರಾಗಿ ತಮ್ಮದೇ ಆದ ಜೀವನ ಶ್ರದ್ಧೆಯನ್ನು ಬೆಳೆಯಿಸಿಕೊಂಡ ಉತ್ತರ ಕರ್ನಾಟಕದ ಒಬ್ಬ ಮಹತ್ವದ ಕವಿಗಳು. ಅವರು ಆಲೂರ ವೆಂಕಟರಾಯರ ಮತ್ತು ಶಾಂತಕವಿಗಳ ಆದರ್ಶನಿಷ್ಠ ಕನ್ನಡಾಂಬೆಯ ಭಕ್ತರು. ಮೊದಮೊದಲಿಗೆ ಲೋಕಮಾನ್ಯ ತಿಲಕರ ಪ್ರಭಾವಕ್ಕೆ ಒಳಗಾಗಿದ್ದರೂ ಅವರು ಗಾಂಧೀಜಿಯವರ ಅಹಿಂಸಾಮಾರ್ಗದ ದೇಶಭಕ್ತರು. ಹೀಗಾಗಿ

ಕನ್ನಡಾಂಬೆ ಮತ್ತು ಭಾರತಮಾತೆ ಇಬ್ಬರಲ್ಲಿಯೂ ಅವರ ನಿಷ್ಠೆ ಬೆಳೆದು ಅವರ ಬದುಕಿಗೆ ಒಂದು ಅರ್ಥವನ್ನು ಕಲ್ಪಿಸಿಕೊಟ್ಟಿದೆ. ನಾಡಭಕ್ತಿ ಹಾಗೂ ದೇಶಭಕ್ತಿಗಳೆರಡೂ ಅವರ ಕಾವ್ಯದಲ್ಲಿ ಶ್ರದ್ಧಾವಂತನ ಸ್ತೋತ್ರವಾಗಿಯೇ ಪ್ರಕಟಗೊಂಡಿವೆ. ಅವರ ಶ್ರದ್ಧೆಯಲ್ಲಿ ಅವಿನಾಭಾವದಿಂದ ಬೆಸೆದುಕೊಂಡ ದೈವಭಕ್ತಿಯೂ ಕೂಡ ಅಸಾಧಾರಣವಾಗಿದೆ. ಸಾಲಿಯವರ ದೈವಭಕ್ತಿಯೂ ಕೂಡ ಪರಂಪರೆಯಿಂದ ಬಂದುದೇ ಆಗಿದೆ. ಅನೇಕ ನವೋದಯ ಕವಿಗಳು ರಾಮಕೃಷ್ಣ ಪರಮಹಂಸರ ಇಲ್ಲವೆ ಅರವಿಂದರ ಆಧ್ಯಾತ್ಮಿಕ ದರ್ಶನಕ್ಕೆ ಬರೆದಿದ್ದುದು? ಕಂಡುಬರುವಂತೆ ಸಾಲಿಯವರು ಹಾಗೆ ಬರೆದಿದ್ದುದು ಕಂಡು ಬರುವುದಿಲ್ಲ. ಅವರು ಸಂಪೂರ್ಣವಾಗಿಯೇ ಹರಿಯ ಭಕ್ತರು. ವೈಷ್ಣವ ಭಕ್ತಿಪಂಥದ ಹಿನ್ನೆಲೆ ಅವಕ್ಕಿರುವುದನ್ನು ಕಾಣಬಹುದು. ದಾಸರ ಕೀರ್ತನೆಯ ಧಾಟಿಯಲ್ಲಿ ಅವರು ಬರೆದ ಅನೇಕ ಕವಿತೆಗಳು ಅವರ ಆರ್ತಭಾವವನ್ನು ವ್ಯಕ್ತಪಡಿಸುತ್ತವೆ. ವಾಸ್ತವ ಬದುಕಿನ ಬಗ್ಗೆ ತೋರುವ ಅವರ ಪ್ರತಿಕ್ರಿಯೆಯಲ್ಲಿ ಅವರ ಜೀವನಶ್ರದ್ಧೆ ಮತ್ತು ಆದರ್ಶಗಳು ಒಂದಿಲ್ಲ ಒಂದು ರೀತಿಯಿಂದ ಪ್ರಕಟಗೊಳ್ಳುತ್ತವೆ. ಅವರ ನಡೆ-ನುಡಿಗಳಲ್ಲಿ ಸಾಂಗ್ಯತವಿರುವುದು ಇನ್ನೊಂದು ವಿಶೇಷ.

ಅದೊಂದು ಸಂಕ್ರಮಣದ ಕಾಲ. ನಡುಗನ್ನಡದಿಂದ ಹೊಸಗನ್ನಡಕ್ಕೆ ಷಟ್ಪದಿ, ಸಾಂಗತ್ಯಗಳಿಂದ ಭಾವಗೀತಗಳಿಗೆ ತಿರುವುಕೊಡಬೇಕಾದ ಆ ಕಾಲದಲ್ಲಿ ಭಾಷೆ ಮತ್ತು ಲಯಗಳೊಂದಿಗೆ ಹೋರಾಡಬೇಕಾಗಿದ್ದ ಸಂದರ್ಭವದು. ಸಾಲಿಯವರು ಸಂಪೂರ್ಣವಾಗಿ ನಡುಗನ್ನಡವನ್ನು ಬಿಟ್ಟುಕೊಡದೆ ಹೊಸಗನ್ನಡವನ್ನೂ ಅಲಕ್ಷಿಸದೆ ತಮ್ಮದೇ ಆದ ರೀತಿಯಲ್ಲಿ ಪರಿಕ್ರಮಿಸಿದುದು ಕಂಡುಬರುತ್ತದೆ. ಅವರ ಷಟ್ಪದಿಗಳಲ್ಲಿ ಭಾವಗೀತದ ಸಂವೇದನೆಯಿದ್ದರೂ ನಡುಗನ್ನಡದ ಜಾಯಮಾನಕ್ಕೇ ಅವು ಹೊಂದಿಕೊಳ್ಳುತ್ತವೆ. ಮುದ್ದಣನು "ಗದ್ಯಂ ಹೃದ್ಯಂ" ಎಂದು ಹೇಳಿದರೂ ಹೊಸಗನ್ನಡಕ್ಕೆ ಹತ್ತಿರದವನಾದರೂ ಬಳಸಿದ್ದು ನಡುಗನ್ನಡದ ಭಾಷೆಯನ್ನೇ. ಸಾಲಿಯವರ ಬಹಳಷ್ಟು ಕವಿತೆಗಳು ನಡುಗನ್ನಡವನ್ನು ಉಳಿಸಿಕೊಂಡಿವೆ. ಅರ್ಥಪೂರ್ಣವಾಗಿ ಬಳಸಿಕೊಂಡಿವೆ. 'ನೀರ ಗುಳ್ಳೆ ನೀರ ಗುಳ್ಳೆ, ನೀರ ಮೇಲೆ ತೇಲುತಿಹುದು' , 'ಇದೊ ಇದೋ ಹಾರುತಿದೆ ನಮ್ಮ ಧ್ವಜವು' ಈ ಕೆಲವು ಕವಿತೆಗಳಲ್ಲಿ ಹೊಸಗನ್ನಡವನ್ನು ಸಲೀಸಾಗಿ ಬಳಸಿಕೊಂಡಿರುವುದು ಸಾಲಿಯವರ ಪ್ರಯೋಗಶೀಲತೆಗೆ ಕುರುಹಾಗಿದೆ. ಕೆಲವು ಕವಿತೆಗಳಲ್ಲಿ ನಡುಗನ್ನಡ ಮತ್ತು ಹೊಸಗನ್ನಡದ ಮಿಶ್ರಣವಿರುವುದನ್ನೂ ಕಾಣಬಹುದು. ಹೀಗೆಲ್ಲಾ ಇದ್ದರೂ ಅವರ ಒಲವು ಹೆಚ್ಚಾಗಿ ಷಟ್ಪದಿಯ ಕಡೆಗೆ ಹಾಗೂ ಪಲ್ಲವಿಯುಕ್ತ ಕೀರ್ತನೆಯ ಧಾಟಿಯ ಚೌಪದಿಯ ಕಡೆಗೆ ಇರುವುದನ್ನು ಗಮನಿಸಬಹುದು.

ಕಾವ್ಯದ ಆಕೃತಿಗಿಂತ ಕಾವ್ಯದ ವಸ್ತು ಯಾವಾಗಲೂ ಮಹತ್ವದ್ದು, ಅಲ್ಲಿರುವುದು ಕವಿಯ ಅನುಭವದ ಪಾಕ. ಕವಿಯ ಧೋರಣೆಯ, ಧ್ಯೇಯೋದ್ದೇಶಗಳ ಮಿಂಚು ಮತ್ತು ಬೆಳಕು. ಸಾಲಿಯವರು ಸಾಂಸ್ಕೃತಿಕ ಎತ್ತರದಲ್ಲಿ ನಿಂತುಕೊಂಡು, ಅತ್ಯಂತ ಪ್ರಾಮಾಣಿಕವಾಗಿ ತಮ್ಮ ಅನುಭವಗಳನ್ನು ಕಾವ್ಯದಲ್ಲಿ ಎರಕಹೊಯ್ದಿದ್ದು ಪ್ರತಿಯೊಂದು ಕವಿತೆಯಲ್ಲಿ ಕಂಡುಬರುತ್ತದೆ. ಅವರನ್ನು ಕಲಾಸಂಪನ್ನ ಕವಿಯೆನ್ನುವುದಕ್ಕಿಂತ ಧ್ಯೇಯನಿಷ್ಠ ಕವಿಯೆಂದು ಕರೆಯುವುದು ಸೂಕ್ತವಾಗಿ ತೋರುತ್ತದೆ. ಅವರ ಕಾವ್ಯದಲ್ಲಿ ಉಪದೇಶ ಒಂದಿಷ್ಟು ಹೆಚ್ಚಾಗಿಯೇ ಕಂಡುಬರುತ್ತಿದ್ದರೂ, ಅದು ಕೇವಲ ಪರೋಪದೇಶವಾಗಿರದೆ ಅಂತರಂಗದ ಶೋಧವೂ ಆಗಿರುವುದನ್ನು ಕಾಣಬಹುದು.

ಜೀವನಕೆ ನೈರ್ಮಲ್ಯದಿಂದ ಬೆಳಕು
ಭಾವಸಂಶೋಧನವು ಸತತ ಬೇಕು

(ನೈರ್ಮಲ್ಯ)

ಹೊಣೆಯರಿತು ನಡೆದು ಸುಖದಿಂದೆ ಬಾಳು
ಹೊಣೆಗೆಟ್ಟು ಹುಡಿಗೂಡಬೇಡವಯ್ಯಾ
(ಹೊಣೆಯರಿತು ನಡೆ)

ಹೀಗೆ ಕವಿ ಸಾಲಿಯವರು ತಮ್ಮನ್ನು ಶುದ್ದಗೊಳಿಸುತ್ತ, ತಮ್ಮ ಹೊಣೆಯನ್ನು ಅರಿತುಕೊಳ್ಳುತ್ತ ಕಾವ್ಯಸೃಷ್ಟಿಯಲ್ಲಿ ತಮ್ಮದೇ ಆದ ದಾರಿಯನ್ನು ತುಳಿದಿದ್ದಾರೆ.

ಸಾಲಿಯವರ ಕನ್ನಡದ ಶ್ರದ್ಧೆ (ಕನ್ನಡಾಂಬೆಯಲ್ಲಿಯ ಶ್ರದ್ಧೆ) ಅನನ್ಯವಾಗಿರುವುದನ್ನು ಅವರ 'ಚಿತ್ರಸೃಷ್ಟಿ' ಕವನ ಸಂಗ್ರವನ್ನು ಓದಿದವರೆಲ್ಲ ಬಲ್ಲರು.

ಕನ್ನಡದ ನೆಲದ ಪುಲ್ಲೆನಗೆ ಪಾವನ ತುಲಸಿ।
ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ।
ಕನ್ನಡದ ಕಲ್ಲೆನಗೆ ಶಾಲಗ್ರಾಮ ಶಿಲೆ, ಕನ್ನಡಂ ದೈವಮ್ಮೈ॥
ಕನ್ನಡದ ಶಬ್ದಮೆನಗೋಂಕಾರಮೀಯೆನ್ನ।
ಕನ್ನಡದ ನುಡಿಯೆ ಗಾಯತ್ರಿಯದ್ಭುತ ಮಂತ್ರ-
ಮಿನ್ನಾವುದೈ ಪೆರತು ಕನ್ನಡದ ಸೇವೆಯಿಂದಧಿಕಮೀ ಜಗದೊಳೆನಗೆ ॥

ಈ ಪ್ರಸಿದ್ಧ ಕವಿತೆಯ ಜೊತೆಗೆ 'ಕನ್ನಡಂ' 'ಕನ್ನಡವು' 'ತಾಯ್ನಾಡು' 'ವಿಜಯದುಂದುಭಿ' ಇತ್ಯಾದಿ ಕವಿತೆಗಳಲ್ಲಿ ಸಾಲಿಯವರು ಎದೆತುಂಬಿ ತಮ್ಮ ಶ್ರದ್ಧೆಯನ್ನು ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿ ಬಂಕಿಮಚಂದ್ರರ 'ವಂದೇ ಮಾತರಂ' ಭಾರತೀಯರ ಮಹಾಮಂತ್ರವಾಗಿ, ಜನ್ಮದಾತೆಯ ಸ್ತುತಿಯಾಗಿ, ಸ್ವಾಭಿಮಾನದ ಪ್ರತೀಕವಾಗಿ ಮೊಳಗುತ್ತಿದ್ದ ಕಾಲದಲ್ಲಿ ಸಾಲಿಯವರ ಹಂಬಲ, ಭಕ್ತಿಗಳು ಅಂತಃಕರಣಕ್ಕೆ ನಾಟುವಂತೆಯೇ ಭರತಭೂಮಿಯ ಸೇವೆಯ ಮಹತ್ವವನ್ನು ಸಾರಿವೆ. ಅವರ 'ಹಂಬಲು' 'ಭರತಭೂಮಿ' ಕವಿತೆಗಳು ಕನ್ನಡನಾಡಿನ ಉದ್ದಗಲಕ್ಕೂ ಜನಮನವನ್ನು ಸೂರೆಗೊಂಡಿವೆ. 'ಹಂಬಲು' ಪ್ರಾಥಮಿಕ ಶಾಲೆಯ ಪಠ್ಯಪುಸ್ತಕದಲ್ಲಿ ಪ್ರಕಟವಾಗಿ, ಅಂದಿನ ವಿದ್ಯಾರ್ಥಿಗಳ ನಾಲಗೆಯ ಮೇಲೆ ನಲಿನಲಿದಾಡಿದೆ, ದೇಶಸೇವೆಗೆ ಅಣಿಗೊಳಿಸಿದೆ. ಅದೊಂದು ಅತ್ಯಂತ ಪ್ರಭಾವಿಯಾದ ಕವಿತೆ.

ಆವಿನದು ನೊರೆ ಹಾಲನೊಲ್ಲೆನು,
ದೇವಲೋಕದ ಸುಧೆಯನೊಲ್ಲೆನು,
ದೇವಿ, ನಿನ್ನಯ ನಾಮದನುಪಮ ರುಚಿಯನರಿತಿಹೆನು।
ಪಾವನೆಯೆ, ನಿನ್ನಂಘ್ರಿಕಮಲದ
ಸೇವೆ ದೊರೆತಿಹುದೆನಗೆ, ತಾಯೇ,
ಶ್ರೀವರನ ದಯೆಯಿಂದೆ, ಮತ್ತಿನ್ನೇನು ಬೇಡೆನಗೆ॥

ಬರಲಿ ಬ್ರಾಹ್ಮಣರಲ್ಲಿ ಜನ್ಮವು,
ಬರಲಿ ಮಾದಿಗರಲ್ಲಿ ಇಲ್ಲವೆ,
ಇರದು ದುಗುಡವು ತಾಯೆ, ನಿನ್ನುದರದಲಿ ಜನಿಸುವುದೇ।
ಪರಮಭಾಗ್ಯವದೆಂದು ತಿಳಿಯೆನೆ?
ಮರೆಯದಲೆ ಪ್ರತಿ ಜನ್ಮದಲಿ ಶ್ರೀ-
ಧರನು ನಿನ್ನುದರದಲಿ ಹುಟ್ಟಿಸಲೆನ್ನನನುನಯದಿ॥

ಇರಲೆನಗೆ ಕರಿಕನ್ನವುಣ್ಣಲು,
ಬರಿಯ ನೆಲವಿರಲೆನಗೆ ಮಲಗಲು,
ಹರುಕು ಬಟ್ಟೆಗಳಿನ್ನ ಮೆಯ್ಯನು ಮುಚ್ಚಲಿರಲೆನಗೆ।
ಮುರುಕು ಗುಡಿಸಲು ವಾಸಕಿರಲೈ,
ಸಿರಿಯರಸ, ಮತ್ತೇನನೊಲ್ಲೆನು,
ಭರತಭೂಮಿಯೊಳಿರುವುದೇ ಎನಗೊಂದು ಸುಖಪಿಹುದು॥ (ಹಂಬಲು)

ಇದು ಸಾಲಿಯವರ ಅಂತರಂಗದ ಹಂಬಲ, ಭರತಮಾತೆಯಲ್ಲಿ ಹಾಗೂ ಸಿರಿಯರಸನಲ್ಲಿ ಮಾಡಿಕೊಂಡ ಪ್ರಾರ್ಥನೆ. ಈ ಪ್ರಾರ್ಥನೆ 'ಭರತಭೂಮಿ' ಎಂಬ ಕವಿತೆಯಲ್ಲಿ ಮುಂದುವರಿದಿರುವುದನ್ನು ಕಾಣಬಹುದು. ನಾಡಿನ ಹಾಗೂ ದೇಶದ ಸ್ತುತಿಪರವಾದ ಕವಿತೆಗಳು ನಮ್ಮಲ್ಲಿ ಹೇರಳವಾಗಿ ಸಿಗುತ್ತವೆ. ಆದರೆ ಕವಿಯೇ ತನ್ನನ್ನು ನಾಡಿಗೆ ಅರ್ಪಿಸಿಕೊಂಡು, ನಾಡಸೇವೆಗೆ ಬದ್ಧನಾಗುವ ಹಂಬಲಿಕೆಯುಳ್ಳ ಕವಿತೆಗಳು ವಿರಳವೆಂದೇ ಹೇಳಬೇಕು. ಸಾಲಿಯವರು ಗೃಹಸ್ಥರಾಗಿ, ಶಿಕ್ಷಕರಾಗಿ ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು. ಅವರ ಜೀವನ ಶ್ರದ್ಧೆ ಅಚಲವಾಗಿತ್ತು. ಅವರ ಜೀವನ ಶ್ರದ್ಧೆಯಂತೆಯೇ ಅವರ ಕಾವ್ಯ ಆದರ್ಶನಿಷ್ಠವಾಗಿತ್ತು.

ಈ ಮೇಲಿನ ಕವಿತೆಯಲ್ಲಿ ಅವರ ಮಾತೃಭೂಮಿಯಲ್ಲಿಯ ನಿಷ್ಠೆ ಅನನ್ಯವಾಗಿರುವುದನ್ನು ಯಾರೂ ಗುರುತಿಸಬಹುದು.

ಸಾಲಿಯವರು ಗಾಂಧೀಜಿಯಲ್ಲಿ ಇರಿಸಿದ ಶ್ರದ್ಧೆ, ನಂಬಿಕೆಗಳೂ ಅನುಪಮವಾಗಿವೆ. ಮಹಾರಾಷ್ಟ್ರದಲ್ಲಿ ಆ ಕಾಲದಲ್ಲಿ ಸಾನೆ ಗುರೂಜಿಯವರು ಗಾಂಧೀಜಿ ಆದರ್ಶವನ್ನು ಅನುಸರಿಸಿ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ನಿಷ್ಠೆಯಿಂದಲೇ ಕಾರ್ಯಮಾಡಿದ್ದುದನ್ನು ಇಲ್ಲಿ ನೆನೆಯಬಹುದು. ಕರ್ನಾಟಕದ ಸಾಲಿಯವರು ಗಾಂಧೀಯವರ ಆದರ್ಶವನ್ನು ಕೇವಲ ಅನುಸರಿಸಲಿಲ್ಲ, ಅದನ್ನು ಮೈಗೂಡಿಕೊಂಡರು. ಅಂತೆಯೇ ಅವರನ್ನು 'ಧಾರವಾಡದ ಗಾಂಧಿ' ಎಂದು ಕರೆಯಬೇಕಾಯಿತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬರೆದ ಎರಡು-ಮೂರು ಕವಿತೆಗಳಲ್ಲಿ ಸಾಲಿಯವರು ಗಾಂಧೀಯವರನ್ನು ಶ್ರದ್ಧೆಯಿಂದಲೇ ಸ್ಮರಿಸಿರುವುದನ್ನು ಕಾಣಬಹುದು:

ಇಂದು ಸುಮುಹೂರ್ತದೊಳ್ ಸ್ವಾತಂತ್ರ್ಯ ಸಂಗ್ರಾಮ-
ಕೆಂದು ನಡೆದಂ ಗಾಂಧಿ ದಾಸ್ಯದಾವಾಗ್ನಿಯಂ
ನಂದಿಸಲ್......

(ಸುಮುಹೂರ್ತ)

ಇದು ರಂಗಭೂಮಿ ಭಾರತಭೂಮಿ, ವಿಶ್ವಪತಿ
ಯಿದಕೆಲ್ಲ ಸೂತ್ರಸಂಚಾಲಕಂ। ನಡೆದಿರ್ಪು...
ದಿದರೊಳಿದೊ ನಾಟಕಂ ವಿಶ್ವವಿಸ್ಮಯಕಾರಕಂ ಶಾಂತಿಸಂಗ್ರಾಮದಾ।
ಇದರೊಳೂರ್ಜಸ್ವಿ ಧೀರೋದಾತ್ತನಾತಪಃ
ಸದನಂ ಸ್ಥಿತಪ್ರಜ್ಞನಖಿಳ ರಾಷ್ಟ್ರ ಪ್ರಾಣ-
ಪದಕಂ ಬೃಹತ್ಕೀರ್ತಿ ಮೋಹನಂ ನಾಯಕಂ ಸಹೃದಯಂ ವಿನಯಾಂಬುಧಿ॥

(ಇದು ರಂಗಭೂಮಿ)

ಇದು ತಪೋನಿಧಿ ಗಾಂಧಿ ಕಲ್ಪಿಸಿದ ಧ್ವಜವು
ಇದು ಭರತಸಂತತಿ ಸರ್ವಸ್ವವು॥

(ನಮ್ಮ ಧ್ವಜವು)

ಈ ಮೇಲಿನ ಪದ್ಯಭಾಗಗಳಲ್ಲಿ ಗಾಂಧೀಜಿಯನ್ನು ಧೀರೋದಾತ್ತ, ಸ್ಥಿತಪ್ರಜ್ಞ, ರಾಷ್ಟ್ರಪ್ರಾಣಪದಕ, ವಿನಯಾಂಬುಧಿ, ತಪೋನಿಧಿ-ಎಂದು ಮುಂತಾಗಿ ಮುಕ್ತ ಮನಸ್ಸಿನಿಂದ ಕೊಂಡಾಡುವ ಸಾಲಿಯವರು ಸ್ವತಃ ವಿನಯಾಂಬುಧಿಯಾಗಿದ್ದಾರೆ, ಸಹೃದರೂ ಆಗಿದ್ದಾರೆ. ಅಂತೆಯೇ ಅವರ ಕವಿತೆಗಳಲ್ಲಿ ಒರಟುತನವಿಲ್ಲ, ರಭಸವಿಲ್ಲ, ರೋಷವಂತೂ ಕಾಣುವುದೇ ಇಲ್ಲ.

ಮನದ ಕಶ್ಮಲವಹಿತಕರವೈ
ಎನಗೆ ನೀನಾವಾಗಲೂ ಸ-
ಜ್ಜನರ ಸಂಗವನಿತ್ತು ಮಲವನು ತೊಳೆಯಲನುಗೊಳಿಸು
ಕನಸು ನನಸಿನಲಿರಲಿ ಸತ್ಯದ
ನೆನಹು, ದೇವಾ! ಎನ್ನ ಹೃದಯವು
ನಿನಗೆ ಮನೆಯಾಗಿರಲಿ ಬೇಡುವೆನಿದನೆ ಕೈಮುಗಿದು॥

(ಪರಮಪಾವನ ದೇವ)

ಇದು ಸಾಲಿಯವರ ಒಂದು ಪ್ರಾರ್ಥನೆ. ಈ ಪ್ರಾರ್ಥನೆಯಲ್ಲಿ ಅವರ ವ್ಯಕ್ತಿತ್ವದ ತಿರುಳಿರುವುದನ್ನು ಕಾಣಬಹುದು.

ಸಾಲಿಯವರು ದೇಶಭಕ್ತರಾಗಿರುವಂತೆ ದೈವಭಕ್ತರೂ ಆಗಿದ್ದರು. ಈ ದೈವಭಕ್ತಿಯಲ್ಲಿ ಸೃಷ್ಟಿಕರ್ತನ ಬಗೆಗೆ ಧನ್ಯತೆಯ ಭಾವವೊಂದಿದ್ದು, ಉಳಿದಂತೆ ಅರ್ಪಣ ಭಾವವೇ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ.

ನಿನ್ನವನು ನಾನಯ್ಯ ದೇವದೇವಾ
ಎನ್ನನನ್ಯರ ವಶಕೆ ಬಿಡಬೇಡ ತಂದೆ! ಎಂಬ ಪ್ರಾರ್ಥನೆಯಲ್ಲಿ

(ನಿನ್ನವನು ನಾನು)

ಈ ಸಕಲ ಜಗಕೆ ನೀನೊಡೆಯನೆಂಬುದನು ನಾ
ನೀನೊಂದು ಹೊತ್ತಿಗೆಯನೋದಿ ತಿಳಿದು।
ಮೋಸಹೋಗುವೆನು ಮರೆತದನು, ತಂದೆ, ನಿನ್ನ
ದಾಸನಾಗಿಸು ನನ್ನನಾಳು, ಪ್ರಭುವೆ।

(ಕ್ಷಮಿಸು ತಂದೆ)

'ದಾಸನಾಗಿಸು, ನನ್ನನಾಳು' ಎಂಬ ಪ್ರಾರ್ಥನೆಯಲ್ಲಿಯೂ ಸಾಲಿಯವರ ಅರ್ಪಣಭಾವವೇ ಇದೆ. ಇಲ್ಲಿ ಗಮನಿಸಿತಕ್ಕ ಅಂಶವೆಂದರೆ ಭಗವಂತನು ಜಗತ್ತಿನ ಒಡೆಯನೆಂದು ತಿಳಿದುಕೊಂಡದ್ದು ಹಲವು ಹೊತ್ತಿಗೆಯನೋದಿ ಎಂಬುದು. ಭಗವಂತನ ಅಸ್ತಿತ್ವದ ಜ್ಞಾನ ನಮಗೆ ಸಾಮಾನ್ಯವಾಗಿ ಉಂಟಾಗುವುದು ಪರಂಪರೆಯಿಂದ. ಅಧ್ಯಯನಶೀಲರಿಗೆ ಆ ಜ್ಞಾನವನ್ನು ಗಟ್ಟಿಗೊಳಿಸುವ ಆಧ್ಯಾತ್ಮಿಕ ಗ್ರಂಥಗಳು ನಮ್ಮಲ್ಲಿ ಉಪನಿಷತ್ಕಾಲದಿಂದಲೇ ಉಪಲಬ್ಧವಾಗಿವೆ. 'ಭಗವದ್ಗೀತೆ' ಭಾರತೀಯ ತತ್ವಜ್ಞಾನದಲ್ಲಿ ಬಹುಜನರನ್ನು ಆಕರ್ಷಿಸಿದ ಒಂದು ಅಮೂಲ್ಯ ಗ್ರಂಥ. ಆಮೇಲೆ ಶರಣರು, ದಾಸರು, ಕೈವಲ್ಯಪದಕಾರರು...ಹೀಗೆ

ಅನೇಕ ಅನುಭಾವಿಗಳು ನೀಡಿದ ಸಾಹಿತ್ಯ ನಮ್ಮಲ್ಲಿ ವಿಪುಲವಾಗಿಯೇ ಇದೆ. ಸಾಲಿಯವರ ಬರವಣಿಗೆಯನ್ನು ನೋಡಿದರೆ ಈ ಎಲ್ಲ ಸಾಹಿತ್ಯದ ಪ್ರಭಾವ ಅವರ ಮೇಲಾಗಿರುವುದು ಕಂಡುಬರುತ್ತದೆ. ಪೊತ್ತಿಗೆಯನೋದಿ ಸೃಷ್ಟಿಕರ್ತನನ್ನು ಅರಿತೆನೆಂದು ಅವರು ಹೇಳಿದುದರಲ್ಲಿ ಪ್ರಾಮಾಣಿಕತೆಯಿದೆ, ಪ್ರಾಂಜಲಭಾವವೂ ಇದೆ. ಹೊಸಗನ್ನಡದ ಅನೇಕ ಕವಿಗಳ ಆಧ್ಯಾತ್ಮಿಕ ಜ್ಞಾನವು ಓದಿನಿಂದಲೇ ದೊರಕಿದುದಾಗಿದ್ದು, ಸ್ವಯಂ ಸಾಧನೆ ಮಾಡಿ ದೇವರನ್ನು ಕಂಡುಕೊಂಡಂಥ ಮಧುರಚೆನ್ನರಂಥವರು ವಿರಳವೆಂದೇ ಹೇಳಬೇಕು. ಹಾಗೆ ನೋಡಿದರೆ ಮಧುರಚೆನ್ನರ ಆತ್ಮಶೋಧನೆಯಲ್ಲಿಯೂ ಆಧ್ಯಾತ್ಮಿಕ ಗ್ರಂಥಾಧ್ಯಯನ ಸಾಕಷ್ಟು ಪ್ರಮಾಣದಲ್ಲಿಯೇ ಇದೆ.

ಆಗುವೆನು ನಿನ್ನವನು ನಾನೆಂದು ಹರಿಯೇ
ಹೋಗುತಿವೆ ಜೀವನದ ದಿನಗಳಿವು ದೇವಾ।

(ಆಗುವೆನು ನಿನ್ನವನು)

ತಮ್ಮ ಮನಸ್ಸಿನ ಸ್ಥಿತಿ-ಗತಿಗಳನ್ನು, ಆಶೆ-ಆಕಾಂಕ್ಷೆಗಳನ್ನು ಅಂತರ್ಮುಖಿಯಾಗಿ ನೋಡಿ, ಜೀವನದ ದಿನಗಳು ವ್ಯರ್ಥವಾಗಿ ಕಳೆದುಹೋಗುತ್ತಿರುವುದರ ಬಗ್ಗೆ ತುಂಬಾ ವಿಹ್ವಲರಾಗಿ 'ಕೊನೆಯೆಂದು ಕೊನೆಯೆಂದು ನನ್ನ ಬವಣೆಗೆ ದೇವಾ?' ಎಂದು ಕಸಿಕರಿಸಿದುದಲ್ಲದೆ 'ಹಿಂದಾವದಂತಿರಲಿ, ತಂದೆ ಇನ್ನಾದರೂ। ಮುಂದೆನ್ನಿನಗಲಿ ಬಳಲಿಸಬೇಡವಯ್ಯಾ.' ಎಂದು ಪ್ರಾರ್ಥಿಸಿದುದರಲ್ಲಿ ಸಾಲಿಯವರ ಅಂತರಂಗದ ಮೊರೆ ಎದ್ದುಕಾಣುತ್ತದೆ. ಭಕ್ತಿ ಪರಂಪರೆಯಲ್ಲಿ ಈ ಆರ್ತಭಾವಕ್ಕೆ ಮಿಗಿಲಾದ ಸ್ಥಾನವುಂಟು. ಈ ಪದ್ಯದ ಜೊತೆಗೆ ಇರುವ 'ದೇವನ ಕೈಗೂಸು' ಎಂಬ ಕವಿತೆಯೂ ಅಂತಹದೇ ಸಂವೇದನೆಯಿಂದ ಕೂಡಿದೆ.

ನಿನ್ನ ಕೈಗೂಸಾಗಿ ನಲಿವೆನೆಂದು
ಸನ್ನುತಾಂಘ್ರಿ, ಸಚ್ಚಿದಾನಂದ, ದೇವಾ.

ಮುಗ್ಧ, ಸರಳ ಮತ್ತು ನೇರವಾದ ಈ ಪ್ರಾರ್ಥನಾ ಪದ್ಯಗಳು ಸಾಲಿಯವರ ಅಂತರಂಗದ ಸ್ಥಿತಿಯನ್ನು ಜೊತೆಗೆ ಆಧ್ಯಾತ್ಮಿಕ ಜೀವನದ ಬೆಳವಣಿಗೆಯನ್ನು ಸೂಚಿಸುತ್ತವೆ.

ತಾವು ಬಯಸಿದ ಭಗವಂತನ ಸ್ವರೂಪವನ್ನು
ಸತ್ಯಾತ್ಮ, ಸತ್ಯಸಂಕಲ್ಪ, ಸತ್ಯಪ್ರಾಣ
ಸತ್ಯಸಂದೇಶ, ಹರಿ, ಸತ್ಯಧಾಮ।
ಸತ್ಯಾಂಗ, ಸತ್ಯಪ್ರಕಾರ, ಸತ್ಯೋತ್ಸಾಹ
ಸತ್ಯಪ್ರಮೋದಾಬ್ಧಿ, ಸತ್ಯಾಯ

(ಮರುಗಿಸುವೆ ಕಣ್ಣೆ ಮರೆಯಾಗಿ)

ಎಂದು ಮುಂತಾಗಿಯೂ ಒಂದು ಕವಿತೆಯಲ್ಲಿ ವರ್ಣಿಸಿದ್ದಾರೆ.'ಸತ್ಯ' ವನ್ನು ಗಟ್ಟಿಯಾಗಿ ಹಿಡಿದುಕೊಂಡು ಭಗವಂತನ ಆತ್ಮ, ಸಂಕಲ್ಪ, ಪ್ರಾಣ-ಏನೆಲ್ಲವೂ ಅದಕ್ಕಾಶ್ರಯವಾಗಿರುವುದನ್ನು ಇಲ್ಲಿ ಕವಿ ಗಮನಿಸಲಾಗಿದೆ. ಹೀಗೆ ಪರಂಪರೆಯಿಂದ ಸ್ವೀಕೃತವಾದ ದೈವಭಕ್ತಿ ಸಾಲಿಯವರ ಜೀವನದ ಒಂದು ಮಹತ್ವದ ಭಾಗವಾಗಿದೆಯೆಂದು ಹೇಳಬಹುದು.

ಸಾಲಿಯವರು ಕೆಲವು ಪ್ರಕೃತಿಗೀತೆಗಳನ್ನು, ಬದುಕಿನ ಅನುಭವದ ಪದ್ಯಗಳನ್ನು ಬರೆದಿರುವರಲ್ಲದೆ, ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ತರುವ ಕಾರ್ಯವನ್ನು ಮಾಡಿರುವರು. ಅವರ ಎಲ್ಲ ಬಗೆಯ ಕವಿತೆಗಳಲ್ಲಿ ಕಂಡುಬರುವ ಮುಖ್ಯ ಗುಣವೆಂದರೆ ತಮಗನಿಸಿದ್ದನ್ನು ಪ್ರಾಮಾಣಿಕವಾಗಿ ಹೇಳಿಬಿಡುವುದು. ಕಾವ್ಯಕ್ಕೆ ಅಗತ್ಯವಾಗಿರುವ ಅಲಂಕಾರಗಳ ಕೊರತೆಯಾದರೂ ಚಿಂತೆಯಿಲ್ಲ, ಸ್ವಭಾವೋಕ್ತಿಯಲ್ಲಿಯಾದರೂ

ಅವರು ತಮ್ಮ ಭಾವಗಳನ್ನು, ಅನಿಸಿಕೆಗಳನ್ನು ತಮ್ಮದೇ ಆದ ಧಾಟಿಯಲ್ಲಿ ವ್ಯಕ್ತಪಡಿಸಿದ್ದಾರೆ. ತಮ್ಮ ಮಗನ ಸಾವಿನ, ಕರುಳು ಕಿತ್ತುಬರುವ ದುಃಖವನ್ನು ಸಂಯಮದಿಂದ ತಡೆಹಿಡಿಯುತ್ತ 'ತಿಲಾಂಜಲಿ' ಬರೆದದ್ದು ಒಂದು ದೊಡ್ಡ ಸಾಧನೆಯಾಗಿದೆ. ಡಾ।ಸಿದ್ದಲಿಂಗ ಪಟ್ಟಣಶೆಟ್ಟಿಯವರು ಬರೆದಂತೆ ಅದು ಆಧುನಿಕ ಕನ್ನಡದ "ಪ್ರಥಮ ಶೋಕಕಾವ್ಯ" ಎಂಬುದು ಒಪ್ಪತಕ್ಕ ಮಾತಾಗಿದೆ.

ಸಾಲಿಯವರ ಕೃತಿಗಳಿಗೆ ಆ ಕಾಲದಲ್ಲಿ ಮುನ್ನುಡಿ ಬರೆದವರು ಕಡೆಂಗೋಡ್ಲು ಶಂಕರಭಟ್ಟ, ಮ.ಪ್ರ.ಪೂಜಾರ, ಶ್ರೀರಂಗ, ಎ.ಟಿ. ಸಾಸನೂರ, ಎಂ.ಗೋವಿಂದ ಪೈ- ಈ ವಿದ್ವಾಂಸರು. ಅವರ ಅಭಿಪ್ರಾಯಗಳಲ್ಲಿ ಬರೀ ಪ್ರಶಂಸೆಯಿಲ್ಲ, ವಸ್ತುನಿಷ್ಠ ಅವಲೋಕನಗಳಿವೆ.

ಸಾಲಿಯವರ ಕಾವ್ಯಭಾಷೆಯನ್ನು ಕುರಿತು ಬರೆಯುತ್ತಾ "ಸಾಲಿಗಳ ಕಾವ್ಯದಲ್ಲಿ ಹಳೆಗನ್ನಡದ ಸಂಸ್ಕಾರವು ಚೆನ್ನಾಗಿ ಕಾಣುತ್ತದೆ. ಹಾಗೆ ಕಾಣಲೂ ಬೇಕು. ಹೊಸಗನ್ನಡವು ಇನ್ನೂ ಪೂರ್ಣ ಪರಿಪಾಕವನ್ನು ಹೊಂದದಿರುವಲ್ಲಿ ಅಥವಾ ಭಾಷಾವಿಷಯದಲ್ಲಿ ರಾಸಾಯನಿಕ ಪ್ರಯೋಗಗಳು ಆಗುತ್ತಿರುವಲ್ಲಿ ಪ್ರಯೋಗ ಕರ್ತನು ಪೂರ್ವಪದ್ಧತಿಯನ್ನು ಚೆನ್ನಾಗಿ ತಿಳಿದಿರಬೇಕು. ಆಧುನಿಕ ಕವಿತೆಗಳು ಹಲವರಲ್ಲಿ ಅಂತಹ ಒಪ್ಪು ಗೋಚರಿಸುವುದಿಲ್ಲ. ಅದನ್ನು ದೋಷವೆನ್ನಿ, ಗುಣವೆನ್ನಿ ಅದು ಇರಬೇಕಾದಂತಿಲ್ಲವೆಂದು ನನ್ನ ಅಲ್ಪಮತಿಗೆ ತೋರುತ್ತದೆ" ಎಂದಿರುವ ಕಡೆಂಗೋಡ್ಲು ಶಂಕರಭಟ್ಟರ ಅಭಿಪ್ರಾಯದಲ್ಲಿ ಹಳೆಗನ್ನಡ ಅದಕ್ಕೂ ಹೆಚ್ಚಾಗಿ ನಡುಗನ್ನಡದಿಂದ ಆಧುನಿಕ (ಹೊಸ) ಕನ್ನಡಕ್ಕೆ ತಿರುವು ಪಡೆಯುತ್ತಿರುವ ಆ ಕಾಲದ ಕಾವ್ಯದಲ್ಲಿ ರಾಸಾಯನಿಕ ಪ್ರಯೋಗಗಳು ನಡೆದಿರುವುದು ಸ್ವಾಭಾವಿಕವಾಗಿದೆ. ಆದರೆ ಬೇಂದ್ರೆ ಹಾಗೂ ಇತರರು ಇಪ್ಪತ್ತರ ದಶಕದಲ್ಲಿಯೇ ಹೊಸಗನ್ನಡದ ಉತ್ತಮ ಕವಿತೆಗಳನ್ನು ರಚಿಸಿರುವಾಗ ಸಾಲಿಯವರ ಪ್ರಗತಿ ಒಂದಿಷ್ಟು ಮಂದವಾಗಿಯೇ ಕಾಣುತ್ತದೆ. ಅಥವಾ ಹಳೆಗನ್ನಡ ಭಾಷೆ, ಬಂಧಗಳೇ ಅವರಿಗೆ ಹೆಚ್ಚು ಪ್ರಿಯವಾಗಿದ್ದು, ಆ ಬಗೆಯಲ್ಲಿಯೇ ತಮ್ಮ ಸಾಧನೆಯನ್ನು ಮುಂದುವರಿಸಿದಂತೆ ತೋರುತ್ತದೆ.

'ಶ್ರೀರಾಮಚಂದ್ರ' ಸಾಲಿಯವರ ಒಂದು ಮಹತ್ವದ ಕೊಡುಗೆ. ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ತರುವ ಒಂದು ಸಾರ್ಥಕ ಪ್ರಯತ್ನ ಇಲ್ಲಿ ನಡೆದಿದೆ. ಮಹಾಕವಿಯ ಸಂಯಮ ಮತ್ತು ತನ್ಮಯತೆಗಳೆರಡನ್ನೂ ಇಲ್ಲಿ ಕಾಣಬಹುದು. ಷಟ್ಪದಿಬಂಧದಿಂದ ಮತ್ತು ಹಳೆಗನ್ನಡ ಭಾಷೆಯಿಂದ ಹೊರಬಂದು ಹೊಸಗನ್ನಡದ ದ್ವಪದಿ, ಚೌಪದಿಗಳಲ್ಲಿ ಹಾಗೂ ಸುಭಗ ಕನ್ನಡದಲ್ಲಿ ಕಾವ್ಯ ಸಲೀಸಾಗಿ ಸಾಗುತ್ತದೆ. ಈ ಬದಲಾವಣೆ ನಿಜವಾಗಿಯೂ ಗಮನಾರ್ಹವಾದುದು. ಪ್ರೊ। ಎ.ಟಿ.ಸಾಸನೂರ ಅವರು "ಶರಚತುಷ್ಪದಿಯೆಂದು ಕರೆಯಬಹುದಾದ ಇಲ್ಲಿಯ ವೃತ್ತವು ಕೂಡ ಅನುವಾದಕರ ಉದ್ದೇಶಕ್ಕೆ ಅನುಕೂಲವಾಗಿಯೇ ಇದೆ. ಏಕೆಂದರೆ ಇದರಲ್ಲಿ ಸಹಜ ಮನೋಹರವಾದ ತೀವ್ರಗತಿ ಇರುವುದರಿಂದ ಕಥೆ ತಡೆಯಿಲ್ಲದೆ ಮುಂದುವರಿಯುವುದಕ್ಕೆ ಅವಕಾಶವುಂಟಾಗಿದೆ. ಎಲ್ಲಿಯೂ 'ಸಲೆ, ವಲಂ, ಮಿಗೆ'ಗಳಿಗೆ ಶರಣುಹೋಗದೆ, ಪ್ರಾಸವನ್ನಿಟ್ಟುಕೊಂಡರೂ ಕೃತಕತೆಗೆ ಇಂಬುಗೊಡದೆ ಸರಸವಾಗಿ, ಸುಗಮವಾಗಿ ಸಾಗುವ ಈ ಪದ್ಯಪ್ರವಾಹಕ್ಕೆ ಶಕರಚತುಷ್ಪದಿ ಬಹುಮಟ್ಟಿಗೆ ಕಾರಣವಾಗಿದೆಯೆನ್ನಬಹುದು" ಎಂದಿದ್ದಾರೆ. ಈ ಬದಲಾವಣೆ 'ಅಭಿಸಾರ'ದಲ್ಲಿಯೂ ಇದೆ. ಆದರೆ ಇದು ಅದಕ್ಕಿಂತ ಹೆಚ್ಚು ಪ್ರಶಸ್ತವಾಗಿದೆ.

ಸಾಲಿಯವರು ಎರಡು ಕಾದಂಬರಿ, ಒಂದು ನಾಟಕ, ಎರಡು ಅನುವಾದಿತ ಗದ್ಯ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. 'ಜಯ ಗುರುದೇವ' ಮತ್ತು 'ಯದುಪತಿ' ಈ ಕಾದಂಬರಿಗಳು ಸಾಲಿಯವರ ಆದರ್ಶವನ್ನು ಪ್ರತಿನಿಧಿಸುತ್ತವೆ. ವಾಸ್ತವ ಬದುಕಿನ ಗಾಢ ಸಂವೇದನೆಯನ್ನು ಪಡೆಯದಿರುವುದು ಒಂದು ಕೊರತೆಯೆನಿಸಿದರೂ ಸಾಲಿಯವರ ಧೋರಣೆಯಲ್ಲಿ ಮಾನವ ಜೀವಿಗಳ ಉದ್ಧಾರವೇ ಮಹತ್ವದ್ದು.

ಒಳ್ಳೆಯತನದ ಪ್ರತೀಕವಂತಿರುವ 'ಗುರುದೇವ' ಎಂಬ ಪಾತ್ರದ ಮೂಲಕ ಅದನ್ನು ಸಾಲಿಯವರು ಸಾಧಿಸಿದ್ದಾರೆ.

'ಯದುಪತಿ'ಯಲ್ಲಿ ಅನಾಥ ಬಾಲಕನ ಹೋರಾಟದ ಕಥೆಯಿದೆ. ಈ ಪಾತ್ರ ಸ್ವತಃ ಸಾಲಿಯವರನ್ನು ಪ್ರತಿನಿಧಿಸುವಂತೆ ತೋರುತ್ತದೆ.

ಪದ್ಯದಲ್ಲಿ ಹಳೆಗನ್ನಡ ಮತ್ತು ನಡುಗನ್ನಡಕ್ಕೆ ಪ್ರಾಶಸ್ತ್ಯ ನೀಡಿದ ಸಾಲಿಯವರು ಗದ್ಯದಲ್ಲಿ ಮಾತ್ರ ಸಂಪೂರ್ಣ ಹೊಸಗನ್ನಡದವರಾಗಿದ್ದಾರೆ. ಈ ಮಾತು ಅವರ ಎಲ್ಲ ಗದ್ಯ ಕೃತಿಗಳಿಗೂ ಅನ್ವಯಿಸುವಂತಹದು. ಅದರಿಂದಾಗಿ ಅವರ ಗದ್ಯಕೃತಿಗಳು ಸುಲಭವಾಗಿ ಓದಿಸಿಕೊಂಡು ಹೋಗುತ್ತವೆ.

'ಬುದ್ಧ ಜಾತಕ ಕಥೆಗಳು' ಅನುವಾದಿತ ಕತೆಗಳೆಂದು ಅನಿಸುವುದೇ ಇಲ್ಲ, ಅಷ್ಟು ಸ್ವತಂತ್ರವಾಗಿದೆ ಆ ಕತೆಗಳ ಬರವಣಿಗೆ. ಪಂಚತಂತ್ರದ ಕತೆಗಳನ್ನು ಹೋಲುವ ಈ ಕತೆಗಳು ಬದುಕುವ ಕಲೆಯನ್ನು ಕಲಿಸುತ್ತವೆ. ವಿದ್ಯಾರ್ಥಿಗಳಿಗೆ ಇವು ತುಂಬಾ ಉಪಯುಕ್ತವಾದವೆಂದು ಹೇಳಬಹುದು.

ಕಾಕಾ ಕಾಲೇಲಕರರ ಆತ್ಮಕಥನ 'ಜೀವನ ಲೀಲೆ'ಯನ್ನು ಸಾಲಿಯವರು ಮೂಲ ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಗಾಂಧೀಜಿಯವರ ಅನುಯಾಯಿಗಳಲ್ಲೊಬ್ಬರಾದ ಕಾಲೇಲಕರರು ಕರ್ನಾಟಕವನ್ನು ಸಂಪರ್ಕಿಸಿದ್ದು ಈ ಆತ್ಮಕಥನದಲ್ಲಿ ಬೆರೆತುಕೊಂಡಿದೆ. ಇಲ್ಲಿಯ ಭಾಷೆ, ನಿರೂಪಣೆಗಳೆರಡೂ ಮನೋಜ್ಞವಾಗಿವೆ.

ಹೀಗೆ ತಮ್ಮ ಜೀವಮಾನದಲ್ಲಿ ಅನೇಕ ಕಷ್ಟ, ದುಃಖಗಳನ್ನು ಎದುರಿಸುತ್ತ ವಿವಿಧ ಬಗೆಯ ಸಾಹಿತ್ಯ ಕೃಷಿ ಮಾಡಿರುವ, ಸಾಹಿತ್ಯಕ್ಕಿಂತ ಮಿಗಿಲಾದ ವ್ಯಕ್ತಿತ್ವವನ್ನು ರೂಪಿಸಿಕೊಂಡ, ತಾವು ಸ್ವೀಕರಿಸಿದ ಜೀವನ ಮೌಲ್ಯಗಳಿಗೆ, ಆದರ್ಶಗಳಿಗೆ ಬದ್ಧರಾಗಿ, ಒಬ್ಬ ತಪಸ್ವಿಯಂತೆಯೇ ಬಾಳಿದ ಸಾಲಿಯವರು ಮರೆತುಬಿಡುವಂತಹ ಲೇಖಕರಲ್ಲ. ಕನ್ನಡ ಸಾಹಿತ್ಯಕ್ಕೆ ಹೊಸ ನೀರನ್ನು ತಂದುಕೊಟ್ಟ ಶ್ರೇಯಸ್ಸು ಅವರಿಗೂ ಸಲ್ಲುತ್ತದೆ. ಸಾಲಿಯವರನ್ನು ಸ್ಮರಿಸುವದೆಂದರೆ, ಆದರ್ಶವನ್ನು ಸ್ಮರಿಸಿದಂತೆ, ತತ್ವನಿಷ್ಠೆಯನ್ನು ಸ್ಮರಿಸಿದಂತೆ. ಹಾಗೆಯೇ ಗಾಂಧಿ ಪ್ರಣೀತ ಜೀವನ ಸಿದ್ಧಾಂತವನ್ನು ಸ್ಮರಿಸಿಕೊಂಡಂತೆ.

---

* ಡಾ। ಗುರುಲಿಂಗ ಕಾಪಸೆ, ದುರ್ಗಾ ಕಾಲನಿ, ಸಪ್ತಾಪುರ, ಧಾರವಾಡ - ೫೮೦ ೦೦೧.

ಕನ್ನಡ ನವೋದಯ ಮತ್ತು ಸಾಲಿ ರಾಮಚಂದ್ರರಾಯರ ಕಾವ್ಯ

ಚೆನ್ನವೀರ ಕಣವಿ

'ನವೋದಯ ಮತ್ತು ಸಾಲಿ ರಾಮಚಂದ್ರರಾಯರ ಕಾವ್ಯ'ಕುರಿತ ಈ ವಿಚಾರ ಸಂಕಿರಣ ಅರ್ಥಪೂರ್ಣವಾಗಿ ನೆರವಾರುವಂತೆ ನೋಡಿಕೊಂಡ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ। ಗಿರಡ್ಡಿ ಗೋವಿಂದರಾಜ ಅವರಿಗೆ ಮೊದಲು ಹಾರ್ದಿಕ ಅಭಿನಂದನೆಗಳು. ಇಂಥ ಒಂದು ಮಹತ್ವದ ಸಾಹಿತ್ಯಿಕ ಸಂದರ್ಭದಲ್ಲಿ ನನಗೆ ಈ ಕಾರ್ಯಕ್ರಮದ ಸಮಾರೋಪದ ಅಧ್ಯಕ್ಷತೆಯ ಗೌರವವನ್ನು ನೀಡಿದ್ದಕ್ಕಾಗಿ ಅವರಿಗೂ ಸಾಲಿರಾಮಚಂದ್ರರಾಯ ಪ್ರತಿಷ್ಠಾನಕ್ಕೂ ನನ್ನ ಕೃತಜ್ಞತೆಗಳು.

ಇಂದು ಬೆಳಗಿನಿಂದ ನಡೆದ ಎರಡೂ ಗೋಷ್ಠಿಗಳ ವಿಷಯಗಳು ಸಾಲಿಯವರ ಮನೋಧರ್ಮ ಹಾಗೂ ಕಾವ್ಯಸೃಷ್ಟಿಗೆ ಅನುಗುಣವಾಗಿದ್ದು, ನವೋದಯ ಕಾವ್ಯದ ಹಿನ್ನೆಲೆಯಲ್ಲಿ ಅವುಗಳ ಪರಿಶೀಲನೆ ನಡೆಸಿದ್ದು ಸಮಂಜಸವಾಗಿದೆ.

ಕಳೆದ ವರ್ಷವೇ ಧಾರವಾಡದಲ್ಲಿ ಸಾಲಿ ರಾಮಚಂದ್ರರಾಯ ಪ್ರತಿಷ್ಠಾನ ಸ್ಥಾಪನೆಗೊಂಡದ್ದು ಹಾಗೂ ಅದೇ ಸಂದರ್ಭದಲ್ಲಿ 'ಕನ್ನಡ ಪುಸ್ತಕ ಪ್ರಾಧಿಕಾರ' ಪ್ರಕಟಿಸಿದ ಸಾಲಿಯವರ 'ಸಮಗ್ರ ಕಾವ್ಯ'ದ ಬಿಡುಗಡೆಯಾಗಿ ಸಾಲಿಯವರ ಕಾವ್ಯದ ಅಭ್ಯಾಸಕ್ಕೆ ಒಳ್ಳೆ ಅನುಕೂಲ ಒದಗಿದಂತಾಯಿತು. ಅದರ ಮುಂದುವರಿಕೆ ಎನ್ನುವಂತೆ ಈ ವರ್ಷ ಈ ವಿಚಾರ ಸಂಕಿರಣ ಏರ್ಪಡಿಸಿದ್ದು ಅವರ ಕಾವ್ಯದ ಮರುಚಿಂತನೆಯ ದೃಷ್ಟಿಯಿಂದ ಮಹತ್ವದ್ದಾಗಿದೆ.

ಈಗ್ಗೆ ಹತ್ತು ವರ್ಷಗಳ ಹಿಂದೆ ಡಾ।ಜಿ.ಎಸ್.ಶಿವರುದ್ರಪ್ಪನವರು ಅಧ್ಯಕ್ಷರಾಗಿದ್ದಾಗ ಎರಡು ದಿನಗಳ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು. ಅದರ ವಿಷಯ: "ಆಧುನಿಕ ಕನ್ನಡ ಕಾವ್ಯ: ಉತ್ತರ ಕರ್ನಾಟಕದ ಕೊಡುಗೆ" ಎಂಬುದಾಗಿತ್ತು. ಅದರ ಉದ್ಘಾಟನೆ ನೆರವೇರಿಸಿ ಉದ್ಬೋಧಕ ಭಾಷಣ ಮಾಡಿದ ದಿವಂಗತ ಡಾ।ಶಾಂತಿನಾಥ ದೇಸಾಯಿಯವರನ್ನು ಈ ಸಂದರ್ಭದಲ್ಲಿ ನೆನೆದುಕೊಳ್ಳಬೇಕು. ಹದಿಮೂರು ವಿಮರ್ಶಾತ್ಮಕ ಪ್ರಬಂಧಗಳನ್ನೊಳಗೊಂಡ ಸಂಕಲನವನ್ನು ಡಾ। ಗಿರಡ್ಡಿಯವರು ದೀರ್ಘವಾದ ಉಪಯುಕ್ತ ಪ್ರಸ್ತಾವನೆಯೊಂದಿಗೆ ಸಂಪಾದಿಸಿಕೊಟ್ಟಿರುವುದನ್ನು ಅಭ್ಯಾಸಿಗಳು ಆಗಲೇ ಗಮನಿಸಿರಬಹುದು. ಆಗ ಆಯ್ದುಕೊಂಡ ಕವಿಗಳಲ್ಲಿ ಉತ್ತರ ಕರ್ನಾಟಕದ ಹಿರಿಯ ಕವಿಗಳಲ್ಲಿ ಒಬ್ಬರಾದ ಸಾಲಿಯವರೊಬ್ಬರು ಉಳಿದುಕೊಂಡುಬಿಟ್ಟಿದ್ದರು. ಅದಕ್ಕೆ ಯೋಜಕರು ಕೊಟ್ಟ ಮುಖ್ಯಕಾರಣ 'ಹೊಸ ವಸ್ತುಗಳ ಬಗ್ಗೆ ಕೂಡ ಅವರು ಹಳೆಯ ರೀತಿಯಲ್ಲಿ ಬರೆದರು'ಎನ್ನುವದಾಗಿತ್ತು. ಪ್ರಸ್ತುತ ವಿಚಾರ ಸಂಕಿರಣದ ಮೂಲಕ ಆ

ಕೊರತೆಯನ್ನು ಈಗ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ತುಂಬಿಕೊಟ್ಟಿರುವುದು ಸಮಾಧಾನಕರ ಸಂಗತಿಯಾಗಿದೆ. ಈ ಪ್ರಬಂಧಗಳು ಪುಸ್ತಕ ರೂಪದಲ್ಲಿ ಪ್ರಕಟವಾದಾಗ ಸಾಲಿಯವರ ಕಾವ್ಯದ ನೆಲೆ ಬೆಲೆಯನ್ನು ಗುರುತಿಸಲು ಕೆಲಮಟ್ಟಿಗಾದರೂ ಸಾಧ್ಯವಾಗಬಹುದೆಂದು ನಾನು ಆಶಿಸಿದ್ದೇನೆ.

ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ಧಾರವಾಡ, ಮೈಸೂರು, ಮಂಗಳೂರು ಮೂರೂ ಮಹತ್ವದ ಪಾತ್ರವಹಿಸಿದ ಕೇಂದ್ರಗಳಾಗಿದ್ದವು. (ಈಚೆಗೆ ಡಾ। ಜಿ.ಎಸ್. ಶಿವರುದ್ರಪ್ಪನವರು ಹಲಸಂಗಿಯನ್ನು ನಾಲ್ಕನೆಯ ಕೇಂದ್ರವಾಗಿ ಗುರುತಿಸಿರುವುದುಂಟು.) ಆಗ ಈ ಭಾಗದ ಕವಿಗಳನ್ನು ಆಳವಾಗಿ ಪ್ರಭಾವಿಸಿದ್ದು ದೇಸೀಯ ಮೂಲಗಳು ಎನ್ನುವ ಕಾರಣದಿಂದ ಧಾರವಾಡಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಅಂಥ ಕವಿಗಳಲ್ಲಿ ಹೆಸರಿದ್ದರೂ ಹೆಸರಾಗದೇ ಹೋದ-ಓಂಡಣಗಲಿದ ಹಸುವಿನಂತಿದ್ದ-ಸಾಲಿ ರಾಮಚಂದ್ರರಾಯರೂ ಒಬ್ಬರು. (ಈ ಸಂದರ್ಭದಲ್ಲಿ 'ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಜಗದೀಶನು' ಎಂಬ 'ಗೋವಿನಹಾಡಿ'ನ ಸಾಲು ನೆನಪಾಗುತ್ತದೆ, ಇರಲಿ.)

೧೯೪೦-೫೦ರ ದಶಕದ ಧಾರವಾಡದ ನನ್ನ ವಿದ್ಯಾರ್ಥಿಜೀವನದಲ್ಲಿ ದಿನವೂ ನನ್ನ ದೃಷ್ಟಿಗೆ ಬೀಳುತ್ತಿದ್ದ - ತಮ್ಮ ವಿಶಿಷ್ಟ ಚಹರೆ, ನಡಿಗೆ, ಮಾತು, ವೇಷಭೂಷಣ ಹಾಗೂ ಶೈಲಿಯಿಂದ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದ - ಸಾಹಿತ್ಯ ಕ್ಷೇತ್ರದ ಹಿರಿಯ ಜೀವಗಳಲ್ಲಿ ಸಾಲಿ ರಾಮಚಂದ್ರರಾಯರೂ ಒಬ್ಬರು. ನಾನು ಕಲಿಯುತ್ತಿದ್ದ ರಾಜಾ ಲಖಮಗೌಡ ಸರದೇಸಾಯಿ ಹಾಯ್‌ಸ್ಕೂಲಿನ ಮಗ್ಗುಲಲ್ಲಿಯೇ ಇದ್ದ (ಇರುವ) ಕರ್ನಾಟಕ ಹಾಯ್‌ಸ್ಕೂಲಿನಲ್ಲಿ ಸಾಲಿಯವರು ಶಿಕ್ಷಕರಾಗಿದ್ದರು. ಶುಭ್ರಖಾದಿಧಾರಿಯಾಗಿದ್ದ ಸೌಮ್ಯವ್ಯಕ್ತಿತ್ವದ ತೆಳ್ಳಗಿನ ಈ ವ್ಯಕ್ತಿ ದಿನವೂ ಸಾಯಂಕಾಲ ಶಾಲೆಯಿಂದ ಮನೆಗೆ ಹೋಗುವಾಗ ರಸ್ತೆಯ ಒಂದು ಬದಿಯನ್ನು ಹಿಡಿದು ನೆಲಕ್ಕೆಲ್ಲಿ ನೋವಾಗುತ್ತದೆಯೊ ಎನ್ನುವಂತೆ ಮೆಲ್ಲಗೆ ನಡೆದು ಹೋಗುತ್ತಿದ್ದುದು ದಿನವೂ ನನ್ನ ಲಕ್ಷ್ಯವನ್ನು ಸೆಳೆದುಕೊಳ್ಳುತಿತ್ತು. ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆಯುತ್ತಿದ್ದ ಸಭೆ ಸಮಾರಂಭಗಳಲ್ಲಿ ಅವರು ಪ್ರೇಕ್ಷಕರ ಮಧ್ಯದಲ್ಲಿಯೇ ಇರುತ್ತಿದ್ದರೇ ಹೊರತು ವೇದಿಕೆಯ ಮೇಲೆ ಕಾಣಿಸಿಕೊಂಡದ್ದು ತೀರ ಎಂದರೆ ತೀರ ವಿರಳ. 'ಕನ್ನಡದ ಬಾವುಟ' ಸಂಗ್ರಹದಲ್ಲಿ ನಾನು ಓದಿ ಮೆಚ್ಚಿಕೊಂಡಿದ್ದ 'ಆವಿನ ನೊರೆಹಾಲನೊಲ್ಲೆನು' 'ಕನ್ನಡದ ತುಳಸಿಗೆ ಪಾವನ ತುಲಸಿ' 'ಕೊಡಗು ಬೆಡಗಿನ ಬೀಡು' ಇತ್ಯಾದಿ ಕವಿತೆಗಳನ್ನು ಬರೆದವರು ಇವರೇ ಎಂದು ತಿಳಿದಾಗ ಅವರ ಬಗ್ಗೆ ನನ್ನಲ್ಲಿ ಹೆಚ್ಚಿನ ಗೌರವ ಉಂಟಾಯಿತು. ಆಗಿನ ದಿನಗಳಲ್ಲಿ, ಅವರ ಚುಟುಕುಗಳ ಸೊಗಸಿಗೆ ಮಾರುಹೋಗದವರೇ ಇರಲಿಲ್ಲವೆಂದು ಹೇಳಬಹುದು.

ಸಾಲಿಯವರ ಕಾವ್ಯದಲ್ಲಿ ಕೂಡಲೆ ನಮ್ಮ ಮನಸ್ಸನ್ನು ತಟ್ಟುವಂಥದು ಅವರಲ್ಲಿ ಅಡಕವಾದ ಪರಿಶುದ್ಧವಾದ ಉತ್ಕಟಭಾವನೆ. ಒಂದು ಬಗೆಯ ಪ್ರಶಾಂತ - ಗಂಭೀರ ಮನೋಧರ್ಮ ಅವರ ಬರವಣಿಗೆಯಲ್ಲಿ ಉದ್ದಕ್ಕೂ ಒಡೆದು ಕಾಣುತ್ತದೆ. ಹೊಸಗನ್ನಡ ಕಾವ್ಯಕ್ಕೆ ಮುಖ್ಯ ಪ್ರೇರಕಶಕ್ತಿಯಾದದ್ದು ದೇಶಾಭಿಮಾನ. ಆಗಿನ ಎಲ್ಲ ಕವಿಗಳಲ್ಲಿಯೂ ಸಾಮಾನ್ಯವಾಗಿ ಅದೊಂದು ಹೊಸ ಭಾವನೆಯ ಹೊಸ ಅನುಭವವನ್ನು ಪ್ರಕಟಪಡಿಸಿತು. ನಾಡುನುಡಿಯ ಅಭಿಮಾನವೂ ಅದರಲ್ಲಿ ಸಮಾವೇಶಗೊಂಡಿತ್ತು. ಎರಡನೆಯ ಪ್ರೇರಕಶಕ್ತಿಯೆಂದರೆ ನಿಸರ್ಗಪ್ರೇಮ. ವ್ಯಕ್ತಿ ಪ್ರಧಾನತೆಯಿಂದ ಈ ಹೊಸಕಾವ್ಯ ಪ್ರಾಚೀನ ಕಾವ್ಯದಿಂದ ಭಿನ್ನವಾದ ರೀತಿಯಲ್ಲಿ ತನ್ನ ಸಂವೇದನೆಗಳನ್ನು ಅಭಿವ್ಯಕ್ತಿಗೊಳಿಸಿತು. ಸಾಲಿ ರಾಮಚಂದ್ರರ ಕಾವ್ಯದಲ್ಲೂ ಹಳಗನ್ನಡದ ಗಾಢ ಸಂಸ್ಕಾರದೊಂದಿಗೆ ಈ ಎಲ್ಲ ಗುಣಗಳನ್ನು ಕಾಣಬಹುದು. ಪುಸ್ತಕ ಪಾಂಡಿತ್ಯಕ್ಕಿಂತ ಜೀವನದರ್ಶನ ಅವರಿಗೆ ಹಿರಿದಾಗಿತ್ತು. ಮಾನವ ಜೀವನಕ್ಕೆ ಅತ್ಯವಶ್ಯಕವಾದ ಸದಸದ್ವಿವೇಕ ಬುದ್ಧಿಯನ್ನು ವಿವರಿಸುವ, ಸೃಷ್ಟಿಸೌಂದರ್ಯವನ್ನು ಬಗೆದುಂಬಿ ಬಣ್ಣಿಸುವ, ವಿಧಾಯಕ ವಿಚಾರಗಳ ಕವನಗಳನ್ನೇ ಅವರು ಹೆಚ್ಚಾಗಿ ಬರೆದರು. ಹೈದರಾಬಾದದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ

ಕವಿಗೋಷ್ಠಿಯ ಅವರ ಅಧ್ಯಕ್ಷಭಾಷಣದಲ್ಲಿ ಅವರ ಕಾವ್ಯದೃಷ್ಟಿ ಹೀಗೆ ವ್ಯಕ್ತವಾಗಿದೆ: "ಮಗು ಬೆಳೆದು ಮಾನವನಾಗಲು ತಾಯಿ ಬೇಕು, ಜನ ಬೆಳೆದು ಸುಸಂಸ್ಕೃತ ಜನಾಂಗವಾಗಲು ಕವಿ ಬೇಕು"

ಸಾಲಿಯವರ ಕಾವ್ಯದಲ್ಲಿ ಅಲ್ಲಲ್ಲಿ ಭಾವ ಹೊಸತಾಗಿದ್ದರೂ ಅವರ ಕಾವ್ಯ ಕಂದ, ಷಟ್ಪದಿಗಳ ಛಂದೋಶರೀರವನ್ನೇ ಹೆಚ್ಚಾಗಿ ಅವಲಂಬಿಸಿಬಿಟ್ಟಿದ್ದರಿಂದ ಆ ದಿಸೆಯಲ್ಲಿ ಹೊಸತನ್ನು ಮಾಡಿ ತೋರಿಸಲು ಅವರಿಗೆ ಅವಕಾಶವಿಲ್ಲದೆ ಹೋಯಿತು. ಆದರೂ ಅವರಿಗೆ ಪ್ರಿಯವಾಗಿದ್ದ ವಾರ್ಧಕ ಷಟ್ಪದಿಯನ್ನು ಜಾತ್ಯಶ್ವದಂತೆ ಸಮಯೋಚಿತವಾದ ಗತಿಗಳಿಂದ ಅವರು ನಡೆಸಿದರು ಎಂಬ ಗೋವಿಂದಪ್ಪ ಅವರ ಮಾತನ್ನು ಒಪ್ಪಬಹುದು. 'ಅಭಿಸಾರ' ಹಾಗೂ 'ತಿಲಾಂಜಲಿ' ಕಾವ್ಯಗುಣದ ಸೃಷ್ಟಿಯಿಂದ, ಚಿಕ್ಕವಾದರೂ ಮಹತ್ವದ ಕೃತಿಗಳು. 'ತಿಲಾಂಜಲಿ'ಗೆ ಹೊಸಗನ್ನಡ ಕಾವ್ಯದ ಮೊದಲ ಶೋಕಗೀತವೆಂಬ ಹೆಗ್ಗಳಿಕೆ ಖಂಡಿತವಾಗಿಯೂ ಸಲ್ಲುತ್ತದೆ. 'ಒಂದೇ ಒಂದು ದೀಪದ ಕುಡಿ ಇಲ್ಲಿ ನಿಶ್ಚಲವಾಗಿ ಉರಿಯುತ್ತಿದೆ' ಎಂದು ಈ ಕಾವ್ಯದ ಬಗ್ಗೆ ಗೋಕಾಕರು ಹೇಳಿದ ಮಾತು ಸಮಂಜಸವಾಗಿದೆ. 'ರಾಮಾಯಣ' ದ ಕಾಂಡಗಳು ಅದೇಕೋ ನಿರೀಕ್ಷಿಸಿದಷ್ಟು ಯಶಸ್ಸನ್ನು ಪಡೆಯಲಿಲ್ಲ. ಅದಕ್ಕೆ ದೊರೆತ ಕಟು ವಿಮರ್ಶೆ ಅದನ್ನು ಮುಂದೆ ಬೆಳೆಯಗೊಡದಂತೆ ಮಾಡಿದ್ದು ಒಂದು ದುರ್ದೈವದ ಘಟನೆ.

ಅಪ್ಪಟ ಗಾಂಧೀವಾದಿಗಳಾಗಿದ್ದ ಸಾಲಿ ರಾಮಚಂದ್ರರಾಮಯರಂಥ ಸಾತ್ವಿಕ ಶಿರೋಮಣಿಗಳ ಜೀವನ ಹಾಗೂ ಕಾವ್ಯದಿಂದ ನಮಗೆ ದೊರೆಯುವ ಆದರ್ಶವೆಂದರೆ - 'ನಾವು ಬರೆಯುವ ಕಾವ್ಯಕ್ಕಿಂತ ನಾವು ಬದುಕುವ ಕಾವ್ಯ ಬಹಳ ಮಹತ್ವದ್ದು'. ನವೋದಯದ ಈ ವಿಶಿಷ್ಟ ಕವಿಯ ಜೀವನ ಹಾಗೂ ಕೃತಿಗಳ ಅಧ್ಯಯನ ನಮಗೆ ಹೊಸ ಶಕ್ತಿಯನ್ನೂ ದೃಷ್ಟಿಯನ್ನೂ ತಂದುಕೊಡಬಲ್ಲದು. ಜೀವನ ಸತ್ವಕ್ಕೆ ಅಲ್ಲಿ ಕೊರತೆಯೆಂಬುದೇ ಇಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ನಿರ್ಲಕ್ಷಿತರಾಗಿ, ಅಜ್ಞಾತವಾಸವನ್ನು ಅನುಭವಿಸಬೇಕಾಗಿ ಬಂದದ್ದಕ್ಕೆ ಅವರ ಮಿತಿಮೀರಿದ ಸಾತ್ವಿಕ ಸ್ವಭಾವ ಕೆಲಮಟ್ಟಿಗೆ ಕಾರಣವಾಗಿದ್ದರೂ ಅವರ ಸ್ವಾಭಿಮಾನಕ್ಕೆ ಎಂದೂ ಕುಂದೂಟಾಗಲಿಲ್ಲ. ಸರಕಾರ ಅವರಿಗೆ ಗೌರವಧನ ಕೊಡಮಾಡಿದ್ದು ಕೂಡ ಜೀವನದ ಕೊನೆಯಲ್ಲಿ. ಅದು ಅವರಿಗೆ ದೊರೆಯುವ ಮುನ್ನವೇ ಅವರು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದರು. ಅವರದು ತೊಂಬತ್ತು ವರ್ಷಗಳ ತುಂಬು ಜೀವನ, ಕಷ್ಟಸಹಿಷ್ಣುತೆಯ ಪವಿತ್ರ ಜೀವನ.

ಇಂದು ನಡೆದ ಗೋಷ್ಠಿಗಳಲ್ಲಿ ಸಾಲಿಯವರ ಕಾವ್ಯದಲ್ಲಿ ಪ್ರಕೃತಿ, ದೇಶಪ್ರೇಮ ಹಾಗೂ ಅಧ್ಯಾತ್ಮವನ್ನು ಕುರಿತು ಮಾತನಾಡಿದವರೆಲ್ಲರೂ ಅವರ ಕಾವ್ಯದ ಈ ಮೂರು ಮುಖ್ಯ ಆಶಯಗಳನ್ನು ಚೆನ್ನಾಗಿ ಪ್ರತಿಪಾದಿಸಿದ್ದಾರೆ.

ಸಾಲಿಯವರ ಆಧ್ಯಾತ್ಮಿಕ ಅಭಿವ್ಯಕ್ತಿ ದಾಸರ ಕೀರ್ತನೆಗಳ ಮಾದರಿಯ ಅವರ ಸಮರ್ಪಣ ಭಾವದ ಭಕ್ತಿಗೀತಗಳಿಗೆ ಸೀಮಿತಗೊಂಡಿರುವುದು ಕಂಡುಬರುತ್ತದೆ.

ಇವತ್ತಿನ ಭಾಷಣಕಾರರು ಎತ್ತಿಕೊಂಡ ಸಾಲಿಯವರ ಕಾವ್ಯದ ಉದಾಹರಣೆಗಳು ಸಾಮಾನ್ಯವಾಗಿ ಎಲ್ಲರ ಮಾತಿನಲ್ಲಿಯೂ ಪುನರುಕ್ತಿಗೊಂಡದ್ದು ಆಕಸ್ಮಿಕವೇನೂ ಆಗಿರಲಿಕ್ಕಿಲ್ಲ. ಅವುಗಳನ್ನು ಪದೇಪದೇ ಕೇಳುವುದರಲ್ಲಿಯೇ ಒಂದು ಬಗೆಯ ಸುಖವಿರುವುದನ್ನು ಶ್ರೋತೃಗಳು ಅನುಭವಿಸಿದ್ದಾರೆ. ಈ ಸಂದರ್ಭದಲ್ಲಿ ಸರ್ವಜ್ಞನ ಒಂದು ನುಡಿ ನೆನಪಾಗುತ್ತದೆ:

> ಹೇಳಿದ್ದೆ ಹೇಳುವರು । ಕೇಳಿದ್ದೆ ಕೇಳುವರು।
> ಕೇಳಿದ್ದೆ ಕೇಳಿ ಸುಖಿಸುವರು ಗುರುಗಳಾ।
> ಹೇಳಿಕೆಯೆ ಬೇರೆ ಸರ್ವಜ್ಞ

---

* ಚೆನ್ನವೀರ ಕಣವಿ, 'ಚೆಂಬೆಳಕು' ಕಲ್ಯಾಣನಗರ, ಧಾರವಾಡ - ೫೮೦ ೦೦೭.

'ಡಾ। ಬೆಸಗರಹಳ್ಳಿ ರಾಮಣ್ಣನವರ ಸಾಹಿತ್ಯ
ಮತ್ತು ಗ್ರಾಮೀಣ ಸಂಸ್ಕೃತಿ'

ವಿಚಾರ ಸಂಕಿರಣ : ೬.೯.೧೯೯೮ ಮಂಡ್ಯ

ಕನ್ನಡ ಸಣ್ಣಕಥೆ ಮತ್ತು ಗ್ರಾಮೀಣ ಸಂಸ್ಕೃತಿ

– ಸುಧಾಕರ

ಡಾ। ಬೆಸಗರಹಳ್ಳಿ ರಾಮಣ್ಣನವರ ನಿಧನಾನಂತರ ಮಂಡ್ಯದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡಿರುವ ವಿಚಾರಸಂಕಿರಣದಲ್ಲಿ ರಾಮಣ್ಣನವರ ಕಥೆಗಳಿಗೆ ಸಂಬಂಧಿಸಿದಂತೆ ಮೇಲಿನ ವಿಷಯಕ್ಕೆ ಪ್ರವೇಶ ಮಾಡುವ ಮೊದಲು ನನ್ನ ಅವರ ಮೊದಲ ಭೇಟಿಯಂದು ಅವರು ಆಡಿದ ಮಾತುಗಳನ್ನು ಇಲ್ಲಿ ದಾಖಲಿಸುವುದು ಸೂಕ್ತವೆಂದು ಭಾವಿಸಿದ್ದೇನೆ.

೧೯೬೦ರಲ್ಲಿ ನಾನು ಕನ್ನಡ ಎಂ.ಎ.ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯ ವಿದ್ಯಾರ್ಥಿ ವಿಭಾಗದಲ್ಲಿ 'ಸಾಕಿದ ನಾಯಿ' ಎಂಬ ನನ್ನ ಕಥೆಗೆ ಪ್ರಥಮ ಬಹುಮಾನ ಬಂದಿತು. ೧೯೬೧ರಲ್ಲಿ ನಾನು ದ್ವಿತೀಯ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯ ಸಾರ್ವಜನಿಕ ವಿಭಾಗದಲ್ಲಿ 'ಕಣ್ಣಕಿತ್ತ ಹಸು' ಎಂಬ ನನ್ನ ಕಥೆಗೆ ದ್ವಿತೀಯ ಬಹುಮಾನ ಬಂದಿತು. ೧೯೬೨ರಲ್ಲಿ ನಾನು ಎಂ.ಎ. ಮುಗಿಸಿದ ವರ್ಷ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯ ಸಾರ್ವಜನಿಕ ವಿಭಾಗದಲ್ಲಿ 'ಹೊರಲಾರದ ಹೊರೆ', ಎಂಬ ನನ್ನ ಕಥೆಗೆ ಪ್ರಥಮ ಬಹುಮಾನ ಬಂದಿತು. ಮೆಚ್ಚುಗೆ ಪಡೆದ ಕಥೆಗಳಲ್ಲಿ ಬೆಸಗರಹಳ್ಳಿ ರಾಮಣ್ಣನವರ 'ಹಾವಿಲ್ಲದ ಹುತ್ತ' ಎಂಬ ಕಥೆಯೂ ಒಂದಾಗಿತ್ತು. ನಾನು ಅದೇ ತಾನೇ ಮಂಡ್ಯ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಸೇರಿಕೊಂಡಿದ್ದೆ. ಬೆಸಗರಹಳ್ಳಿ ಮಂಡ್ಯ ಜಿಲ್ಲೆಯ ಒಂದು ಊರು ಎಂಬುದು ಗೊತ್ತಿದ್ದರೂ ಬೆಸಗರಹಳ್ಳಿ ರಾಮಣ್ಣ ಯಾರು ಎಂಬುದು ನನಗೆ ಗೊತ್ತಿರಲಿಲ್ಲ, ಪರಿಚಯವಿರಲಿಲ್ಲ. ಒಂದು ದಿನ ನಾನು ಕಾಲೇಜು ಮುಗಿಸಿಕೊಂಡು ಯಾವುದೋ ಕೆಲಸದ ನಿಮಿತ್ತ ಮಂಡ್ಯದಿಂದ ಮೈಸೂರಿಗೆ ಬಸ್ಸು ಹತ್ತಿ ಮುಂಭಾಗದ ಎರಡನೇ ಸಾಲಿನ ಸೀಟಿನಲ್ಲಿ ಕುಳಿತಿದ್ದೆ. ಸಾಮಾನ್ಯವಾಗಿ ಕಾಲೇಜಿನ ಉಪನ್ಯಾಸಕರು ಅಂದು ಧರಿಸುತ್ತಿದ್ದ ಸೂಟು ಬೂಟು ಟೈ ದಿರಸಿನಲ್ಲಿದ್ದೆ. ಪ್ರಯಾಣಿಕರನ್ನು ಇಳಿಸಲು ಬಸ್ಸು ಶ್ರೀರಂಗಪಟ್ಟಣದಲ್ಲಿ ನಿಂತಾಗ ಹಿಂದಿನ ಸೀಟಿನಿಂದ ಎದ್ದು ಬಂದು "ನಾನು ಬೆಸಗರಹಳ್ಳಿ ರಾಮಣ್ಣ ಅಂತ. ಎಂ.ಬಿ.ಬಿ.ಎಸ್.ನಲ್ಲಿ ಓದುತ್ತಿದ್ದೇನೆ, ಗ್ರಾಮೀಣ ಬದುಕನ್ನು ಗ್ರಾಮೀಣ ಭಾಷೆಯಲ್ಲಿಯೇ ಸಶಕ್ತವಾಗಿ ಚಿತ್ರಿಸಿರುವ ನಿಮ್ಮ 'ಸಾಕಿದ ನಾಯಿ' 'ಕಣ್ಣಕಿತ್ತ ಹಸು' ಕಥೆಗಳನ್ನು ಓದಿದ ಮೇಲೆ, ಏಕೆ ನಾನೂ ಸಹ ನನ್ನ ಗ್ರಾಮೀಣಾನುಭವವನ್ನು ಸಣ್ಣಕತೆಯ ರೂಪದಲ್ಲಿ ಬರೆಯಬಾರದು ಎನ್ನಿಸಿ 'ಹಾವಿಲ್ಲದ ಹುತ್ತ' ಎಂಬ ಮೊದಲ ಕತೆಯನ್ನು ಬರೆದೆ. ಈ ವರ್ಷ ಅದು ಮೆಚ್ಚುಗೆ ಪಡೆದ ಕಥೆಗಳಲ್ಲಿ ಒಂದಾಗಿದೆ, ನೀವು ನೋಡಿರಬಹುದು. ಅದು ಹಾಗಿರಲಿ, ಆದರೆ ನಿಮ್ಮ

‘ಹೊರಲಾರದ ಹೊರೆ’ ಯಂಥ ಸರ್ವಾಂಗ ಸುಂದರ ಕಥೆಯನ್ನು ಹಿಂದೆ ಯಾರೂ ಬರೆದಿಲ್ಲ, ಮುಂದೆ ಯಾರೂ ಬರೆಯಲು ಸಾಧ್ಯವಿಲ್ಲ. ಒಳಗೊಂದು ಹೊರಗೊಂದು ಆಡದ, ಸುಳ್ಳು ತಟವಟ ಗೊತ್ತಿಲ್ಲದ ಹಳ್ಳಿಯ ಅಪ್ಪಟ ಮಣ್ಣಿನಮಗನಾದ ನನ್ನ ದಿಟ್ಟ ಮಾತಿದು, ದಿಟದ ಮಾತಿದು” ಎಂದು ನನ್ನೆರಡು, ಕೈಗಳನ್ನೂ ಹಿಡಿದು ಕುಲುಕಿದರು. ನಾನು ಸಂತೋಷವನ್ನು ಸೂಚಿಸಿ, “ಬರೆಯುವುದನ್ನು ಬಿಡಬೇಡಿ, ಹಳ್ಳಿಯ ಬದುಕನ್ನು ಅನಾವರಣ ಮಾಡಿ. ಆದರೆ ಒಂದು ಮಾತು, ಸಂಸ್ಕೃತಭೂಯಿಷ್ಠ ಶಿಷ್ಟ ಭಾಷೆಯನ್ನು ಬಳಸಬೇಡಿ, ಅದು ಗ್ರಾಮೀಣ ಬದುಕಿನ ಮೈಗಂಟಿದ ಚರ್ಮ ಎನ್ನಿಸದೆ, ಮೆಟ್ಟಿದ ದೊಗಲೆ ಮೆಟ್ಟುಗಳಂತೆ ‘ಎತ್ತು ಏರಿಗೆ ಕೋಣ ನೀರಿಗೆ’ ಎಳೆಯುವಂತ ಎಳೆದಾಟದಲ್ಲಿ ನರಳುವಂತಾಗುತ್ತದೆ. ನಾನು ನವೋದಯ ಅಥವಾ ನವ್ಯ ಯಾವುದನ್ನೂ ಪರಿಗಣಿಸದೆ ಶಿಷ್ಟ ಭಾಷೆಗೆ ಪ್ರತಿರೋಧವಾಗಿ ಆಡುಮಾತನ್ನು ಬಳಸಿ ಗ್ರಾಮೀಣ ಸಂಸ್ಕೃತಿಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದೇನೆ. ನೀವೂ ಅದೇ ದಾರಿಯಲ್ಲಿ ಸಾಗುವುದು ಒಳ್ಳೆಯದು.” ಎಂದೆ. ಆಗಲಿ ಎಂದರು. ಅಂದು ಅವರು ನನ್ನ ‘ಹೊರಲಾರದ ಹೊರೆ’ ಕಥೆಯ ಬಗೆಗೆ ಅಮಿತಾನಂದದಲ್ಲಿ ಹೇಳಿದ ಮಾತುಗಳು ಸತ್ಯ ಎಂಬುದಕ್ಕೆ ಅವರು ತಮ್ಮ ಸಮಗ್ರ ಕಥೆಗಳು ಸಂಕಲನದಲ್ಲಿ (ಕನ್ನಂಬಾಡಿ) “ಹೊರಲಾರದ ಹೊರೆ” ಎಂಬ ಸುಧಾಕರರ ಕಥೆಗೆ ಪ್ರಥಮ ಬಹುಮಾನ ಬಂದಿತ್ತು. ಈ ಕಥೆಯನ್ನು ನಾನು ಸುಮಾರು ಸಲ ಓದಿ ಓದಿ ಆನಂದಿಸಿದೆ. ಹಳ್ಳಿಗಾಡಿನ ಭಾಷೆಯನ್ನು ಇಷ್ಟೊಂದು ಸಮರ್ಥವಾಗಿ ಸಾಹಿತ್ಯದಲ್ಲಿ ಯಾರೂ ಇಲ್ಲಿಯವರೆಗೆ ಇವರ ಹಾಗೆ ಉಪಯೋಗಿಸಿರಲಿಲ್ಲ. ಕಥೆಯ ಹೆಸರು, ವಸ್ತು, ಭಾಷೆ, ಕತೆಯ ಅಂತ್ಯ ನನ್ನನ್ನು ಹುಚ್ಚನನ್ನಾಗಿ ಮಾಡಿದವು. ಬರೆದರೆ ಇಂಥದೊಂದು ಕತೆಯನ್ನು ಬರೆಯಬೇಕು ಎನ್ನಿಸಿತು” ಎಂದು ಹೇಳಿರುವುದು ಪೂರಕವಾಗಿ ಸಿಲ್ಲುತ್ತದೆ.

ಮೇಲಿನ ನನ್ನ ಅವರ ಅನಿರೀಕ್ಷಿತ ಭೇಟಿಯ ಮಾತುಕತೆಯನ್ನು ನಾನಿಲ್ಲಿ ದಾಖಲಿಸಿರುವುದು ಅವರ ಕತೆಗಳ ನಾಡಿಮಿಡಿತ ಹಾಗೂ ಗ್ರಾಮೀಣ ಬದುಕಿನ ತುಡಿತಗಳಿಗೆ ಪ್ರವೇಶದ್ವಾರವಾಗಿ ಪರಿಣಮಿಸುತ್ತದೆ ಎಂಬ ಆಶಯದಿಂದ ಮಾತ್ರ ಎಂಬುದನ್ನು ಹೇಳಬಯಸುತ್ತೇನೆ.

ನಾನು, ತೇಜಸ್ವಿ, ಲಂಕೇಶ, ಬೆಸಗರಹಳ್ಳಿ ರಾಮಣ್ಣ ಮೊದಲಾದವರು ಕಥೆಯನ್ನು ಬರೆಯ ತೊಡಗಿದ ಕಾಲ ನವೋದಯದ ಇಳಿಹೊತ್ತು, ನವ್ಯದ ಏರುಹೊತ್ತು. ನಾನು ಆ ಗುಂಪಿಗೂ ಸೇರದೆ, ಈ ಗುಂಪಿಗೂ ಸೇರದೆ, ನಾನು ಹುಟ್ಟಿದ ನೆಲದ ದನಿಯ ‘ಸೊಂಪು ಇಂಪಿನ’ ಗುಂಪಿಗೇ ಅಂಟಿಕೊಂಡೆ. ಗ್ರಾಮೀಣ ಬದುಕು ಭಾಷೆಗೆ ಹೆಗಲೆಣೆಯಾಗಿ ಅಥವಾ ಇನ್ನೂ ಒಂದು ಕೈ ಮೇಲಾಗಿ ಸಾಹಿತ್ಯಲೋಕದ ಗಾದಿಯೇರಿ ವಿರಾಜಿಸಬೇಕು ಎಂದು ‘ನೋಂಪಿ’ ಕೈಗೊಂಡವನಂತೆ ಬರೆಯತೊಡಗಿದೆ. ಡಾ. ಬೆಸಗರಹಳ್ಳಿ ರಾಮಣ್ಣನವರೂ ಕೂಡ ಹೆಚ್ಚೂ ಕಡಮೆ ಅದೇ ‘ನೋಂಪಿ’ಯನ್ನು ಕೈಗೊಂಡು ಬರೆಯತೊಡಗಿದರು ಎಂಬುದು ಅವರ ಕಥೆಗಳನ್ನು ಓದಿದಾಗ ಗೊತ್ತಾಗುತ್ತದೆ. ಆ ವಿಶ್ಲೇಷಣೆಗೆ ಇಳಿಯುವ ಮೊದಲು ಕೆಲವು ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ.

ಸಾಮಾನ್ಯವಾಗಿ ವಿಮರ್ಶಕರ, ‘ಈ ಕಾದಂಬರಿ ಪ್ರಾದೇಶಿಕ ಕಾದಂಬರಿಗಳ ಸಾಲಿಗೆ ಹೊಸ ಸೇರ್ಪಡೆ’ ಎಂದೋ, ‘ಈ ಕಥೆಯಲ್ಲಿ ಪ್ರಾದೇಶಿಕತೆಯ ಸೊಗಸು ಮೂಗಿಗೆ ಘಂ ಎಂದು ಹೊಡೆಯುತ್ತದೆ’ ಎಂದೋ ನೀತಿಕತೆಗಳ ಅಂತ್ಯದಲ್ಲಿ ನೀತಿವಾಕ್ಯವನ್ನು ದಾಖಲಿಸುವಂತೆ ವಿಮರ್ಶೆಯ ಅಂತ್ಯದಲ್ಲಿ ದಾಖಲಿಸಿರುವುದುಂಟು - ಆದರೆ ಈ ಪ್ರಾದೇಶಿಕತೆಯ ವಿಳಾಸವೇನು? ಚಹರೆಪಟ್ಟಿ ಏನು? ಆ ಪ್ರದೇಶದ ಚಕ್‌ಬಂದ್ ಯಾವುದು? ಅದನ್ನು ಅಳೆಯುವ ಅಳತೆಗೋಲು ಯಾವುದು? ಇತ್ಯಾದಿ ತಾತ್ವಿಕ ಚರ್ಚೆಯಿಂದ ಚೋದಿತವಾಗಿಲ್ಲ ಅವರ ವಿಮರ್ಶಾ ಹೇಳಿಕೆ. ಆದ್ದರಿಂದ ಪ್ರಸ್ತುತದಲ್ಲಿ ಈ ಮೂಲಭೂತ ಪ್ರಶ್ನೆಗಳನ್ನೆತ್ತಿಕೊಂಡು ನಾವು ಮುಂದುವರಿಯುವುದು ವಿಹಿತ, ಆಗತ್ಯ.

ಸಾಮಾನ್ಯವಾಗಿ ಕುವೆಂಪು ಅವರ ಎರಡು ಕಾದಂಬರಿಗಳನ್ನು, ಕಾರಂತರ ಕೆಲವು ಕಾದಂಬರಿಗಳನ್ನು, ಚದುರಂಗರ ವೈಶಾಖ ಕಾದಂಬರಿಯನ್ನು, ರಾವ್‌ಬಹಾದ್ದೂರರ ಗ್ರಾಮಾಯಣ ಕಾದಂಬರಿಯನ್ನು ಹೀಗೆಯೇ ಇನ್ನೂ ಹಲವರ ಕಾದಂಬರಿಗಳನ್ನು ಪ್ರಾದೇಶಿಕ ಕಾದಂಬರಿಗಳೆಂದು ಹೆಸರಿಸುತ್ತೇವೆ. ಆದರೆ ನವ್ಯ ಕಾದಂಬರಿಗಳಾದ ಗಿರಿ ಅವರ 'ಗತಿಸ್ಥಿತಿ' ಯನ್ನಾಗಲೀ ಶೌರಿಯವರ 'ಹಳದಿ ಮೀನ'ನ್ನಾಗಲೀ, ಲಂಕೇಶರ 'ಬಿರುಕ' ನ್ನಾಗಲೀ ಪ್ರಾದೇಶಿಕ ಕಾದಂಬರಿಗಳೆಂದು ಹೆಸರಿಸುವುದಿಲ್ಲ - ಏಕೆ? ಮೊದಲು ಹೆಸರಿಸಿದಂಥವು ಗ್ರಾಮೀಣ ಪ್ರದೇಶದ ಅಥವಾ ಅಶಿಕ್ಷಿತ ಸಮಾಜದ ಅನನ್ಯವೂ ವಿಶಿಷ್ಟವೂ ಆದ ವಸ್ತುವನ್ನೊಳಗೊಂಡಿವೆ ಎಂಬ ಕಾರಣದಿಂದ ಪ್ರಾದೇಶಿಕವೆ? ಎರಡನೆಯ ಸಾಲಿನಲ್ಲಿ ಹೆಸರಿಸಿದಂಥವು ನಗರ ಪ್ರದೇಶದ ಅಥವಾ ಸುಶಿಕ್ಷಿತ ಸಮಾಜದ ಮಾಮೂಲಿ ಅಥವಾ ಸಾಧಾರಣ ವಸ್ತುವನ್ನೊಳಗೊಂಡಿವೆ ಎಂಬ ಕಾರಣದಿಂದ ಪ್ರಾದೇಶಿಕ ಅಲ್ಲವೆ? ಹಾಗಾದರೆ ಗ್ರಾಮೀಣ ಪ್ರದೇಶದ ವಸ್ತುವಿನಲ್ಲಿ ವಿಶಿಷ್ಟತೆ ಇರುವಂತೆ ನಗರ ಪ್ರದೇಶದ ವಸ್ತುವಿನಲ್ಲೂ ವಿಶಿಷ್ಟತೆ ಇರುವುದಿಲ್ಲವೆ? ಗ್ರಾಮೀಣ ಪ್ರದೇಶದಂತೆ ನಗರ ಪ್ರದೇಶವೂ ಒಂದು ಪ್ರದೇಶವಲ್ಲವೆ? ಎಂಬ ಪ್ರಶ್ನೆ ಎದುರಾಗಲು ಸಾಧ್ಯ.

ಎರಡನೆಯದಾಗಿ, ಪ್ರಾದೇಶಿಕತೆಯನ್ನು ಗುರುತಿಸುವ ಪರಿಕರಗಳು ಯಾವುವು? ವಸ್ತುವೆ? ಅದಕ್ಕೆ ಹಿನ್ನೆಲೆಯಾದ ಆವರಣವೆ? ಅದರಲ್ಲಿ ತೇಲುವ ಪಿತ್ರಾರ್ಜಿತ ನೆಲದ ಸಂಸ್ಕೃತಿಯ ಕೆನೆಯೆ? ಬಳಕೆಯಾಗುವ ಭಾಷೆಯೆ? ಯಾವುದೇ ಒಂದು ಪರಿಸರ ಸಾಲದು; ಈ ಎಲ್ಲವುಗಳ ಸಾವಯವ ಸಂಬಂಧ ಸುಸಂಬದ್ಧವಾಗಿ ಇದ್ದಾಗ ಮಾತ್ರ ಸಾಧ್ಯ ಎಂದು ಹೇಳಬಹುದೆ?

ಮೂರನೆಯದಾಗಿ, ಬಳಸುವ ಭಾಷೆ ಪ್ರಾದೇಶಿಕತೆಯನ್ನು ಗುರುತಿಸುವಲ್ಲಿ ವಸ್ತು ಆವರಣಗಳಿಗಿಂತ ಒಂದು ಕೈ ಮೇಲು ಎಂಬುದನ್ನು ಕಡೆಗಣಿಸುವಂತಿಲ್ಲ. ಏಕೆಂದರೆ ಭಾಷೆಯಲ್ಲಿ ಭೌಗೋಳಿಕ ಪರಿಸರ, ಸಾಮಾಜಿಕ ಸ್ಥಿತ್ಯಂತರ, ಅರೆಕೊರೆ, ಅನ್ಯಾಯ ಅಧರ್ಮಗಳನ್ನು ಜಾಹೀರು ಮಾಡುವ ಅಂತಶ್ಶಕ್ತಿ ಅಡಕವಾಗಿರುತ್ತದೆ. ಉದಾಹರಣೆಗೆ ನಮ್ಮ ಕಡೆ (ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ) "ಮೈಗೆ ಎಣ್ಣೆ ಸವರಿಕೊಂಡು ಬಾ" ಎಂದು ಹೇಳುವ ಮಾತುಂಟು. ಅದಕ್ಕೆ ಅರ್ಥ "ನಿನಗೀಗ ಗೂಸ ಬೀಳುತ್ತವೆ, ಬಾಸುಂಡೆಯ ಉರಿ ಶಮನಕ್ಕೆ ಪೂರ್ವಸಿದ್ಧತೆ ಮಾಡಿಕೊಂಡು ಬಾ" ಎಂದು, ಮಲೆನಾಡು ಸಾಗರದ ಕಡೆ "ಬೆನ್ನಿಗೆ ಹಾಳೆ ಕಟ್ಕೊಂಡು ಬಾ" ಎನ್ನುತ್ತಾರೆ. ಇದಕ್ಕೂ ನಮ್ಮ ಕಡೆಯದೇ ಅರ್ಥ. ಆದರೆ ಅಭಿವ್ಯಕ್ತಿ ಬೇರೆ ಬೇರೆ. ಈ ಭಿನ್ನಾಭಿವ್ಯಕ್ತಿ ಭಿನ್ನ ಪ್ರದೇಶದ ಜಾಯಮಾನವನ್ನು ಜಾಲಾಡಿಬಿಡುತ್ತದೆ. ನಮ್ಮ ಕಡೆ ನೀರಾವರಿ ಸೌಲಭ್ಯವಿಲ್ಲ. ಆದ್ದರಿಂದ ಅಡಕೆತೋಟ, ತೆಂಗಿನ ತೋಟಗಳು ಕಡಮೆ. ಮಳೆ ಕಡಮೆಯಾದರೂ ಹರಳುಗಿಡ ಬೆಳೆಯುತ್ತದೆ, ಹರಳೆಣ್ಣೆ ಸಹಜವಾಗಿಯೇ ದೊರೆಯುತ್ತದೆ. ತಲೆಗೆ ಹಾಗೂ ಮೈಗೆ ಬಳಸುತ್ತಾರೆ. ತುಂಬ ಏಟುಬಿದ್ದಾಗ, ಬಾಸುಂಡೆ ಬಂದಾಗ ಉರಿ ಕಡಮೆಯಾಗಲೆಂದು ಹರಳೆಣ್ಣೆಯನ್ನು ಹಚ್ಚುವುದು ರೂಢಿ, ಆಮೇಲೆ ಹಚ್ಚಿಕೊಳ್ಳುವುದನ್ನು ಈಗಲೇ ಹಚ್ಚಿಕೊಂಡು ಬಾ ಎಂದು ನಿದೇಶಿಸುತ್ತದೆ ಮೇಲೆ ಉದಾಹರಿಸಿರುವ ನಮ್ಮ ಕಡೆಯ ನುಡಿಗಟ್ಟು. ಮಲೆನಾಡು ಸಾಗರಗಳ ಕಡೆ ಮಳೆ ಜಾಸ್ತಿ. ನೀರಿನ ಸೌಲಭ್ಯ ಸಮೃದ್ಧ. ಆದ್ದರಿಂದ ಗೌಡರ, ಹವ್ಯಕ ಬ್ರಾಹ್ಮಣರ ಅಡಕೆ ತೆಂಗಿನ ತೋಟಗಳು ಜಾಸ್ತಿ. ಅಡಕೆ ಪಟ್ಟೆ (ಹಾಳೆ)ಗೆ ಬರವೇ ಇಲ್ಲ ಅವರಿಗೆ. ಟೋಪಿಗೂ ಅದೇ, ಸಮಯಬಿದ್ದರೆ ದನಗಳ ಗಂಜಳ ಹಿಡಿಯುವುದಕ್ಕೂ ಅದೇ. ಆ ಹಾಳೆಯನ್ನು ಬೆನ್ನಿಗೆ ಕಟ್ಟಿಕೊಂಡರೆ ಲೇಸು, ಬಾಸುಂಡೆಯಾದರೂ ತಪ್ಪುತ್ತದೆ ಎಂದು ನಿರ್ದೇಶಿಸುತ್ತದೆ ಮೇಲೆ ಉದಾಹರಿಸಿರುವ ಮಲೆನಾಡಿನ ಕಡೆಯ ನುಡಿಗಟ್ಟು. ಆದ್ದರಿಂದ ಬಳಸುವ ಭಾಷೆ ಆಯಾ ಪ್ರದೇಶದ ಹಣೆಬರಹವನ್ನು ಅಲಕ್ಕನೆ ಅನಾವರಣ ಮಾಡುತ್ತದೆ.

ಹೀಗೆಯೇ ಒಂದು ಪ್ರದೇಶದ ಸಾಮಾಜಿಕ ಆರ್ಥಿಕ ಅನ್ಯಾಯವನ್ನು ಭಾಷೆ ಗರ್ಭೀಕರಿಸಿಕೊಂಡಿದ್ದು ಸೂಕ್ತ ಸಂದರ್ಭದಲ್ಲಿ ಬಳಕೆಯಾದಾಗ, ಎಲ್ಲವನ್ನೂ ಬಯಲು ಮಾಡಿಬಿಡುತ್ತದೆ ಅಥವಾ ಸೂಕ್ಷ್ಮವಾಗಿ ಸುಳಿವು ಕೊಟ್ಟುಬಿಡುತ್ತದೆ. ಉದಾಹರಣೆಗೆ ನಮ್ಮ ಕಡೆ ಹಬ್ಬಹರಿದಿನದಂದು ಬಡವರ ಮನೆಯ ಮಕ್ಕಳನ್ನು 'ಏನಿವತ್ತು ನಿಮ್ಮನೇಲಿ?' ಎಂದರೆ, ಅವು 'ನಮ್ಮನೇಲಿವತ್ತು ನೆಲ್ಲಕ್ಕಿ ಅನ್ನ' ಎನ್ನುತ್ತವೆ. ನನ್ನ ಕಥೆಯೊಂದರಲ್ಲಿ ಬಂದ ಈ ಸಂಭಾಷಣೆಯ ಬಗೆಗೆ ನಗರದಲ್ಲಿ ಸಾಲ್ಯುಗೋಷ್ಠಿಯ ಮಧ್ಯೆ ಬೆಳೆದ ವೈಚಾರಿಕ ಮುಖವಾಡದ 'ವಿಮರ್ಶಕರೊಬ್ಬರು ಅನ್ನ ಎಂದರೆ ಸಾಲದೆ? ನೆಲ್ಲಕ್ಕಿ ಅನ್ನ ಎನ್ನಬೇಕೆ? ಹೀಗೆ ಭಾಷೆಯ ದುಂದುಮಾಡುವ ಇವರು ಎಂಥ ಸಣ್ಣಕತೆಗಾರರು?' ಎಂದು ಟೀಕಿಸಿದರಂತೆ, ನನ್ನ ಗುರುತಿನವರೊಬ್ಬರ ಜೊತೆ. ಪಾಪ ಅವರಿಗೆ ಹೇಗೆ ಗೊತ್ತಾಗಬೇಕು, ಆ ನುಡಿಗಟ್ಟು ಭೂತವರ್ತಮಾನದ ಇತಿಹಾಸವನ್ನೆಲ್ಲ ತನ್ನ ಗರ್ಭದಲ್ಲಿ ಹೊತ್ತಿದೆ, ಸೂಕ್ತ ಸಂದರ್ಭದಲ್ಲಿ ಬಳಸಿದಾಗ ಅಷ್ಟನ್ನೂ ಹೇರುತ್ತದೆ ಎಂದು! ನಮ್ಮ ಕಡೆ ನೀರಾವರಿ ಸೌಲಭ್ಯ ಇಲ್ಲ. ಇರುವ ಕೌಪೀನದಗಲದ ಕೆರೆಯ ಹಿಂದಿರುವ ಗದ್ದೆ ಶ್ಯಾನುಭೋಗ, ಇಲ್ಲ ಪಟೇಲ, ಇಲ್ಲ ಒಬ್ಬಿಬ್ಬ ಗಟ್ಟಿಕುಳಗಳದ್ದು. ಇನ್ನುಳಿದ ತೊಂಬತ್ತು ಭಾಗ ಆಕಾಶದ ಮಳೆ ಭೂಮಿತಾಯಿ ಬೆಳೆ ಎಂದು ಆಕಾಶ ನೋಡುವವರೆ. ದೇವರು ಕಣ್ಣು ಬಿಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ. ಅವರು ಭತ್ತವನ್ನು ಎಲ್ಲಿ ಬೆಳೆದಾರು? ಮಳೆಯಿಲ್ಲದಾಗ ಬೇರೆ ಹುಲ್ಲು ಬೇಗ ಒಣಗಿದರೂ, ನೆಲದಾಳದಲ್ಲಿ ಜಾಪೆಯಂತೆ ಬೇರು ಹೆಣೆದುಕೊಂಡಿರುವ ಗರಿಕೆ ಹುಲ್ಲು ಬಡಪಟ್ಟಿಗೆ ಒಣಗದೆ ಹೇಗೋ ಜಿಗುಟುತನದಿಂದ ಜೀವ ಉಳಿಸಿಕೊಂಡಿರುವಂತೆ, ಅಲ್ಪಸ್ವಲ್ಪ ಮಳೆಯಾದರೂ ಹೊಲದಲ್ಲಿ 'ಹಾರಕ'ದ ಬೆಳೆ ಆಗುತ್ತದೆ. ಆದ್ದರಿಂದ ಬಡವರಿಗೆ ಅನ್ನವೆಂದರೆ ಅದರದೇ. ಉಗಾದಿಯಂಥದು ವರ್ಷಕ್ಕೊಂದು ಹಬ್ಬ ಬಂದಾಗ, ಅಂದು ಯಾರ ಮನೆಯಲ್ಲಾದರೂ ಕಡ ತಂದೋ ಅಂಗಡಿಯಿಂದ ಕೊಂಡು ತಂದೋ ನೆಲ್ಲಕ್ಕಿ ಅನ್ನ ಮಾಡುತ್ತಾರೆ. ಆ ಬಡಮಕ್ಕಳಿಗೆ ಅಂದು ಎಲ್ಲಿಲ್ಲದ ಹಿಗ್ಗು ಹೆಮ್ಮೆ - ನಮ್ಮ ಮನೆಯಲ್ಲೂ ಇವತ್ತು 'ಹೆಚ್ಚುಗಟ್ಟಲೆ' 'ಪೆಸಲ್' (Special) ಎಂದು! 'ನಮ್ಮನೇಲಿವತ್ತು ನೆಲ್ಲಕ್ಕಿ ಅನ್ನ' ಎಂಬ ನುಡಿಗಟ್ಟು ಬಡಬಗ್ಗರ ತುತ್ತಿನ ಚೀಲದ ಇತಿಹಾಸವನ್ನೇ ನಮ್ಮ ಕಣ್ಣೆದುರು ತಂದು ನಿಲ್ಲಿಸಿಬಿಡುತ್ತದೆ. ಕಣಿವೆಯಾಳದಲ್ಲಿ ಹುಟ್ಟಿ ಶಿಖರವೇರಿದವರಿಗೆ ಇದೆಲ್ಲ ಅರ್ಥವಾಗುತ್ತದೆ. ಶಿಖರದಲ್ಲೆ ಹುಟ್ಟಿ ಕುಬ್ಜರಾಗಿ ಬೆಳೆದವರಿಗೆ ಇವರ ತಲೆಬುಡ ಒಂದೂ ಅರ್ಥವಾಗುವುದಿಲ್ಲ. ಆದ್ದರಿಂದ ಪ್ರಾದೇಶಿಕತೆಯನ್ನು ಅಥವಾ ಗ್ರಾಮೀಣತೆಯನ್ನು ನಿರ್ಧರಿಸುವಲ್ಲಿ ಸಫಲವಾಗಿ ಬಳಸಿದ ಭಾಷೆ ಮುಖ್ಯ ಪಾತ್ರ ವಹಿಸುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಹಾಗೆಯೇ ಪಟ್ಟಣ ಸಂಸ್ಕೃತಿಗೂ ಪಟ್ಟಿ (ಹಟ್ಟಿ=ಹಳ್ಳಿ) ಸಂಸ್ಕೃತಿಗೂ ವ್ಯತ್ಯಾಸವಿದೆ. ಹಳ್ಳಿಯಲ್ಲಿ ಒಂದು ಗುಡಿಸಿಲಿಗೆ ಬೆಂಕಿಬಿದ್ದರೆ, ಜಾತಿಮತ ಲಿಂಗಭೇದ ಲೆಕ್ಕಿಸದೆ ಎಲ್ಲರೂ ತಮ್ಮ ಮನೆಯಲ್ಲಿರುವ ಹಂಡೆ ಗುಂಡಿ ಹರವಿ ಗಡಿಗೆಗಳಲ್ಲಿರುವ ನೀರನ್ನು ತಂದು ಸುರಿದು ಆರಿಸುತ್ತಾರೆ, ಸಾಮೂಹಿಕ ಪ್ರಯತ್ನ ಎದ್ದು ಕಾಣುತ್ತದೆ. ಪಟ್ಟಣದಲ್ಲಿ ಒಂದು ಮನೆಗೆ ಬೆಂಕಿ ಬಿದ್ದು, ಅದನ್ನು ಆರಿಸಲು ನೀರು ಸರಬರಾಜು ಇಲಾಖೆಯವರು ನಲ್ಲಿಯಲ್ಲಿ ನೀರು ಬಿಟ್ಟಾಗ, ಆ ಬೀದಿಯ ಜನ ಹಂಡೆಗುಂಡಿಗಳನ್ನು ತಂದು ತಮ್ಮ ತಮ್ಮ ಮನೆಗೆ ನೀರು ತುಂಬಿಕೊಳ್ಳುತ್ತಾರೆ, ಬೆಳಗ್ಗೆ ಬಿಡುತ್ತಾರೋ ಇಲ್ಲವೋ ಎಂದು! ಅಲ್ಲಿ ಸಮೂಹ ಪ್ರಯತ್ನ ಇಲ್ಲವಾಗಿ, ಸಮೂಹ ಹಿತಕ್ಕಿಂತ ಸ್ವಂತ ಹಿತಕ್ಕೆ ಜೋತು ಬೀಳುವುದನ್ನು ಕಾಣುತ್ತೇವೆ.

ಆದ್ದರಿಂದ ವೈದಿಕ ಸಂಸ್ಕೃತಿ - ದೇಸಿ ಸಂಸ್ಕೃತಿ ಅಥವಾ ಯಜಮಾನ ಸಂಸ್ಕೃತಿ - ಉಪಸಂಸ್ಕೃತಿ, ನಗರ ಸಂಸ್ಕೃತಿ - ಗ್ರಾಮೀಣದ ಸಂಸ್ಕೃತಿ ಇವುಗಳಿಗಿರುವ ವ್ಯತ್ಯಾಸ ಹಾಗೂ ತಿಕ್ಕಾಟಗಳನ್ನು ಗಮನಿಸಬೇಕಾಗುತ್ತದೆ.

ಇನ್ನು ಕಥೆಗಳಲ್ಲಿ ಪ್ರಾದೇಶಿಕತೆ, ಗ್ರಾಮೀಣ ಸಂಸ್ಕೃತಿ ಪ್ರಧಾನವಾಗಿ ನವೋದಯದ ಕುವೆಂಪು, ಮಾಸ್ತಿಯವರ ಕೆಲವು ಕಥೆಗಳಲ್ಲಿ, ನವೋದಯ ನವ್ಯದ ನಡುವಿನ ಕಾಲಘಟ್ಟದಲ್ಲಿ ಬರೆಯತೊಡಗಿದ ತೇಜಸ್ವಿ, ಲಂಕೇಶ, ಸುಧಾಕರ, ಡಾ.ಬೆಸಗರಹಳ್ಳಿ ರಾಮಣ್ಣ ಮೊದಲಾದವರ ಕಥೆಗಳಲ್ಲಿ, ದಲಿತ ಬಂಡಾಯದ ದೇವನೂರು ಮಹಾದೇವ, ಮೊಗಳ್ಳಿ ಗಣೇಶ್ ಅವರ ಕಥೆಗಳಲ್ಲಿ ನಾವು ಕಾಣಬಹುದು. ಪ್ರಸ್ತುತದಲ್ಲಿ ಡಾ. ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಕೆನೆಗಟ್ಟಿ ನಿಂತಿರುವ ಗ್ರಾಮೀಣ ಸಂಸ್ಕೃತಿಯ ಪರಿಶೀಲನೆ ಮುಖ್ಯವಾದದ್ದು.

ವಸ್ತು, ಆವರಣ, ಬಳಕೆಯಾದ ಭಾಷೆ - ಈ ಹಿನ್ನೆಲೆಯಲ್ಲಿ ರಾಮಣ್ಣನವರ ಕಥೆಗಳು ಬಹುತೇಕ ಗ್ರಾಮಭಾರತ, ಗ್ರಾಮರಾಮಾಯಣ ಅರ್ಥಾತ್ ಗ್ರಾಮಾಯಣ. ಗ್ರಾಮೀಣ ಸಂಸ್ಕೃತಿ ಸೂಕ್ಷ್ಮರೂಪಿಯೂ ಆಗಿರಬಹುದು, ರೂಕ್ಷರೂಪಿಯೂ ಆಗಿರಬಹುದು. ಅದನ್ನು ರಾಮಣ್ಣನವರು ಅನಾಮತ್ತು ಗೋರಿ ತಮ್ಮ ವಿವಿಧ ಕಥೆಗಳ ಬಟ್ಟಲುಗಳಲ್ಲಿ ತುಂಬಿಕೊಟ್ಟಿದ್ದಾರೆ. ಯಕ್ಷಗಾನ ಬಯಲಾಟಗಳ ರೂಕ್ಷಕುಣಿತದಂತೆ ಭಾಷೆಯನ್ನು ಬಳಸಿದ್ದಾರೆ, ಯಜಮಾನ ಸಂಸ್ಕೃತಿಯ ನುಡಿನಡವಳಿಗೆ ಹೆದರಿ ಉಪಸಂಸ್ಕೃತಿಯ ನುಡಿನಡಾವಳಿಯನ್ನು ಮಣ್ಣುಮಾಡಲು ಹೋಗಿಲ್ಲ. ಅದರೊಳಗಿನ ಜೀವಧಾತುವನ್ನು ಧೈರ್ಯವಾಗಿ ತೆರೆದಿಟ್ಟಿದ್ದಾರೆ; ಮಡಿಮೈಲಿಗೆಗೆ ಎಳ್ಳುನೀರು ಬಿಟ್ಟು ಸೆರೆಹಿಡಿದು ಕೊಟ್ಟಿದ್ದಾರೆ; ನಾಲಗೆ ಮೈಲಿಗೆಯಾಗಿ ಕಂಡರೂ ಗುಂಡಿಗೆ ಮಡಿಯಾಗಿರುವುದನ್ನು ಕಂಡರಿಸಿದ್ದಾರೆ.

ಕೇವಲ ಸ್ಥಗಿತ ಗ್ರಾಮೀಣ ಬದುಕಿಗೆ ಜೋತುಬಿದ್ದಿಲ್ಲ. ಬದಲಾಗಿ ಬದಲಾವಣೆಗೆ ಪಕ್ಕಾದ ಚಲನಶೀಲ ಬದುಕನ್ನು ಕಟ್ಟಿಕೊಡಲು ತೊಡಗಿರುವುದು ಮೆಚ್ಚಬೇಕಾದ ಅಂಶ. ಏಕೆಂದರೆ ಲಾಗಾಯ್ತಿನಿಂದ, ನಿರಂತರ ಶೋಷಣೆಗೆ, ದಮನಕ್ಕೆ ಒಳಗಾದ ಅಶಿಕ್ಷಿತ ನಿರ್ಗತಿಕ ಸಮಾಜದ ಗರ್ಭದಿಂದಲೇ ಆವಿರ್ಭವಿಸುವ ಎಚ್ಚೆತ್ತ ಪ್ರಜ್ಞೆಯ ಪ್ರತಿಭಟನೆ ಹೋರಾಟಗಳ ಉದಯರವಿ ಕಿರಣಗಳನ್ನು, ಕಾರ್ಮೋಡದ ಗರ್ಭದೊಳಗೆ ಪಳಂಚಿಸುವ ಸೆಳೆಮಿಂಚಿನ ಗೊಂಚಲನ್ನು ಓದುಗರು ದರ್ಶಿಸುವಂತೆ ಮಾಡಿದ್ದಾರೆ; ಶೋಷಕ - ಶೋಷಿತ, ಧಣಿ - ದಲಿತ ತಿಕ್ಕಾಟದ 'ಚಕಮಕಿಕಲ್ಲಿ' ನಲ್ಲಿ ಕಿಡಿ ಏಳುವುದನ್ನು ಕಾಣಿಸಿದ್ದಾರೆ. ಆದ್ದರಿಂದ ಗ್ರಾಮೀಣ ಸಂಸ್ಕೃತಿಯ ಮೂಲಬೇರಿನ ದರ್ಶನವನ್ನು ಕೆಲವು ಕಥೆಗಳಲ್ಲಿ ಕಂಡರಿಸಿದ್ದರೆ, ಆ ಮೂಲಬೇರಿನಿಂದಲೇ ಮೂಡಿದ ಹೊಸ ಚಿಗುರಿನ ದರ್ಶನವನ್ನು ಇನ್ನೂ ಕೆಲವು ಕಥೆಗಳಲ್ಲಿ ಕಂಡರಿಸಿದ್ದಾರೆ.

ಮೂಲ ಬೇರಿನ ಸಂಸ್ಕೃತಿಯನ್ನು ಕಟ್ಟಿಕೊಡುವಂಥ ಕಥೆಗಳೆಂದರೆ ಸುಗ್ಗಿ, ಮಹಾನವಮಿ, ದೇವರ ಹಣ, ಅವ್ವ, ಅಭಿಮಾನ, ನೆಲದ ಉಸಿರು, ತಾಯಿ, ಬೇಲ ಮೊದಲಾದವು.

ತಲೆ ತಲಾಂತರನಿಂದ ಸಂಭ್ರಮ ಸಂತೋಷಗಳಿಂದ ಕಣದಲ್ಲಿ ಹಿರಿಯರಿಂದ ಪೂಜೆ ಮಾಡಿಸಿ ಧಾನ್ಯವನ್ನು ಮನೆಗೆ ಕೊಂಡೊಯ್ಯುವ ಸಂದರ್ಭದಲ್ಲಿ ತಮ್ಮ ಎನ್ನಿಸಿಕೊಂಡವನು ಮನೆ ಭಾಗ ಆಗಬೇಕು, ರಾಶಿ ಭಾಗ ಆಗಬೇಕು ಎಂದು ಪಟ್ಟು ಹಾಕಿದ್ದರಿಂದ ಮೂಗುಬ್ಬಸದ ವಾತಾವರಣ ಉಂಟಾಗಿ ಹೆತ್ತತಾಯಿ, ಅಣ್ಣ, ಆಳುಕಾಳುಗಳು ಮೂಕರಾಗಿ ಕಳಾಹೀನರಾಗಿ ಒಂದೊಂದು ದಿಕ್ಕಿನತ್ತ ಮುಖ ಮಾಡಿ ಕುಳಿತಿದ್ದಾಗ, ಪರಂಪರೆಯ ರಾಶಿಪೂಜೆಯ ಪಾವಿತ್ರ್ಯವೆಲ್ಲ ಕಣ್ಮುಂದೆ ಸುಳಿದು, ಸನ್ನಿಹಿತ ಸನ್ನಿವೇಶದ ಮುಹೂರ್ತದಿಂದಲೇ ಮನೋಪರಿವರ್ತನೆಯಾದವನಂತೆ, ರಾಶಿಯನ್ನು ಭಾಗ ಮಾಡಿದ ಮೇಲೆಯೇ ಪೂಜೆಯಾಗಬೇಕು ಎಂಬ ಮೊದಲಿನ ಪಟ್ಟನ್ನು ಬಿಟ್ಟು, 'ಅಣ್ಣನ್ನ ಕರಿ ರಾಶಿಪೂಜೆ ಮಾಡಲಿ' ಎಂದು ಆಳೊಬ್ಬನಿಗೆ ಹೇಳುವುದು, ಅಲ್ಲಿವರೆಗೆ ಉಸಿರುಕಟ್ಟಿದಂತಿದ್ದ ಇಕ್ಕಟ್ಟು ಬಿಕ್ಕಟ್ಟುಗಳೆಲ್ಲ ಎಕ್ಕುಟ್ಟಿ ಹೋಗಿ ಒಕ್ಕಟ್ಟು ಮೂಡಿ ಎಲ್ಲರ ಮುಖದಲ್ಲಿ ಗೆಲುವು ಝುಗಝುಗಿಸುವುದು, ಕೊಳಗವನ್ನು ತೆಗೆದುಕೊಂಡು ಅಣ್ಣ ಭತ್ತವನ್ನು ಅಳೆಯುವಾಗ ಒಂದು ಎನ್ನದೆ 'ಹೆಚ್ಚಲಿ' ಎಂದು ಪ್ರಾರಂಭಿಸುವುದು, ತಮ್ಮನಿಗೆ ಗಂಡುಮಗುವಾದ ಸುದ್ದಿ ಮಾವನ ಮನೆಯಿಂದ

ಅದೇ ವೇಳೆಗೆ ಬಂದು ಮುಟ್ಟುವುದು - ಎಲ್ಲವೂ ಮನಸ್ಸಿನ ವಿರಸದ ಧೂಳು ಉಬ್ಬಲನ್ನು ತೂರಿ ಸರಸದ ರಾಶಿ ಮೂಡಿದ ಸುಗ್ಗಿಯ ಸಂಭ್ರಮವಾಗಿ ಪರಿಣಮಿಸುವುದನ್ನು ಕಾಣುತ್ತೇವೆ. 'ಮಹಾನವಮಿ' ಎಂಬ ಕಥೆಯಲ್ಲಿ ಹಬ್ಬ ಮಾಡಲು ಕೈಲಿ ಚಿಕ್ಕಾಸಿಲ್ಲದ ಬಡಬಗ್ಗರು ಭಾರತದ ಮೇಲೆ ಪಾಕಿಸ್ತಾನ ಯುದ್ಧಕ್ಕೆ ನಿಂತಿರುವುದನ್ನು ಕೇಳಿ, ನಮ್ಮ ದೇಶದ ಹಿತಕ್ಕಾಗಿ ನಮ್ಮ ಪಾಲನ್ನು ಕೈಲಾದಷ್ಟು ಕಟ್ಟೋಣ ಎಂದು, ಕಷ್ಟಪಟ್ಟು ಹೊಂದಿಸಿಕೊಂಡಿದ್ದ ಹಣವಲ್ಲೇ ತಾಲ್ಲೂಕು ಕಛೇರಿಯಲ್ಲಿ ಯುದ್ಧದ ಫಂಡಿಗೆ ಎಂದು ಅರ್ಧ ಹಣ ಕಟ್ಟಿ, ಉಳಿದರ್ಧ ಹಣದಲ್ಲಿಯೇ ಹಬ್ಬ ಮಾಡಲು ಅಣಿಯಾದ ಹಳ್ಳಿಗಾಡಿನ ಅಶಿಕ್ಷಿತ ಬಡಬಗ್ಗರ ಹೃದಯ ಶ್ರೀಮಂತಿಕೆ ಅನ್ಯರಿಗೆ ಮಾದರಿಯಾಗಿ ನಿಲ್ಲುವಂಥದು; ಕಡುಲೋಭಿಗಳಿಗೆ ಕಣ್ಣು ತೆರೆಸುವಂಥದು. ಯಾವಾಗಲೂ ಗ್ರಾಮೀಣ ಸಂಸ್ಕೃತಿ 'ತಿರ್ಕೊಂಡು ಬಂದ್ರೂ ಕರ್ಕೊಂಡುಣ್ಣು' ಎನ್ನುವಂಥದು.

ದೇವರಿಗೆಂದು ಬಿಡಿಸಿಕೊಂಡ ಹೂವಿನ ವಿಷಯವಾಗಿ, ಬಿಡಿಸಿಕೊಂಡ ಹೆಣ್ಣಿಗೂ, ತೋಟದ ಒಡತಿಗೂ ಮಾತಿನ ಚಕಮಕಿಯಾಗಿ, ಜಗಳದ ಸುರಿಮಳೆಯಾಗಿ ಕೋರ್ಟಿನ ಮೆಟ್ಟಿಲು ಹತ್ತುವ ಹಂತ ತಲುಪಿದಾಗ, ಊರ ಯಜಮಾನರ ಮಧ್ಯಸ್ತಿಕೆ ಹಾಗೂ ಬುದ್ಧಿವಾದದಿಂದಾಗಿ ಆ ಇಬ್ಬರು ಹೆಂಗಸರ ಹೃದಯದ ಗುಹಾಂಧಕಾರದಲ್ಲಿ ಜ್ಯೋತಿ ಬೆಳಗಿದ್ದನ್ನು 'ದೇವರಹೂವು' ಕಥೆ ಚಿತ್ರಿಸುತ್ತದೆ. ಅಂದರೆ ಊರ ಅರಳಿಕಟ್ಟೆ ಅಥವಾ ಚಾವಡಿಯಲ್ಲೇ ಎಲ್ಲ ವ್ಯಾಜ್ಯಗಳನ್ನು ಊರಿನವರೇ ಪರಿಹರಿಸುವ ಸಂಸ್ಕೃತಿ ನಮ್ಮ ಗ್ರಾಮಗಳಲ್ಲಿತ್ತು. ಅಂಥದರ ಚಿತ್ರಣ ಇಲ್ಲಿದೆ. ಆದರೆ ಇಂದು ಊರ ಯಜಮಾನರ ಮಾತಿಗೆ ಕಿವಿಗೊಡದೆ ಕೋರ್ಟಿನ ಕಟ್ಟೆ ಏರುವ ಸಂಸ್ಕೃತಿ ಕಾಲಿರಿಸಿದೆ.

ಅವ್ವ ಎಂಬ ಕಥೆ ಮನುಷ್ಯರಲ್ಲಿ ಹಾಗೂ ಪ್ರಾಣಿಗಳಲ್ಲಿ ಸಮಾನವಾಗಿರುವ ತಾಯ್ತನದ ತುಯ್ತವನ್ನು, ಅದರ ಅನಿವಾರ್ಯತೆಯನ್ನು, ತಪ್ಪಿಸಿಕೊಂಡಿರುವ ತಾಯಿಗಾಗಿ ಕರುಗಳು ಒಂದೇ ಸಮನೆ 'ಅಂಬಾ' ಎಂದು ಅರಚಿಕೊಳ್ಳುವ ಕೂಗಿನಿಂದ ಮನಗಾಣಿಸಿದ್ದಾರೆ. 'ಬೆಟ್ಟದ ಗಾತ್ರ ಅಪ್ಪನಿಗಿಂತ ಬೆಟ್ಟು ಗಾತ್ರ ಅವ್ವಿರಬೇಕು' ಎಂಬ ಗಾದೆ ಗ್ರಾಮೀಣ ಸಂಸ್ಕೃತಿಯಲ್ಲಿ ತಾಯ್ತನಕ್ಕೆ ಕೊಟ್ಟಿರುವ ಪ್ರಾಶಸ್ತ್ಯವನ್ನು ಪರೋಕ್ಷವಾಗಿ ಸೂಚಿಸುತ್ತದೆ ಎಂಬುದನ್ನು ಇಲ್ಲಿ ನೆನೆಸಿಕೊಳ್ಳಬಹುದು.

'ಅಭಿಮಾನ' ಕಥೆಯಲ್ಲಿ, ತನ್ನಿಂದಲೇ ಅನುಕೂಲ ಪಡೆದು ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಗೆದ್ದ ಪುಟ್ಟಸ್ವಾಮಿಗೌಡ ಊರಿನ ಛೇರ್ಮನ್‌ಗಿರಿಯಿಂದ ಸಿದ್ದೇಗೌಡನನ್ನು ಕಿತ್ತು ಹಾಕಿ, ತನ್ನ ಚೇಲ ತಮ್ಮಯ್ಯನನ್ನು ಆ ಸ್ಥಾನಕ್ಕೆ ತರಬೇಕೆಂದು ಬಹುಮತ ಸ್ಥಾಪನೆಗೆ ಬೇಕಾಗಿದ್ದ ಒಬ್ಬ ಸದಸ್ಯನಿಗಾಗಿ ದಲಿತ ಯಾಲಕ್ಕಿಯನ್ನು ಕುತಂತ್ರದಿಂದ ಸೆಳೆದುಕೊಳ್ಳಲು ಹವಣಿಸಿದಾಗ, ಆ ದಲಿತ ಅನ್ಯಾಯದ ವಿರುದ್ಧ ಸೆಟೆದು ನಿಂತು ನ್ಯಾಯದ ಪರ ನಿಯತ್ತನ್ನು ಘೋಷಿಸುತ್ತಾನೆ. 'ನಿಯತ್ತಿದ್ದೋನಿಗೆ ಬರಕತ್ತು' ಎಂಬ ಗ್ರಾಮೀಣ ಸಂಸ್ಕೃತಿಯ ಜೀವ ಸತ್ತಿಲ್ಲ ಎಂಬುದನ್ನು ದಲಿತ ಯಾಲಕ್ಕಿ ಸಾಬೀತು ಮಾಡಿ, ಪುಡಾರಿ ರಾಜಕಾರಣಿಗೆ ಮಂಗಳಾರತಿ ಮಾಡುವುದು ಎದ್ದು ಕಾಣುತ್ತದೆ.

'ನೆಲದ ಉಸಿರು' ಎಂಬ ಕಥೆ ಒಕ್ಕಲು ಮಕ್ಕಳಿಗೆ ನೆಂಟರಿಷ್ಟರನ್ನು ಕರೆದು ಹಿರಿಯರಿಗೆ ಧೂಪ ಹಾಕುವ ಮಹಾನವಮಿ ಹಬ್ಬವನ್ನು ಅದ್ದೂರಿಯಾಗಿ ಮಾಡುವುದು ಪರಂಪರೆಯಾಗಿ ಬಂದಿರುವಂಥದು. ಆದರೆ ನೌಕರಿಯಲ್ಲಿರುವ ವಿದ್ಯಾವಂತ ಮಗ ಅಪ್ಪನಿಗೆ 'ನೀನು, ಅವ್ವ ಎಲ್ಲ ಮೈಸೂರಿಗೆ ಬನ್ನಿ, ನನ್ನ ಹತ್ತಿರಲೇ ಇರಿ. ಅಲ್ಲಿದ್ದುಕೊಂಡು ಆಸ್ತಿ ಆದಾಯವನ್ನೆಲ್ಲ ತಮ್ಮನ ಮಕ್ಕಳಿಗೆ ಹಾಗೂ ಮಗಳಿಗೆ ವಿನಿಯೋಗ ಮಾಡ್ತಿದ್ದೀರಿ. ಹೀಗೆ ಮಾಡುತ್ತಿದ್ದರೆ ನಾನು ಹಬ್ಬಕ್ಕೆ ಬರುವುದಿಲ್ಲ. ನಿಮಗೂ ಇಲ್ಲೇ ಹಬ್ಬ ಮಾಡಿ ಎಡೆ ಹಾಕಬಿಟ್ಟಿರಿ' ಎಂದು ಕಟ್ಟು ಮುರಿದಂತೆ ಹೇಳಿದಾಗ, ಒಕ್ಕಲು ಮಕ್ಕಳು ತಲತಲಾಂತರದಿಂದ ಬಂದಿರುವ ಈ ನೆಲವನ್ನು ಬಿಟ್ಟು ನಗರಕ್ಕೆ ಹೋದರೆ ನೀರನ್ನು ಬಿಟ್ಟ ಮೀನಾಗುತ್ತೇವೆ ಎಂದು ಅಪ್ಪ ಕೊರಗುತ್ತಾನೆ.

ಮಗ ಹಬ್ಬಕ್ಕೆ ಬರದಿದ್ದರೆ ಊರವರ ಮುಂದೆ ನನ್ನ ಮಾನ ಹೋಗುತ್ತದೆ ಎಂದು ಚಿಂತಿತನಾಗುತ್ತಾನೆ. ಆದರೆ ಧೂಪ ಹಾಕುವಂದು ಮೈಸೂರಿನ ಮಗ ತಪ್ಪದೆ ಹಾಜರಾಗುತ್ತಾನೆ. ಅಂದರೆ ಕೊಸರಿಕೊಂಡು ನಿಂತಿದ್ದ ಮಗನನ್ನು ಪರಂಪರೆಯ ನೆಲದ ಉಸಿರೇ ಕೈಹಿಡಿದು ಕರೆತರುವಲ್ಲಿ ಯಶಸ್ವಿಯಾಗಿದೆ ಎಂಬ ಧ್ವನಿ 'ನೆಲದ ಉಸಿರು' ಕಥಾಶೀರ್ಷಿಕೆಯಲ್ಲಿ ಇರುವಂತೆ ಕಾಣುತ್ತದೆ.

'ತಾಯಿ' ಎಂಬ ಕಥೆಯಲ್ಲಿ ಲಂಚದ ಹಣಕ್ಕೆ ಆಸೆಪಟ್ಟ ಗ್ರಾಮಲೆಕ್ಕಿಗ ಹುದ್ದೆಯಲ್ಲಿದ್ದ ಮಗ, ಬಡವೆಯೊಬ್ಬಳ ಜಮೀನಿನ ಪಾಣಿ ಲೆಕ್ಕವನ್ನು ಶ್ರೀಮಂತನ ಹೆಸರಿಗೆ ತಿದ್ದಿ ವರ್ಗಾಯಿಸಿರುವುದನ್ನು ತಿಳಿದ ತಾಯಿ, ತನ್ನ ಕಳ್ಳುಬಳ್ಳಿಯಲ್ಲದಿದ್ದರೂ ಬಡವೆಯ ಪರ ಅಧಿಕಾರಿಗಳೆದುರು ಸಾಕ್ಷ್ಯವನ್ನು ಹೇಳಿ ಪರಹಿತದ ಧರ್ಮವನ್ನು ಎತ್ತಿ ಹಿಡಿಯುತ್ತಾಳೆ. ಅಧರ್ಮ ಅನ್ಯಾಯ ಅನೀತಿ ಗ್ರಾಮಗಳಲ್ಲಿ ಕಾಲಿರಿಸಿದ್ದರೂ ಧರ್ಮ ನ್ಯಾಯ ನೀತಿಯ ಪರ ದನಿ ಎತ್ತುವ ಗ್ರಾಮೀಣ ಸಂಸ್ಕೃತಿ ಜೀವಂತವಾಗಿರುವುದನ್ನು ಎತ್ತಿ ಹಿಡಿಯುತ್ತದೆ.

ಗ್ರಾಮೀಣ ಸಂಸ್ಕೃತಿಯ ಮೂಲಬೇರಿನಿಂದಲೇ ಮೂಡಿದ ಹೊಸ ಚಿಗುರಿನ ಸಂಸ್ಕೃತಿಗೆ - ಅದನ್ನು ಬೇಕಾದರೆ ಬಂಡಾಯದ ಸಂಸ್ಕೃತಿ ಎನ್ನಿ - ಹರಕೆಯ ಹಣ, ಗರ್ಜನೆ, ಗಾಂಧಿ ಸಂತಾನ ಮೊದಲಾದ ಕಥೆಗಳು ಸಾಕ್ಷಿ.

ಒಂದು ಹಳ್ಳಿಯ ಮೂರು ದೇವರುಗಳಿಗೆ ಪೂಜಾರಿಗಳು ದಲಿತರೇ ಆಗಿದ್ದರೂ, ಹರಕೆಯ ಹಣದ ವಹಿವಾಟೆಲ್ಲಾ ಪಟೇಲ ಶ್ಯಾನುಭೋಗರದೇ. ಅವರು ತಿಂದು ತೇಗಿ ಎಸೆದ ಮೂಳೆಯಷ್ಟನ್ನೇ ಈ ದಲಿತ ಪೂಜಾರಿಗಳು ಬಾಯಲ್ಲಿಟ್ಟುಕೊಂಡು ಲಲುವುತ್ತಿರಬೇಕು - ಇದನ್ನು ಪ್ರಶ್ನಿಸಿದಾಗ ಪಟೇಲ ಶ್ಯಾನುಭೋಗ ದಲಿತ ಹೆಣ್ಣು ಮಗಳು ಚಿಲುವಿಯ ಮದುವೆಗಾಗಿ ಹರಕೆ ಹಣವನ್ನು ಮೀಸಲಿರಿಸುವುದಾಗಿ ತಿಪ್ಪೆ ಸಾರಿಸುತ್ತಾರೆ. ದಲಿತ ಕೆಂಪಿಯನ್ನು ಭೋಗಿಸುತ್ತ ಅವಳ ಗಂಡನ ಸಾವಿಗೆ ಕಾರಣನಾದ ಪಟೇಲನೇ, ತನಗೇ ಹುಟ್ಟಿದ ಚಿಲುವಿಯನ್ನು ತನ್ನ ಮನೆಯ ಆಳೊಬ್ಬನಿಗೆ ಮದುವೆ ಮಾಡಿ - ಆದು ತನ್ನ ಸ್ವಂತ ಗದ್ದೆಯ ಭತ್ತವಲ್ಲವಾದ್ದರಿಂದ - ತಾನೇ ಉಪಭೋಗಿಸಲು ಹಿಕಮತ್ ನಡೆಸಿರುವುದನ್ನು ಅರಿತ ಎಚ್ಚೆತ್ತ ಪ್ರಜ್ಞೆಯ ದಲಿತ ಸುಮಾನಿ, ಅಂದೇ ಊರಿನಿಂದ ಚಲುವಿಯನ್ನು ಹಾರಿಸಿಕೊಂಡು ಹೋಗಿ ಪಟೇಲ ಭೋಗಿಸಲಾಗದಂತೆ ಮಾಡಿದ್ದು, ಮದುವೆಗೆಂದು ಮೀಸಲಾಗಿರಿಸಿದ್ದ ಹರಕೆಯ ಹಣವನ್ನು ದಲಿತ ಪೂಜಾರಿಗಳಿಗೆ ವಿಲೇವಾರಿ ಮಾಡಬೇಕಾದಂತಹ ಪೀಕಲಾಟದ ಪರಿಸ್ಥಿತಿಯನ್ನು ತಂದೊಡ್ಡಿದ್ದು- ಎಲ್ಲವೂ ಗ್ರಾಮೀಣ ಬದುಕಿನಲ್ಲಿ ತಲೆಯೆತ್ತಿದ ಹೊಸ ಚಿಗುರಿನ ಅಥವಾ ಬಂಡಾಯದ ಸಂಸ್ಕೃತಿಯನ್ನು ಸೂಚಿಸುತ್ತದೆ.

ದಲಿತ ಮಹಿಳೆ ಊರ ಪಟೇಲನಿಗೆ ಹುಟ್ಟಿದ್ದರೂ, ತನ್ನ ಮನೆಯಲ್ಲಿ ಆಳಾಗಿ ದುಡಿಸುತ್ತ, ಸತ್ಯ ಗೊತ್ತಿದ್ದ ಊರವರ ಕಣ್ಣು ಮಾತುಗಳ ಕೀಟಲೆಗೆ ನೊಂದು ನರಳುವ ಮರಿನಂಜ, ಒಂದು ದಿನ ಸುಬ್ಬಕ್ಕನಿಂದ ತನ್ನ ಹುಟ್ಟಿನ ಕಥೆಯನ್ನು ಕೇಳಿ ಊರವರಿಗೆಲ್ಲ 'ನಮ್ಮಪ್ಪ ಪಟೇಲನೇ' ಎಂದು ಸೆಡ್ಡು ಹೊಡೆದು ನಿಂತದ್ದನ್ನು 'ಗರ್ಜನೆ' ಕತೆ ಚಿತ್ರಿಸುತ್ತದೆ. ಅಂದರೆ ಜಮೀನ್ದಾರಿ ಪದ್ಧತಿಯ ದಬ್ಬಾಳಿಕೆಗೆ ಕಂಪನ ಉಂಟು ಮಾಡುವ ಈ ಬಂಡಾಯ ಹೊಸಚಿಗುರಿನ ಸಂಸ್ಕೃತಿ ಎನ್ನಬಹುದು.

ಹಾಗೆಯೇ 'ಗಾಂಧಿ ಸಂತಾನ' ಎಂಬ ಕಥೆಯಲ್ಲಿ ಅಮಾಯಕ ಶೂದ್ರ ದಲಿತರನ್ನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಕೊಲೆ ಮಾಡುವ ಮೇಲ್ವರ್ಗದವರ ವಿರುದ್ಧ ದಲಿತ ಮಹಿಳೆ ತಿಮ್ಮಕ್ಕನ ಸತ್ತ ಮಗ ಮೆಣಸ ಹಾಗೂ ಅವಳ ಹಾಲು ಕುಡಿದು ಬೆಳೆದ ಕಥಾ ನಿರೂಪಕ ಮಡಿವಂತಿಕೆ ಮಾಡುವ ಬೋಡಮ್ಮನ ವಿರುದ್ದ, ಕಿವುಡು ಮೇಷ್ಟ್ರು ವಿರುದ್ಧ ಜೋಯಿಸರ, ವಿರುದ್ಧ ನೀನು ಎಂದರೆ ನಿಮ್ಮಪ್ಪ ಎಂದು ಸೆಣಸಿ ನಿಲ್ಲುವ ಧಾರ್ಷ್ಟ್ಯ ಹೊಸ ಚಿಗುರಿನ ಸಂಸ್ಕೃತಿಗೆ ನಿದರ್ಶನ.

ಬೇಲಾ, ಗಾಂಧಿ, ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು ರಾಮಣ್ಣನವರ ಉತ್ತಮ ಕಥೆಗಳು.

ಅವುಗಳ ವಿವರಕ್ಕೆ ಹೋಗುವುದಿಲ್ಲವಾದರೂ ಗಾಂಧಿ ಕಥೆಯ ಬಗ್ಗೆ ಒಂದು ಮಾತನ್ನು ಹೇಳದೆ ಇರಲು ಸಾಧ್ಯವಿಲ್ಲ. ಏಕೆಂದರೆ ಅವಸರವಾಗಿ ಮುಗಿಸಿ ಅದರ ಸಹಜ ಬೆಳವಣಿಗೆಗೆ ಕುಂದು ತಂದಿದ್ದಾರೆ ಎನ್ನಿಸುತ್ತದೆ. ಉದಾಹರಣೆಗೆ ಗಾಂಧಿಯ ಔಷಧಿ ಚಿಕಿತ್ಸೆಗೆಂದು ಮಗಳು ಮತ್ತು ಮೊಮ್ಮಗಳು ತಮ್ಮ ಕಿವಿಯ ಓಲೆಗಳನ್ನು ಬಿಚ್ಚಿಕೊಟ್ಟಾಗ, ತಾತ ಎತ್ತಿಕೊಂಡವನು ಜಿಲ್ಲಾ ಕೇಂದ್ರದಲ್ಲಿ ನಿಬಿಡವಾಗಿರುವ ಗಿರವಿ ಅಂಗಡಿಗಳಲ್ಲಿ ಗಿರವಿ ಇಟ್ಟು ಹಣ ತರಬೇಕು, ಇಲ್ಲ ಮಾರಿಯಾದರೂ ತರಬೇಕು. ಆದರೆ ಕಥೆಗಾರರು ಅವುಗಳನ್ನು ಗಿರವಿ ಇಡಲು ತಮ್ಮ ಹಳ್ಳಿಗೆ ಹೋದರೆಂದೂ, ಅಲ್ಲಿ ಸಿಗಲಿಲ್ಲವೆಂದೂ, ಮರ ಮಾರಿ ತರುವಾಗ್ಗೆ ಮೊಮ್ಮಗನ ಪ್ರಾಣ ಹೋಗಿತ್ತೆಂದೂ ಚಿತ್ರಿಸುತ್ತಾರೆ - ಅಂದರೆ ಗಾಂಧಿಯ ಪ್ರಾಣ ಹೋಗಲಿ ಎಂದೇ ಗಿರವಿ ಅಂಗಡಿ ಜಿಲ್ಲಾ ಕೇಂದ್ರಗಳಲ್ಲಿ ಇಲ್ಲ ಎಂದು ಹಳ್ಳಿಯ ಗಿರವಿ ಅಂಗಡಿಗೆ ಕಥೆಗಾರರೇ ಕೊಂಡೊಯ್ದಿದ್ದಾರೆ ಎನ್ನಿಸಿಬಿಡುತ್ತದೆ. ಇಲ್ಲೆಲ್ಲ ನಿಧಾನದ ಬರವಣಿಗೆ ಸಾಗಿದ್ದರೆ ಕಥೆ ಹೆಚ್ಚು ಸಹಜ, ಕಲಾತ್ಮಕ ಎನ್ನಿಸುತ್ತಿತ್ತು ಎಂಬ ಭಾವನೆ ಓದುಗರಿಗೆ ಬರುತ್ತದೆ.

ಇನ್ನು ಭಾಷೆ ಹೇಗೆ ಸಂಸ್ಕೃತಿವಾಹಕವಾಗಿದೆ ಎಂಬುದನ್ನು ಇಲ್ಲಿ ವಿವರಿಸಲು ಹೋಗುವುದಿಲ್ಲ. ಅದು ಬೇರೆಯೇ ಪ್ರಬಂಧವಾಗಬೇಕಾಗುತ್ತದೆ. ಒಟ್ಟಿನಲ್ಲಿ ಡಾ। ಬೆಸಗರಹಳ್ಳಿ ರಾಮಣ್ಣನವರ ಕಥೆಗಳು ಗ್ರಾಮೀಣ ಸಂಸ್ಕೃತಿಯಲ್ಲಿಯೇ ಬಾಯ್ಮುಕ್ಕಳಿಸುತ್ತಿವೆ ಎಂದು ಹೇಳಿದರೆ ಸಾಕು.

---

* ಪ್ರೊ। ಸುಧಾಕರ, ನಿರ್ದೇಶಕರು, ಕನಕಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಆಧುನಿಕ ಕನ್ನಡ ಕಾವ್ಯ ಮತ್ತು ಗ್ರಾಮೀಣ ಸಂಸ್ಕೃತಿ

– ರಹಮತ್ ತರೀಕೆರೆ

ಕುವೆಂಪು ಮಲೆನಾಡಿನ ತಮ್ಮ ಹಳ್ಳಿಮನೆಗೆ ಹೋಗುವ ಆಸೆಯನ್ನು ತೋಡಿಕೊಳ್ಳುವ ಅನೇಕ ಪದ್ಯಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಹೋಗುವೆನು ನಾ' (ಪಕ್ಷಿಕಾಶಿ: ೧೯೩೪) ಎಂಬ ಪದ್ಯವನ್ನು ಪ್ರಾತಿನಿಧಿಕವಾಗಿ ಗಮನಿಸಬಹುದು. ಪ್ರಾತಿನಿಧಿಕವೇಕೆಂದರೆ, ಇದು ಹಳ್ಳಿಯನ್ನು ಕುರಿತು ಈ ಶತಮಾನದ ಮುಖ್ಯ ಗ್ರಹಿಕೆಯೊಂದನ್ನು ಒಳಗೊಂಡಿದೆ. ವೈರುಧ್ಯಗಳಿಂದ ಕೂಡಿದ ಈ ಗ್ರಹಿಕೆ ಮಧ್ಯಮ ವರ್ಗಗಳಲ್ಲಿ ಈಗಲೂ ಬಲವಾಗಿ ಇರುವಂಥದ್ದು:

ನಗರ ನಾಗರಿಕತೆಯ ಗಲಿಬಿಲಿ ಅಲ್ಲಿ ಸೋಂಕದು ಸುಳಿಯದು
ದೇಶದೇಶದ ವೈರಯುದ್ಧದ ಸುದ್ದಿಯೊಂದೂ ತಿಳಿಯದು
'ತಿಳಿಯದಿರುವುದೆ ತಿಳಿವು' ಎಂಬುವ ನನ್ನಿ ಆಯೆಡೆ ತಿಳಿವುದು
'ತಿಳಿಯೆ ನೋವಿರೆ, ತಿಳಿಯದಿರೆ ಜಾಣ್ಮೆ' ಎಂಬರಿವುಳಿವುದು

ಹುಟ್ಟಿದ ಹಳ್ಳಿಗೆ ಮರಳಿ ಹೋಗುವ ಈ ಹಂಬಲ ಭಾವನಾತ್ಮಕವಾದುದು. ನಿಜವಾಗಿ 'ಮರಳಿಮಣ್ಣಿಗೆ' ತೆರಳುವಂಥದ್ದಲ್ಲ. ಆಳದಲ್ಲಿ ಇದು ಬೆಳೆಯುತ್ತಿದ್ದ ವಸಾಹತುಶಾಹಿ ಆಧುನಿಕತೆಗೆ, ಅದರ ಕಂಗೆಡಿಸುವ ಬೆಳವಣಿಗೆಗೆ ತೋರಿದ ಸುಪ್ತ ಪ್ರತಿರೋಧವಾಗಿದೆ. ಅದರ "ಗಲಿಬಿಲಿ"ಯೇ ಹಳ್ಳಿಗಳನ್ನು, ಅವುಗಳ ಒಳಸಂಘರ್ಷಗಳನ್ನು ಮರೆಯಿಸಿ, ಶಾಂತಿಧಾಮಗಳನ್ನಾಗಿ ಗ್ರಹಿಸಲು ಒತ್ತಾಯಿಸಿದೆ. ಕುತೂಹಲಕರ ವಾದುದೆಂದರೆ, ಕುವೆಂಪು ಅವರಂಥ ವಿಚಾರವಂತ ಲೇಖಕರು ತಮ್ಮ ಚಿಂತನೆಯಲ್ಲಿ ನಿರಾಕರಿಸುವ "ತಿಳಿಯದಿರೆ ತಿಳಿವು" ಎಂಬ ನಿಲುವು ಇಲ್ಲಿ ನಾಗರಿಕತೆಯ ಭಾವನಾತ್ಮಕ ವಿರೋಧದ ಭರದಲ್ಲಿ ಬಂದು ಬಿಟ್ಟಿರುವುದು! ಹಳ್ಳಿಯನ್ನು ನಗರ ನಾಗರಿಕತೆಯ ವಿರೋಧದ ಭಾಗವಾಗಿ ನೋಡುವ ಈ ದೃಷ್ಟಿಕೋನದ ಚಾರಿತ್ರಿಕ ಹಿನ್ನೆಲೆಯನ್ನು ಬಿಡಿಸಿದರೆ ಆಧುನಿಕ ಕನ್ನಡ ಕಾವ್ಯದಲ್ಲಿರುವ ಗ್ರಾಮೀಣ ಸಂಸ್ಕೃತಿಯ ಸ್ವರೂಪ ಹೊಳೆಯುತ್ತದೆ.

ಮೊದಮೊದಲ ಕನ್ನಡ ಕಾವ್ಯದಲ್ಲಿ ಹಳ್ಳಿಗಳ ಚಿತ್ರಣವೆಂದರೆ, ಅದು ಹಳ್ಳಿ ತೊರೆದು ಬಂದವರ ರಮ್ಯ ನೆನಪುಗಳ ಕಥನವೇ; ಆಧುನಿಕ ಶಿಕ್ಷಣಪಡೆದು, ಸೌಕರಿಗಾಗಿ ಪಟ್ಟಣಕ್ಕೆ ವಲಸೆಬಂದ, ಸಾಂಪ್ರದಾಯಿಕ ಜಾತಿ-ಕಸುಬುಗಳಿಂದ ದೂರವಾದ ಮಧ್ಯಮವರ್ಗದ ನೆನಪುಗಳ ಕಥನ. ಆಧುನಿಕ ಸೌಲಭ್ಯಗಳನ್ನು ಉಣ್ಣಲೆಂದೇ ನಗರಕ್ಕೆ ಕಿತ್ತುಕೊಂಡು ಬಂದ ಈ ವರ್ಗ, ತನ್ನ ಹೊಸ ಅವಸ್ಥೆಗೆ ಕಾರಣವಾದ, ಯಾಂತ್ರಿಕ

ಆಧುನಿಕತೆಯ ವಿರುದ್ಧ ಒಳಗೊಳಗೇ ಬಂದೆದ್ದಿತು. ಪರಿಣಾಮವೆಂದರೆ ಹುಟ್ಟಿದ ಹಳ್ಳಿಗಳು ಒಲುಮೆಯ ಗೂಡಾಗಿ ಕಾಡತೊಡಗಿದವು. ಬಾಲ್ಯದ ನೆನಪುಗಳನ್ನು ಕೊಟ್ಟ ಹಳ್ಳಿಗೆ ಮರಳುವ ಹಂಬಲ, ಮರಳಿ ಹೋಗಲಾಗದ ವಾಸ್ತವ, ಈ ಹಂಬಲವನ್ನು ಮತ್ತಷ್ಟು ತೀವ್ರಗೊಳಿಸಿತ್ತು. ಹೀಗೆ, ಅದಮ್ಯವಾಗಿದ್ದ ವಸಾಹತುಶಾಹಿ ಆಧುನಿಕತೆಯ ಬೆಳವಣಿಗೆಯ ವಿಮರ್ಶೆಯ ಇನ್ನೊಂದು ಮುಖವಾದ ಗ್ರಾಮಜಗತ್ತಿನ ಆತ್ಮೀಯ ಪುನಸ್ಸೃಷ್ಟಿಯನ್ನು, ಆಧುನಿಕ ಕನ್ನಡದ ಮೊದಲ ಘಟ್ಟದ ಎಲ್ಲ ಕವಿಗಳಲ್ಲೂ ಕಾಣುತ್ತೇವೆ. ಸಾಂಪ್ರದಾಯಿಕ ವೃದ್ಧರ ಚಿತ್ರಣ, ಪರಂಪರೆಯ ನೆನಪು, ಗ್ರಾಮೀಣ ಆಡುಮಾತನ್ನು ಮರುಬಳಕೆಗೆ ತರುವ ಕಾವ್ಯಶೈಲಿ ಇವೆಲ್ಲ ಇಂಥ ಪ್ರಯತ್ನಗಳು. ಸಮಸ್ಯೆಯೆಂದರೆ, ನೆನಪುಗಳ ಮೂಲಕ ಮರುಸೃಷ್ಟಿಗೊಳ್ಳುವ ಈ ಇಡೀ ಗ್ರಾಮೀಣ ಲೋಕವು, ವಿಮರ್ಶೆಯನ್ನು ಕಳೆದುಕೊಂಡು ಮುಗ್ಧತೆ, ಮಾನವೀಯ ಪ್ರೀತಿ, ನಿಸ್ವಾರ್ಥ ದುಡಿಮೆಗಳ ಸಂಕೇತವಾಗಿಬಿಡುವುದು. ಇದರ ಮುಂದೆ ನಗರವು ಕೃತಕತೆಯ, ಜಾಣ್ಮೆ, ಯಾಂತ್ರಿಕತೆ ಅಮಾನುಷತೆಗಳ ಸಂಕೇತವಾಗುವುದು. ಗ್ರಾಮಜಗತ್ತನ್ನು ಕುರಿತ ಕಲ್ಪನೆಯು ತನ್ನ ಎದುರಾಳಿಯಾದ ನಗರದ ಹೋಲಿಕೆಯಿಲ್ಲದೆ ಹುಟ್ಟಲೇ ಇಲ್ಲ ಎಂಬಂತೆ ವಿಭಿನ್ನವಾಗಿದೆ. ವೈಚಾರಿಕ ಎಚ್ಚರಿಂದ ಗ್ರಾಮಲೋಕದ ಬೀಭತ್ಸಗಳನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ ಕುವೆಂಪು ಅವರೇ 'ನಗರ ನಾಗರಿಕತೆಯ ಗಲಿಬಿಲಿ'ಯ ಬಗ್ಗೆ ಹೀಗೆ ಭಾವುಕವಾಗಿ ಬರೆದರೆಂದ ಮೇಲೆ, ಉಳಿದ ಕವಿಗಳಲ್ಲಿ ಊಹಿಸುವುದು ಸುಲಭ. ನಗರವಿರೋಧೀ ನೆಲೆಯ ಈ ಗ್ರಾಮಪ್ರೇಮವು ಚೆನ್ನವೀರಕಣವಿಯಂಥ ಕವಿಗಳಲ್ಲಿ ಆತ್ಯಂತಿಕ ನೆಲೆಯಲ್ಲಿ ಕಾಣಿಸಿಕೊಳ್ಳುತ್ತದೆ. ಅವರ ಮೊದಲಹಂತದ ಕಾವ್ಯವು "ನಾಗರಿಕ ನಾಗರವು ಹುತ್ತುಕಟ್ಟದ ಹಳ್ಳಿ"ಯ ಆರಾಧಕನಾಗಿದೆ. ನಾಗರಿಕ ಆಧುನಿಕತೆಯನ್ನು ಕುರಿತು ನವೋದಯ ಕಾವ್ಯ ಸೃಷ್ಟಿಸಿದ ಕಠೋರ ರೂಪಕವಿದು. ಈ ವಿಷಕಕ್ಕುವ ನಾಗರವಿಲ್ಲದ ಹಳ್ಳಿಗಳನ್ನು (ಇದು ಎಂಥಾ ಭೀಕರ ಸುಳ್ಳೆಂಬುದನ್ನು ಇದೇ ಕಾಲದ ಲೇಖಕರಾದ ಕಾರಂತ, ಕುವೆಂಪು, ರಾವ್‌ಬಹಾದ್ದೂರರು ತಮ್ಮ ಗದ್ಯ ಬರೆಹದಲ್ಲಿ ಕಾಣಿಸಿದರು.) ಅಗಲಿ ಬಂದ ನೋವು, ನಗರಗಳನ್ನು ಮಾನವೀಯತೆ ಹೊಸಕಿಹಾಕುವ ನಿರ್ದಯ ನರಕಗಳಂತೆ ಕಾಣಿಸತೊಡಗಿತು. ಜಿ.ಎಸ್.ಎಸ್ ಅವರ 'ಮುಂಬೈಜಾತಕ' ಇಂಥ ರೂಪಕಗಳ ಘನಿಷ್ಠ ಪ್ರತಿನಿಧಿಯಂತಿದೆ. ಮೊದಲ ಘಟ್ಟದ ಕನ್ನಡ ಕಾವ್ಯವು ಹೀಗೆ ಗ್ರಾಮಸಂಸ್ಕೃತಿಯ ಪರವಾಗಿ ಹಾಗೂ ನಗರಸಂಸ್ಕೃತಿಯ ವಿರುದ್ಧವಾಗಿ ಒಲುವು ತಳೆಯಲು, ಹುಟ್ಟಿದಹಳ್ಳಿಗಳನ್ನು ತೊರೆದು ಬಂದ ದುಃಖಕ್ಕಿಂತಲೂ ಆಳವಾದ ಬೇರೆ ಕೆಲವು ಚಾರಿತ್ರಿಕ ಕಾರಣಗಳಿದ್ದಂತಿವೆ. ಹಿಂದೆ ಸೂಚಿಸಿದಂತೆ ವಸಾಹತುಶಾಹಿ ಆಳ್ವಿಕೆಯ ಭಾಗವಾಗಿದ್ದ ಯಾಂತ್ರಿಕ ನಾಗರಿಕತೆಯ ಯಜಮಾನಿಕೆಗೆ ತೋರಿದ ಪ್ರತಿರೋಧ ಒಂದು. ಎರಡನೆಯದು ಇದರ ಆಕರ್ಷಣೆಗೆ ಒಡ್ಡಿಕೊಳ್ಳುವುದು ಎಂದರೆ, ಬ್ರಿಟಿಷರ ಆಳ್ವಿಕೆಯನ್ನು ಒಪ್ಪಿಕೊಳ್ಳುವುದೇ ಆಗಿದ್ದರಿಂದ, ರಾಜಕೀಯ ಸ್ವಾತಂತ್ರ್ಯಕ್ಕಾಗಿ, ಗಾಂಧೀ ರಾಷ್ಟ್ರೀಯವಾದವನ್ನು ಬೆಂಬಲಿಸಬೇಕಾಗಿದ್ದುದು. 'ಹಿಂದ್‌ಸ್ವರಾಜ್'ನಲ್ಲಿ ಗಾಂಧಿ ಪ್ರತಿಪಾದಿಸಿರುವ ಈ ರಾಷ್ಟ್ರೀಯವಾದ ಮುಖ್ಯ ಸ್ವರೂಪವೇ, ಗ್ರಾಮಸಂಸ್ಕೃತಿಯನ್ನು ಅವಿಮರ್ಶಾತ್ಮಕ ಒಪ್ಪಿಕೊಳ್ಳುವಂಥದ್ದಷ್ಟೆ. ಮೂರನೆಯದು ಇದೇ ಆಧುನಿಕ ನಾಗರಿಕತೆಯ ಅಮಾನುಷ ಬೆಳವಣಿಗೆ ವಿರುದ್ಧದ ಬಂಡಾಯವಾಗಿ ಹುಟ್ಟಿದ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳಿಂದ ಗಾಢವಾಗಿ ಪ್ರಭಾವಿತರಾಗಿದ್ದು.

ನವೋದಯ ಕವಿಗಳು ಹೀಗೆ ಅನೇಕ ಚಾರಿತ್ರಿಕ ಒತ್ತಡಗಳ ಫಲವಾಗಿ ಗ್ರಾಮ-ನಗರಗಳನ್ನು ಕುರಿತ ಸರಳೀಕೃತ ನಿಲುವನ್ನು ತಳೆದರೂ, ವಾಸ್ತವ ತುಂಬ ಸಂಕೀರ್ಣ ಸ್ವರೂಪದಲ್ಲಿತ್ತು. ನಗರ ಮತ್ತು ಹಳ್ಳಿಗಳು ವಿಭಿನ್ನ ಲೋಕಗಳಾಗಿರಲಿಲ್ಲ. ಬೇಂದ್ರೆಯವರ ಧಾರವಾಡ, ಕುವೆಂಪು ಅವರ ಮೈಸೂರುಗಳು ಅವರ ಕಾವ್ಯವೇ ಚಿತ್ರಿಸುವಂತೆ ಮಹಾನಗರಗಳಲ್ಲ, ಬೃಹದಾಕಾರದ ಗ್ರಾಮಗಳೇ. ಗ್ರಾಮಗಳು ನಾಗರಿಕತೆಯ

ಕನಸನ್ನು ಕಾಣುತ್ತಿದ್ದವು ಹಾಗೂ ನಾಗರಿಕತೆ ಹಳ್ಳಿಗಳಲ್ಲಿ ನುಸುಳುತ್ತಿತ್ತು. ಅನೇಕ ವರ್ಗಗಳಿಗೆ ಹಳ್ಳಿಗಳೆಂಬ ನರಕಗಳಿಂದ ಬಿಡುಗಡೆ ಪಡೆಯುವ ಸೆಳೆತ ಬಲವಾಗಿತ್ತು. ಹೀಗಾಗಿ ಸರಳವಾದ ನಗರ ವಿರೋಧ ಮತ್ತು ಹಳ್ಳಿಯ ಪ್ರೇಮ ಚರಿತ್ರೆಯ ಚಲನೆಗೆ ವಿರುದ್ಧವಾಗಿತ್ತಷ್ಟೇ ಅಲ್ಲ, ಅವಾಸ್ತವವಾಗಿತ್ತು. ಯಾಕೆಂದರೆ ನಾಗರಿಕ ಆಧುನಿಕತೆ ಕೇವಲ ಬರ್ಬರತೆಯ ಸಂಕೇತವಾಗಿರಲಿಲ್ಲ. ಅದು ಸಾಂಪ್ರದಾಯಿಕ ಸಮಾಜದ ತುಳಿತಗಳಿಂದ ವಿಮೋಚನೆ ನೀಡುವ ವರವೂ ಆಗಿತ್ತು. ಹಳ್ಳಿಗಳಲ್ಲಿ ಜಾತಿ ಮತ್ತು ಆಸ್ತಿಯ ನಾಗರಗಳು ಹುತ್ತುಕಟ್ಟಿದ್ದವು. ಯಾವ ಆಧುನಿಕ ನಾಗರಿಕತೆಯು ಹೀಗೆಲ್ಲ ಚಿಂತಿಸುವ ಪ್ರಜ್ಞೆಯನ್ನು ಕೊಟ್ಟಿತ್ತೋ ಅದರ ಹುಸಿ ನಿರಾಕರಣೆ ವಿಚಿತ್ರವಾದ ಹಿಪಾಕ್ರಸಿಯಂತೆ ಕಾಣುತ್ತದೆ. ಆದರೆ ಇದು ತಮ್ಮ ಎದುರಿನ ರಾಜಕಾರಣವನ್ನು ಎದುರಿಸಲು ಆಗಿನ ಸಂದರ್ಭ ರೂಪಿಸಿಕೊಂಡ ಯುದ್ಧ ತಂತ್ರದ ಭಾಗವಾಗಿತ್ತು ಎಂಬುದನ್ನು ಮರೆಯುವಂತಿಲ್ಲ.

ಅನಂತರ ಬಂದ ನವ್ಯಕವಿಗಳದ್ದು ಗ್ರಾಮದಿಂದ ಕಳಚಿಕೊಂಡು ಬಂದ ನೋವು ಅಷ್ಟಾಗಿಲ್ಲದ ತಲೆಮಾರು. ಹೀಗಾಗಿ ಗ್ರಾಮಸಂಸ್ಕೃತಿಯನ್ನು ವೈಭವೀಕರಿಸುವುದಾಗಲೀ, ವಾಸ್ತವೀಕರಣವಾಗಲೀ ಅವರ ಕಾವ್ಯದಲ್ಲಿಲ್ಲ. ಸಮಾಜದ ಬದಲಾವಣೆಗಳೊಳಗೆ ಹಳ್ಳಿಯನ್ನಿಟ್ಟು ನೋಡುವ ಕುತೂಹಲಕ್ಕಿಂತ, 'ವ್ಯಕ್ತಿ'ಗಳ ಅವಸ್ಥೆಗಳನ್ನು ಶೋಧಿಸುವುದು ಅವರಿಗೆ ಮುಖ್ಯವಾಯಿತು. ಹೀಗೆ ಹೇಳುವಾಗಲೂ ಆಲನಹಳ್ಳಿ, ಕಂಬಾರ, ಲಂಕೇಶ್ ಹಾಗೂ ಅಡಿಗರು ತಮ್ಮವೇ ಗ್ರಾಮೀಣ ಅನುಭವವನ್ನು ಬಳಸಿಕೊಂಡ ತಾತ್ವಿಕ ನೆಲೆಗಳಲ್ಲಿ ವ್ಯತ್ಯಾಸವಿತ್ತು ಎಂಬುದನ್ನು ಗಮನಿಸಬೇಕು. ಅಖಂಡ ಸಾವಯವ ಗ್ರಾಮೀಣ ಬದುಕು ಒಡೆದುಹೋದ ವಿಷಾದಗಳೊಂದಿಗೆ ಹಳ್ಳಿಗಳನ್ನು ತಮ್ಮ ಕಾವ್ಯದಲ್ಲಿ ತರುವ ಕಂಬಾರರು ಅನೇಕ ನೆಲೆಗಳಲ್ಲಿ ನವೋದಯದ ರೋಮ್ಯಾಂಟಿಕ್ಕರೇ. ಆದರೆ, ಹಳ್ಳಿಗಳು ಪತನಮುಖಿಯಾಗಿದ್ದರೆ ಅದಕ್ಕೆ ಕಾರಣ ಆಧುನಿಕತೆಯ ರಾಕ್ಷಸ ಪ್ರವೇಶ ಎಂಬ ಅವರ ನಂಬಿಕೆ ತುಂಬ ಸಮಸ್ಯಾತ್ಮಕವಾದುದು. ಲಂಕೇಶರ 'ಅವ್ವ' ಪದ್ಯ ಈ ಕಾರಣಕ್ಕೆ ತುಂಬ ಭಿನ್ನವಾದುದು. ನವ್ಯಕಾವ್ಯದಲ್ಲಿ ತುಂಬ ಕುತೂಹಲ ಹುಟ್ಟಿಸುವುದು ಕವಿಗಳ ಗ್ರಾಮೀಣ ಅನುಭವವು ನವ್ಯಕಾವ್ಯದ ರೂಪದೊಳಗೇ ಹುದುಗಿದ್ದ ಮಧ್ಯಮ ವರ್ಗೀಯ ವ್ಯಕ್ತಿವಾದೀ ರಾಜಕೀಯ ಆಶಯದೊಂದಿಗೆ ಹೊಂದಾಣಿಕೆಯಾಗದೆ ಉಂಟುಮಾಡಿಕೊಂಡ ಬಿರುಕುಗಳು. ಈ ಬಿರುಕುಗಳನ್ನು ಮೀರಲು ಯತ್ನಿಸಿದ್ದು ಗದ್ಯಲೇಖಕರೇ. ಆಲನಹಳ್ಳಿ ಕಾವ್ಯ ಹಾಗೂ ಬೆಸಗರಹಳ್ಳಿ ಕತೆಗಳನ್ನು ಹೋಲಿಸಿದರೆ ಇದು ಗೊತ್ತಾಗುತ್ತದೆ.

೭೦ರ ದಶಕದಿಂದ ಶುರುವಾದ ದಲಿತಬಂಡಾಯ ಕಾವ್ಯವು ಮೂಲತಃ ಗ್ರಾಮಜೀವನದ ಕ್ರೌರ್ಯರೂಪೀ ನೆನಪುಗಳ ಕಥನ. ಇದಕ್ಕೆ ಕಾರಣ ತನಗೆ ತಾನೇ ಸ್ಪಷ್ಟ. ಬಹುತೇಕ ದಲಿತ- ಬಂಡಾಯ ಲೇಖಕರು ಜಾತಿಯೂ ಭೂಮಾಲಿಕತನವೂ ಯಜಮಾನಿಕೆ ನಡೆಸುವ ಹಳ್ಳಿಗಾಡಿನಲ್ಲಿ ಪಡೆದ ಅನುಭವಗಳಿಂದ ತಪ್ತರಾದವರು. ಆಧುನಿಕ ಶಿಕ್ಷಣ, ನೌಕರಿಗಳನ್ನು ಪಡೆದು ವೈಚಾರಿಕ ಪ್ರಜ್ಞೆಯನ್ನು ಬೆಳೆಯಿಸಿಕೊಂಡ ಈ ಲೇಖಕರು ತಮ್ಮ ಬಾಲ್ಯದ ಅನುಭವಗಳ ವಿಷಯದಲ್ಲಿ ಕಟುವಿಮರ್ಶಕನಾಗಿದ್ದರು. ಅವರ ಕವಿತೆಗಳ ನಾಯಕರಲ್ಲಿ, ತಮ್ಮ ಸಮುದಾಯಗಳನ್ನಿನ್ನೂ ಬಂಧನದಲ್ಲಿಟ್ಟಿರುವ ಆ ಹಳ್ಳಿಗಳು ಧ್ವಂಸವಾಗಬೇಕು ಎಂಬ ತುಡಿತ ಕಡ್ಡಾಯವೆಂಬಂತೆ ಕಾಣುತ್ತದೆ. ಈ ಅರ್ಥದಲ್ಲಿ ಈ ಕಾವ್ಯವು ತನ್ನ ಆಶಯಗಳಲ್ಲಿ ಕಾರಂತ ('ಹಳ್ಳಿಯ ಹತ್ತು ಸಮಸ್ತರು'), ಕುವೆಂಪು ('ಮಲೆಗಳಲ್ಲಿ ಮದುಮಗಳು'), ರಾವ್‌ಬಹಾದ್ದೂರ್ ('ಗ್ರಾಮಾಯಣ'), ನಿರಂಜನ ('ಚಿರಸ್ಮರಣೆ'), ಕೊರಡಕಲ್ ಶ್ರೀನಿವಾಸರಾವ್ ('ಧನಿಯರ ಸತ್ಯನಾರಾಯಣ') ಮುಂತಾದ ಗದ್ಯಲೇಖಕರ ಉತ್ತರಾಧಿಕಾರಿಯಾಗಿದೆಯೆನ್ನಬಹುದು. ಆಳುವ ಶಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಸಮಾಜವನ್ನು ಅರ್ಥಮಾಡಿಕೊಳ್ಳಲು ಹೊರಡುವ ಯಾವುದೇ

ಲೇಖಕರಿಗೆ, ಅದರಲ್ಲೂ ಮಾರ್ಕ್ಸಿಸ್ಟರಿಗೆ ಹಳ್ಳಿ-ನಗರಗಳ ವ್ಯತ್ಯಾಸ ಒಂದು ಹಂತದಲ್ಲಿ ಅಮುಖ್ಯ ಆದರೂ, ದಲಿತಲೇಖಕರು ಮಾತ್ರ ತಮ್ಮ ಹಳ್ಳಿಗಳನ್ನು ಕ್ಷಮಿಸಲಾರದ ಕ್ರೌರ್ಯವುಳ್ಳ ತಾಣಗಳೆಂಬಂತೆಯೇ ಕಾಣಿಸಿದರು. ಅಲ್ಲಿನ ಜೀವಪರವಾದ, ಪ್ರತಿರೋಧದ ಎಳೆಗಳನ್ನು ನೋಡುವ ತಾಳ್ಮೆ ಕೂಡ ಬಹಳ ಸಲ ಉಳಿಸಿಕೊಳ್ಳಲಿಲ್ಲ.

ವಿಶೇಷವೆಂದರೆ, ಕಳೆದ ಒಂದು ದಶಕದಿಂದ ಕನ್ನಡದಲ್ಲಿ ಬರುತ್ತಿರುವ ಕಾವ್ಯದಲ್ಲಿ ಗ್ರಾಮೀಣಸಂಸ್ಕೃತಿಯನ್ನು ಕಾಣಿಸುವ ದೃಷ್ಟಿಯಿಂದ, ಬಹುಮುಖ್ಯ ಪಲ್ಲಟವಾದಂತಿದೆ. ಅದು ಗ್ರಾಮಜಗತ್ತಿನ ವೈಭವೀಕರಣವೂ ಅಲ್ಲ, ಕ್ರೌರ್ಯಗಳ ನಿರಾಕರಣೆಯೂ ಅಲ್ಲ. ಬದಲಿಗೆ ಅಲ್ಲಿರುವ ಹಿರಿಯ ತಲೆಮಾರಿನೊಳಗಿದ್ದ ಜೀವನಶ್ರದ್ಧೆಯ ಹುಡುಕಾಟವೆನ್ನಬಹುದು. ಗ್ರಾಮೀಣ ದುಡಿವ ಸಮುದಾಯವು ತನ್ನ ಚೈತನ್ಯಶೀಲತೆಯಿಂದ ಸೃಷ್ಟಿಸಿಕೊಂಡ ಪುರಾಣಜಗತ್ತನ್ನು ಅಗೆದುತೆಗೆದು ಬಳಸುವಲ್ಲಿ ಕೂಡ ಇದೇ ಮನೋಧರ್ಮ ಕೆಲಸಮಾಡುತ್ತಿದೆ. ಹುಟ್ಟಿ ಬೆಳೆದ ಹಳ್ಳಿಗೆ 'ಒಲವಿನ ಗೂಡಿಗೆ' ಮಾನಸಿಕವಾಗಿ ಹೋಗುವ ತುಡಿತಗಳು ಈ ಶತಮಾನದ ಆರಂಭದಲ್ಲಿ - ವಸಾಹತುಶಾಹೀ ಸಂದರ್ಭದಲ್ಲಿ - ವ್ಯಕ್ತವಾಗಿದ್ದವು. ಈಗ ಅವು ಮತ್ತೆ ರಿಪೀಟ್ ಆಗುತ್ತಿವೆ. ಇದಕ್ಕೆ ಕಾರಣ, ಜಾಗತೀಕರಣವು ಪ್ರಜ್ಞಾವಂತ ಮಧ್ಯಮವರ್ಗದಲ್ಲಿ ಹುಟ್ಟಿಸಿರುವ ಸಾಂಸ್ಕೃತಿಕ ಆತಂಕ. ಜಾಗತೀಕರಣದ ಅಪಾಯಗಳಾಗಲಿ, ಆತಂಕಗಳಾಗಲೀ ಈ ಆತಂಕಗಳನ್ನು ಎದುರಿಸಲು ಬೇಕಾದ ಪ್ರತಿರೋಧದ ಸ್ವರೂಪಗಳಾಗಲೀ ಇನ್ನೂ ಸ್ಪಷ್ಟವಾಗಿಲ್ಲ.

ಪ್ರಶ್ನೆಯೆಂದರೆ, ಕವಿಗಳು ಯಾವ ಸಾಂಸ್ಕೃತಿಕ ಚೈತನ್ಯಕ್ಕಾಗಿ ಗ್ರಾಮೀಣ ದುಡಿವ ಸಮುದಾಯ ಕಟ್ಟಿಕೊಂಡ ಲೋಕದೊಳಗೆ ಹುಡುಕಾಟ ನಡೆಸಿದ್ದಾರೋ ಆ ಸಾಂಸ್ಕೃತಿಕ ಚೈತನ್ಯವನ್ನು, ಅದೇ ಸಮುದಾಯವು ತನ್ನನ್ನು ಪಾರುಗಾಣಿಸುವ ಹಸ್ತವನ್ನಾಗಿ ಪರಿಗಣಿಸುತ್ತದೆಯೇ ಎಂಬುದು. ಒಟ್ಟಿನಲ್ಲಿ ಒಂದು ಶತ್ರುವನ್ನು ಎದುರಿಸುವ ಒತ್ತಡಕ್ಕಾಗಿ ಮತ್ತೊಂದನ್ನು ಗೆಳೆಯನಂತೆ ಅಪ್ಪಿಕೊಳ್ಳುವ ಈ ಚಾರಿತ್ರಿಕ ವೈರುಧ್ಯದಿಂದ, ಇಂಡಿಯಾದ ಪ್ರಜ್ಞಾವಂತ ಮಧ್ಯಮವರ್ಗಕ್ಕೂ ಅವರ ಅಭಿವ್ಯಕ್ತಿಗಳಿಗೂ ಬಿಡುಗಡೆಯೇ ಇಲ್ಲವೆಂದು ತೋರುತ್ತದೆ.

---

* **ಡಾ। ರಹಮತ್ ತರೀಕೆರೆ**, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ - ೫೮೩ ೨೭೬, ಬಳ್ಳಾರಿ ಜಿಲ್ಲೆ.

ಡಾ। ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಗ್ರಾಮೀಣ ಬದುಕು

- ಕ್ಯಾತನಹಳ್ಳಿ ರಾಮಣ್ಣ

ತಾಳೆಯೋಲೆಗಳ ಯುಗ ಮುಗಿದು ಕಾಗದ ಮತ್ತು ಮುದ್ರಣ ಬಳಕೆಗೆ ಬರುವ ತನಕ ಒಂದು ಕಥೆಗೋ ಒಂದು ಕಾವ್ಯಕ್ಕೋ ಎಷ್ಟು ಜನ ಓದುಗರು ದೊರೆಯುತ್ತಿದ್ದರು ಎಂದು ಹೇಳುವುದು ಕಷ್ಟ. ಮುದ್ರಣ ಪ್ರಾರಂಭವಾದ ಮೇಲೆ ಏಕಕಾಲದಲ್ಲಿ ಅನೇಕ ಓದುಗರು ಎಂಬ ಮಾತಿಗೆ ಅವಕಾಶವಾಯಿತು. ಅದರಲ್ಲೂ ಕಾವ್ಯ ಪ್ರಕಾರಕ್ಕಿಂತ ಕಥಾ ಪ್ರಕಾರಕ್ಕೆ ಹೆಚ್ಚು ಓದುಗರು ಇರುತ್ತಾರೆಂಬ ಇಂದಿನ ತಿಳಿವಳಿಕೆಯನ್ನು ಮುದ್ರಣ ಪ್ರಾರಂಭದ ದಿನಗಳಿಗೆ ಅನ್ವಯಿಸುವಂತಿಲ್ಲ. ಆಗ ಅಕ್ಷರಸ್ಥರ ಸಂಖ್ಯೆ ಎಷ್ಟಿತ್ತೆಂಬ ಮಾಹಿತಿ ಇಲ್ಲ. ರಾಮಮಂದಿರಗಳಲ್ಲೋ ಬಸವಮಂದಿರಗಳಲ್ಲೋ ನಡೆಯುತ್ತಿದ್ದ ಪುರಾಣ ಪುಣ್ಯಶ್ರವಣಗಳಿಂದಾಗಿ, ಕಾವ್ಯವಾಚನ ಕಾವ್ಯವ್ಯಾಖ್ಯಾನಗಳಿಂದಾಗಿ, ಅನಕ್ಷರಸ್ಥರ ಎದೆಗಳಲ್ಲೂ ರಾಮಾಯಣ ಮಹಾಭಾರತ ನಳಚರಿತ್ರೆ ಹರಿಶ್ಚಂದ್ರ ಕಥೆ ಮುಂತಾದ ಕಥೆಗಳೆಲ್ಲ ನೆಲೆನಿಂತುಬಿಟ್ಟುವು. ಈಗ ಅವೆಲ್ಲ ಇಲ್ಲ. ಅಕ್ಷರ ಕಲಿತ ಮನುಷ್ಯ ಸ್ವತಃ ಓದಿನಿಂದ ಅಂಥವನ್ನೆಲ್ಲ ಪಡೆಯಬಲ್ಲವನಾಗಿದ್ದಾನೆ.

ಕನ್ನಡದ ಕಥಾಸಂದರ್ಭದ ಇತಿಹಾಸವನ್ನು ಅವಲೋಕಿಸುವಾಗ ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಆನಂದ ಮುಂತಾದ ಲೇಖಕರೆಲ್ಲ ತಮ್ಮ ಕಥೆಗಳಿಂದ ವಿಶಿಷ್ಟ ಓದುಗರ ಸಮೂಹವನ್ನೇ ಸೃಷ್ಟಿಸಿದರು. ಅದು ನವೋದಯದ ಕಾಲ. ಅನಂತರ ಬಂದವರು ನಗರದ ಬದುಕನ್ನೇ ಪ್ರಧಾನವಾಗಿ ಇಟ್ಟುಕೊಂಡು ಆ ಓದುಗರನ್ನು ಇನ್ನೊಂದು ದಿಕ್ಕಿನಲ್ಲಿ ಒಯ್ದರು. ಇವರ ವಸ್ತುಗಳು ಸಾಮಾನ್ಯವಾಗಿ ಬದಲಾವಣೆಯನ್ನು ಬಯಸುವಂಥವಾಗಿದ್ದುದರಿಂದ ಅಂಥ ರಚನೆಗಳು ಪ್ರಗತಿಶೀಲ ಸಾಹಿತ್ಯ ಎನ್ನಿಸಿಕೊಂಡುವು. ಪ್ರಗತಿಯನ್ನು ದಾಟಿದರೂ ಕ್ರಾಂತಿಕಾರಕವೆನ್ನಿಸದ ಇನ್ನೊಂದು ಬಗೆಯ ಸಾಹಿತ್ಯ ತಲೆಯೆತ್ತಿತು. ವೈಯಕ್ತಿಕ ಅನ್ನಿಸಿಕೆಗಳಿಗೆ, ವೈಯಕ್ತಿಕ ತೆವಲುಗಳಿಗೆ, ವೈಯಕ್ತಿಕ ವಿಚಾರಗಳಿಗೆ, ಪ್ರಾಧಾನ್ಯ ನೀಡುತ್ತ ಬಂದ ಈ ಮೂರನೆಯ ಹಂತದ ಮಾದರಿಯು ನವ್ಯ ಸಾಹಿತ್ಯ ಎಂಬ ಹೆಸರಿನಿಂದ ಗುರುತಿಸಲ್ಪಟ್ಟಿತು.

ಡಾ। ಬೆಸಗರಹಳ್ಳಿ ರಾಮಣ್ಣನವರು ಕಥಾರಚನೆಗೆ ತೊಡಗುವ ಹೊತ್ತಿಗೆ ಮೇಲಿನ ಮೂರೂ ಅವಸ್ಥೆಗಳ್ನು ಉಬ್ಬಾ‍್ಯಯ ರುಚಿಯನ್ನು ಕಂಡಿದ್ದಂಥವು. ಅದೇ ಕಾಲದಲ್ಲಿ ಬಯಲುಸೀಮೆಯ ಇಬ್ಬರು ಕಥೆಗಾರರು ಕುವೆಂಪು ಅನಂತರ ಗ್ರಾಮೀಣ ಬದುಕನ್ನು ಕುರಿತು ಪರಿಣಾಮಕಾರೀ ರಚನೆಗಳನ್ನು ನೀಡಿದರು. ಅವರು, ಜೀ.ಶಂ.ಪರಮಶಿವಯ್ಯ ಹಾಗೂ ಸುಧಾಕರ. ಕುವೆಂಪು ಅವರ ಅನಂತರ ಈ ಇಬ್ಬರನ್ನು ಮಾತ್ರವೇ ಹೆಸರಿಸುವ ಉದ್ದೇಶವೆಂದರೆ, ಇವರೆಲ್ಲ ಗ್ರಾಮೀಣ ಬದುಕಿನಿಂದ ಹುಟ್ಟಿ ಬಂದವರು, ಗ್ರಾಮೀಣ ಬದುಕನ್ನೆ ತಮ್ಮ ಸಾಹಿತ್ಯದ ಜೀವಾಳವಾಗಿಸಿಕೊಂಡವರು. ಸಾಹಿತ್ಯಲೋಕದಲ್ಲಿ ಗ್ರಾಮೀಣ ಬದುಕನ್ನು ಚಿರಸ್ಥಾಯಿಯಾಗಿಸಿದವರು.

ಈ ಮೂವರು ಕಥೆಗಾರರಿಗೆ ಇಲ್ಲಿ ಒತ್ತು ಕೊಡುತ್ತಿರುವುದು ಉದ್ದೇಶಪೂರ್ವಕವಾಗಿಯೆ. ಟಾಲ್‌ಸ್ಟಾಯ್, ಮೈಕೇಲ್ ಷೊಲೊಖೊವ್, ಥಾಮಸ್ ಹಾರ್ಡಿ ಮುಂತಾದ ಹೊರದೇಶಗಳ ಪ್ರಮುಖ ಲೇಖಕರಿಂದಲೂ ಪ್ರಭಾವಿತನಾಗಿದ್ದೇನೆಂದು ರಾಮಣ್ಣ ಅವರೇ ಹೇಳಿಕೊಂಡರೂ ಅವರ ಕಥೆಗಳಲ್ಲಿ ನಮಗೆ ಪ್ರಮುಖವಾಗಿ ಕಂಡುಬರುವುದು ಕುವೆಂಪು ಜೀಶಂಪ ಸುಧಾಕರ ಮುಂತಾದವರೇ. ರಾಮಣ್ಣನವರ 'ಜೀತ'ವನ್ನು ಓದಿದಾಗ ಜೀಶಂಪ ಅವರ 'ಮಬ್ಬು ಜಾರಿದ ಕಣಿವೆಯಲ್ಲಿ'ಯೂ, 'ಅವ್ವ' ಓದಿದಾಗ ಸುಧಾಕರ ಅವರ 'ಕಣ್ಣ ಕಿತ್ತ ಹಸು'ವೂ ತಟ್ಟನೆ ನೆನಪಿಗೆ ಬರುತ್ತವೆ. ರಾಮಣ್ಣನವರ 'ಕಕರನ ಯುಗಾದಿ' 'ಚೆಲುವನ ಪರಂಗಿ ಗಿಡಗಳು' 'ಕಳೆ' ಮುಂತಾದ ಕಥೆಗಳಲ್ಲಿ ಕಂಡುಬರುವ ದಲಿತ ಸಂವೇದನೆಗಳು ಕುವೆಂಪು ಅವರ ಅನೇಕ ಶೂಪ್ರಾತಿಶೂದ್ರರ ಸಂವೇದನೆಗಳನ್ನು ನೆನಪಿಗೆ ತರುತ್ತವೆ.

ಡಾ। ಬೆಸಗರಹಳ್ಳಿಯವರ ಸಾಹಿತ್ಯವನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಅವರ ಮೊದಲೆರಡು ಸಂಕಲನಗಳಾದ 'ನೆಲದ ಒಡಲು' ಹಾಗೂ 'ಗರ್ಜನೆ' ಗಳಲ್ಲಿ ಕಂಡುಬರುವ ಗ್ರಾಮೀಣ ಬದುಕು ಹಾಗೂ ಅಲ್ಲಿನ ಸಂಸ್ಕೃತಿ, ಅನಂತರದ ರಚನೆಗಳಲ್ಲಿ ಅಷ್ಟು ದಟ್ಟವಾಗಿ ಕಂಡುಬರುವುದಿಲ್ಲ. ವಿಮರ್ಶಕ ಪ್ರೊ। ಶಿವರಾಮು ಕಾಡನಕುಪ್ಪೆಯವರು ಈಗಾಗಲೇ ಗುರುತಿಸಿರುವಂತೆ ರಾಮಣ್ಣನವರು ತಮ್ಮ ಕಥೆಗಳೊಂದಿಗೆ ತಾವೂ ಬೆಳೆಯುತ್ತ ಹೋಗುತ್ತಾರೆ. ಬೆಳೆದಂತೆಲ್ಲ ವಸ್ತುವ್ಯಾಪ್ತಿ ವಿಶಾಲಗೊಳ್ಳುತ್ತ, ಅಲ್ಲಿ ವಿಚಾರಗಳೂ ಚಿಂತನೆಗಳೂ ಬಯಕೆಗಳೂ ಸ್ಥಾನ ಪಡೆದಂತೆಲ್ಲ ಸಹಜವಾಗಿಯೇ ಗ್ರಾಮೀಣ ಬದುಕಿನ, ಗ್ರಾಮೀಣ ಸಂಸ್ಕೃತಿಯ ವ್ಯಾಪ್ತಿ ಕಿರಿದಾಗುತ್ತ ಹೋಗುತ್ತದೆ. ದಟ್ಟವಾದ ಗ್ರಾಮೀಣ ಬದುಕನ್ನೂ ಸಂಸ್ಕೃತಿಯನ್ನೂಳಗೊಂಡ ಮೊದಲ ಎರಡು ಸಂಕಲನಗಳಿಂದ ಕೆಲವು ಚಿತ್ರಗಳನ್ನು ಹೆಕ್ಕಿ ನೋಡಬಹುದು.

ಗ್ರಾಮೀಣ ಬದುಕು ಮತ್ತು ಅಲ್ಲಿನ ಸಂಸ್ಕೃತಿಯನ್ನು ಒಳಗೊಂಡ ಕಥೆಗಳು ಒಂದು ಗುಂಪಾದರೆ, ಅನಂತರದ ರಚನೆಗಳೆಲ್ಲ ಇನ್ನೊಂದು ಗುಂಪಾಗುತ್ತವೆ. ಅನಂತರದ ಈ ಎರಡನೆಯ ಗುಂಪನ್ನು ಮತ್ತೆ ದಲಿತ ಸಂವೇದನೆಯ ಕಥೆಗಳು, ರಾಜಕೀಯ ಸಂವೇದನೆಯ ಕಥೆಗಳು ಎಂಬುದಾಗಿ ವಿಭಾಗಿಸಬಹುದು. ಹೀಗೆ ಎಷ್ಟೇ ಮುಖಗಳನ್ನು ಪ್ರತ್ಯೇಕಿಸುವ ಸಾಧ್ಯತೆಗಳಿದ್ದರೂ ಬಹುಪಾಲು ಕಥೆಗಳು ಗ್ರಾಮೀಣ ತಳಪಾಯಕ್ಕೆ ಅಂಟಿಕೊಂಡೇ ಇರುವುದನ್ನು ಕೂಡ ಕಾಣಬಹುದು. ರಾಮಣ್ಣನವರ ಗ್ರಾಮೀಣ ಬದುಕನ್ನೊಳಗೊಂಡ ಕಥೆಗಳನ್ನೂ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಹೂವು ಮತ್ತು ಮಳೆ ಹಲವು ಸಂದರ್ಭಗಳಲ್ಲಿ ಪ್ರಧಾನಪಾತ್ರ ವಹಿಸುವ ರಾಮಣ್ಣನವರ ಪ್ರಾರಂಭಿಕ ಕಥೆಗಳನ್ನು ಹೀಗೆ ವಿಭಾಗಿಸುತ್ತಲೇ ಹೋಗುವುದು ಇಲ್ಲಿನ ಉದ್ದೇಶವಲ್ಲ. ಬದುಕು ಮತ್ತು ಸಂಸ್ಕೃತಿಗಳಿಗೆ ಉದಾಹರಣೆಯಾಗಿ ಕೆಲವು ಚಿತ್ರಗಳನ್ನು ನೋಡಬಹುದು.

'ಗರ್ಜನೆ' ಕಥೆಯ ಒಂದು ಸಂದರ್ಭ ಹೀಗಿದೆ:

(ಉಂಡು ಹಿಂದಲ ಹಟ್ಟಿಯ ಕಣಜದ ಗೋಡೆಯನ್ನು ಒರಗಿ ಕುಳಿತು ಬೀಡಿ ಸೇದುತ್ತ ಆಗಲೆ ಮಲಗಲು ತಯಾರಿ ನಡೆಸಿದ್ದ ಬೆಣಚನಿಗೆ:

"ಬಾ ಇಲ್ಲಿ ಬೆಣಚ ಒಸಿ ಬೆನ್ನು ಕೆರಿ" ಎಂದು ಕೂಗಿದ. ಬೆಣಚ "ಎಲ್ಲಣ್ಣ ಬೆನ್ನ ಇತ್ಲಾಗೆ ತಿರುಗಿಸು" ಎಂದು ಕುಳಿತುಕೊಂಡು ನವಿರಾಗಿ ಬೆನ್ನು ಕೆರೆಯಲು ಪ್ರಾರಂಭಿಸಿ ಮೆಲ್ಲನೆ ಕೇಳಿದ: "ಏನಣ್ಣ ಇವತ್ತು ಪಾರ್ವತಿಯ ಗುಡ್ಲು ಕೂಡಿ, ಪದ ಹೇಳಿ, ಕಡ್ಲೆ ಪುರಿ ಕೊಟ್ರಲ್ಲ ಯಾಕೆ?"

"ಮೈ ನೆರೆದ್ರೆ ಗುಡ್ಲು ಕೂಡ್ತಾರೆಕಲ, ಬೆಣಚ"

"ಮೈನೆರೆಯೋದು ಅಂದ್ರೆ ಏನಣ್ಣ?" ಮರಿನಂಜನಿಗೆ ನಗು ಬಂತು. ಮೆಲ್ಲನೆ ನಗುತ್ತ: "ಲೋ ನಿನ್ನಂಥ ಎಳೇ ಹೈದನಿಗ ಅದರ ಸುದ್ದಿ ಬ್ಯಾಡ, ಸರಿಯಾಗಿ ಬೆನ್ನು ಕೆರಿ ಮಂತೆ" ಎಂದು ಹುಸಿ ಕೋಪ ತುಂಬಿದ ಧ್ವನಿಯಲ್ಲಿ ಹೇಳಿದುದನ್ನು ಗಮನಿಸಿ ತೆಪ್ಪಗಾದ.)

- ಈ ಉದ್ಧೃತ ಭಾಗದಲ್ಲಿ ಎರಡು ಅಂಶಗಳನ್ನು ಗಮನಿಸಬಹುದು. ಒಂದು, ಮೈನೆರೆದ ಹೆಣ್ಣುಮಗಳನ್ನು ಗುಡ್ಲು ಕೂಡುವ ಕ್ರಿಯೆ. ಇನ್ನೊಂದು, ಇನ್ನೊಬ್ಬರಿಂದ ಬೆನ್ನು ಕೆರೆಯಿಸಿಕೊಳ್ಳುವ ಕ್ರಿಯೆ.

ಮೈನೆರೆದ ಹೆಣ್ಣುಮಗಳ ಸೋದರಮಾವನು ಅತ್ತಿ, ಆಲ ಮುಂತಾದ ನಾಲ್ಕಾರು ಬಗೆಯ ಸೊಪ್ಪುಗಳನ್ನು ಕೊಂಬೆಸಹಿತ ಕಡಿದುತಂದು ತಾತ್ಕಾಲಿಕ ಗುಡಿಸಿಲನ್ನು ನಿರ್ಮಿಸುವಿಕೆ ಹಾಗೂ ಆ ಹೆಣ್ಣುಮಗಳನ್ನು ಅದರೊಳಗೆ ಕೂರಿಸಿ ಇಡೀ ರಾತ್ರಿ ಆಕೆ ಮಲಗಲು ಬಿಡದೆ ಚಿಗಳಿ ತಂಬಿಟ್ಟು ಆರತಿ ಹಾಡುಗಾರಿಕೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಿಕೆ. ಗ್ರಾಮೀಣ ಬದುಕಿನಲ್ಲಿ ಹುಟ್ಟಿನಿಂದ ಸಾವಿನವರೆಗೆ ಕಂಡುಬರುವ ಅನೇಕ ಆಚರಣೆಗಳಲ್ಲಿ ಇದೂ ಒಂದು. ಕಥೆಯಲ್ಲಿ ಗುಡ್ಲುಕೂಡೋ ಶಾಸ್ತ್ರದ ವಿವರಗಳಿಲ್ಲವಾದರೂ ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಅಂಥದೊಂದು ಸಂಗತಿಯನ್ನು ಪ್ರಸ್ತಾಪಿಸಿ ಕಥೆಯ ಓಘದಲ್ಲಿ ಅದು ಮಿಳಿತವಾಗುವ ಕಲೆಗಾರಿಕೆಯನ್ನು ಇಲ್ಲಿ ಕಾಣಬಹುದು.

ಇನ್ನೊಂದು, ಬೆನ್ನು ಕೆರೆಯುವ ಪ್ರಸಂಗ. ಗ್ರಾಮೀಣ ಬದುಕಿನಲ್ಲಿ ಎಲ್ಲವೂ ಕೈಯಳತೆಯಲ್ಲಿ ಸಿಗುವುದಿಲ್ಲ. ಶಿಷ್ಟ ಬದುಕಿನಂತೆ ಸ್ನಾನ ಮಡಿ ಜಪ ತಪ ಇತ್ಯಾದಿಗಳಿಗೆ ಅಲ್ಲಿ ಸಮಯವೇ ಇರುವುದಿಲ್ಲ. ಬೆಳಗಾದರೆ ಹೊಟ್ಟೆಯ ಪಾಡು ಕಾಡುವುದರಿಂದ, ಅದಕ್ಕೆ ಮೊದಲ ಸ್ಥಾನ. ಬೇಸಾಯದ ಬದುಕಿನಲ್ಲಂತೂ ಕೋಳಿ ಕೂಗುವ ಹೊತ್ತಿಗೆಲ್ಲ ಕೊಟ್ಟಿಗೆ ಸದ್ದುಮಾಡತೊಡಗುತ್ತದೆ. ಸ್ನಾನ ಅಲ್ಲಿ ಅಪರೂಪಕ್ಕೊಮ್ಮೆ ನೆನಪಾಗುವ ಕ್ರಿಯೆ. ಜೊತೆಗೆ ಶ್ರಮದ ದುಡಿಮೆ. ಹಗಲೆಲ್ಲ ಬೆವರಿಳಿಸಿ ಗೆಯ್ಯುವುದು ಅನಿವಾರ್ಯ. ಬೆವರನ್ನು ಆಗಾಗ ಒರೆಸಿಕೊಳ್ಳುವುದು ಹೌದಾದರೂ ವಾರಕ್ಕೊಮ್ಮೆ ಸ್ನಾನ ಮಾಡುವ ಬದುಕಿನಲ್ಲಿ ಬೆವರಿನ ಪರಿಣಾಮ ಇದ್ದೇ ಇರುತ್ತದೆ. ಆಗಾಗ ಬೆನ್ನು ನವೆದೋರುತ್ತದೆ. ಕೆರೆದುಕೊಂಡರೇನೇ ಸಮಾಧಾನ. ನಮ್ಮ ಬೆನ್ನು ನಮ್ಮ ಕೈಗೆ ಎಟುಕುವುದಿಲ್ಲ. ಆಗ ಅನಿವಾರ್ಯವಾಗಿ ಇನ್ನೊಬ್ಬರನ್ನು ಆಶ್ರಯಿಸಬೇಕಾಗುತ್ತದೆ. ಇಂಥದೊಂದು ವಾಸ್ತವ ಹಿನ್ನೆಲೆ ಮರಿನಂಜನು ಬೆಣಚನ ಕೈಯಿಂದ ಬೆನ್ನು ಕೆರೆಸಿಕೊಳ್ಳುವುದರಲ್ಲಿದೆ. ಹೀಗೆ ಒಂದು ಸಣ್ಣ ಕ್ರಿಯೆಯ ಮೂಲಕ, ಸಂಭಾಷಣೆಯ ತುಣುಕಿನ ಮೂಲಕ, ರಾಮಣ್ಣ ದಾರುಣ ಬದುಕಿನೊಂದಿಗೆ ಸಂಸ್ಕೃತಿದರ್ಶನವನ್ನೂ ಮಾಡಿಸುತ್ತಾರೆ.

ಸಂಸ್ಕೃತಿಯೆಂದರೆ ಬರಿಯ ಹಬ್ಬಗಳಲ್ಲ ಆಚರಣೆಗಳಲ್ಲ. ಅಲ್ಲಿ ಗಾದೆಗಳು, ನಂಬಿಕೆಗಳು, ಸಾಂದರ್ಭಿಕ ನಡೆವಳಿಕೆಗಳು, ಮಾತಿನ ರೀತಿ ನೀತಿಗಳು, ಪ್ರೀತಿ, ಬೈಗುಳ, ಸೌಹಾರ್ದತೆ, ದ್ವೇಷ, ಅಸೂಯೆ, ಸಣ್ಣತನ ದೊಡ್ಡತನಗಳು ಇತ್ಯಾದಿಗಳೆಲ್ಲ ಒಳಗೊಳ್ಳುತ್ತವೆ. ಬಹುಪಾಲು ಅಂಶಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಳ್ಳುವ ಅನೇಕ ಕಥೆಗಳು ಬೆಸಗರಹಳ್ಳಿಯವರಿಂದ ರಚಿತವಾಗಿವೆ. ಅಂಥ ಒಂದು ಕಥೆ 'ಶೂಲ'.

'ಶೂಲ'ದ ಒಂದು ಚಿತ್ರದ ಮೂಲಕ ಮೇಲಿನ ಮಾತನ್ನು ಸಮರ್ಥಿಸಬಹುದು:

(ಹಿಂದೆ ವರ್ಷಕ್ಕೊಂದು ಸಾರಿ ತಪ್ಪದೆ ನಡೆಯುತ್ತಿದ್ದ ಶೂಲದ ಹಬ್ಬ, ಈಗ ಐದು ವರ್ಷಗಳು ಕಳೆದ ನಂತರ ಊರಿಗೆ ಊರೇ ಸಿದ್ಧತೆ ನಡೆಸುತ್ತಿದೆ. 'ಶೂಲದ ಹಬ್ಬ' ಉಳಿದ ಹಬ್ಬಗಳಂತೆ ಸದರವಾದ ಹಬ್ಬವಲ್ಲ. ಪ್ರಾಮುಖ್ಯತೆ ಮತ್ತು ಸಂಕೇತಗಳು ತೀರ ಈಚಿನ ಜನಕ್ಕೆ ಸ್ಪಷ್ಟವಾಗಿ ತಿಳಿಯದಿದ್ದರೂ ಮೊದಲಿನಷ್ಟೇ ಶ್ರದ್ಧೆಯಿಂದ ನಡೆಸಲು ಎಲ್ಲ ಯತ್ನಗಳೂ ನಡೆಯುತ್ತವೆ. ಹಬ್ಬ ಒಂದು ತಿಂಗಳು ಎನ್ನುವಂತೆ ಊರಿನಲ್ಲಿ ಮೆಣಸಿನಕಾಯಿ ಸುಡುವಂತಿಲ್ಲ, ಮರಿ ಕುಯ್ದು ಮಾಂಸ ಪಾಲು ಹಾಕುವಂತಿಲ್ಲ. ಶೂಲದ ಬೋರೆಯಲ್ಲಿ ಒಂದು ಆಳುದ್ದದ ನಾಲ್ಕು ಗುಂಡಿಗಳನ್ನು ಕೀಳುವವರು ಮುಸಲ್ಮಾನರು! ಅರವತ್ತು ಅಡಿಗಳಷ್ಟು ಎತ್ತರವಿರುವ ನಾಲ್ಕು ಅಡಿಕೆ ಮರಗಳನ್ನು ಊರಿನ ನೂರಾರು ಬಲಿಷ್ಠ ಯುವಕರು ನೆಲಕ್ಕೆ ಬೀಳದಂತೆ ಕಡಿದು, ಮಾರಮ್ಮನ ಗುಡಿಗೆ ತಂದು ಪೂಜಿಸಿ, ಎಲ್ಲಿಯೂ ನೆಲಕ್ಕೆ ತಾಕಿಸದೆ ಎಚ್ಚರಿಕೆಯಿಂದ ಶೂಲದ ಬೋರೆಗೆ ಸಾಗಿಸಿ ಮತ್ತೆ ಪೂಜೆಮಾಡಿ, ತುದಿಗೆ ಶೂಲ ಆಡುವವರು ನಿಂತುಕೊಳ್ಳಲು ಮಣೆ ಜೋಡಿಸಿ ನಂತರ ನೆಡುತ್ತಾರೆ.

ಶೂಲದ ಹಬ್ಬದ ದಿನ ಮಾರಮ್ಮನ ಪೂಜೆಯನ್ನು ಕೆರೆಯಿಂದ ಶೂಲದ ಬೋರೆಗೆ ಹುಮ್ಮಸ್ಸಿನಿಂದ ತಮಟೆಗಳ ಕಹಳೆಗಳ ಸದ್ದಿನ ನಡುವೆ, ಭಕ್ತರ ಕಾಕು ಕೇಕೆಗಳೊಡನೆ ತಂದು; ಅಲ್ಲಿಂದ ಪೂಜೆ ಮಾರಮ್ಮನ

ಗುಡಿಗೆ ನಡೆದು ಅಲ್ಲಿ ಪೂಜೆ ನಡೆಯುತ್ತಿದ್ದಂತೆಯೇ ಶೂಲ ಆಡುವವರು, ಬಲಿ ಬೀಳುವವರು ಬರುತ್ತಾರೆ. ಎಲ್ಲರೂ ತೀರ್ಥ ಹಾಕಿಸಿಕೊಂಡು ಬೋರೆಗೆ ಬರುತ್ತಾರೆ. ಬಲಿಯವರು ಬಿದ್ದ ನಂತರ, ಶೂಲ ಆಡುವವರು ಮರಹತ್ತಿ ಆಡತೊಡಗುತ್ತಾರೆ. ಅಲ್ಲಿಂದ-ಇಲ್ಲಿಗೆ ಬಳುಕುತ್ತ ಇನ್ನೇನು ನೆಲಕ್ಕೇ ಮಲಗಿಬಿಟ್ಟುವೇನೋ ಎನ್ನುವಂತೆ ತೂಗುವ ಮರಗಳನ್ನು ಆಡುವವರನ್ನು ಜನರು ಉಸಿರುಕಟ್ಟಿ ನೋಡುತ್ತ ನಿಂತುಬಿಡುತ್ತಾರೆ! ಒಮ್ಮೊಮ್ಮೆ ಹಿಂದಿನ ಕಾಲದಲ್ಲಿ ಶೂಲ ಆಡುವವರು ಪಕ್ಕದಲ್ಲಿರುವ ಮನೆಗಳ ಬೆನ್ನೆಂಚನ್ನು ಬಗ್ಗಿ ಎತ್ತಿಕೊಳ್ಳುತ್ತಿದ್ದುದೂ ಉಂಟಂತೆ!

ನಾಡಗೌಡರು ಕೊಟ್ಟ 'ಪೀಡಗಪವು' ಮರಿಯನ್ನು - ಕಡಿದು ಮಾಲೆಮರ (ಮಧ್ಯದ ಶೂಲ ಆಡುವ ಮರ)ದ ಸುತ್ತ ಎಳೆದ ನಂತರ ಬಲಿಯವರನ್ನು ಎತ್ತುಕೊಂಡು, ಶೂಲದವರನ್ನು ಕರೆದುಕೊಂಡು ಮಾರಪ್ಪನ ಗುಡಿಗೆ ದೌಢಾಯಿಸುವ ಆ ದೃಶ್ಯ! ಅನಂತರ ಬಿಸಿರಕ್ತದ ಪ್ರಾಯದ ಹುಡುಗರು ಶೂಲದ ಮರಗಳನ್ನೇರಿ, ಒಬ್ಬರನ್ನೊಬ್ಬರು ಮೀರಿಸಿ ಶೂಲ ಆಡತೊಡಗುತ್ತಾರೆ. ಆಡುವಾಗ ಪ್ರಾಯದ ಹುಡುಗಿಯರು ಕಣ್ಣಿಗೆ ಬಿದ್ದು, ಅವರೇನಾದರೂ ಕಿರುನಗೆ ಬೀರಿದರೆಂದರೆ ತೀರಿತು. ನೋಡುವವರ ಎದೆ ನಡುಗುವಂತೆ ರಭಸದಿಂದ ಆಡತೊಡಗುತ್ತಾರೆ. ಇಷ್ಟೆಲ್ಲ ನಡೆಯುತ್ತಿರುವಾಗ ಊರಿನ ಪ್ರಮುಖರನ್ನು ಅಶ್ಲೀಲವಾಗಿ ಅವರ ಕಾವ್ಯಶೈಲಿಯಲ್ಲಿ ಬೈಯ್ಯುವ 'ದಿಮ್ಮಿಸಾಲೆ'ಯ ಪಾತ್ರಧಾರಿ.)

-ಹೀಗೆ ಹಬ್ಬದ ಸ್ಥೂಲವರ್ಣನೆ, ಮುಂದೆ ಆಚರಣೆಯ ಸವಿಸ್ತರ ವಿವರಣೆಗಳು ಇವೆಯಾದರೂ ಇದು ಹಬ್ಬವನ್ನು ಕುರಿತ ಬರಹ ಎನ್ನಿಸಿಕೊಳ್ಳದೆ, ಕಥೆಯಂತೆಯೇ ಓದಿಸಿಕೊಂಡು ಹೋಗುವ ಕಥಾಭಾಗವಾಗಿ, ಬದುಕಿನೊಡನೆ ಬೆರೆತುಕೊಂಡೇ ಬರುವುದರಿಂದ ಬದುಕಿನ ಭಾಗವಾಗಿ ಗೋಚರಿಸುತ್ತದೆ. ನಮ್ಮ ಗ್ರಾಮೀಣ ಬದುಕಿನಲ್ಲಿ ಸಂಸ್ಕೃತಿ ಹೇಗೆ ಬೆರೆತುಕೊಂಡಿದೆಯೋ ಹಾಗೆಯೇ ರಾಮಣ್ಣನವರ ಕಥೆಗಳಲ್ಲಿ ಆ ಎರಡೂ ಬೆರೆತುಕೊಂಡೇ ಇರುವುದನ್ನು ಕಾಣಬಹುದು. ಎಂಬತ್ತು ವರ್ಷದ ಗುಡ್ಡಪ್ಪನ ಮೈಮೇಲೆ 'ಅಮ್ಮ' ಬಂದು ಓಲಾಡುವುದು, ನಡೆಮುಡಿಯ ಮೇಲೆ ಶೂಲದ ಬೋರೆಗೆ ಪ್ರಯಾಣ- ಹೀಗೆ ಪ್ರಾರಂಭವಾಗಿ ಇಲ್ಲಿ ಉದ್ಧೃತವಾದ ಭಾಗದ ನೈಜ ಚಿತ್ರಣವು ಬದುಕಿನೊಂದಿಗೆ ಬೆರೆತುಕೊಂಡಿರುವ ರೀತಿಯು ಒಂದು ಅಸಾಮಾನ್ಯ ಕಲೆಗಾರಿಕೆ ಎನಿಸುತ್ತದೆ. 'ಮದುವೆ ಆಗದವರು ಬಲಿ ಬೀಳುವ ಹಾಗೂ ಇಲ್ಲ; ಶೂಲ ಆಡುವಂತೆಯೂ ಇಲ್ಲ!' ಎಂಬಂಥ ಟಬೂಗಳು ಕೂಡ ರಾಮಣ್ಣನವರ ಕಥೆಗಳಲ್ಲಿ ಕಂಡುಬರುತ್ತವೆ.

ಶೂಲದ ಹಬ್ಬ ಪ್ರಾರಂಭವಾದ ಹಿನ್ನೆಲೆಯನ್ನು ಕೂಡ ಕಥೆಯಲ್ಲಿ ಅಳವಡಿಸಲಾಗಿದೆ: (ಹಿಂದೆ ಊರನ್ನು ಕಟ್ಟುವಾಗ 'ನೆಲಶಾಂತಿ'ಗಾಗಿ ನಾಲ್ವರು ಗಂಗಾಮತಸ್ಥರು, ನಾಲ್ಕು ದಿಕ್ಕಿನಲ್ಲಿ ನಾಲ್ಕು ಮರಗಳನ್ನು ನೆಟ್ಟು, ಅವುಗಳ ಕೆಳಗೆ ದೊಡ್ಡ ತ್ರಿಶೂಲಗಳನ್ನು ನೆಟ್ಟು, ಮರಗಳನ್ನೇರಿ, ತ್ರಿಶೂಲಗಳ ಮೇಲೆ ಬಿದ್ದು, ತಮ್ಮ ಎದೆಗುಂಡಿಗೆ ರಕ್ತವನ್ನು ನೆಲಕ್ಕೆ ಚೆಲ್ಲಿ ಅಮರರಾದರಂತೆ! ಅವರ ನೆನಪಿಗಾಗಿ ಈ ಶೂಲದ ಹಬ್ಬ!!)

ಪ್ರೇಮಕಥೆಯೊಂದನ್ನು ಈ ಹಬ್ಬದೊಂದಿಗೆ ಬೆಸೆದು ಬೆಸಗರಹಳ್ಳಿ 'ಶೂಲ' ಎಂಬ ಶಬ್ದವನ್ನು ಅರ್ಥಗರ್ಭಿತವಾಗಿ ಬಳಸಿದ್ದಾರೆ. ದುರಂತ ಅಂತ್ಯವನ್ನುಳ್ಳ ಈ ಪ್ರೇಮಕಥೆಯಲ್ಲಿ, ಕಥೆಯ ಅಂತ್ಯವೇ ಹಬ್ಬದ ಅಂತ್ಯವೂ ಆಗಿ, ಇಲ್ಲಿನ ಪ್ರತಿನಾಯಕನಿಗೆ ಶೂಲವೂ ಆಗಿ ಪರಿಣಮಿಸಿ, ಸಿನಿಮೀಯ ಅಂತ್ಯದಂತೆ ರೋಮಾಂಚಕಾರಿಯಾಗುತ್ತದೆ. ಬದುಕಿನೊಂದಿಗೆ ಸಂಸ್ಕೃತಿಯೋ, ಸಂಸ್ಕೃತಿಯೊಂದಿಗೆ ಬದುಕೋ ಎಂಬ ಅನ್ಯಾದೃಶಕ್ಕೆ ಕಾರಣೀಭೂತನಾಗುವ ಲೇಖಕನೇ ಇಲ್ಲಿ ನಿಜವಾದ ನಾಯಕನಾಗಿಬಿಡುತ್ತಾನೆ.

'ಮಳೆಗರೆಯಿತು ಬಾನು' 'ದೇವರ ಹೂವು' ಮತ್ತು ಡಾ। ಬೆಸಗರಹಳ್ಳಿಯವರು ವಿದ್ಯಾರ್ಥಿಯಾಗಿದ್ದಾಗಲೇ ಕೀರ್ತಿ ತಂದುಕೊಟ್ಟ ಶ್ರೇಷ್ಠ ಕಥೆ 'ಸುಗ್ಗಿ' - ಈ ಮೂರೂ ಕಥೆಗಳಲ್ಲಿ ಒಡೆದ ಮನಸ್ಸುಗಳು ಒಂದಾಗುವ ಪರಿಣಾಮಕಾರೀ ಚಿತ್ರಣಗಳಿವೆ.

'ದೇವರ ಹೂವು' ಕಥೆಯಲ್ಲಿ ಚನ್ನಕ್ಕನ ತೋಟದಲ್ಲಿ ಹೂವು ಕುಯ್ದ ತಪ್ಪಿಗಾಗಿ ರುದ್ರಮ್ಮನಿಗೂ

ಚನ್ನಕ್ಕನಿಗೂ ಮಾತಿಗೆ ಮಾತು ಬೆಳೆದು ರಾದ್ಧಾಂತವಾಗಿ, ಪಂಚಾಯಿತಿ ಕಟ್ಟೆಯವರೆಗೂ ಜಗಳ ಬೆಳೆಯುತ್ತದೆ. ಪಂಚರು ಕೊಡುವ ಶಿಕ್ಷೆಯೇ ಆ ಇಬ್ಬರಿಗೂ ರಕ್ಷೆಯಾಗಿ ಪರಿಣಮಿಸುತ್ತದೆ. ಕ್ಷುಲ್ಲಕ ಕಾರಣಕ್ಕಾಗಿ ಇಷ್ಟೆಲ್ಲ ರಾದ್ಧಾಂತವಾದದ್ದಕ್ಕಾಗಿ ಇಬ್ಬರಿಗೂ ಏಕಕಾಲದಲ್ಲಿ ಪಶ್ಚಾತ್ತಾಪವಾಗಿ, ಮನಸ್ಸು ಮೃದುವಾಗಿ, ಒಂಟೊಂಟಿಯಾಗಿ ಗುಡಿಗೆ ಹೋದವರು ಜೊತೆಯಾಗಿ ಮನೆಗೆ ಮರಳುತ್ತಾರೆ. ಇಂಥ ಹೃದಯ ತಟ್ಟುವ ಕಥಾ ಹಂದರದೊಳಗೂ ರಾಮಣ್ಣ ಸಾಮಾಜಿಕ ವ್ಯವಸ್ಥೆಯೊಂದನ್ನು ಪರಿಚಯಿಸುತ್ತಾರೆ. ಅದು ಪಂಚಾಯ್ತಿಯ ವ್ಯವಸ್ಥೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ನ್ಯಾಯಾಲಯದ ಕಟಕಟೆ ಹತ್ತುವುದು ಬಹಳ ಅಪರೂಪವಾಗಿತ್ತು. ಇವತ್ತಿನ ನ್ಯಾಯಪದ್ಧತಿಯೆಲ್ಲ ನಮ್ಮ ಗ್ರಾಮೀಣ ನ್ಯಾಯಪದ್ಧತಿಯ ಬೆಳಕಿನಲ್ಲಿ ಬೆಳೆದುಬಂದಿದೆ. ಚಿಕ್ಕ ನ್ಯಾಯಾಲಯದಿಂದ ದೊಡ್ಡ ಅತಿದೊಡ್ಡ ನ್ಯಾಯಾಲಯಗಳಿಗೆ ಹೋಗುವ ಕ್ರಮದಂತೆಯೇ ನಮ್ಮ ಗ್ರಾಮೀಣ ನ್ಯಾಯಪದ್ದತಿಗಳು ಇರುತ್ತಿದ್ದುವು. ಊರೊಳಗಿನ ಪಂಚಾಯ್ತಿ, ಹತ್ತೂರ ಪಂಚಾಯ್ತಿ, ನಾಡಪಂಚಾಯ್ತಿ ಹೀಗೆ ನಮ್ಮ 'ನಾಡೂದೇಶದ ನ್ಯಾಯ'ದ ವ್ಯವಸ್ಥೆ ಇರುತ್ತಿತ್ತು. ಮೂಲತಃ ಸಾಮಾಜಿಕ ಕಳಕಳಿಯುಳ್ಳ ಕಥೆಗಾರ ಬೆಸಗರಹಳ್ಳಿ ಈ ಪಂಚಾಯ್ತಿಯಲ್ಲಿ ಕೊಡಿಸುವ ನ್ಯಾಯ ಕೂಡ ಅಷ್ಟೇ ಕೋಮಲ, ಅಷ್ಟೇ ಪರಿಣಾಮಕಾರಿ.

'ಮಳೆಗರೆಯಿತು ಬಾನು' ಕಥೆಯಲ್ಲಿ ಚಾಡಿಕೋರತನದ, 'ಸುಗ್ಗಿ'ಯಲ್ಲಿ ಮನೆಮುರುಕುತನದ ವ್ಯಕ್ತಿತ್ವಗಳನ್ನು ರಾಮಣ್ಣ ಪರಿಚಯಿಸುತ್ತಾರೆ. ಪ್ರಕೃತಿ ಕಾರಣವಾಗಿ ಇಂಥ ವಸ್ತುಗಳೆಲ್ಲ ಉದಾತ್ತ ನೆಲೆಗೆ ಏರಿಬಿಡುತ್ತವೆ.

ಕೆಂಪನ ಚಾಡಿಮಾತಿನಿಂದಾಗಿ ಸ್ನೇಹಿತರಾಗಿದ್ದ ನೆರೆಹೊರೆಯ ರೈತರಾದ ಪುಟ್ಟರಾಮ ಮತ್ತು ಸಣ್ಣರ ನಡುವೆ ವೈಮಸ್ಯ ಬೆಳೆದು, ಒಮ್ಮೆ ಗದ್ದೆಗೆ ನೀರು ಹಾಯಿಸುವ ಸಂದರ್ಭದಲ್ಲಿ ಹೊಡೆದಾಟದ ಮಟ್ಟಕ್ಕೂ ಹೋಗಿಬಿಡುತ್ತದೆ. ಕೊನೆಗೆ ಮಾನವೀಯತೆಯ ಫ್ಲಾಷ್‌ಬ್ಯಾಕ್‌ಗಳೊಡನೆಯೇ ಸುರಿಯಲಾರಂಭಿಸಿದ 'ಮಾಮೇರಿ ಮಳೆ'ಯಿಂದಾಗಿ ಜಗಳದ ಕಾರಣ ಕ್ಷುಲ್ಲಕವೆನ್ನಿಸಿ ಇಬ್ಬರ ಹೃದಯಗಳೂ ಆರ್ದ್ರಗೊಳ್ಳುತ್ತವೆ. 'ಕೋಪದಲ್ಲಾಡಿದ ಮಾತು ಮನೆ ಮುರೀತದೆ' ಎಂಬಂಥ ತಿಳಿವಳಿಕೆಯ ಮಾತುಗಳ ನೆನಪಿನಿಂದಾಗಿ, ಬೆಳೆ ನಷ್ಟವಾಗುವುದನ್ನು ತಪ್ಪಿಸುವ ಸಣ್ಣ ಪುಟ್ಟರಾಮನ ಅಣ್ಣನಾಗುತ್ತಾನೆ. ತಂದೆ ಸತ್ತಾಗ ದುಃಖಿಸುತ್ತಿದ್ದ ಪುಟ್ಟರಾಮನನ್ನು 'ನಾವಿಲ್ಲವೇ' ಎಂದು ಸಂತೈಸಿದ ಸಣ್ಣನ ತಂದೆತಾಯಿಯರ ಮಾತು ನೆನಪಾಗಿ ಪುಟ್ಟರಾಮ ಮತ್ತೆ ಮನುಷ್ಯನಾಗುತ್ತಾನೆ.

ಒಡೆದ ಮನಸ್ಸುಗಳನ್ನು ಒಂದುಗೂಡಿಸುವ ವಸ್ತುವನ್ನುಳ್ಳ ಇನ್ನೊಂದು ಶ್ರೇಷ್ಠಕಥೆ 'ಸುಗ್ಗಿ'. 'ಶೂಲ' ದಂತೆ ಬದುಕಿನೊಂದಿಗೆ ಸಂಸ್ಕೃತಿಯನ್ನೊಳಗೊಂಡಿರುವ ಕಥೆಯಿದು. ಅಣ್ಣತಮ್ಮರ ನಡುವೆ ಉಂಟಾಗಿದ್ದ ವೈಮನಸ್ಯವನ್ನು ಪ್ರಕೃತಿಯು ಸುಗ್ಗಿಯಿಂಥ ಹಿಗ್ಗಿನ ಸಂದರ್ಭದಲ್ಲಿ ತಿಳಿಯಾಗಿಸುತ್ತದೆ. ಈ ಕಥೆಯಲ್ಲಿ ಬರುವ ಬದುಕಿನಷ್ಟೇ ಸುಂದರವಾದ ವಾಕ್ಯಗಳು ವಿವರಣೆಗಳು ಹೋಲಿಕೆಗಳು ಮುಪ್ಪುರಿಗೊಂಡಿವೆ. "ಭೂತಕಾಲದ ದಾಳಿಂಬೆಯನ್ನು ವರ್ತಮಾನದ ಮುಷ್ಟಿಯಲ್ಲಿ ಜಜ್ಜಿದಾಗ ನೆನಪಿನ ಬೀಜಗಳು ದೃಷ್ಟಿಯ ಮುಂದೆ ಚೆಲ್ಲಿದುವು" ಎಂಬಂಥ ಸುಂದರ ವರ್ಣನೆಗಳೊಡನೆ, ಬದುಕು ಬರಡಾಗಿ ಬಿರುಕು ಬಿಟ್ಟುಕೊಳ್ಳುವುದು ಯಾವುದರ ಕೊರತೆಯಿಂದ ಎಂಬುದನ್ನು ರಾಮಣ್ಣ ಪರಿಣಾಮಕಾರಿಯಾಗಿ ಹೇಳಲು ಪ್ರಯತ್ನಿಸಿದಾಗ, ಮಣ್ಣು ಮತ್ತು ಬದುಕು ಅವರಿಗೆ ಬೇರೆಬೇರೆಯಾಗಿ ಕಾಣಿಸುವುದಿಲ್ಲ. ಈ ವಿವರಣೆಯನ್ನು ನೋಡಬಹುದು: "ಬತ್ತದ ಕೂಳೆಗಳ ಮಧ್ಯದ ಭೂಮಿ ನೀರಿಲ್ಲದೆ ಒಡೆದ ಮೊಸರಿನಂತೆ ಛಿದ್ರಛಿದ್ರವಾಗಿರುವುದನ್ನು ನೋಡಿ, ನೀರು ಹಾಯಿಸಿದರೆ ಮಣ್ಣಿನ ಕಣಕಣವೂ ಹೇಗೆ ನೀರನ್ನು ಹೀರಿ ಅರಳಿ ಮತ್ತೆ ಒಂದುಗೂಡುತ್ತದೆ ಎಂಬುವುದನ್ನು ನೆನೆದು, ಮೆಚ್ಚಿ ತಲೆದೂಗಿ ಹೆಜ್ಜೆ ಹಾಕಿದರು". ಗ್ರಾಮೀಣ ಬದುಕಿನಾಚೆಗೂ ಚಾಚಿಕೊಳ್ಳುವಂಥ ಅರ್ಥವೈಶಾಲ್ಯವಿರುವ ಈ ಚಿತ್ರದಲ್ಲಿ ಬದುಕಿಗೆ, ಬದುಕಿನ ಸಮೃದ್ಧತೆಗೆ, ಕೌಟುಂಬಿಕ ಘನತೆಗೆ, ಆಂತರಿಕ ಜೀವಾತುವೊಂದರ ಅಗತ್ಯವನ್ನು ಸಾಂಕೇತಿಕವಾಗಿ ರಾಮಣ್ಣ ಇಲ್ಲಿ ಹೇಳುತ್ತಿದ್ದಾರೆ

ಎನ್ನಿಸುತ್ತದೆ. ಬಿರಿದು ನಿಂತ ಮಣ್ಣಿಗೆ ನೀರು ಜೀವಾತುವಾಗುವಂತೆ, ಕೌಟುಂಬಿಕ ನೆಲೆಯಲ್ಲಿ ಪ್ರೀತಿಸೌಹಾರ್ದತೆಗಳು ಜೀವಾತುಗಳಾಗಬಲ್ಲುವು. ಅದರ ಕೊರತೆಯಿಂದಲೇ ಅಣ್ಣತಮ್ಮರ ನಡುವೆ ಇಲ್ಲಿ ಬಿರುಕು ಕಾಣಿಸಿಕೊಂಡಿದೆ. ಅಂಥ ಬಿರುಕನ್ನು ಮುಚ್ಚುವ ಸಂದರ್ಭವಾದರೂ ಯಾವುದು? ಇಲ್ಲಿ ಲೇಖಕರು ಕಣದಲ್ಲಿ ರಾಶಿಪೂಜೆ ಮಾಡುವ ವಿಧಾನವನ್ನು ಹೀಗೆ ವರ್ಣಿಸುತ್ತಾರೆ: "ಪೂಜೆಗೆ ಎಲ್ಲ ಸಿದ್ಧತೆಗಳನ್ನು ಮಾಡುತ್ತಿದ್ದಾನೆ ಸಿದ್ದಣ್ಣ. ರಾಶಿಯ ಸುತ್ತಲೂ ಬೂದಿಯ ಗೆರೆಯನ್ನು ಬಿಟ್ಟ. ರಾಶಿಯ ತುದಿಗೆ ಕುಡಿಲೊಂದನ್ನು (ಅದರ ಹಿಡಿಯನ್ನು ಕೆಳಗೆ ಮಾಡಿ, ಅದರ ಬಾಯಿ ಮೂಡಲ ದಿಕ್ಕನ್ನು ನೋಡುವಂತೆ) ಸರಿಯಾಗಿ ಸಿಕ್ಕಿಸಿದ. ಬೆರಳಿನಲ್ಲೆ ರಾಶಿಯ ಒಂದು ಮುಖಕ್ಕೆ ಸೂರ್ಯ ಚಂದ್ರ, ತ್ರಿಶೂಲಗಳನ್ನು ಬರೆದ..."

ಕುತಂತ್ರಿಗಳೊಡನೆ ಕಣದ ಬಳಿಗೆ ಬಂದ ಪುಟ್ಟಸ್ವಾಮಿಯನ್ನು ಅಲ್ಲಿನ ವಾತಾವರಣವೇ ನಿಯಂತ್ರಿಸುತ್ತದೆ. ಸುಗ್ಗಿಯ ಹಿಗ್ಗಿನಿಂದ ಎರವಾದ ದಿಗ್ಭ್ರಮೆ ಅವನನ್ನು ಮೂಕನನ್ನಾಗಿಸುತ್ತದೆ. ತನ್ನ ತಪ್ಪಿನ ಅರಿವಾಗುತ್ತದೆ. ಎಂದಿನಂತೆ ಅಣ್ಣನೇ ರಾಶಿಗೆ ಪೂಜೆ ಮಾಡಲಿ ಎಂಬ ಭಾವ ಬಲಿತು ಮಾತಾಗಿ ಅವನ ಬಾಯಿಂದ ಹೊರಬೀಳುತ್ತದೆ. ಎಲ್ಲರ ಮನಸ್ಸುಗಳೂ ಆರ್ದ್ರಗೊಂಡು ಸುಖಾಂತವಾಗುತ್ತದೆ.

ಡಾ। ಬೆಸಗರಹಳ್ಳಿ ರಾಮಣ್ಣನವರು ಗ್ರಾಮೀಣ ಬದುಕನ್ನು, ಗ್ರಾಮೀಣ ಬದುಕಿನ ಸಂವೇದನೆಗಳನ್ನು ವೈಭವೀಕರಿಸಲಿಲ್ಲ, ಅವಾಸ್ತವ ನೆಲೆಗಟ್ಟಿನಲ್ಲಿ ನಿಲ್ಲಿಸಲಿಲ್ಲ. ಗ್ರಾಮೀಣ ಬದುಕು ಎಂಬುದು ಸರಳ ಸುಂದರ ಎಂದು ವರ್ಣಿಸಲಿಲ್ಲ. ಸಂಸ್ಕೃತಿಯನ್ನು ಕಡೆಗಣಿಸಲಿಲ್ಲ. ಗ್ರಾಮೀಣ ಬದುಕಿನಲ್ಲಿ ಕಂಡುಬರಬಹುದಾದ ನೋವು ಸಂಕಟ ದುಃಖದುಮ್ಮಾನಗಳು, ಶೋಷಣೆ, ಕ್ರೌರ್ಯ ಇತ್ಯಾದಿಗಳೆಲ್ಲವನ್ನೂ ಅತ್ಯಂತ ಸಹಜವೂ ವಾಸ್ತವವೂ ಆದ ರೀತಿಗಳಲ್ಲಿ ತೆರೆದಿಡುತ್ತಾರೆ. ಇಂಥ ಕಡೆಗಳಲ್ಲಿ ರಾಮಣ್ಣ ಯಾವತ್ತೂ ಅಂಜಲಿಲ್ಲ ಅಳುಕಲಿಲ್ಲ. ವಾಸ್ತವ ಪರಿಸ್ಥಿತಿಗಳಿಗೆ ನೇರವಾಗಿ ನಿಷ್ಠುರರಾಗಿ ಸ್ಪಂದಿಸಿದ್ದಾರೆ. ಗ್ರಾಮೀಣ ಬದುಕಿನ ಸಮಗ್ರ ನೋಟವನ್ನು ಒದಗಿಸಿದ ಡಾ। ಬೆಸಗರಹಳ್ಳಿ ಒಬ್ಬ ಶ್ರೇಷ್ಠ ಕಥೆಗಾರ ಎಂಬುದರಲ್ಲಿ ಸಂಶಯವಿಲ್ಲ.

ಕನ್ನಡದ ಇನ್ನೊಬ್ಬ ಕಥೆಗಾರ ವೀರಭದ್ರ ಅವರ ಮಾತುಗಳಲ್ಲಿ ಹೇಳಬಹುದಾದರೆ, "ಬೆಸಗರಹಳ್ಳಿ ರಾಮಣ್ಣ ಕೇವಲ ಕನ್ನಡದ ಕಥೆಗಾರನಲ್ಲ; ಭಾರತದ ಶ್ರೇಷ್ಠ ಕಥೆಗಾರ".

❀

---

* ಕ್ಯಾತನಹಳ್ಳಿ ರಾಮಣ್ಣ, ೪೬೩, ಹಿನಕಲ್ ಕ್ರಾಸ್, ಬೋಗಾದಿ ಗ್ರಾಮ, ಮೈಸೂರು - ೫೭೦ ೦೦೬.



ನೀವು ಐಶ್ವರ್ಯದ ಪೂಜಾರಿ ಆಗಿದ್ದೀರಲ್ಲ; ಐಶ್ವರ್ಯದ ಲೋಭದಲ್ಲಿ ನಿಮ್ಮ ಒಬ್ಬನೇ ಮಗನ ಭಾವನೆಗಳಿಗೆ ಸ್ವಲ್ಪವೂ ಪ್ರಾಮುಖ್ಯತೆ ನೀಡಲು ತಯಾರಿಲ್ಲ. ಆದರೆ ಒಂದು ಮಾತು ತಿಳಿದುಕೊಳ್ಳಿ, ಚೇತನ್ ತನ್ನ ಇಚ್ಛೆಯಿಂದ ಯಾವುದಾದರೂ ಹುಡುಗಿಯನ್ನು ಮದುವೆ ಮಾಡಿಕೊಳ್ಳಬೇಕೆಂದರೆ, ನಾನು ನಿಮ್ಮೊಡನಲ್ಲ ನನ್ನ ಮಗನ ಜೊತೆಯಲ್ಲಿದ್ದೇನೆ ಮತ್ತು ನಾನೇ ನಿಂತು ಅವನ ಮದುವೆ ಮಾಡುತ್ತೇನೆ. ಚೇತನ್‌ನ ಸಂತೋಷ ನನಗೆ ನನ್ನ ಪ್ರಾಣಕ್ಕಿಂತ ಮುಖ್ಯ.

* * *

ಬರೆಹಗಾರ ಎಂದೂ ಹುಡುಕುತ್ತಲೇ ಇರಬೇಕಾಗುತ್ತದೆ. ಕತೆಯ ಬಾಹ್ಯವೇಷ ಧರಿಸಿ ಸತ್ಯ ಹಲವು ಮುಖಗಳಲ್ಲಿ, ಹಲವು ರೂಪಗಳಲ್ಲಿ ಎಲ್ಲೆಲ್ಲೂ ಸುತ್ತಾಡುತ್ತಿರುತ್ತದೆ. ಅದು ತನ್ನ ಒಪ್ಪಿತ ಭಾವದಿಂದ ದಯಪೂರ್ವಕವಾಗಿ ಕರೆಯುವ ಆ ಕ್ಷಣಕ್ಕಾಗಿ ಕಾಯುತ್ತಾ ಆತ ಅಲೆಯುತ್ತಿರುತ್ತಾನೆ; ಕಾಲದ ಸುದೀರ್ಘವಾದ ಹಾದಿಯಲ್ಲಿ ಜನಸಮೂಹದ ನಡುವಿನಿಂದ ಮುಂದಕ್ಕೊ, ಹಿಂದಕ್ಕೊ ಜಗ್ಗುತ್ತಾ ಚಲಿಸುತ್ತಿರುತ್ತಾನೆ.

* * *

ನನ್ನ ತನುಮನಗಳಲ್ಲೂ ನೋವು ಮಿಡಿಯುವುದು
ನನ್ನ ಆತ್ಮ ಮರುಗುತ್ತಿತ್ತು
ನಾನು ನುಡಿದರೆ ಆ ನುಡಿಗಳು
ನೀರ ಮೇಲಿನ ಗುಳ್ಳೆಗಳಂತೆ ಒಡೆದುಹೋಗುತ್ತಿತ್ತು

* * *

ನಾನು ಹೆಣ್ಣು–
ನನಗೂ ಒಂದು ಮನಸ್ಸಿದೆ
ಎಂದು ಯಾರೂ ಏಕೆ
ತಿಳಿಯುವುದಿಲ್ಲವೋ!
ಪ್ರೀತಿಸಬೇಡ – ಬಾಯಿ ಮುಚ್ಚಿಕೊಂಡಿರು
ತಲೆ ತಗ್ಗಿಸಿ ನಡೆ – ಪ್ರಜ್ಞಾವಂತಳಾಗು
ಓಹ್! ಇದೇನು ನನ್ನ ಹಣೆಬರಹ!?